ಭಾನುವಾರ, ಜುಲೈ 23, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುಗುಳ್ನಗೆ
ನವದೆಹಲಿಯಲ್ಲಿ ಶುಕ್ರವಾರ ನಡೆದ ಫ್ಯಾಷನ್ ಷೋನಲ್ಲಿ ಬಾಲಿವುಡ್ ನಟಿ ಅದಿತಿರಾವ್ ಹೈದರಿ ನಗೆ ಬೀರಿದರು

ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಕೊಡಗಿನಲ್ಲಿ ಭಾರಿ ಮಳೆ • ಧರೆಗುರುಳಿದ ಮರಗಳು, ವಿದ್ಯುತ್ ವ್ಯತ್ಯಯ

ಮಳೆ ಅಬ್ಬರ: ಮೈದುಂಬಿದ ಜಲಪಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶನಿವಾರವೂ ಮಳೆಯ ಅಬ್ಬರ ಮುಂದುವರಿಯಿತು.

ಘಟ್ಟಪ್ರದೇಶಗಳಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದ, ಕೊಡಗು ಜಿಲ್ಲೆಯ ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ 20 ಸಾವಿರ ಕ್ಯುಸೆಕ್‌ಗೆ ಮುಟ್ಟಿದೆ. ಭಾಗಮಂಡಲ ಹೋಬಳಿ ವ್ಯಾಪ್ತಿಯ ತ್ರಿವೇಣಿ ಸಂಗಮದಲ್ಲಿ ನೀರಿನ ಪ್ರಮಾಣ ಏರಿಕೆಯಾಗಿದೆ. ಸಿದ್ದಾಪುರ ಭಾಗದಲ್ಲೂ ಕಾವೇರಿ ನದಿ ನೀರು ಹೆಚ್ಚಾಗಿದೆ.

ಬಿರುಗಾಳಿಗೆ ಮಡಿಕೇರಿ ನಗರ ಸೇರಿದಂತೆ ಹಲವೆಡೆ ಮರಗಳು ಧರೆಗುರುಳಿವೆ. ಅಬ್ಬಿಫಾಲ್ಸ್ ರಸ್ತೆಯಲ್ಲಿ ಮರ ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿ, ಸಂಚಾರ ದಟ್ಟಣೆ ಉಂಟಾಗಿತ್ತು.

ಮಡಿಕೇರಿಯ ಅರಣ್ಯ ಭವನದ ಸಮೀಪ ಮರವೊಂದು ವಿದ್ಯುತ್ ತಂತಿಗಳ ಮೇಲೆ ಬಿದ್ದು, ಸುತ್ತಮುತ್ತಲ ಪ್ರದೇಶಗಳಲ್ಲಿ ಇಡೀ ದಿನ ವಿದ್ಯುತ್ ಕಡಿತಗೊಂಡಿತ್ತು. ಹೈಸೋಡ್ಲೂರು - ಬಿರುನಾಣಿ ರಸ್ತೆಯಲ್ಲಿ ಮರ ಬಿದ್ದು ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಹೊನಾಗನಹಳ್ಳಿ ಬಳಿ ಮಳೆಗಾಳಿಯಿಂದ ಶುಕ್ರವಾರ ರಾತ್ರಿ ರಸ್ತೆಗೆ ಅಡ್ಡಲಾಗಿ ವಿದ್ಯುತ್ ಕಂಬ, ಮರ ಬಿದ್ದು ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು.

ಸಕಲೇಶಪುರ ತಾಲ್ಲೂಕಿನ ಕ್ಯಾನಹಳ್ಳಿಯ ಲಿ ಕೆ.ಬಿ.ಜಗದೀಶ್ ಅವರ ಮನೆ ತಡೆಗೋಡೆ ಮಳೆಯಿಂದ ಸಂಪೂರ್ಣ ಕೊಚ್ಚಿಹೋಗಿದ್ದು, ಇಡೀ ಮನೆ ಬೀಳುವ ಆತಂಕದಲ್ಲಿದೆ. ಕಾಫಿ ತೋಟದ ಮನೆಗೆ ಅವರೇ ನಿರ್ಮಿಸಿಕೊಂಡಿದ್ದ ಸುಮಾರು 80 ಅಡಿಗೂ ಉದ್ದದ ತಡೆಗೋಡೆ ಸಂಜೆ ಕುಸಿದಿದ್ದು, 50 ಅಡಿಗೂ ಹೆಚ್ಚು ಆಳಕ್ಕೆ ಬಿದ್ದಿದೆ. ಆ ಜಾಗಕ್ಕೆ ಮಳೆ ನೀರು ಬೀಳದಂತೆ ತಾತ್ಕಾಲಿಕವಾಗಿ ಟಾರ್ಪಾಲ್ ಹಾಕಿಕೊಂಡಿದ್ದಾರೆ.

ಹಾಸನ-ಸಕಲೇಶಪುರ ನಡುವಿನ ಬಾಗೆ ಸಮೀಪದ ರಾಟೆಮನೆಯಲ್ಲಿ ಇತ್ತೀಚೆಗಷ್ಟೇ ನಿರ್ಮಿಸಿದ್ದ ಹೆದ್ದಾರಿ ತಡೆಗೋಡೆ ಕುಸಿದಿದೆ. ದೋಣಿಗಾಲ್, ತೋಟದಮನೆ, ಆನೇಮಹಲ್ ಮಾರ್ಗದ ಉದ್ದಕ್ಕೂ ಹೆದ್ದಾರಿ ತಡೆಗೋಡೆಗಳು ನಾಲ್ಕೇ ದಿನದ ಮಳೆಗೆ ಬಿದ್ದು ಹೋಗಿವೆ.

ಭಾರಿ ಗಾಳಿ ಬೀಸಿದ್ದರಿಂದ ಮಂಗಳೂರು ನಗರದಲ್ಲಿ 50ಕ್ಕೂ ಹೆಚ್ಚು ಮರಗಳು ನೆಲಕ್ಕುರುಳಿದ್ದು, ಕೆಲ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು.

ನೇರಳೆಕಟ್ಟೆಯಲ್ಲಿ ರಸ್ತೆಗೆ ಮರ ಉರುಳಿ ಬಿದ್ದು ಮಾಣಿ- ಮೈಸೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ ವಾಹನಗಳ ಸಂಚಾರಕ್ಕೆ ಕೆಲ ಕಾಲ ಅಡ್ಡಿ ಉಂಟಾಗಿತ್ತು. ಉಡುಪಿ ಜಿಲ್ಲೆಯಲ್ಲಿ ಕೆಲ ಮನೆಗಳ ಮೇಲೆ ಮರ ಬಿದ್ದು ಭಾಗಶಃ ಹಾನಿಯಾಗಿವೆ.

ಧಾರವಾಡ, ಉತ್ತರ ಕನ್ನಡ, ಬೆಳಗಾವಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಕೆಲ ಕಡೆ ದಿನವಿಡೀ ತುಂತುರು ಇದ್ದರೆ, ಇನ್ನೂ ಕೆಲ ಕಡೆ ಬಿರುಸಿನ ಮಳೆ ಸುರಿಯಿತು.

ಖಾನಾಪುರ ತಾಲ್ಲೂಕಿನಲ್ಲಿ ಇಡೀ ದಿನ ಧಾರಾಕಾರ ಮಳೆಯಾದ ಕಾರಣ ಕಾಡಂಚಿನ 14 ಗ್ರಾಮಗಳ ಸಂಪರ್ಕ ಕಡಿತಗೊಂಡಿದ್ದು, ಪರಿಸ್ಥಿತಿ ಯಥಾರೀತಿಯಿದೆ. ಮಹಾರಾಷ್ಟ್ರದ ಘಟ್ಟ ಪ್ರದೇಶ ಹಾಗೂ ಕೃಷ್ಣಾ ನದಿಯ ಜಲಾನಯನ ಪ್ರದೇಶದಲ್ಲಿ ಸುರಿದ ಮಳೆಯಿಂದ ಕೃಷ್ಣಾ ನದಿಗೆ 92 ಸಾವಿರ ಕ್ಯುಸೆಕ್ ನೀರು ಹರಿದುಬರುತ್ತಿದೆ.

ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ, ಹಳಿಯಾಳ ಭಾಗದಲ್ಲಿ ವ್ಯಾಪಕ ಮಳೆಯಾಗಿದೆ. ಜೊಯಿಡಾದ ಮೆಸ್ತಬಿರೋಡಾ ಗ್ರಾಮದಲ್ಲಿ ಬೃಹತ್ ಮರ ಉರುಳಿ ಮನೆಗೆ ಹಾನಿಯಾಗಿದೆ. ಯಲ್ಲಾಪುರದ ನಂದಿಬಾವಿಯಲ್ಲಿ ಮನೆಯೊಂದರ ಗೋಡೆ ಕುಸಿದಿದೆ.

ಇಡಗುಂದಿ ವಲಯ ಅರಣ್ಯ ವ್ಯಾಪ್ತಿಯ ಶಿರ್ಲೆ ಜಲಪಾತಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ. ದಾಂಡೇಲಿಯ ಕುಳಗಿ ರಸ್ತೆಯ ಬಡಕಾನಶಿರಡಾ ಗ್ರಾಮದ ಕ್ರಾಸ್ ಬಳಿ ಮರ ಬಿದ್ದು ಕೆಲ ಹೊತ್ತು ಸಂಚಾರಕ್ಕೆ ಅಡ್ಡಿಯಾಗಿತ್ತು.

ಕಾಳಿನದಿಯಲ್ಲಿ ನೀರಿನ ಹರಿವಿನ ಮಟ್ಟ ಏರಿಕೆಯಾದ ಪರಿಣಾಮ ತಾಲ್ಲೂಕಿನ ಕದ್ರಾ ಜಲಾಶಯದಿಂದ 6 ಕ್ರಸ್ಟ್ ಗೇಟ್‌ಗಳಿಂದ 30 ಸಾವಿರ ಕ್ಯೂಸೆಕ್ ನೀರು ಹೊರಬಿಡಲಾಯಿತು.

ಬೀದರ್ ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನಲ್ಲಿ ಸತತ ಮಳೆಯಿಂದಾಗಿ ಉಡಬನಹಳ್ಳಿ-ಕರಕನಳ್ಳಿ ಗ್ರಾಮಗಳ ಮಧ್ಯೆ ರಸ್ತೆ ಮೇಲೆ ನೀರು ನಿಂತಿದ್ದರಿಂದ ಸಂಪರ್ಕ ಕಡಿತಗೊಂಡಿದೆ. ಕಮಲನಗರ-ಔರಾದ್ ಸಂಪರ್ಕ ಕಲ್ಪಿಸುವ ಖತಗಾಂವ ಕ್ರಾಸ್ ಸಮೀಪದ ಸೇತುವೆ ಜಲಾವೃತವಾಗಿದ್ದರಿಂದ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಮಳೆ ಚುರುಕಾಗಿದೆ. ಗಾಜನೂರಿನ ತುಂಗಾ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಲಕ್ಕವಳ್ಳಿಯ ಭದ್ರಾ ಜಲಾಶಯ ಒಳಹರಿವು ಏರಿಕೆಯಾಗಿದೆ. ಸಾಗರದಲ್ಲಿ ಮಳೆ ಹೆಚ್ಚಾಗಿದ್ದು, ಮರಗಳು ಧರೆಗುರುಳಿವೆ. ಕಾರ್ಗಲ್ ಬಳಿಯ ಮಾವಿನಗುಂಡಿ ಬಳಿ ಬೃಹತ್ ಮರವೊಂದು ರಸ್ತೆಗೆ ಅಡ್ಡಲಾಗಿ ಬಿದ್ದು, ಗಂಟೆಗಟ್ಟಲೇ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಮರಬಿದ್ದು ಚಿಕ್ಕಮಗಳೂರು ಜಿಲ್ಲೆಯ ಸುಂಕಸಾಲೆ ಗ್ರಾಮದ ಸಂಪಿಗೇಕಾನು ನಿವಾಸಿ ಶಂಕರ ಗೌಡ (42) ಗಾಯಗೊಂಡಿದ್ದಾರೆ. ದಾವಣಗೆರೆ ನಗರ, ಸುತ್ತಮುತ್ತ ಹಾಗೂ ಚಿತ್ರದುರ್ಗ ನಗರದಲ್ಲೂ ಮಳೆಯಾಗಿದೆ.

ಜೋಗ ಜಲಪಾತ ಮತ್ತೆ ಜೀವಕಳೆ ಪಡೆದಿದ್ದು ನಾಲ್ಕೂ ಕವಲುಗಳಿಂದ ನೀರಿನ ಹಾಲ್ನೊರೆ ಧುಮ್ಮಿಕ್ಕುತ್ತಿದೆ
—ಪ್ರಜಾವಾಣಿ ಚಿತ್ರ/ಸಂತೋಷ್‌ಕುಮಾರ್ ಕಾರ್ಗಲ್

ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಸಮೀಪದ ಕಜೆಕ್ಕಾರುವಿನಲ್ಲಿ ಮನೆ ಹಾನಿಗೊಳಗಾಗಿದೆ



ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	91.50	7,914	5,248
ಹಾರಂಗಿ	2,859	2,854.71	20,730	4,600
ಕಬಿನಿ	2284.00	2,274.34	7,886	800
ಹೇಮಾವತಿ	2,922	2,898.30	9,362	200
ಲಿಂಗನಮಕ್ಕಿ	1,819	1,767.3	39,536	1,702.5
ಸೂಪಾ (ಮೀ)	564	534.30	42,911.30	337.11
ಮಾಣಿ	595	576.50	5,190	-
ತುಂಗಭದ್ರಾ	1,633	1,595.88	41,572	50
ಮಲಪ್ರಭಾ	2079.5	2,049.70	11,930	194
ಘಟಪ್ರಭಾ	2175	2,115.58	25,765	98
ಭದ್ರಾ	186	143	5,039	163
ಆಲಮಟ್ಟಿ (ಮೀ)	519.6	512.56	83.945	561
ನಾರಾಯಣಪುರ (ಮೀ)	492.25	486.80	637	00

* ನೆಲಮಟ್ಟದಿಂದ

ನೀರಿನ ಹೊಂಡಕ್ಕೆ ಬಿದ್ದು ರೈತ ಸಾವು

ಭಟ್ಕಳ (ಉತ್ತರ ಕನ್ನಡ): ತಾಲ್ಲೂಕಿನ ಮಾರುಕೇರಿಯಲ್ಲಿ ಶನಿವಾರ ಮನೆಯಿಂದ ತೋಟಕ್ಕೆ ತೆರಳುತ್ತಿದ್ದ ರೈತ ಕೃಷ್ಣ ನಾಗಪ್ಪ ಗೊಂಡ (55) ಎಂಬುವರು ಕಾಲು ಜಾರಿ ನೀರಿನ ಹೊಂಡಕ್ಕೆ ಬಿದ್ದು ಮೃತಪಟ್ಟಿದ್ದಾರೆ.

ಸತತ ಮಳೆಯಿಂದ ಕಾಲುದಾರಿಯ ಪಕ್ಕದಲ್ಲಿದ್ದ ಹೊಂಡ ಭರ್ತಿಯಾಗಿತ್ತು. ಕೆಸರಿನಿಂದ ಕೂಡಿದ್ದ ದಾರಿಯಲ್ಲಿ ಕೃಷ್ಣ ಅವರು ಹೋಗುತ್ತಿದ್ದ ವೇಳೆ ಘಟನೆ ನಡೆದಿದೆ ಎಂದು ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸಾಗರ ತಾಲ್ಲೂಕಿನ ತುಮರಿ ಸಮೀಪದ ಹೊಳೆಬಾಗಿಲಿನ 'ಸಿಗಂದೂರು ಲಾಂಚ್'ನಲ್ಲಿ ವಾಹನ ಸಂಚಾರಕ್ಕೆ ಕಾದಿರುವ ಪ್ರವಾಸಿ ವಾಹನಗಳು
—ಪ್ರಜಾವಾಣಿ ಚಿತ್ರ/ ಸುಕುಮಾರ್ ಎಂ.

ಹಾಲಿನ ಬೆಲೆ ಏರಿಕೆ ಗ್ರಾಹಕರಿಗೆ ಬರೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್ಕೊಹಾಲ್ ಬೆಲೆ ಏರಿಕೆಯ ಬೆನ್ನಲ್ಲೇ ರಾಜ್ಯ ಸರ್ಕಾರ ಹಾಲಿನ ಬೆಲೆಯನ್ನೂ ಒಂದು ಲೀಟರ್‌ಗೆ ₹ 3 ಹೆಚ್ಚಿಸಿದೆ. ಶ್ರಮಜೀವಿ ಗ್ರಾಹಕರ ಜೇಬಿಗೆ ಕನ್ನ ಕೊರೆದಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

'ಚುನಾವಣೆಗೂ ಮೊದಲು ಬೆಲೆ ಏರಿಕೆ ಬಗ್ಗೆ ಕಾಂಗ್ರೆಸ್ ಧ್ವನಿ ಎತ್ತಿತ್ತು. ಅಧಿಕಾರಕ್ಕೆ ಬಂದ ತಕ್ಷಣ ಬೆಲೆ ಏರಿಕೆಯ ಸರಣಿ ಶಾಕ್ ನೀಡುತ್ತಿದೆ. ಹಾಲು, ಆಲ್ಕೋಹಾಲ್‌ನಿಂದಲೇ ಅನ್ನಭಾಗ್ಯದ ಹಣ ವಸೂಲಿಗೆ ಇಳಿದಿದೆ. ಆರಂಭದಲ್ಲಿ ವಿದ್ಯುತ್ ಶಾಕ್ ಕೊಟ್ಟಿದ್ದ ಸರ್ಕಾರ, ವಿಧಾನ ಮಂಡಲದ ಕಲಾಪ ಮುಗಿಯುತ್ತಿದ್ದಂತೆ ಬೆಲೆ ಏರಿಕೆಗೆ ಮುಂದಾಗಿದೆ' ಎಂದು ಆರೋಪಿಸಿದ್ದಾರೆ.

'ಚುನಾವಣೆ ಪ್ರಣಾಳಿಕೆಯಲ್ಲಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡುವ ಭರವಸೆ ಕೊಟ್ಟಿದ್ದರು. ಎರಡೇ ತಿಂಗಳಲ್ಲಿ ಮರೆತಿದ್ದಾರೆ. ಜಾನುವಾರುಗಳ ಹಿಂಡಿ, ಬೂಸಾ ಬೆಲೆ ಇಳಿಕೆಗೂ ಕ್ರಮಕೈಗೊಂಡಿಲ್ಲ. ಖಜಾನೆ ತುಂಬಿಸುವುದರಲ್ಲೇ ಮಗ್ನರಾಗಿದ್ದಾರೆ' ಎಂದು ದೂರಿದ್ದಾರೆ.

'ನ್ಯಾಯಾಂಗ ತನಿಖೆ ದ್ವೇಷದ ರಾಜಕಾರಣ'

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: ಪಿಎಸ್‌ಐ ಹಗರಣವನ್ನು ನ್ಯಾಯಾಂಗ ತನಿಖೆಗೆ ವಹಿಸಿರುವ ರಾಜ್ಯ ಸರ್ಕಾರದ ನಡೆ ದ್ವೇಷದ ರಾಜಕಾರಣಕ್ಕೆ ಸಾಕ್ಷಿ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಟೀಕಿಸಿದರು.

ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಿಎಸ್‌ಐ ಹಗರಣವನ್ನು ಹೊರಗೆ ತಂದದ್ದೇ ನಮ್ಮ ಸರ್ಕಾರ. ಸಿಐಡಿ ತನಿಖೆಗೂ ಆದೇಶ ಮಾಡಿದ್ದೆವು. ಪ್ರಕರಣದಲ್ಲಿ ಎಡಿಜಿಪಿ ಹುದ್ದೆಯ ಅಧಿಕಾರಿಯನ್ನೇ ಕಾರಾಗೃಹಕ್ಕೆ ಕಳುಹಿಸಿದ್ದೇವೆ. ಹಗರಣದಲ್ಲಿ ಕಾಂಗ್ರೆಸ್‌ನವರೂ ಇದ್ದಾರೆ. ಪ್ರಕರಣದ ತನಿಖೆ ನಡೆದು, ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಇಂತಹ ಸಮಯದಲ್ಲಿ ಮತ್ತೆ ತನಿಖೆಗೆ ಆದೇಶ ಮಾಡಿದ್ದಾರೆ. ಈ ದ್ವೇಷದ ರಾಜಕಾರಣ ಎಲ್ಲಿಗೆ ಹೋಗುತ್ತಿದೆ ಎನ್ನುವುದು ಗೊತ್ತಾಗುತ್ತಿಲ್ಲ' ಎಂದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಮೇಲೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಜೀವನ ದುಸ್ತರವಾಗಿದೆ. ವಿದ್ಯುತ್ ದರ ಹೆಚ್ಚಳ ಮಾಡಿದರು. ಈಗ ಹಾಲಿನ ದರ ಹೆಚ್ಚಳ ಮಾಡಿದ್ದಾರೆ. ತರಕಾರಿ ಬೆಲೆ ಗಗನಕ್ಕೇರಿದೆ. ಆಗಸ್ಟ್‌ನಿಂದ ನಿವೇಶನ, ಕಾರು, ಹೊಸ ಮನೆ ಖರೀದಿ ದರವೂ ಹೆಚ್ಚಳವಾಗಲಿದೆ' ಎಂದು ದೂರಿದರು.

'ಬಿಜೆಪಿ ಗೋಡ್ಸೆ ಪ್ರತಿಮೆ ಮುಂದೆ ಪ್ರತಿಭಟನೆ ಮಾಡಲಿ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ನಕಲಿ ಗಾಂಧಿಗಳ ಜಪ ಮಾಡುತ್ತಿರುವ ಕಾಂಗ್ರೆಸ್ ನಾಯಕರು, ಗಾಂಧೀಜಿ ಅವರನ್ನು ದುರುಪಯೋಗ ಮಾಡಿಕೊಂಡರು. ಈಗ ಗಾಂಧೀಜಿ ಹೆಸರು ಹೇಳಿಕೊಂಡು ರಾಜಕಾರಣ ಮಾಡುತ್ತಿದ್ದಾರೆ' ಎಂದು ಹರಿಹಾಯ್ದರು.

'ಕೈ'ಕಟ್ಟಿ ಹಾಕಿತ್ತು ಎಂಬುದು ಸುಳ್ಳು: ಸಿ.ಎಂ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 'ಸಮ್ಮಿಶ್ರ ಸರ್ಕಾರ (ಜೆಡಿಎಸ್-ಕಾಂಗ್ರೆಸ್) ಇದ್ದಾಗ ನೈಸ್ ಹಗರಣದ ತನಿಖೆ ನಡೆಸಲು ಕಾಂಗ್ರೆಸ್‌ನವರು ಕೈಕಟ್ಟಿ ಹಾಕಿದ್ದರು ಎನ್ನುವ ಎಚ್.ಡಿ. ಕುಮಾರಸ್ವಾಮಿ ಆರೋಪ ಸುಳ್ಳು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸಾಲಮನ್ನಾ ಸೇರಿದಂತೆ ಇತರೆ ಕಾರ್ಯಕ್ರಮಗಳಿಗೆ ಕಾಂಗ್ರೆಸ್ ಬೆಂಬಲ ನೀಡಿರಲಿಲ್ಲವೇ? ಕಾಂಗ್ರೆಸ್ ಕೈಕಟ್ಟಿ ಹಾಕಿತ್ತು ಎಂದು ಅವರು ರಾಜೀನಾಮೆ ನೀಡಿದರೆ? ತಮ್ಮ ಸ್ವಯಂತಪ್ಪಿನಿಂದಲೇ ಅವರು ಸರ್ಕಾರ ಕಳೆದುಕೊಳ್ಳುವಂತಾಯಿತು' ಎಂದರು.

'ಕಾಂಗ್ರೆಸ್ ಸರ್ಕಾರದ ನಂತರ ಬಂದ ಸಮ್ಮಿಶ್ರ ಸರ್ಕಾರದ ಸಂದರ್ಭದಲ್ಲಿಯೇ ನೈಸ್ ಹಗರಣ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬಹುದಿತ್ತು' ಎಂದೂ ಹೇಳಿದರು.

ಇದೇ ಮೊದಲು: 'ನನ್ನ 40 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಮತ್ತು 14 ಬಾರಿ ಬಜೆಟ್ ಮಂಡಿಸಿದ ಸಂದರ್ಭದಲ್ಲಿ ಇದೇ ಮೊದಲ ಬಾರಿ ವಿರೋಧ ಪಕ್ಷದ ಉಪಸ್ಥಿತಿ ಇಲ್ಲದೇ ಬಜೆಟ್ ಚರ್ಚೆಗೆ ಉತ್ತರ ನೀಡುವಂಥ ಪರಿಸ್ಥಿತಿ ಒದಗಿಬಂತು' ಎಂದು ಸಿದ್ದರಾಮಯ್ಯ ಹೇಳಿದರು.

ಫ್ರೀಡಂ ಪಾರ್ಕ್‌ನಲ್ಲಿ ಬಿಜೆಪಿ ಪ್ರತಿಭಟನೆ ಕೈಗೊಂಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ವಿಧಾನಮಂಡಲದ ಅಧಿವೇಶನದಲ್ಲಿ ಜನರ ಸಮಸ್ಯೆಗಳ ಬಗ್ಗೆ ಚರ್ಚಿಸುವುದು ಬಿಟ್ಟು, ಹೊರಗೆ ಹೋರಾಟ ಮಾಡುವುದರಿಂದ ಪ್ರಯೋಜನವಿಲ್ಲ' ಎಂದು ಅವರು ತಿಳಿಸಿದರು.

ಒಪ್ಪಂದ ಮಾಡಿಕೊಂಡಿದ್ದೇ ದೇವೇಗೌಡರು: ಶಿವಕುಮಾರ್

ಡಿ.ಕೆ. ಶಿವಕುಮಾರ್

ನೈಸ್ ಯೋಜನೆ ಜಾರಿಗೆ ಒಪ್ಪಂದ ಮಾಡಿಕೊಂಡಿದ್ದೇ ಅಂದು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ದೇವೇಗೌಡರು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ನೈಸ್ ನಿರ್ಮಾಣದ ರಸ್ತೆಯಲ್ಲಿ ಅಕ್ರಮಗಳು ನಡೆದಿದ್ದರೆ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ತನಿಖೆಗೆ ಆದೇಶಿಸಬಹುದಿತ್ತು. ಅಧಿಕಾರ ಇದ್ದಾಗ ಏನೂ ಮಾಡದೆ, ಅಧಿಕಾರ ಕಳೆದುಕೊಂಡ ನಂತರ ಮಾತನಾಡಿದರೆ ಏನು ಪ್ರಯೋಜನ? ಅವರು ಆರೋಪಿಸಿದಂತೆ ತಾವು ಯಾವುದೇ ಅಕ್ರಮ ಎಸಗಿಲ್ಲ. ಅಕ್ರಮದಲ್ಲಿ ಭಾಗಿಯಾಗಿದ್ದರೆ ಕಾನೂನು ಪ್ರಕಾರ ಸದನ ಹಾಗೂ ಕೋರ್ಟ್‌ಗಳಲ್ಲಿ ಹೋರಾಟ ಮಾಡಲಿ' ಎಂದರು.

'ಇಬ್ಬರು ಮಾಜಿ ಮುಖ್ಯಮಂತ್ರಿಗಳು ಪ್ರಸ್ತಾಪಿಸಿರುವ ವಿಷಯವನ್ನು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ. ಯೋಜನೆ ಅನುಷ್ಠಾನದಲ್ಲಿ ತಪ್ಪುಗಳಾಗಿದ್ದರೆ ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ದ್ವೇಷ ರಾಜಕಾರಣ ಮಾಡುವುದಿಲ್ಲ. ನಮಗೆ ರಾಜ್ಯ ಹಾಗೂ ಜನರ ಅಭಿವೃದ್ಧಿ ಮುಖ್ಯ' ಎಂದು ಹೇಳಿದರು.

ನೈಸ್ ಅಕ್ರಮದಲ್ಲಿ ಶಿವಕುಮಾರ್ ಪಾತ್ರವೇನು: ಕುಮಾರಸ್ವಾಮಿ ಪ್ರಶ್ನೆ



ಎಚ್.ಡಿ. ಕುಮಾರಸ್ವಾಮಿ

'ನೈಸ್ ಅಕ್ರಮಗಳಲ್ಲಿ ಶಿವಕುಮಾರ್ ಹಾಗೂ ಅಧಿಕಾರಿಗಳ ಪಾತ್ರವೇನು?' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಎಚ್.ಡಿ.ದೇವೇಗೌಡರ ಅವಧಿಯಲ್ಲಿ ನೈಸ್ ಯೋಜನೆಯ ಒಪ್ಪಂದ ಮಾಡಿಕೊಳ್ಳಲಾಗಿತ್ತು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಟ್ವಿಟರ್‌ನಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ.

'ನೈಸ್ ರಸ್ತೆ ಯೋಜನೆಗೆ ರಾಜ್ಯ ಸರ್ಕಾರ ಹಣ, ಭೂಮಿ ನೀಡುವುದಿಲ್ಲ. ಭೂಸ್ವಾಧೀನದ ವೆಚ್ಚ ಸೇರಿದಂತೆ ಸಂಪೂರ್ಣ ಹೂಡಿಕೆ ಕಂಪನಿಯೇ ಮಾಡಬೇಕು' ಎನ್ನುವುದು ದೇವೇಗೌಡರ ಕಾಲದ ಒಪ್ಪಂದ. ಆ ಒಪ್ಪಂದ ಆದಾಗ, ಈಗಿನ ಮುಖ್ಯಮಂತ್ರಿ ಹಣಕಾಸು ಸಚಿವರಾಗಿದ್ದರು. ಅದರ ವಿವರವನ್ನು ಕೇಳಿ ತಿಳಿದುಕೊಳ್ಳಲಿ. ಆಗಿನ ಮೂಲ ಒಪ್ಪಂದ ತಿರುಚಿದ್ದು ಯಾರು? ಆ ಮೂಲಕ ಸಾವಿರಾರು ಕೋಟಿ ಹಣ, ಸರ್ಕಾರ ಹಾಗೂ ಜನರ ಭೂಮಿ ಭೂಗಳ್ಳರ ಪಾಲಾಗಿದ್ದು ಹೇಗೆ' ಎಂದು ಪ್ರಶ್ನಿಸಿದ್ದಾರೆ.

ನೈಸ್ ಯೋಜನೆಗೆ ದೇವೇಗೌಡರೇ ಸಹಿ ಹಾಕಿದ್ದು ಎಂದು ಹೇಳುವ ಮೂಲಕ ಶಿವಕುಮಾರ್ ಅವರು ತಾವು ಎಸಗಿದ ಅಕ್ರಮಕ್ಕೆ ತೇಪೆಹಚ್ಚಲು ಹೊರಟಿದ್ದಾರೆ. ನೈಸ್ ರಸ್ತೆಯ ತಿರುಚಿದ ಒಪ್ಪಂದ, ಸದನ ಸಮಿತಿ ವರದಿಯ ಬಗ್ಗೆ ಏಕೆ ಮೌನವಾಗಿದ್ದಾರೆ. ರಾಜ್ಯವನ್ನೇ ದೋಚಿದ ಖಾಸಗಿ ಕಂಪನಿಗೆ ರಾಜಕೀಯ ಮಧ್ಯವರ್ತಿ ಆಗುವುದಕ್ಕೆ ಅವರಿಗೆ ಅಸಹ್ಯ ಅನಿಸುವುದಿಲ್ಲವೇ ಎಂದೂ ಅವರು ಟೀಕಿಸಿದ್ದಾರೆ.

ನೋಂದಣಿಗೆ ಹಣ ಅಮಾನತು

ಮಡಿಕೇರಿ: 'ಕೊಡಗು ಜಿಲ್ಲೆಯ ಪೊನ್ನಂಪೇಟೆಯ 'ಗ್ರಾಮ ಒನ್' ಕೇಂದ್ರದಲ್ಲಿ 'ಗೃಹಲಕ್ಷ್ಮಿ' ಯೋಜನೆ ನೋಂದಣಿಗೆ ಹಣ ಪಡೆಯುತ್ತಿದ್ದಾರೆ ಎಂಬ ದೂರಿನ ಹಿನ್ನೆಲೆಯಲ್ಲಿ ಕೇಂದ್ರದ ನೌಫಾಲ್ ಅವರ ಪರವಾನಗಿ ಅಮಾನತುಪಡಿಸಲಾಗಿದೆ' ಎಂದು ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಲ್ಲಾಳ್ ತಿಳಿಸಿದರು.

'ನೌಫಾಲ್ ₹ 50 ರಿಂದ ₹ 100 ರವರೆಗೂ ಪಡೆಯುತ್ತಿರುವುದು ನಿಜವೆಂದು ಕಂಡು ಬಂದ ಹಿನ್ನೆಲೆಯಲ್ಲಿ ಪರವಾನಗಿ ಅಮಾನತುಪಡಿಸಲಾಗಿದೆ' ಎಂದು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ದೇವದಾಸಿಯರ ಸಮಸ್ಯೆಗೆ ಸ್ಪಂದನೆ'

ಬಳ್ಳಾರಿ: 'ಕೈಗಾರಿಕೆಗಳ ನಿರ್ಮಾಣಕ್ಕೆ ಸರ್ಕಾರವು ಜಮೀನು ಸ್ವಾಧೀನಪಡಿಸಿಕೊಂಡ ಕಾರಣ ಜಮೀನು ಕಳೆದುಕೊಂಡ ಪುನರ್ವಸತಿ ಕಲ್ಪಿತ ದೇವದಾಸಿಯರ ಸಂಕಷ್ಟಕ್ಕೆ ರಾಜ್ಯ ಸರ್ಕಾರವು ಸ್ಪಂದಿಸಲಿದೆ. ಅವರ ಬೇಡಿಕೆಗಳನ್ನು ಈಡೇರಿಸಲು ಬದ್ಧವಿದೆ' ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ಬಿ. ನಾಗೇಂದ್ರ ತಿಳಿಸಿದರು.

'ಬಳ್ಳಾರಿ ತಾಲ್ಲೂಕಿನ ಕುಡತಿನಿ, ವೇಣಿವೀರಾಪುರ, ಹರಗಿನ ಡೋಣಿ ಸೇರಿ ಹಲವು ಗ್ರಾಮಗಳಲ್ಲಿ ಜಮೀನು ಪಡೆದು ಕೈಗಾರಿಕೆ ಸ್ಥಾಪಿಸದ ಉದ್ಯಮಿಗಳಿಗೆ ನೋಟಿಸ್ ನೀಡಲಾಗಿದೆ' ಎಂದು ಅವರು ತಿಳಿಸಿದರು. ದೇವದಾಸಿಯರ ಬದುಕು ಅತಂತ್ರವಾಗಿರುವ ಕುರಿತು ವಿಶೇಷ ವರದಿ ಜುಲೈ 22ರ ಪ್ರಜಾವಾಣಿ ಸಂಚಿಕೆಯಲ್ಲಿ ಪ್ರಕಟವಾಗಿತ್ತು.

ಕುಲಪತಿ ವಿರುದ್ಧ ಭ್ರಷ್ಟಾಚಾರದ ಆರೋಪ: ಕಪ್ಪು ಬಾವುಟ ಪ್ರದರ್ಶನ

ರಾಜ್ಯಪಾಲರ ಭಾಷಣ: ಧಿಕ್ಕಾರದ ಕೂಗು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಶನಿವಾರ ನಡೆದ 33ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಭಾಷಣದ ವೇಳೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಪಿ.ವೀರಭದ್ರಪ್ಪ ವಿರುದ್ಧ ಎನ್‌ಎಸ್‌ಯುಐ ಸಂಘಟನೆ ಕಾರ್ಯಕರ್ತರು ಘೋಷಣೆ ಕೂಗಿದರು.

ಸಭಾಂಗಣದ ಬಾಲ್ಕನಿಯಲ್ಲಿ ಕುಳಿತಿದ್ದ ಕೆಲವರು ರಾಜ್ಯಪಾಲರು ಭಾಷಣ ಶುರುಮಾಡುತ್ತಿದ್ದಂತೆಯೇ ಗದ್ದಲ ಆರಂಭಿಸಿದರು. 'ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಪಿ.ವೀರಭದ್ರಪ್ಪ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಆಗ್ರಹಿಸಿ, ಧಿಕ್ಕಾರ ಕೂಗಿದರು. ಕಪ್ಪು ಬಾವುಟವನ್ನೂ ಪ್ರದರ್ಶಿಸಿದರು. ಈ ದಿಢೀರ್ ಬೆಳವಣಿಗೆಯಿಂದ ಮುಜುಗರಕ್ಕೊಳಗಾದಂತೆ ಕಂಡುಬಂದ ರಾಜ್ಯಪಾಲರು ಗದ್ದಲದ ನಡುವೆಯೇ ಭಾಷಣ ಮುಂದುವರೆಸಿದರು. ಆಗ ಸಭಾಂಗಣ ಪ್ರವೇಶಿಸಿದ ಪೊಲೀಸರು ಘೋಷಣೆ ಕೂಗುತ್ತಿದ್ದವರನ್ನು ಹೊರಗೆ ಕರೆತಂದು ಪೊಲೀಸ್ ವಾಹನದಲ್ಲಿ ಕರೆದೊಯ್ದರು.

ಭಾಷಣದಲ್ಲಿ ಈ ವಿಚಾರ ಪ್ರಸ್ತಾಪಿಸಿದ ರಾಜ್ಯಪಾಲರು, 'ಘೋಷಣೆ ಕೂಗಿದ ಗುಂಪಿನ ನಾಲ್ವರು ಬಂದು ಘಟಿಕೋತ್ಸವದ ನಂತರ ನನ್ನನ್ನು ಭೇಟಿಯಾಗಲಿ. ಅವರ ಸಮಸ್ಯೆ ಆಲಿಸುವೆ. ಏನಾದರೂ ತೊಂದರೆ ಆಗಿದ್ದರೆ ಪರಿಹರಿಸುವೆ' ಎಂದು ಹೇಳಿದರು.

ಶಂಕರಘಟ್ಟದ ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿ ಶನಿವಾರ ನಡೆದ ಘಟಿಕೋತ್ಸವದಲ್ಲಿ ರಾಜ್ಯಪಾಲರ ಭಾಷಣದ ವೇಳೆ ಗದ್ದಲ ನಡೆಸಿದ ಎನ್‌ಎಸ್‌ಯುಐ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು

ತನಿಖೆಗೆ ಸಮಿತಿ ರಚನೆ

ಕುವೆಂಪು ವಿಶ್ವವಿದ್ಯಾಲಯದಲ್ಲಿ ನಿಯಮಾವಳಿ ಉಲ್ಲಂಘನೆ ಹಾಗೂ ಭ್ರಷ್ಟಾಚಾರದ ಬಗ್ಗೆ ಸಿಂಡಿಕೇಟ್ ಸದಸ್ಯರೊಬ್ಬರು ಸಲ್ಲಿಸಿದ್ದ ದೂರು ಆಧರಿಸಿ ಸರ್ಕಾರವು 2023ರ ಮೇ 29ರಂದು ಶಿವಮೊಗ್ಗದ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಎಚ್.ಬಿ.ರವೀಂದ್ರನಾಥ ನೇತೃತ್ವದಲ್ಲಿ ತನಿಖೆಗೆ ಸಮಿತಿ ರಚನೆ ಮಾಡಿತ್ತು.

ಆದರೆ ಸಮಿತಿ ಇದುವರೆಗೂ ವಿಚಾರಣೆಗಾಗಿ ವಿಶ್ವವಿದ್ಯಾಲಯಕ್ಕೆ ಬಂದಿಲ್ಲ ಎಂದು ಕುಲಪತಿ 3 ದಿನದ ಹಿಂದೆ ಸುದ್ದಿಗೋಷ್ಠಿಯಲ್ಲಿ ಹೇಳಿದ್ದರು.

ಕರೆಸಿ ಅಹವಾಲು ಆಲಿಸಿದರು: ಘಟಿಕೋತ್ಸವ ಸಮಾರಂಭದ ನಂತರ ವಿಶ್ವವಿದ್ಯಾಲಯದ ಆಡಳಿತ ಕಚೇರಿಗೆ ತೆರಳಿದ ರಾಜ್ಯಪಾಲರು ಅಲ್ಲಿಗೆ ಕುಲಪತಿ ಅವರನ್ನು ಕರೆಸಿಕೊಂಡು ಚರ್ಚಿಸಿದರು.

ನಂತರ ರಾಜ್ಯಪಾಲರ ಸೂಚನೆಯಂತೆ ಪೊಲೀಸರ ವಶದಲ್ಲಿದ್ದ ನಾಲ್ವರು ಪ್ರತಿಭಟನಕಾರರನ್ನು ಎಸ್ಪಿ ಜಿ.ಕೆ. ಮಿಥುನ್‌ಕುಮಾರ್ ಅಲ್ಲಿಗೆ ಕರೆತಂದರು. ಕೆಲಹೊತ್ತು ಅವರ ಅಹವಾಲು ಆಲಿಸಿದ ರಾಜ್ಯಪಾಲರು ಅಲ್ಲಿಂದ ತೆರಳಿದರು. ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಲು ನಿರಾಕರಿಸಿದರು.

11 ಮಂದಿ ವಶಕ್ಕೆ: 'ಗದ್ದಲಕ್ಕೆ ಸಂಬಂಧಿಸಿದಂತೆ ಎನ್‌ಎಸ್‌ಯುಐ ಸಂಘಟನೆಯ 11 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದೇವೆ. ಇವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳೇ ಇದ್ದಾರೆ. ಇವರೆಲ್ಲರೂ ಘಟಿಕೋತ್ಸವದ ಆಹ್ವಾನಪತ್ರ ಹಾಗೂ ಗುರುತಿನ ಚೀಟಿ ತೋರಿಸಿ ಸಭಾಂಗಣದ ಒಳಗೆ ಪ್ರವೇಶ ಪಡೆದಿದ್ದರು' ಎಂದು ಎಸ್ಪಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಲಿಖಿತ ದೂರಿಗೆ ಸೂಚನೆ'

ರಾಜ್ಯಪಾಲರ ಭೇಟಿ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಎನ್‌ಎಸ್‌ಯುಐ ಶಿವಮೊಗ್ಗ ಜಿಲ್ಲಾ ಘಟಕದ ಅಧ್ಯಕ್ಷ ವಿಜಯ್, 'ಕುಲಪತಿ ವಿರುದ್ಧ ದೂರುಗಳು ಇದ್ದರೆ ಲಿಖಿತವಾಗಿ ಕೊಡಿ. ತನಿಖೆ ಮಾಡಿಸುವೆ ಎಂದು ರಾಜ್ಯಪಾಲರು ಭರವಸೆ ನೀಡಿದ್ದಾರೆ' ಎಂದು ತಿಳಿಸಿದರು.

ಇದೊಂದು ಷಡ್ಯಂತ್ರ: 'ಕುವೆಂಪು ವಿಶ್ವವಿದ್ಯಾಲಯದಲ್ಲಿ ಇನ್ನು 12 ದಿನ ಮಾತ್ರ ನನ್ನ ಅಧಿಕಾರಾವಧಿ ಇದೆ. ಇಲ್ಲಿಂದ ತೆರಳಿದ ನಂತರ ನನಗೆ ಬೇರೆ ಕಡೆ ಏನಾದರೂ ಸ್ಥಾನಮಾನ ಸಿಗಬಹುದು. ಅದನ್ನು ತಪ್ಪಿಸಬೇಕು ಎಂಬ ದುರುದ್ದೇಶದಿಂದ ಕೆಲವರು ಈ ರೀತಿ ಷಡ್ಯಂತ್ರ ಮಾಡಿದ್ದಾರೆ' ಎಂದು ಕುಲಪತಿ ಪ್ರೊ.ಬಿ.ಪಿ. ವೀರಭದ್ರಪ್ಪ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

ಮತೀಯ ಗೂಂಡಾಗಿರಿ: ಬಂಧನ

ಸ್ನೇಹಿತರೊಂದಿಗೆ ಕಿನಾರೆಗೆ ತೆರಳಿದ್ದನ್ನು ಆಕ್ಷೇಪಿಸಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ದೀಕ್ಷಿತ್

ಲಾಯ್ಡ್ ಪಿಂಟೊ

ಮಂಗಳೂರು: ಪಣಂಬೂರು ಕಡಲ ಕಿನಾರೆಗೆ ಸ್ನೇಹಿತರ ಜೊತೆ ಹೋಗಿದ್ದಕ್ಕೆ ವಿದ್ಯಾರ್ಥಿನಿಗೆ ಅವಾಚ್ಯ ಪದಗಳಿಂದ ಬೈದು ಹಲ್ಲೆ ನಡೆಸಿದ ಮತೀಯ ಗೂಂಡಾಗಿರಿ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಉರ್ವ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ನಗರದ ಅಳಪೆ ಮಠದ ಬಳಿಯ ನಿವಾಸಿ ದೀಕ್ಷಿತ್ (32) ಹಾಗೂ ಅಳಪೆ ಪರಂಜ್ಯೋತಿ ಭಜನಾ ಮಂದಿರದ ಬಳಿಯ ನಿವಾಸಿ ರಿಚರ್ಡ್ ಪಿಂಟೊ (32) ಬಂಧಿತರು. ಆರೋಪಿಗಳು ಕೃತ್ಯಕ್ಕೆ ಬಳಸಿದ ಸ್ಕೂಟರ್ ಮತ್ತು ಮೊಬೈಲ್ ಪೋನ್‌ಗಳನ್ನು ಸ್ವಾಧಿನಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ನಗರದ ಕಾಲೇಜೊಂದರ ಆರು ವಿದ್ಯಾರ್ಥಿನಿಯರು ಶುಕ್ರವಾರ ಸಂಜೆ 5.30ರ ಸುಮಾರಿಗೆ ಪಣಂಬೂರು ಕಿನಾರೆಗೆ ಬಸ್‌ನಲ್ಲಿ ತೆರಳಿದ್ದರು. ಈ ವೇಳೆ, ಅವರ ಸ್ನೇಹಿತ ಯುವಕರು ಬೈಕ್‌ನಲ್ಲಿ ಅಲ್ಲಿಗೆ ಬಂದಿದ್ದರು. ವಿದ್ಯಾರ್ಥಿನಿಯರು ಕಿನಾರೆಯಲ್ಲಿ ಯುವಕರ ಜೊತೆ ಇದ್ದಾಗ ಅಪರಿಚಿತ ಯುವಕರಿಬ್ಬರು ಇವರ ಚಲನವಲನ ಗಮನಿಸುತ್ತಿದ್ದರು. ಅವರು ಕಿನಾರೆಯಲ್ಲಿದ್ದ ದೃಶ್ಯಗಳನ್ನು ಮೊಬೈಲ್‌ನಲ್ಲಿ ವಿಡಿಯೊ ಮಾಡಿದ್ದರು. ಬಳಿಕ ವಿದ್ಯಾರ್ಥಿನಿಯರು ಕಿನಾರೆಯಿಂದ ಹಿಂದಿರುಗಿದ್ದರು. ಕ್ರೈಸ್ತ ವಿದ್ಯಾರ್ಥಿನಿಯೊಬ್ಬರು ಪಣಂಬೂರಿನಿಂದ ಬಸ್‌ನಲ್ಲಿ ಬಂದು ಚಿಲಿಂಬಿಯಲ್ಲಿ ಇಳಿದಿದ್ದರು' ಎಂದು ಮೂಲಗಳು ತಿಳಿಸಿವೆ.

'ಪಣಂಬೂರು ಕಿನಾರೆಯಿಂದ ನನ್ನನ್ನು ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದ ಯುವಕರಿಬ್ಬರು ಬಿಜೈ ಕಾಪಿಕಾಡ್‌ನ ಏಳನೇ ಅಡ್ಡರಸ್ತೆ ಬಳಿ ತಡೆದು ಅವಾಚ್ಯವಾಗಿ ಬೈದು ಹಲ್ಲೆ ಮಾಡಿದ್ದಾರೆ. 'ಕೇರಳ ಸ್ಟೋರಿ' ನೋಡಿದ ಬಳಿಕವೂ ಬುದ್ಧಿ ಬಂದಿಲ್ಲವೇ ಎಂದು ಕೇಳಿದ್ದರು ಎಂಬುದಾಗಿ ಸಂತ್ರಸ್ತ ವಿದ್ಯಾರ್ಥಿನಿ ದೂರು ನೀಡಿದ್ದರು. ಅದರ ಆಧಾರದಲ್ಲಿ ಆರೋಪಿಗಳ ವಿರುದ್ಧ ಉರ್ವ ಸ್ಟೋರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡು ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಗ್ರಾಹಕರ ₹1.89 ಕೋಟಿ ದುರ್ಬಳಕೆ

ಪ್ರಜಾವಾಣಿ ವಾರ್ತೆ

ಗಣೇಶ್ ಬಾಬು



ಜಿತೇಂದ್ರ

ದೇವನಹಳ್ಳಿ: ಗ್ರಾಹಕರ ಖಾತೆಗಳಿಂದ ₹1.89 ಕೋಟಿ ಬಳಸಿಕೊಂಡ ತಾಲ್ಲೂಕಿನ ಚನ್ನರಾಯಪಟ್ಟಣದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಮ್ಯಾನೇಜರ್ ಗಣೇಶ್ ಬಾಬು ಮತ್ತು ಕಚೇರಿಯ ಸಹಾಯಕ ಜಿತೇಂದ್ರ ಕುಮಾರ್ ತಲೆಮರೆಸಿಕೊಂಡಿದ್ದಾರೆ. ಇಬ್ಬರ ವಿರುದ್ಧ ಚನ್ನರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಪ್ರಕರಣ ದಾಖಲಾಗಿದೆ.

ಜೂನ್ 3 ರಿಂದ ಜುಲೈ 17ರ ಅವಧಿಯಲ್ಲಿ ಈ ಇಬ್ಬರು ಸೇರಿ ಗ್ರಾಹಕರ ಖಾತೆಗಳಿಂದ ಆರ್‌ಟಿಜಿಎಸ್ ಮೂಲಕ ಹಂತ, ಹಂತವಾಗಿ ಕೆಲವು ಖಾತೆಗಳಿಗೆ ₹1.88 ಕೋಟಿ ವರ್ಗಾಯಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಗುಜರಾತ್ ಮೂಲದ ಆನ್‌ಲೈನ್ ಜೂಜು ಮತ್ತು ಕ್ಯಾಸಿನೊಗಳಿಗೆ ಆರೋಪಿಗಳು ಈ ಹಣ ಬಳಸಿಕೊಂಡಿದ್ದಾರೆ. ಅನ್ನಭಾಗ್ಯ ಯೋಜನೆಯಲ್ಲಿ ಅಕ್ಕಿ ಬದಲು ಸರ್ಕಾರ ವರ್ಗಾವಣೆ ಮಾಡಿದ ಹಣ ಖಾತೆಗಳಲ್ಲಿ ಜಮಾ ಆಗಿದೆಯೇ ಎಂದು ಪರಿಶೀಲಿಸಲು ಮೂರ್‍ನಾಲ್ಕು ದಿನಗಳ ಹಿಂದೆ ಗ್ರಾಹಕರು ಬ್ಯಾಂಕ್‌ಗೆ ಬಂದಾಗ ವಿಷಯ ಬೆಳಕಿಗೆ ಬಂದಿದೆ. ಆದರೆ, ಅದಕ್ಕೂ ಮೊದಲೇ ಮ್ಯಾನೇಜರ್ ಮತ್ತು ಕಚೇರಿ ಸಹಾಯಕ ಕೆಲಸಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ. ಗ್ರಾಹಕರು ಗುರುವಾರ ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಿ, ಚನ್ನರಾಯಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇಬ್ಬರನ್ನೂ ಕೆಲಸದಿಂದ ಅಮಾನತು ಮಾಡಲಾಗಿದೆ ಎಂದು ಬ್ಯಾಂಕ್ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ, ಜುಲೈ 23, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 203 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮರ್ಯಾದೆಗೇಡು ಹತ್ಯೆ ಮನಃಸ್ಥಿತಿಯ ಹಿಂದಿನ ಸಾಮಾಜಿಕ ಕಾರಣಗಳ ಸಿಕ್ಕು ಕಾಣಿಸುವ ಪ್ರಯತ್ನ

ಪ್ರವಾಹ: ಕೊಚ್ಚಿಹೋದ ಅಜ್ಜ–ಅಜ್ಜಿ, ಮೊಮ್ಮಗ 6

ಮುಂಗಾರುಪೂರ್ವ ತಪಾಸಣೆ; ತಜ್ಞರ ತಂಡದ ಅಧ್ಯಯನದಲ್ಲಿ ದೃಢ

ಆನ್‌ಲೈನ್ ಜೂಜು: ₹58 ಕೋಟಿ ಕಳೆದುಕೊಂಡ ನಾಗ್ಪುರ ಉದ್ಯಮಿ! 7

ಕರ್ನಾಟಕದ ಅಣೆಕಟ್ಟೆಗಳು ಸುರಕ್ಷಿತ 7

ಹಳೇ ಕೇಂದ್ರಗಳಿಗೆ ತಪ್ಪದ ಅಲೆದಾಟ • ಇನ್ನೂ ಸ್ಥಳಾಂತರವಾಗದ ಕಚೇರಿಗಳು

ಹೊಸ ತಾಲ್ಲೂಕು; ಹೆಚ್ಚಾದ ಸಂಕಷ್ಟ

• ಆರ್. ಜಿತೇಂದ್ರ

ಮೈಸೂರು: 'ನಮ್ಮೂರು ದೇವರಗಡ್ಡಿಗೂ ಹುಣಸಗಿಗೂ 42 ಕಿ.ಮೀ ಅಂತರ. ಹುಣಸಗಿಯು ಹೊಸ ತಾಲ್ಲೂಕಾಗಿ ಘೋಷಣೆ ಆದಾಗ ಅಲೆದಾಟ ತಪ್ಪಿತೆಂದು ಭಾವಿಸಿದ್ದೆವು. ಆದರೆ ಇಂದಿಗೂ ಅಧಿಕಾರಿಗಳ ಸಣ್ಣದೊಂದು ಸಹಿಗೆ, ಮಕ್ಕಳ ಶಿಕ್ಷಣದ ಪ್ರಮಾಣಪತ್ರಕ್ಕೆ 95 ಕಿ.ಮೀ. ದೂರದ ಸುರಪುರಕ್ಕೆ ಅಲೆಯುವುದು ತಪ್ಪಿಲ್ಲ'

ಇದು ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ದೇವರಗಡ್ಡಿ ಗ್ರಾಮದ ದೇವೇಂದ್ರಪ್ಪ ಅವರ ನಿರಾಸೆಯ ನುಡಿ.

ಸುರಪುರದಿಂದ ವಿಭಜನೆಗೊಂಡು ಹುಣಸಗಿ ಪಟ್ಟಣವು ಹೊಸ ತಾಲ್ಲೂಕಾಗಿ ಐದಾರು ವರ್ಷ ಕಳೆದರೂ, ಅಲ್ಲಿ ಯಾವ ಅಧಿಕಾರಿಯೂ ಇಲ್ಲ. ಕಚೇರಿಗಳೂ ಇಲ್ಲ. ಹೀಗಾಗಿ ಜನ ಸರ್ಕಾರಿ ಸೇವೆಗಳಿಗೆ ಹಳೇ ತಾಲ್ಲೂಕು ಕೇಂದ್ರವನ್ನೇ ಆಶ್ರಯಿಸಿದ್ದಾರೆ.

ರಾಯಚೂರು ಜಿಲ್ಲೆಯ ಮಸ್ಕಿ ನೂತನ ತಾಲ್ಲೂಕು ಕೇಂದ್ರದಿಂದ ಹಿರೇಕಡಬೂರು, ಹಿಲಾಲಪೂರ ಗ್ರಾಮಗಳ ಅಂತರ ನಾಲ್ಕೈದು ಕಿ.ಮೀ. ದೂರ ಮಾತ್ರ. ಆದರೂ ಈ ಗ್ರಾಮಸ್ಥರು ತಮ್ಮ ಕೆಲಸಗಳಿಗಾಗಿ ಮೂಲ ತಾಲ್ಲೂಕು ಕೇಂದ್ರವಾದ ಮಾನ್ವಿಗೆ ಬರಬೇಕು.

ಮಾನ್ವಿಗೆ ಹೋಗಬೇಕಾದರೆ ಮಸ್ಕಿಗೆ ಬಂದು ಅಲ್ಲಿಂದ 24 ಕಿ.ಮೀ. ದೂರದ ಸಿಂಧನೂರಿಗೆ ತೆರಳಿ, ಅಲ್ಲಿಂದ ಮತ್ತೆ 50 ಕಿ.ಮೀ. ದೂರ ಕ್ರಮಿಸಬೇಕು. ಒಟ್ಟು 75–80 ಕಿ.ಮೀ ಪ್ರಯಾಣ. ಬೆಳಿಗ್ಗೆ 10ಕ್ಕೆ ಕಚೇರಿಗಳು ತೆರೆಯುವ ಹೊತ್ತಿಗೆ ತಲುಪಲು, ಮುಂಜಾನೆಯೇ ತೆರಳಬೇಕು.

ಒಂದು ದಶಕದಲ್ಲಿ ರಚನೆ ಯಾದ ಅಷ್ಟೂ ಹೊಸ ತಾಲ್ಲೂಕುಗಳಿಗೆ ಸೇರಿದ ಜನರ ಪರಿಸ್ಥಿತಿ ಇದು.

ಘೋಷಣೆಯಾದ ಎಷ್ಟೋ ವರ್ಷಗಳ ಬಳಿಕ ಹೊಸ ತಾಲ್ಲೂಕಿಗೊಂದು ತಹಶೀಲ್ದಾರ್ ಕಚೇರಿ ಬಂದಿದೆ.

4ನೇ ಪುಟ ನೋಡಿ

ಶಹಾಬಾದ್‌ನ ಸರ್ಕಾರಿ ಪ್ರೌಢಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಪಂಚಾಯಿತಿ ಕಚೇರಿ

ಒಳನೋಟ

ಬೇಡಿಕೆಗಿಲ್ಲ ಸ್ಪಂದನೆ

ಪ್ರತಿಕ್ರಿಯಿಸಿ: 9606038256
feedback@prajavani.co.in

> ಈಗ ಮಾಡಿರುವ ತಾಲ್ಲೂಕುಗಳಿಗೆ ಮೂಲ ಸೌಕರ್ಯಗಳು ಇಲ್ಲ. ಜನ ಬೇಡಿಕೆ ಇಡುತ್ತಾರೆ ಎಂದು ತಾಲ್ಲೂಕು ಘೋಷಣೆ ಮಾಡುತ್ತಾ ಬಂದಿದ್ದೇವೆ. ಆದರೆ ಯಾವುದೇ ಹೊಸ ತಾಲ್ಲೂಕುಗಳಿಗೂ ಮೂಲಸೌಕರ್ಯ ನೀಡಲು ಸಾಧ್ಯವಾಗಿಲ್ಲ. ಹೋಬಳಿಗಳನ್ನೂ ತಾಲ್ಲೂಕು ಮಾಡಿ ಎಂಬ ಬೇಡಿಕೆ ಬಂದರೆ ಏನು ಮಾಡಲು ಸಾಧ್ಯ? ಜನರ ಒತ್ತಡಕ್ಕೆ ಮಣಿಯದೇ ವೈಜ್ಞಾನಿಕವಾಗಿ ಮಾಡಿದರೆ ಪರವಾಗಿಲ್ಲ. ಭಾವನಾತ್ಮಕ ಕಾರಣಗಳಿಗೆ ಮಾಡಿರುವುದರಿಂದಲೇ ಸಮಸ್ಯೆ ಆಗಿದೆ. ಮುಂದೆ ಅಗತ್ಯತೆ ಆಧಾರದ ಮೇಲೆ ರಚಿಸುವುದು ಸೂಕ್ತ
>
> **ಕೃಷ್ಣ ಬೈರೇಗೌಡ,** ಕಂದಾಯ ಸಚಿವ

> ಶಾಸಕರು ಮತ್ತು ಜನಪ್ರತಿನಿಧಿಗಳ ಒತ್ತಡದ ಕಾರಣ ಹೊಸ ತಾಲ್ಲೂಕುಗಳನ್ನು ಮಾಡಲಾಗಿದೆ. ತಾಲ್ಲೂಕು ಎಂದರೆ ತಹಶೀಲ್ದಾರ್ ನೇಮಕ ಮಾಡಿದರೆ ಮುಗಿಯುವುದಿಲ್ಲ. ತಾಲ್ಲೂಕಿಗೆ ಎಲ್ಲ ಇಲಾಖೆಗಳ ಕಚೇರಿಗಳೂ ಬರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಆಡಳಿತ ಸೌಧ ನಿರ್ಮಾಣ ಆಗಬೇಕು. ಬಹುಪಾಲು ಹೊಸ ತಾಲ್ಲೂಕುಗಳಲ್ಲಿ ಆಡಳಿತಸೌಧಗಳು ಬಂದಿಲ್ಲ. ಇದರಿಂದ ಸಮಸ್ಯೆ ಆಗಿದೆ. ನಾನು ಕಂದಾಯ ಸಚಿವನಾಗಿದ್ದಾಗ 40 ಹೊಸ ಆಡಳಿತ ಸೌಧಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದೆ. ಆ ಕಡತ ಬಾಕಿ ಇದೆ. ಹಣಕಾಸು ಇಲಾಖೆ ಎಲ್ಲದಕ್ಕೂ ಕತ್ತರಿ ಹಾಕುತ್ತದೆ. ಇದರಿಂದ ಸಮಸ್ಯೆ ಆಗಿದೆ.
>
> **ಆರ್.ಅಶೋಕ,** ಮಾಜಿ ಕಂದಾಯ ಸಚಿವ

ಸಿ.ಎಂ. ತವರಿನಲ್ಲೂ ನಿರ್ಲಕ್ಷ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಾದ ಮೈಸೂರಿನ ಸರಗೂರು ಹಾಗೂ ಸಾಲಿಗ್ರಾಮ ತಾಲ್ಲೂಕಿನಲ್ಲೂ ಜನರಿಗೆ ಹೆಚ್ಚೇನು ಪ್ರಯೋಜನವಾಗಿಲ್ಲ.

ಸಾಲಿಗ್ರಾಮದಲ್ಲಿ ಆಡಳಿತ ಸೌಧಕ್ಕಾಗಿ ನೀರಾವರಿ ಇಲಾಖೆಯ 1 ಎಕರೆ 10 ಗುಂಟೆ ಜಾಗ ಗುರುತಿಸಿದ್ದು, ನಿವೇಶನದ ಮೌಲ್ಯ ₹98 ಲಕ್ಷವನ್ನು ಕಂದಾಯ ಇಲಾಖೆ ಪಾವತಿಸಿದರಷ್ಟೇ ಜಾಗ ನೋಂದಣಿ ಮತ್ತು ಹಸ್ತಾಂತರ ಸಾಧ್ಯ. ಹೀಗಾಗಿ ಇಂದಿಗೂ ಸರಗೂರಿನ ಕಾಂಡಂಚಿನ ಗ್ರಾಮಗಳ ಜನ ಹಳೇ ತಾಲ್ಲೂಕು ಎಚ್.ಡಿ. ಕೋಟೆಗೆ ಅಲೆಯುತ್ತಿದ್ದಾರೆ.

ಸಾಲಿಗ್ರಾಮದ ನಾಡಕಚೇರಿಯಲ್ಲಿಯೇ ತಹಶೀಲ್ದಾರ್‌ಗೆ ತಾತ್ಕಾಲಿಕವಾಗಿ ಜಾಗ ನೀಡಲಾಗಿದೆ. ಪೊಲೀಸ್ ಠಾಣೆ ಹಿಂಭಾಗ ಆಡಳಿತ ಸೌಧಕ್ಕೆ ಜಾಗ ಗುರುತಿಸಿದ್ದು, ಪ್ರಸ್ತಾವ ಸಲ್ಲಿಕೆ ಆಗಿದೆ. ಅನುದಾನ ಇನ್ನೂ ಸಿಕ್ಕಿಲ್ಲ.

ಕೊಡಗು ಜಿಲ್ಲೆಯ ಕುಶಾಲನಗರ ಸಮೀಪದ ಹಾರಂಗಿ ಜಲಾಶಯದಿಂದ ಶನಿವಾರ ಸಂಜೆ ನದಿಗೆ ನೀರು ಹೊರಬಿಡಲಾಯಿತು

ರಾಜ್ಯದ ಹಲವೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶನಿವಾರ ಬಿರುಸಿನ ಮಳೆ ಸುರಿಯಿತು. ಮಳೆ–ಗಾಳಿಯಿಂದ ಹಲವೆಡೆ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಕೆಲವೆಡೆ ಮನೆಗಳಿಗೆ ಹಾನಿಯಾಗಿದೆ.

ಧಾರವಾಡ, ಉತ್ತರ ಕನ್ನಡ, ಬೆಳಗಾವಿ, ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಜೋರು ಮಳೆ ಬಿದ್ದಿದೆ. ಉಪ್ಪಿನಂಗಡಿ ಸಮೀಪದ ಕಜೆಕ್ಕಾರು ಅಂಬೇಡ್ಕರ್ ಕಾಲೊನಿಯಲ್ಲಿ ಎರಡು ಮನೆಗಳು ಕುಸಿದಿದ್ದು, ಮನೆಯೊಳಗಿದ್ದ ಮಕ್ಕಳಿಬ್ಬರು ಪಾರಾಗಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ಶುಕ್ರವಾರ ಮುಳುಗಡೆಯಾಗಿದ್ದ ಜಿಲ್ಲೆಯ 16 ಸೇತುವೆಗಳ ಮೇಲೆ ಮತ್ತೆ ಒಂದು ಅಡಿ ನೀರು ಏರಿಕೆ ಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆ ಆರ್ಭಟ ಮುಂದುವರಿದಿದ್ದು, ಮಲೆನಾಡು ಭಾಗದ ಹಲವೆಡೆ 10 ಸೆಂಟಿಮೀಟರ್‌ಗೂ ಅಧಿಕ ಮಳೆಯಾಗಿದೆ. ಹೇಮಾವತಿ ಮತ್ತು ತುಂಗಾ ನದಿಯಲ್ಲಿ ನೀರಿನ ಹರಿವಿನ ಪ್ರಮಾಣ ಹೆಚ್ಚಾಗಿದೆ. ನರಸಿಂಹರಾಜಪುರ ತಾಲ್ಲೂಕಿನ ಕರ್ಕೇಶ್ವರ ಗ್ರಾಮದ ಮನೆಯೊಂದರ ಮೇಲೆ ಮರ ಬಿದ್ದು ಹಾನಿಯಾಗಿದೆ.

ಭಾರಿ ಮಳೆಯಿಂದಾಗಿ ಶನಿವಾರ ಬೆಳಿಗ್ಗೆ ಮಂಗಳೂರು ಅಂತರ ರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ವಿಮಾನ ಇಳಿಸುವುದಕ್ಕೆ ಸಮಸ್ಯೆಯಾಯಿತು. ಬೆಂಗಳೂರಿನಿಂದ ಬಂದ ವಿಮಾನವೊಂದನ್ನು ಕಣ್ಣೂರು ವಿಮಾನ ನಿಲ್ದಾಣದಲ್ಲಿ ಮತ್ತು ಮುಂಬೈನಿಂದ ಬಂದ ವಿಮಾನವೊಂದನ್ನು ಬೆಂಗಳೂರಿನಲ್ಲಿ ಇಳಿಸಬೇಕಾಯಿತು

ಸಮುದಾಯಕ್ಕೆ ಅವಕಾಶ ನಿರಾಕರಣೆ: ಹರಿಪ್ರಸಾದ್ ಅತೃಪ್ತಿ

'ಸಿ.ಎಂ ಮಾಡುವುದೂ ಗೊತ್ತು, ಕೆಳಕ್ಕೆ ಇಳಿಸುವುದೂ ಗೊತ್ತು'

ಪ್ರಜಾವಾಣಿ ವಾರ್ತೆ

ಹರಿಪ್ರಸಾದ್

ಬೆಂಗಳೂರು: 'ನನಗೆ ಸಿ.ಎಂ ಮಾಡುವುದೂ ಗೊತ್ತು. ಅವರನ್ನು ಅಧಿಕಾರದಿಂದ ಕೆಳಕ್ಕೆ ಇಳಿಸುವುದೂ ಗೊತ್ತು' ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆಡಿರುವ ಮಾತು ಕಾಂಗ್ರೆಸ್ ವಲಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಸಾಮ್ರಾಟ್ ಹೋಟೆಲ್ ನಲ್ಲಿ ಶುಕ್ರವಾರ ನಡೆದ ಈಡಿಗ, ಬಿಲ್ಲವ, ನಾಮಧಾರಿ, ದೀವರ ಸಮುದಾಯದ ಮುಖಂಡರ ಸಭೆಯಲ್ಲಿ ಮಾತನಾಡಿದ ಹರಿಪ್ರಸಾದ್, ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

7ನೇ ಪುಟ ನೋಡಿ

'ಕಾದು ನೋಡಿ... ಏನೇನು ಆಗುತ್ತೆ'

ಸಭೆಯಲ್ಲಿ ಶುಕ್ರವಾರ ನೀಡಿದ್ದ ಹೇಳಿಕೆ ಬಗ್ಗೆ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಬಿ.ಕೆ. ಹರಿಪ್ರಸಾದ್ ಅವರು, 'ಅಸಮಾಧಾನದ ಬಗ್ಗೆ ನಾನು ಮಾತನಾಡುವುದಿಲ್ಲ. ನಾನು ಹೇಳಿದ ಮೇಲೆ ಆ ಮಾತಿಗೆ ಬದ್ಧನಾಗಿರುತ್ತೇನೆ. ರಾಜಕಾರಣದಲ್ಲಿ ಮುಂದೆ ಏನೇನು ಆಗುತ್ತೆ ಕಾದು ನೋಡಿ' ಎಂದರು.

> **ನಾನಾಗಲೀ, ಹರಿಪ್ರಸಾದ್ ಅವರಾಗಲೀ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಲು ಸಾಧ್ಯವಿಲ್ಲ. ಹೈಕಮಾಂಡ್‌ಗೆ ಮಾತ್ರ ಮುಖ್ಯಮಂತ್ರಿ ಆಯ್ಕೆ ಮಾಡುವ ಅಧಿಕಾರವಿದೆ**
>
> **ಜಮೀರ್ ಅಹಮದ್ ಖಾನ್,** ವಸತಿ ಸಚಿವ

> **ಹರಿಪ್ರಸಾದ್ ಅವರನ್ನು ಪಕ್ಷವು ರಾಜ್ಯಸಭೆ, ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದೆ, ವಿವಿಧ ರಾಜ್ಯಗಳ ಉಸ್ತುವಾರಿಯನ್ನಾಗಿ ಮಾಡಿದೆ. ಅವರ ಹೇಳಿಕೆ ಅನವಶ್ಯಕ**
>
> **ಎನ್. ಚಲುವರಾಯಸ್ವಾಮಿ,** ಕೃಷಿ ಸಚಿವ

> **ಪಕ್ಷದಲ್ಲಿ ಅಸಮಾಧಾನವಿಲ್ಲ. ಸಿದ್ದರಾಮಯ್ಯ ಅವರನ್ನು ಉದ್ದೇಶವಾಗಿಟ್ಟುಕೊಂಡು ಹರಿಪ್ರಸಾದ್ ಹೇಳಿಕೆ ನೀಡಿದ್ದಾರೆ ಎಂದು ನಾನು ಭಾವಿಸುವುದಿಲ್ಲ**
>
> **ಬಿ. ನಾಗೇಂದ್ರ,** ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ

ಮಣಿಪುರ: ನಗ್ನ ಮೆರವಣಿಗೆ ದಿನವೇ ಮತ್ತೊಂದು ಕೃತ್ಯ, ಇನ್ನೂ ಸಿಗದ ಮೃತದೇಹ

ಇಬ್ಬರು ಯುವತಿಯರ ಮೇಲೆ ಅತ್ಯಾಚಾರ, ಹತ್ಯೆ

ಇಂಫಾಲ್ (ಪಿಟಿಐ): ಕುಕಿ ಬುಡಕಟ್ಟು ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರ ನಗ್ನ ಮೆರವಣಿಗೆ ನಡೆದ ದಿನದಂದೇ ಮಣಿಪುರದಲ್ಲಿ ಮತ್ತಿಬ್ಬರು ಯುವತಿಯರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ ಹತ್ಯೆಗೈದಿರುವ ಕೃತ್ಯದ ಕುರಿತು ಮಾಹಿತಿ ಬಹಿರಂಗವಾಗಿದೆ.

ಮೇ 4ರಂದು ಗುಂಪೊಂದು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿದ್ದ ವಿಡಿಯೊ ನಾಲ್ಕು ದಿನಗಳ ಹಿಂದೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ತಪ್ಪಿತಸ್ಥರ ವಿರುದ್ಧ ತ್ವರಿತವಾಗಿ ಕ್ರಮಕೈಗೊಳ್ಳುವಂತೆ ಕೇಂದ್ರ ಸರ್ಕಾರ ಮತ್ತು ಮಣಿಪುರ ಸರ್ಕಾರಕ್ಕೆ ಎಚ್ಚರಿಕೆ ನೀಡಿತ್ತು.

ಗುಂಪೊಂದು ಇಬ್ಬರು ಯುವತಿಯರನ್ನು ಹತ್ಯೆಗೈದಿರುವ ಕುರಿತು ಕಾಂಗ್ಪೊಕ್ಪಿ ಜಿಲ್ಲೆಯ ಸೈಕುಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನನ್ನ 21 ವರ್ಷದ ಪುತ್ರಿ ಹಾಗೂ ಆಕೆಯ 24 ವರ್ಷದ ಸ್ನೇಹಿತೆ ಇಂಫಾಲ್ ಪೂರ್ವ ಜಿಲ್ಲೆಯ ಕೊನುಂಗ್ ಮಾಮಾಂಗ್ ಪ್ರದೇಶದ ಕಾರ್ ವಾಷಿಂಗ್ ಸ್ಟೇಷನ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಈ ಇಬ್ಬರು ನೆಲೆಸಿದ್ದ ಬಾಡಿಗೆ ಮನೆಗೆ ನುಗ್ಗಿದ 100ರಿಂದ 200 ದುಷ್ಕರ್ಮಿಗಳಿದ್ದ ಗುಂಪು ಸಾಮೂಹಿಕ ಅತ್ಯಾಚಾರ ಎಸಗಿ ಹತ್ಯೆಗೈದಿದೆ' ಎಂದು ಯುವತಿಯ ತಾಯಿಯು ಮೇ 16ರಂದು ದೂರು ನೀಡಿದ್ದಾರೆ.

ಇಲ್ಲಿಯವರೆಗೂ ಯುವತಿಯರ ಮೃತದೇಹಗಳು ಪತ್ತೆಯಾಗಿಲ್ಲ. ಆದರೆ, ಶವಾಗಾರದಲ್ಲಿ ಮೃತದೇಹಗಳಿವೆ ಎಂದು ಕುಟುಂಬಸ್ಥರು ನಂಬಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಆದರೆ, ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆಗೆ ಸಂಬಂಧಿಸಿದ ಐಪಿಸಿ ಸೆಕ್ಷನ್‌ಗಳನ್ನು ಇದರಲ್ಲಿ ಉಲ್ಲೇಖಿಸಿಲ್ಲ.

ಮತ್ತೆ ಇಬ್ಬರು ಆರೋಪಿಗಳ ಬಂಧನ: ಬೆತ್ತಲೆ ಮೆರವಣಿಗೆ ಪ್ರಕರಣದಲ್ಲಿ ಬಾಲಕನೊಬ್ಬನನ್ನು ವಶಕ್ಕೆ ಪಡೆಯಲಾಗಿದ್ದು, ಯುಮ್ಲೆಂಬಮ್ ನುಂಗ್ಸಿತೋಯ್ ಮೈತೇಯಿ (19) ಎಂಬಾತನನ್ನು ಬಂಧಿಸಲಾಗಿದೆ. ಇಂಫಾಲ್‌ನಲ್ಲಿ ಆರೋಪಿಗಳ ಬಂಧನಕ್ಕೆ ಮೈತೇಯಿ ಸಮುದಾಯದ ಮಹಿಳೆಯರು ಅಡ್ಡಿಪಡಿಸಲು ಯತ್ನಿಸಿದರು. ರಸ್ತೆಗಳನ್ನು ಬಂದ್ ಮಾಡಿ ಟೈರ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು. ರಕ್ಷಣಾ ಪಡೆಯ ಸಿಬ್ಬಂದಿ ಅಶ್ರುವಾಯು ಶೆಲ್ ಸಿಡಿಸಿ ಗುಂಪನ್ನು ಚದುರಿಸಿದರು. ಹಿಂಸಾಚಾರದಿಂದ ಮಣಿಪುರದಲ್ಲಿ ಇಲ್ಲಿಯವರೆಗೆ 160 ಜನರು ಮೃತಪಟ್ಟಿದ್ದಾರೆ.

ಇನ್ನಷ್ಟು ಸುದ್ದಿಗಳು 6

ಪಶ್ಚಿಮ ಬಂಗಾಳದಲ್ಲಿಯೂ ಹೀನ ಕೃತ್ಯ: ಟಿಎಂಸಿ–ಬಿಜೆಪಿ ವಾಗ್ಯುದ್ಧ

ಕೋಲ್ಕತ್ತ (ಪಿಟಿಐ): ಮಣಿಪುರದ ಹಿಂಸಾಚಾರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ– ಟಿಎಂಸಿ ನಡುವೆ ವಾಗ್ಯುದ್ಧಕ್ಕೆ ಕಾರಣವಾಗಿದೆ. ಪಶ್ಚಿಮ ಬಂಗಾಳದಲ್ಲಿ ಇಬ್ಬರು ಮಹಿಳೆಯರ ಮೇಲೆ ಹಲ್ಲೆ ನಡೆಸಿ, ಬೆತ್ತಲೆ ಮೆರವಣಿಗೆ ನಡೆಸಲಾಗಿದೆ ಎಂದು ಬಿಜೆಪಿ ಆರೋಪಿಸಿದೆ.

ಮಾಲ್ಡಾ ಜಿಲ್ಲೆಯಲ್ಲಿ ಇದೇ 19ರಂದು ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ, ದೌರ್ಜನ್ಯ ಎಸಗಲಾಗಿದೆ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅಮಿತ್ ಮಾಳವೀಯ ಆರೋಪಿಸಿದ್ದಾರೆ. ದೃಶ್ಯವನ್ನು ಮಬ್ಬುಗೊಳಿಸಿದ ವಿಡಿಯೊ ಅನ್ನೂ ಅವರು ಹಂಚಿಕೊಂಡಿದ್ದಾರೆ.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮನೆಯಂಗಳದಲ್ಲೇ ಅಂತ್ಯಸಂಸ್ಕಾರಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಅರಕಲಗೂಡು (ಹಾಸನ): 'ಗ್ರಾಮದಲ್ಲಿರುವ ಸ್ಮಶಾನ ದೂರ. ರಸ್ತೆಯೂ ಸರಿ ಇಲ್ಲ. ದಲಿತರ ಅಂತ್ಯ ಸಂಸ್ಕಾರಕ್ಕೆ ಪ್ರತ್ಯೇಕ ಸ್ಮಶಾನ ಸೌಕರ್ಯ ಕೊಡಬೇಕು ಎಂದು ಆಗ್ರಹಿಸಿ, ಸಮುದಾಯದ ಮುಖಂಡರು, ವ್ಯಕ್ತಿಯೊಬ್ಬರ ಸಂಸ್ಕಾರವನ್ನು ಅವರ ಮನೆ ಮುಂಭಾಗದಲ್ಲೇ ನಡೆಸಲು ಮುಂದಾದ ಘಟನೆಗೆ ತಾಲ್ಲೂಕಿನ ಶಂಬುನಾಥ ಪುರ ಶನಿವಾರ ಸಾಕ್ಷಿಯಾಯಿತು.

ಶುಕ್ರವಾರ ರಾತ್ರಿ ಅನಾರೋಗ್ಯದಿಂದ ನಿಧನರಾದ ಗಿಡ್ಡಯ್ಯ (55) ಅವರ ಅಂತ್ಯಸಂಸ್ಕಾರವನ್ನು ಮನೆ ಮುಂಭಾಗದಲ್ಲೇ ನಡೆಸುವ ಮಾಹಿತಿ ದೊರೆತ ಕೂಡಲೇ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರವಿಕುಮಾರ್, ಕಂದಾಯ ನಿರೀಕ್ಷಕ ದಾನುಪ್ರಕಾಶ್ ಗ್ರಾಮಕ್ಕೆ ಧಾವಿಸಿದ್ದರು. 'ಗ್ರಾಮದ ಸ್ಮಶಾನ ಅಥವಾ ಪಟ್ಟಣದ ಸ್ಮಶಾನದಲ್ಲಿ ಅಂತ್ಯಕ್ರಿಯೆ ಮಾಡಿ' ಎಂದರು. ಅವರ ಮನವಿಗೆ ಒಪ್ಪದ ಸಂಬಂಧಿಕರು, 'ಗ್ರಾಮದ ಹೊರಗಿರುವ ಸ್ಮಶಾನ ದೂರ. ದಲಿತರಿಗೆ ಪ್ರತ್ಯೇಕ ಸ್ಮಶಾನ ಕೊಡಿ ಎಂಬ ಮನವಿಗೆ ಸ್ಪಂದಿಸಿಲ್ಲ. ಸ್ವಂತ ಜಮೀನು ಕೂಡ ಇಲ್ಲ. ಹೀಗಾಗಿ ಮನೆ ಮುಂದೆಯೇ ಶವ ಹೂಳುತ್ತೇವೆ' ಎಂದರು.

7ನೇ ಪುಟ ನೋಡಿ

ಅವಿತಿರುವ ಶಂಕಿತರಿಗೆ ಜಂಟಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜನದಟ್ಟಣೆ ಸ್ಥಳಗಳಲ್ಲಿ ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಐವರು ಶಂಕಿತರನ್ನು ಬಂಧಿಸಿರುವ ಸಿಸಿಬಿ ಪೊಲೀಸರಿಗೆ, ರಾಜ್ಯದಲ್ಲಿ ಮತ್ತಷ್ಟು ಶಂಕಿತರು ಅಡಗಿರ ಬಹುದು ಎಂಬ ಸಂಶಯ ಶುರುವಾಗಿದೆ.

ಶಂಕಿತರ ಪತ್ತೆಗಾಗಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ಕೇಂದ್ರ ಗುಪ್ತದಳ ಹಾಗೂ ಇತರೆ ತನಿಖಾ ಸಂಸ್ಥೆಗಳ ಜೊತೆ ಸಿಸಿಬಿ ಪೊಲೀಸರು ಜಂಟಿ ಶೋಧ ಆರಂಭಿಸಿದ್ದಾರೆ. ಕೇಂದ್ರ ಗೃಹ ಇಲಾಖೆಗೂ ವರದಿ ಕಳುಹಿಸಿರುವ ಪೊಲೀಸರು, 'ಮತ್ತಷ್ಟು ಶಂಕಿತರು ಇರುವ ಅನುಮಾನವಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿರುವುದಾಗಿ ಗೊತ್ತಾಗಿದೆ. '2008ರಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಬಾಂಬ್ ಸ್ಫೋಟದ ಆರೋಪಿ ಟಿ. ನಾಸೀರ್, ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿದ್ದುಕೊಂಡೇ ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ. ಜೈಲಿನಲ್ಲಿ ಈತನ ಸಂಪರ್ಕಕ್ಕೆ ಬಂದಿದ್ದ ಹಲವರು, ಕಾನೂನು ಬಾಹಿರ ಚಟುವಟಿಕೆ ನಡೆಸಲು ಒಪ್ಪಿಕೊಂಡಿದ್ದರು ಎಂಬ ಬಗ್ಗೆ ಮಾಹಿತಿ ಇದೆ.

7ನೇ ಪುಟ ನೋಡಿ

ಕಡಿಮೆ ಸಂಗ್ರಹ ಸಾಮರ್ಥ್ಯ, ಕೈಕೊಡುವ ನೆಟ್‌ವರ್ಕ್, ಮಾಹಿತಿ ದಾಖಲೀಕರಣಕ್ಕೆ ತೊಂದರೆ

ಕಾರ್ಯ'ಭಾರ'ಕ್ಕೆ ಸೋತ ಅಂಗನವಾಡಿ 'ಸ್ಮಾರ್ಟ್‌ಫೋನ್'

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಅಂಗನವಾಡಿ ಕೇಂದ್ರದ ಕಾರ್ಯಚಟುವಟಿಕೆಗಳ ದಾಖಲೆಯನ್ನಷ್ಟೇ ನಿರ್ವಹಿಸುವ ಸಾಮರ್ಥ್ಯದ ಸ್ಮಾರ್ಟ್‌ಫೋನ್ ವಿತರಿಸಿದ ಸರ್ಕಾರ, ಆರೋಗ್ಯ ಇಲಾಖೆಯ ಸಮೀಕ್ಷೆ ಮತ್ತು ಚುನಾವಣೆ ಕರ್ತವ್ಯದ ದಾಖಲೆಗಳನ್ನು ಅದರಲ್ಲೇ ನಿರ್ವಹಿಸುವಂತೆ ಸೂಚಿಸಿರುವುದು ಕಾರ್ಯಕರ್ತೆಯರ ಪಾಲಿಗೆ ಸಮಸ್ಯೆಯಾಗಿ ಪರಿಣಮಿಸಿದೆ.

ರಾಜ್ಯದಲ್ಲಿ 63 ಸಾವಿರಕ್ಕೂ ಅಧಿಕ ಅಂಗನವಾಡಿ ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರದಿಂದ 'ಪೋಷಣ' ಅಭಿಯಾನದಡಿ 2020–21ನೇ ಸಾಲಿನಲ್ಲಿ ಸ್ಮಾರ್ಟ್‌ಫೋನ್ ವಿತರಿಸಲಾಗಿತ್ತು. ಸ್ಯಾಮ್‌ಸಂಗ್ ಕಂಪನಿಯ 2 ಜಿಬಿ ರ‍್ಯಾಮ್ ಮತ್ತು 32 ಜಿಬಿ ಸಂಗ್ರಹ ಸಾಮರ್ಥ್ಯ ಮತ್ತು ಎಲ್‌ಜಿ ಕಂಪನಿಯ 2 ಜಿಬಿ ರ‍್ಯಾಮ್, 16 ಜಿಬಿ ಸಂಗ್ರಹ ಸಾಮರ್ಥ್ಯದ ಮೊಬೈಲ್, ಪವರ್‌ಬ್ಯಾಂಕ್ ಹಾಗೂ ಸಿಮ್‌ಕಾರ್ಡ್ ಕೊಡಲಾಗಿತ್ತು. ಆರಂಭಿಕ ದಿನಗಳಲ್ಲಿ ಈ ಮೊಬೈಲ್‌ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಿದ್ದವು.

'ದಿನಗಳು ಕಳೆದಂತೆ ವಿವಿಧ ಇಲಾಖೆಗಳ ಸಮೀಕ್ಷೆ ಮತ್ತು ಚುನಾವಣೆ ಕರ್ತವ್ಯದ ಚಟುವಟಿಕೆಗಳನ್ನು ದಾಖಲಿಸುವ ಕೆಲಸ ನಡೆಯಿತು. ದಾಖಲೆಗಳ 'ಭಾರ' ಹೆಚ್ಚಾದಂತೆ, ಮೊಬೈಲ್ ಕಾರ್ಯಸಾಮರ್ಥ್ಯ ಕುಂದಿತು. ಇದರೊಂದಿಗೆ ಇಂಟರ್‌ನೆಟ್ ಸಮಸ್ಯೆ ಕಾಡಿತು. ಈಗ ಮೊಬೈಲ್ ಬಳಕೆಯೇ ಕಷ್ಟಕರವಾಗಿದೆ. ಪದೇ ಪದೇ ಸ್ಥಗಿತಗೊಳ್ಳುತ್ತಿದೆ' ಎಂದು ಅಂಗನವಾಡಿ ಕಾರ್ಯಕರ್ತೆಯರು ತಿಳಿಸಿದರು.

ಅಪ್‌ಲೋಡ್ ಕಷ್ಟ: 'ನಮಗೆ ಕೊಟ್ಟಿರುವುದು 2ಜಿ ಅಂತರ್ಜಾಲ ಸಂಪರ್ಕದ ಮೊಬೈಲ್. ವಿವಿಧ ಫೈಲ್‌ಗಳು ಬೇಗ ಡೌನ್‌ಲೋಡ್ ಆಗುವುದಿಲ್ಲ. ಎಲ್ಲ ದಾಖಲೆಗಳನ್ನು ನಿರ್ವಹಿಸುವಷ್ಟು ಸಾಮರ್ಥ್ಯ ಮೊಬೈಲ್‌ಗಳಿಗಿಲ್ಲ. ಕೇಂದ್ರದ ಕಾರ್ಯ ಚಟುವಟಿಕೆಗಳ ನಿರ್ವಹಣೆ ಜೊತೆಗೆ ವಿವಿಧ ಮಾಹಿತಿ, ಚಿತ್ರಗಳನ್ನು ಅಪ್‌ಲೋಡ್ ಮಾಡಲು ಕಷ್ಟವಾಗುತ್ತಿದೆ' ಎಂದು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಸಂಘಟನೆಯ ರಾಜ್ಯ ಸಮಿತಿ ಸದಸ್ಯೆ ಯಲ್ಲುಬಾಯಿ ಶೀಗಿಹಳ್ಳಿ 'ಪ್ರಜಾವಾಣಿ'ಗೆ ತಿಳಿಸಿದರು.

'ಮೂರು ವರ್ಷಗಳ ಹಿಂದೆ ಕೊಟ್ಟ ಸಂದರ್ಭದಲ್ಲಿ ಮೊಬೈಲ್‌ಗಳು ಚೆನ್ನಾಗಿಯೇ ಇದ್ದವು. ಆದರೆ, ಕಾರ್ಯಭಾರ ಹೆಚ್ಚಾದಂತೆ ಮತ್ತು ವಿವಿಧ ದಾಖಲೀಕರಣ ಪ್ರಕ್ರಿಯೆ ನಡೆದಂತೆ ಸಮಸ್ಯೆಗಳು ಹೆಚ್ಚಾಗುತ್ತಿವೆ' ಎಂದರು.

'ಆರೋಗ್ಯ ಇಲಾಖೆಯೊಂದಿಗೆ ಪೌಷ್ಟಿಕ, ಆರೋಗ್ಯ ಸಮೀಕ್ಷೆ ಕೈಗೊಳ್ಳಲು ಸರ್ಕಾರ ಆದೇಶಿಸಿದೆ. ನನ್ನ ಅಂಗನವಾಡಿ ಕೇಂದ್ರದ ವ್ಯಾಪ್ತಿಯಲ್ಲಿ 300 ಮನೆಗಳಿವೆ. ಪ್ರತಿ ಮನೆಯ ಮಾಹಿತಿ ದಾಖಲಿಸಲು ಒಂದು ಗಂಟೆ ಸಾಲದು. ಸರ್ಕಾರದ ಕಠಿಣ ಕ್ರಮದ ಎಚ್ಚರಿಕೆಗೆ ಹೆದರಿ ಕೆಲಸ ಮಾಡುತ್ತಿದ್ದೇವೆ' ಎಂದು ಬೈಲಹೊಂಗಲದ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯರೊಬ್ಬರು ಹೇಳಿದರು.

ಬೆಳಗಾವಿಯ ಭಡಕಲ್ ಗಲ್ಲಿಯಲ್ಲಿ ಸ್ಮಾರ್ಟ್‌ಫೋನ್ ಬಳಸಿ ಆರೋಗ್ಯ ಸಮೀಕ್ಷೆ
–ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

> **ಸರ್ಕಾರ ಕೊಟ್ಟಿರುವ ಸ್ಮಾರ್ಟ್‌ಫೋನ್‌ಗಳಲ್ಲಿ ವಿವಿಧ ಮಾಹಿತಿ ದಾಖಲೀಕರಣಕ್ಕೆ ತುಂಬಾ ಸಮಸ್ಯೆಯಾಗುತ್ತಿದೆ. ನಮಗೆ ಹೊಸ ಮೊಬೈಲ್ ಕೊಡಲೇಬೇಕು. ಇಲ್ಲದಿದ್ದರೆ ಹೋರಾಟ ಅನಿವಾರ್ಯ**
>
> **ಮಂದಾ ನೇವಗಿ,** ಅಧ್ಯಕ್ಷೆ, ಸಿಐಟಿಯು, ಬೆಳಗಾವಿ ತಾಲ್ಲೂಕು ಘಟಕ

> **ಸ್ಮಾರ್ಟ್‌ಫೋನ್‌ಗಳು ಸರಿಯಾಗಿ ಕಾರ್ಯನಿರ್ವಹಿಸದಿರುವುದು ಗಮನಕ್ಕೆ ಬಂದಿದೆ. ಅವರಿಗೆ ಹೊಸ ಮೊಬೈಲ್ ಕೊಡಲು ಪ್ರಯತ್ನ ನಡೆದಿದೆ**
>
> **ಆರ್.ನಾಗರಾಜ್,** ಉಪನಿರ್ದೇಶಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ

PROPERTY CORNER ಕ್ಲಾಸಿಫೈಡ್ಸ್

RIVERSIDE RESORT
PROPERTY for SALE / RENT / LEASE
Location : 2 kms. from world famous JOGFALLS, Karnataka.
Premium Rooms, Boating Area, Just Next to River Sharavati.
CALL : 9019369350

FOR SALE
FOR SALE 2 BHK (1392 sq. ft.) & 3 BHK (1680 sq. ft.) Flats at PNB Layout, Konankunte, Doddakallasandra, Bangalore.
Bore-well, Lift, Car Parking available.
Ready-to-occupy
Contact: 9972335974 9740089974 9482088499

4 AND HALF ACRES OF COFFEE ESTATE FOR SALE IN CHIKMAGLUR WITH BEAUTIFUL SCENIC VIEW IDEAL

FOR CONSTRUCTION OF HOMESTAY OR RESORT
2 CR 25 LAKHS
9480076969



PRM/KA/RERA/1251/310/PR/150223/005721
DS-MAX SAMYAK
BOOK YOUR DREAM HOME IN BANGALORE'S MOST HAPPENING LOCATION
MYSORE ROAD
NEAR R R DENTAL COLLEGE
LUXURIOUS 2 & 3-BHK APARTMENTS
Rs. 39.59 - 67.16 Lakhs*
BDA APPROVED

*T & C Apply
8880 003 003
www.dsmaxproperties.com

For SALE
Residential properties in South Bangalore.
Padmanabanagar - 30 X 50ft Site with 7 Houses (with Rental Income)
Jayanagar 5th Block - 45 x 90ft (4050 sqft) 3 BDA Properties
Jayanagar 2nd block & BSK 2nd Stage - 40 x 60ft North Facing BDA Property
BSK 2nd Stage - 5BHK on 40 x 60ft BDA Site
V V Puram - 3BHK Apartment with Furniture
CONTACT : 97391 50900 / 98860 20900
realestate.tgindia@gmail.com

ಕನಕಪುರ ರಸ್ತೆಯಲ್ಲಿ ಮನೆ ನಿರ್ಮಾಣಕ್ಕೆ ಅತ್ಯುತ್ತಮ ನಿವೇಶನಗಳು
BBMP 'A' KHATA SITES
@ Thalaghattapura
Close to Metro Station
Kanakapura Road
Ready for Registration & Construction
Bank Loan Available
Call for Site Visit : 7406 219 219

Agricultural **FARMLAND**
Divine Euphoria
@ KANAKPURA
•Fully Developed •Swimming Pool •Clubhouse •Children Play area •Temple •Meditation Center •Birds & Animals •Adventure Sports
550+ CUSTOMERS | 55+ COTTAGES BUILT
₹ 13 Lakhs
7760574999 - 7892154461
www.divineeuphoria.co.in

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸೈಟುಗಳು ಮಾರಾಟಕ್ಕಿವೆ
ನೆಲಮಂಗಲ ಹತ್ತಿರ
BMRDA APPROVED A KHATHA
70% ಬ್ಯಾಂಕ್ ಲೋನ್ ದೊರೆಯುತ್ತದೆ.
ಸಂಪರ್ಕಿಸಿ: 8880660099

REAL ESTATE SELLING

Commerical

HBR Layout

PREMIUM BDA Commercial sites for sale HBR Layout 80 Feet Road (Near BDA Complex) Contact 9844039482

J P Nagar

J.P.NAGAR RING Road 60x90 & 40x60 North Commercial, Jayanagar 50x75 South, excellent locations Suraj_Realtors -9845232711.

Malleshwaram

SALE MALLESHWARAM commercial Building 8th cross, 45x103, 3floors also commercial Building Rajajinagar, Basaweshwarnagar. 8618240677.

Flat

Banashankari

FLATS FOR SALE

RERA No : PRM/KA/RERA/1251/310/PR/220722/005096
MARS THE PLANET 2, 2.5, 3 BHK Flat Located @ BSK 3rd Stage opp to Tata Promont, 8792155802 9972399993 & 9880625336

Basaveshwaranagar

"MAGADI MAIN Road ready to occupy 3BHK 1315.Sfqt 8600000/-, 2BHK 1050.Sqft 6800000/- with occupancy certificate. 9845286505"

J P Nagar

J.P.NAGAR_9TH Phase,Apartment for_Sale`Total 8`Flats, under construction near`Nandi Garden Apartment expecting 3,7500000/-(for total`flats) complition in`4 months, Call-9036706304

Kengeri

FLAT FOR SALE 2BHK 900 sft, BDA Apartment, Kengeri Upanagara, Valgerahalli, Near Mylasandra Bus Stop, Kengeri, West Facing. 9731751079

Kammanahalli

FLAT SALE, renovated, covered carparking, VI Floor, SENAVIHAR, 2 BHK, 903 SQFT. Contact: 7483935020

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand-9611144096

Malleshwaram

MALLESWARAM: 2BHK Flat (1000sft) North Facing, First Floor, Lift, Carparking. 1,25, 000,00/- Negotiable. 9845243757

Out-Station

RAJU HIREMATH & CREW
NAGARBHAVI MARVEL
... a laxurious apartment
NAGARBHAVI
Near Ullal R.T.O Office
2 BHK & 3 BHK FLATS
Ready to Occupy
Contact 98443 45334

Uttarahalli

"POORNA PRAGNA BDA Layout 3BHK ready_to occupy with A-katha Two_car_parking 1.5_Crore. 9845286505"

House

Bannerghatta Road

"3BHK DUPLEX-HOUSE sale at ARKERE MICO Layout Bhanerugatta Road East facing site, door. 9611538786"

HRBR Layout

SALE BDA 30X40 with 12year old, 2floor house,West facing at HRBR 1st Block, 40ft road. Call 9844039482

Isro Layout

BUILDING SALE 800-Sqft Site 3200Sqft BuiltUp Area Four Floor Full TeakWood Granite Interior ISRO Layout- 9448879788/ 7019678016

J P Nagar

SALE 40X62 JPNagar 2nd Phase With 3 Unites 3_BHK Each With Car Garage Call:9844134068 9066399102

Sadashiva Nagar

PROPERTY SALE. 2 'Hari Krupa' 3rd Cross Lower Palace Orchards. 1550 Sq ft. 9591932764

Vishweshwariah Layout

"30X40 4BHK_TRIPLEX with_Lift Brand new-House for_Sale.at Vishveshwaraiah 3rd_Block-near Amma_Ashram 40'ft wide-Road, Opp.Park. 9448682467/ 8217537292"

Industrial & Factory

Magadi Road

BUILD-TO-SUIT OR on sale 3 acre industrial converted land at Magadi singripalya attached STRR corner @ 495 psqft contact 9845851473.

Residential/ Commercial

Sadashiva Nagar

PREMIUM RESIDENTAL VACANT PLOT OPP PARK ACROSS SADASHIVANAGAR SWIMMING POOL CONTACT OWNER 9844018823

Sites

Anjanapura

ANJANAPURA 10 Block 20x30 West Face BDA site for Sale ready for construction 30 Feet Road near NPS school, Contact-9845090471

SALE ANJANAPURA 10th Block BDA 30x40 West Facing Site Close to 80feet Road Contact: 7019582893

ANJANAPURA COMMERCIAL Property, BDA Site For Sale,40x60, 80 Feet Road. Good Location Contact: 9945835569

40X60 BDA Site for Sale at Anjanapura 5th G Block, 60 Feet Road, Contact: 9945427003

Arkavathi Layout

ARKAVATHI LAYOUT 2nd Block 30x30 Corner, 3rd Block 20x30, 7th Block 20x30 Genuine Buyers- USR -7019770736/ 8951614989.

Banashankari

30x40 SITE SALE

BSK 6th STAGE, 10th BLOCK, BDA NORTH FACING, PLOT FOR SALE 30X40, 1st ALLOTTE, CLEAR TITLE. Contact : 8088799686, 9611105595

BDA SITE for sale. Banashakari 6th stage, 7 block, site no: 1605, 1606. (30*40) East facing, near Ring Road. Contact: 9449070818/ 9449016406

SALE BSK 6th stage 9th Block 30x40 East Facing 65 Lakh Also 40x60 East Facing 4th Block 2Cr and 20x30 48 lakh Negotiable 9945373839, 9620041313

BSK 6TH Stage, 10th Block, BDA Site for Sale 40×60 North facing Rs.8500/- negotiable Near 100ft. 9980034524

BTM Layout

BTM 4TH Stage 2nd Block 40x60, BDA Layout 2 sites, Indiranagar 25x37, Domlur 40x60, 20x30 USR-7019770736/ 8951614989.

Bannerghatta Road

30X50 NF 40X50 EF 40X60 NF 50X60 NEC Akshyanagar BBMP Akatha Near Metro Station: 9341238064

Basaweshwaranagar

COMMERCIAL NORTH East Corner, Fully Developed Area 2230 Sft, Near Pushpanjali Theater, Shivanagar Bangalore: 9343782958

Chamarajpet

CHAMRAJPET UMA Theatre, Aradhya Complex Behind 40x60 N/F Prime Residential Area 14feet passage 24000/ Sft. Contact: Owner 'ESHWER ENTERPRISES'. 98454-97163

Hosur Road

SALE-SITE 40X60 To`built service Apartment`good investment`AECS Layout_B Block_BDA Approved`Layout Singasandra Village Nr`to Electronic-City Upcoming Metro-Station 500meter Vani_Estates 9845012548

Jakkur

BDA SITES SALE: Arkavati, GKVK. BBMP Sites: Jakkur, MCECHS Layout, Kempapura 30x40, 30x50, 40x60. 9449970278

Jayanagar

SITE SALE 30x50 Jayanagar 4th T Block NAL Layout on 40feet Road Call:9844134068 9066399102

J P Nagar

J.P.NAGAR 80X76 South East corner, opp Mini Forest Excellent Residential vacant BDA site Murali -9845232711.

SALE 30X40 East Facing JP Nagar 9th phase 4th "A" Block 8750/- sqft also 30x40 South 7500/- near Kanakpura Road. 9945373839, 9620041313

JP NAGAR 9th Phase 4th Block 30x46 North facing near 80ft Main Road, 1.5KM to Metro Station, immediate construction, Good location. 9845132011/ 9663554448

SALE BDA JPNAGAR 8th phase 2nd Block 40x60 west Facing Commercial Site Rate 11250/-per sqft 9620041313, 9945373839

JPNAGAR 8TH Phase, Royal County BDA Site Sale, 30x50, S/F, 9000/- Negotioble: 9538680364 / 9513004587

Koramangala

SALE 50X80 NORTH RESIDENTIAL PLOT KORAMANGALA 1ST BLOCK, SERIOUS BUYERS PLEASE CONTACT: RAMESH HK 9844104958

Kanakapura Road

KANAKAPURA ROAD Kaggalipura BMRDA Approved 'E'Khata 30x40 E/F, 30X50 W/F, 3000/- Negotioble : 9740150364/9986146147

Kempegowda Layout

BDA SITES For Sale @ Kempegowda Layout 20x30, 30x40, 40x60 6363496142 9845555666

Magadi Road

1080SQFT- SITE Sale Corner Triangle Shape Kadabagere Cross, Shivani Greens Call: 9845044335

Nagarabhavi

"NAGARABHAVI BDA Complex 20x30 East, 30x40 North 40 feet Road BDA Site, Immediate Registration. 9448432633"

Nandini Layout

SALE BDA 37x40, South East Corner site for sale at Railway Layout, Nandini Layout Call 9844039482

Rajajinagar

RAJAJI NAGAR 1ST, N' BLOCK 25X40, 25X40 CORNER VACANT SITES FOR SALE GOOD LOCATION: 9980501366

30*45 SITE 2nd Site from main road, 6th Block, Sale 14500/- p.sft. 9341256998/ 9739217086.

Rajarajeshwari Nagar

BDA & RERA

RERA No. : PRM/KA/RERA/1251/310/PR/191222/005541
TRILOK VILLAS AND APARTMENTS Premium PLOTS at Kenchanahalli @ R.R. Nagar 9008880994, 9900199564 & 9972399993

'A' KHATA Property for Sale in RajarajeshwariNagar 30x40 and 40x60, East facing. Call: 9448288522

SITE FOR Sale Gattigere (Sudarshan Layout),RR Nagar 30x40 Site W/F @ 8500/- Nego: 9900036544

Sadashiva Nagar

40X60 EAST facing and 45x60 SE corner. Both sites in prime residential area, with lots of greenery. Prestigious location in Sadashivanagar, Rs:49,500 Per-Sft each.Kumar. 9886371998

Tumkur Road

30X40 SITE sale (2 side road) Kirloskar layout, Hesaraghata main road, opposite Sapthagiri college. 9620480363.

Vishweshwariah Layout

"40X60 NF Residential Site 5th Block Sale. [Vishveshwaraiah Layout Any Measurement BDA Sites]. Contact: 9845143579"

AVAILABLE VISHWESHWARAIAH Layout 6th Block, 40X60 EF, 40ft Road Near KLE-Law College Good Location: 8553908699

"VISHVESHWARAIAH 4TH-BLOCK BDA Two sites for sale 30x40 North face, Good location. Contact: 8618934679"

40X60 SALE Vishveshwaraiah 1st Block Opp KHB 40X60 Site 6th KLE College Owner Meeting & 20X30 Site 31 Lack: 8310003509

VISHVESHWARAIAH LAYOUT 6th Block East facing 30x40 site 88,00,000/- negotiable. ClearTitle. ABHILASHA CONSULTANT. 9480565758

SALE 30X40 VISHVESWARAIAH LAYOUT 4th Block south facing 78lakh Negotiable 9945373839, 9620041313

Whitefield

30 X 40 site Chikkathirupathi road for 16 Lakhs. call 7022206007

Villas/Bunglows

Magadi Road

INDEPENDANT VILLA for Sale Spacious 6600 sq.ft. villa, built on 3600 sq.ft. East facing corner Site. 6 bedroom, 6 bathroom,Servant House, surrounded by garden on two Sides. Carpark, gated community with all amenities. No.5, Rashi Residency Located on 4 lane Magadi Road, Kadabagere Cross, Bangalore. Call: 9972300999

REAL ESTATE BUYING

Commerical

General

WANTED TENANTED Commercial_Building in Bangalore_for Purchase Budget 10 Crore -25 Crore. "Myriad Solutions"- 9886736785

Flat

Multiple Locations

WANTED 2/ 3 BHK resale flat purchase BTM, J.P.Nagar, Jayanagar, Kanakapura/ Bannerghatta Road. Contact: 9623440068

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

WANTED BDA SITES ANJANAPURA, JP-NAGAR 8TH,9TH PHASE ROYAL PARK, COUNTY BSK 6TH STAGE: 9880776950

BDA-SITES WANTED For-Immediate Settlement Anjanapura Banashankari 6th Stage J.P.Nagar 8th 9th Phase 20x30, 30x40,40x60,50x80 Call:9945610779

Hosur Road

"SURYA-CITY KHB Wanted 20x30,30x40, 40x60,50x80 Any dimensions Site-for Immediate Settlement. Genuine Sellers Contact. "Krishna"- 9886294610"

Multiple Locations

URGENT REQUIREMENT Any`Measurement BDA`and A'Katha Properties /Apartment for`Genuine`NRI buyers`in Jayanagar, J.P.Nagar,_BTM, Bannerghatta Road,BSK 6th_Stage, Anjanapura, Call-Jeevitha Promotors &.Builders: -9980761200.

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any_BDA Sites Wanted_Contact: SAPTHAGIRI. 9900268073, 9448068073.

Vishweshwariah Layout

BDA SITES WANTED Nagarabavi, Vishveswarayya, Janabharathi, Kempegowda, Anjanapura,Bsk 6th Stage 20x30,30x40 40x60,50x80. Contact: 9902556939

BDA-SITES WANTED Kempegowda Layout Vishweshwaraiah Layout Other BDA Approved Layouts 30x40, 40x60, 50x80 Immediate Settlement Call:8660220048 7676900174

BUYING/ SELLING 20x30,30x40,40x60 50x80 BDA sites at Vishweshwaraiah Layout, BSK 6th-stage. Contact:9844533371/ 9341733480

"WANTED 30X40, 20x30 Sites Visweswaraiah Layout, BEML Layout RR.Nagar sourindings, Genuine Sellers Contact: 7760388034/ 9242135834"

BUILDERS ESSENTIAL

Water Proofing

'WE FIX' LEAKING_ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL SPACE FOR RENT 2000 SQ.FT, 1st Floor, OFFICE/ BUSINESS AVAILABLE ON, 80 feet Road, HBR Layout, 2nd BLOCK. CONTACT: 9449077530

AVAILABLE FOR RENT RPC Layout near Swimming pool 2600 sqft Commercial 4floor Building. Call: 8867569333

Flats

J.P.NAGAR_2ND Brand`New_vastu Apartment for`Lease 2_BHK 30,00000/, 3`BHK_45,00000/-OR `Rent`2_BHK 30,000/- 3_BHK`45,000/ -9740292904.

Industrial And Factory

FOR RENT: Immediate availability, Peenya 2nd Stage, 10000 sq ft industrial facility, 66 HP power, crane, corner site. Suitable for CNC machining, manufacturing operations. Contact: 9148833730

AVAILABLE INDUSTRIAL SHEDS and WAREHOUSE For RENT in and Around Industrial Area Bangalore. Unik`Estates 9611135365.

PUBLIC NOTICE

ಕಳೆದಿದೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನಮ್ಮ ಕಕ್ಷಿದಾರರಾದ ಶ್ರೀಮತಿ ಬಿಂದು ಜಾನ್ , ಅಯ್ಯಪ್ಪ ಬಡಾವಣೆ, ಜಾರಕ್ ಬಂಡೆಕಾವಲ್ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲೂಕ್ ರವರು ಸೈಟ್ ನಂ.282ಕ್ಕೆ ಸಂಬಂಧಿತ, ನೋಂದಣಿ ಸಂಖ್ಯೆ ಬಿಎನ್‌ಜಿ (ಯು) ವೈಎಲ್‌ಎನ್‌ಕೆ 8078-2013-14 ಹೊಂದಿರುವ ಮೂಲ ಕ್ರಯಪತ್ರವನ್ನು ಕಳೆದು ಕೊಂಡಿರುತ್ತಾರೆ. ಸದರಿ ದಾಖಲೆಗಳ ವಿಚಾರವಾಗಿ ಪೊಲೀಸ್ ಠಾಣೆ ದಾಖಲೆ ಸಂಖ್ಯೆ 0592234/2023 ಎಂಬುದಾಗಿ ದಿನಾಂಕ : 07/06/2023ರಂದು ದೂರನ್ನು ಸಹ ನೀಡಲಾಗಿದೆ. ದಯವಿಟ್ಟು ಈ ದಾಖಲಾತಿ ಯಾರಿಗಾದರೂ ಸಿಕ್ಕಿದ್ದಲ್ಲಿ, ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ ಶಾಜಿ ಟೀ ವರ್ಗೀಸ್ ಲೀಗಲ್ ಹೈ. ವಕೀಲರು ಮತ್ತು ಸಾಲಿಸಿಟರ್ಸ್ ಎಫ್-103 ಗಂಗಪ್ಪ ಕಾಂಪ್ಲೆಕ್ಸ್ 45, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಂಗಳೂರು-560052 ರವರಿಗೆ ದಯವಿಟ್ಟು ತಲುಪಿಸಿ, ನಿಗದಿತ ಅವಧಿ ಮುಗಿದ ನಂತರದ ಯಾವುದೇ ಕ್ಲೈಮ್‌ಗಳು ಆಕ್ಷೇಪಣೆಗಳನ್ನು ನಮ್ಮ ಕಕ್ಷಿದಾರರು ಪರಿಗಣಿಸುವುದಿಲ್ಲ. ಸಂಪರ್ಕಿಸಿ : +919008099696

EDUCATIONAL

Tuitions

HOME TUITION (Bangalore) Maths Class 7th, 8th, 9th, 10th Teaching experience 15 years. 8660320590

MATRIMONIAL

Grooms Wanted

Christian

PARENTS OF Kerala catholic girl, 25 yrs/ 154, MS (engg), working in metro city and from educated, well to do family. Seeking alliance from professionally qualified boys below 29 yrs, working in any metro city and from educated and loving family. Contact 9967600000

BUSINESS

Business to Business

Business

BEST INVESTMENT For_Petrol_Bunk Lease_Cum Sale or Partnership Kanakapura National Highway 209 Built`to`shuit Restaurant 35000sft Call:9035963540

Consultants

WE NEED retired bank executives as consultants with experience in DRT cases, NPA Loans and One time settlements. Call Arun 9945699789.

Finance

LOANS AVAILABLE Personal business mortgage property purchase construction from Bank/ Private with CIBIL also. 7019460997.

AUTOMOTIVE

Four Wheelers Selling

Hyundai

SALVAGE QUOTATION required without RC flood damaged vehicle No. KA-02-MJ-1937, HYUNDAI-i10 Asta, 2013 Model. Vehicle at Adarsha Car Care, T.Dasarahalli. Contact: 9845036847

WEEKEND CORNER

ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ
ಪ್ರದರ್ಶನ ಹಾಗೂ ಮಾರಾಟ
20 ರಿಂದ 25 ಜುಲೈ
ಕೇವಲ 3 ದಿನಗಳು ಮಾತ್ರ
ಶುಭ್ ಕನ್ವೆನ್ಷನ್ ಸೆಂಟರ್
(ಹಿಂದಿನ ಇಲಾನ್ ಕನ್ವೆನ್ಷನ್ ಸೆಂಟರ್)
7ನೇ ಹಂತ, ಕೊತ್ತನೂರು ದಿಣ್ಣೆ ಮುಖ್ಯರಸ್ತೆ, ಬ್ರಿಗ್ರೇಡ್ ಮಿಲೆನಿಯಂ ಎದುರು, ಜೆಪಿ ನಗರ, ಬೆಂಗಳೂರು
1,50,000 ಕ್ಕೂ ಹೆಚ್ಚು ಇತ್ತೀಚಿನ ವೈವಿಧ್ಯಮಯ ವಸ್ತ್ರಗಳನ್ನು ಆಯ್ಕೆ ಮಾಡಿ ಭಾರತದಾದ್ಯಂತ ನೇರ ತಯಾರಕರು ಮತ್ತು ಕೈಯಿಂದ ತಯಾರಿಸಿದ ಹೊಸ ವಿನ್ಯಾಸಗಳೊಂದಿಗೆ ಪ್ರಮಾಣೀಕೃತ ನೈಜ ರೇಷ್ಮೆ ಉತ್ಪನ್ನಗಳು ಒಂದೇ ಸೂರಿನಡಿ
ಭಾಗವಹಿಸುವ ರಾಜ್ಯಗಳು
ಬಿಹಾರ್, ಅಸ್ಸಾಂ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ಥಾನ, ಕರ್ನಾಟಕ, ತಮಿಳುನಾಡು, ಪಂಜಾಬ್, ತೆಲಂಗಾಣ, ಒಡಿಸ್ಸಾ, ಛತ್ತೀಸ್‌ಗಢ್, ಜಮ್ಮು & ಕಾಶ್ಮೀರ್, ಆಂಧ್ರಪ್ರದೇಶ್ & ಇತರೆ ರಾಜ್ಯಗಳು

UP TO 50% Discount
M: 9441987009 | ALL DEBIT & CREDIT CARDS ACCEPTED | ENTRY FREE

MORE Classifieds Ads on Subsequent Pages

The new Seltos is here to take you on an exhilarating drive experience. With an unstoppable attitude, the redesigned Seltos is the new benchmark of badass traits – distinctive design language, connected technology, premium cabin space, and a powerful driving experience. Discover the new Seltos that is here to awaken the badass in you.

Technology. Reborn. Badass 2.0 redefines the segment, yet again

Dual Screen Panoramic Display

26.03 cm (10.25") HD Touchscreen Navigation + Full Digital Cluster with 26.04 cm (10.25") Color LCD MID give you an immersive and futuristic drive experience.

Most Powerful Turbo Petrol Engine

with 160 ps power, enjoy best-in-class superior performance and fuel efficiency.

Intelligent Dual Zone Fully Automatic Air Conditioner

ensures a comfortable drive for both, the driver and the co-driver.

Voice Activated Dual Pane Panoramic Sunroof

gives you a mesmerising view of the world above.

BOSE Premium Sound System with 8 Speakers

lets you enjoy an elevated audio experience.

Kia Connect# Skill with Amazon Alexa



lets you control your Kia from the comfort of your home.

Host of other Badass Features: Electric Parking Brake with Auto Hold | Smart 20.32 cm (8") Head-up Display | Front Ventilated Seats with 8-Way Power Driver's Seat | Dual Sports Exhaust (1.5 TGDi Only) | Star Map LED Connected Tail Lamps | Sequential LED Turn Indicators | R18 (46.20 cm) Crystal Cut Glossy Black Alloy Wheels | Ambient Mood Lights with LED Sound Mood Lamps | GT Line & X-Line Differentiated Body Kit | Smart Pure Air Purifier with Virus and Bacteria Protection | Star Map Sweeping LED Light Guide | Exclusive Matte Graphite Exterior Color | Premium Sliding Cup Holder Cover

Safety. Reborn. Badass 2.0 with 17 Autonomous ADAS Level 2 Features~ + Robust 15 Standard Safety Features across variants

Smart Cruise Control with Stop and Go	Lane Keep Assist and Departure Warning	Front Collision Warning and Avoidance Assist	Blind Spot Collision Warning	Leading Vehicle Departure Alert	Safe Exit Warning
lets you set and maintain any cruising speed for an effortless drive.	proactively supports in keeping the car within its lane.	scans the road ahead to detect and warn you of any impending collision.	looks out for hard-to-spot traffic at the rear of the vehicle.	detects and alerts when the vehicle in front begins to move.	alerts in case of an approaching object to ensure you safely exit from the car.

Kia Service
Connected · Adaptive · Responsive · Engage

3 Years Unlimited kms Warranty	Extended Warranty Up to 5 Years	My Convenience Plus Best in Class Cost of Ownership^^	Scratch Care Program^	IoT Based Smart Services##	24x7 | 3 Years Nationwide RSA**

BOOK NOW Call 1800 108 5000 | 093195 91407 | Visit www.kia.com/in | Book Kia Seltos | kiacare@kiaindia.net | Look for "Kia India" @

Scan to know more

Terms & Conditions Apply. *Ex-showroom price all India. The product & feature images shown in this ad is for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown in this ad. Segment is defined as Mid SUV whose length lies between 4 220 - 4 390 mm and width between 1 760 - 1 810 mm. ~Advanced Driver Assistance System (ADAS) is not a substitute for human eye and driver vigilance. It is an assistance feature that enhances driving experience and safety. Effectiveness of ADAS may vary based on actual situation and all objects around vehicle may not be detected. The driver shall remain responsible for safe, vigilant, and attentive driving. #Kia Connect comes with 3-year free subscription. Amazon Alexa device is not a standard car accessory & the customer needs to purchase from a third party. Kia Connect skill features may vary depending on the variant, device compatibility, software, and network availability both in the vehicle and Alexa device. Kia Connect skill is only available in India and can be interacted with in English and Hindi. **RSA coverage across India except Andaman & Nicobar Islands and Lakshadweep. ##IoT based workshops for live vehicle tracking for digital experience. ^^Computed cumulatively with all benefits from comprehensive coverage. ^Program coverage includes repair of 1 scratch free cost in an ownership period of 12 months from the date of sale, applicable for all new Seltos retailed up to 31st Dec, 2023. The specifications and features may vary depending on models/ variants. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, Kia Connect features and other details of any model as mentioned in this ad or to discontinue any model without prior notice. For more details visit your local Kia dealership. Kia India Pvt. Ltd. (Formerly known as Kia Motors India Private Limited) urges you to follow traffic rules, these are meant to keep you safe on roads.

FOR INFORMATION CONTACT: BENGALURU: TAAPASI KIA, KALYAN NAGAR, PH: 8095537777, **VST KIA,** PALACE ROAD, PH: 9606988123, YESHWANTHPUR, PH: 9606988124, **ADVAITH KIA,** LALBAGH MAIN ROAD, PH: 9611006006, **EPITOME KIA,** WHITEFIELD: PH: 9606970216, YELAHANKA, PH: 7406343339, **JSP KIA,** HOSUR ROAD, PH: 9606011244, BELLANDUR, PH: 9071077717, **NAARA KIA,** J.P NAGAR, PH: 7406528200, **PPS KIA,** MYSORE ROAD, PH: 6309990010, **BELGAUM: MIRACULUM KIA,** PH: 08312439111, **BELLARY: ATHENA KIA,** PH: 6364922832, **BIJAPUR: KUMAR KIA,** PH: 080 45849192, **DAVANGERE: JANSI KIA,** PH: 9538018155, **GULBARGA: KUMAR KIA,** PH: 080 45849191, **HASSAN: AADARSH KIA,** PH: 9606034050, **HOSPET: BHADRA KIA,** PH: 7760888885, **HUBLI: NAGSHANTI KIA,** PH: 9148432469, **KUSHALNAGAR: ARM KIA,** PH: 9606055314, **KOLAR: EPITOME KIA,** PH: 8951903224, **MANGALORE: ARM KIA,** PH: 9606013152, **MANDYA: AADARSH KIA,** PH: 9606034070, **MYSORE: AADARSH KIA,** PH: 9606034060, **SHIMOGA: JANSI KIA,** PH: 9538416666, **TUMKUR: PPS KIA,** PH: 6303622210, **UDUPI: ARM KIA,** PH: 9606055296

INNOCEAN-050/23

ಹೊಸ ತಾಲ್ಲೂಕು; ಹೆಚ್ಚಾದ ಸಂಕಷ್ಟ

ಒಂದನೇ ಪುಟದಿಂದ

ಆದರೆ ಅಧಿಕಾರಿ–ಸಿಬ್ಬಂದಿಯಿಲ್ಲ. ಕಚೇರಿ ಸ್ಥಳಾಂತರಗೊಂಡರೂ ಹಳೇ ದಾಖಲೆಗಳೆಲ್ಲ ಹಳೇ ತಾಲ್ಲೂಕಿನಲ್ಲೇ ಉಳಿದುಹೋಗಿವೆ. ಜಾತಿ–ಆದಾಯ ಪ್ರಮಾಣಪತ್ರ, ಪಹಣಿ, ಆಸ್ತಿ ನೋಂದಣಿ, ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ.. ಹೀಗೆ ಯಾವುದೇ ಸೇವೆ–ಸೌಲಭ್ಯ ಆಗಬೇಕಿದ್ದರೂ, ದಾಖಲೆ ಬೇಕಿದ್ದರೂ ಹಳೇ ತಾಲ್ಲೂಕು ಕೇಂದ್ರವೇ ಗತಿ.

ಸಾರ್ವಜನಿಕರು ಸಣ್ಣ–ಪುಟ್ಟ ಸರ್ಕಾರಿ ಕೆಲಸಕ್ಕೂ 50–60 ಕಿ.ಮೀ. ದೂರದ ತಾಲ್ಲೂಕು ಕೇಂದ್ರಗಳಿಗೆ ಅಲೆಯುವುದು ತಪ್ಪಬೇಕು. ಇದ್ದಲ್ಲಿಯೇ ಸಕಲ ಸೌಕರ್ಯ ಸಿಗಬೇಕು. ಆಡಳಿತ ವಿಕೇಂದ್ರೀಕರಣವಾಗಬೇಕೆಂಬ ಆಶಯ ಇನ್ನೂ ಈಡೇರಿಲ್ಲ.

ಹೋಬಳಿ ಕೇಂದ್ರಗಳಾಗಿದ್ದ ಪಟ್ಟಣಗಳಿಗೆ ತಾಲ್ಲೂಕಿನ ಸ್ಥಾನಮಾನ ನೀಡಿದ ಸರ್ಕಾರ ಮೂಲ ಸೌಕರ್ಯ ಕಲ್ಪಿಸುವಲ್ಲಿ ನಿರ್ಲಕ್ಷ್ಯ ತಾಳಿವೆ. ಒಂದೆರಡು ಕಚೇರಿ ಬಂದದ್ದು ಬಿಟ್ಟರೆ ಹೆಚ್ಚೇನು ಬದಲಾವಣೆಯಾಗಿಲ್ಲ. ಅರ್ಧದಷ್ಟು ಕೇಂದ್ರಗಳಿಗೆ ಈಗಲೂ ವ್ಯವಸ್ಥಿತವಾದ ತಾಲ್ಲೂಕು ಕಚೇರಿಯೇ ಇಲ್ಲ. ಕೆಲವೆಡೆ ಒಂದೆರಡು ಇಲಾಖೆಗಳಷ್ಟೇ ಸ್ಥಳಾಂತರಗೊಂಡಿವೆ.

ಘೋಷಣೆಗೆ ಆಸಕ್ತಿ, ಸೌಕರ್ಯಕ್ಕೆ ನಿರಾಸಕ್ತಿ: ರಾಜ್ಯದ ಹಲವೆಡೆ ಜನ ಹೋರಾಟ ನಡೆಸಿದ್ದರ ಫಲವಾಗಿ ಅನೇಕ ಹೊಸ ತಾಲ್ಲೂಕುಗಳು ರಚನೆಯಾದವು. ಮತ್ತೆ ಕೆಲವೆಡೆ ರಾಜಕೀಯ ಪ್ರಭಾವದಿಂದ ರಚನೆಯಾದ ತಾಲ್ಲೂಕುಗಳೇ ಹೆಚ್ಚು. ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ತಾಲ್ಲೂಕುಗಳು ರಚನೆಯಾಗಿವೆ. ಜನಪ್ರತಿನಿಧಿಗಳು ತಮ್ಮ ಮತ ಕ್ಷೇತ್ರ ಹಾಗೂ ಪ್ರಭಾವ ವಲಯಕ್ಕೆ ಸೇರಿದ ಪಟ್ಟಣಗಳಿಗೆ ತಾಲ್ಲೂಕು ಸ್ಥಾನಮಾನ ದೊರಕಿಸುವಲ್ಲಿ ಯಶಸ್ಸು ಕಂಡರೂ, ಸೌಕರ್ಯಗಳನ್ನು ಕಲ್ಪಿಸುವಲ್ಲಿ ಸಂಪೂರ್ಣ ಸೋತಿದ್ದಾರೆ. ಹೊಸ ತಾಲೂಕು ಘೋಷಣೆ ತನಕ ಇದ್ದ ಶ್ರಮ ಹಾಗೂ ಹೆಗ್ಗಳಿಕೆ ಪಡೆದುಕೊಳ್ಳುವಲ್ಲಿ ತೋರಿದ ಆಸಕ್ತಿಯು ಸೌಲಭ್ಯ ಕಲ್ಪಿಸುವಲ್ಲಿ ತೋರಿಸಿಲ್ಲ ಎನ್ನುವುದು ಸಾರ್ವತ್ರಿಕ ಆರೋಪವಾಗಿದೆ. ಹೊಸ ತಾಲ್ಲೂಕು ರಚನೆಗೆ ಆರಂಭವಾದ ಹೋರಾಟಗಳು ಇದೀಗ ಪೂರಕ ಸೌಲಭ್ಯ ನೀಡಿ ಎಂದು ಮುಂದುವರೆದಿದೆ.

ಹೊಸ ತಾಲ್ಲೂಕುಗಳ ರಚನೆಯಲ್ಲಿ ಜಗದೀಶ ಶೆಟ್ಟರ್ ಪಾಲು ದೊಡ್ಡದಿದೆ. 2013ರಲ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ 43 ಪಟ್ಟಣಗಳಿಗೆ ನೂತನ ತಾಲ್ಲೂಕಿನ ಸ್ಥಾನಮಾನ ನೀಡಿದರು. ಆದರೆ ಅನುದಾನದ ಕೊರತೆಯಿಂದ ಇದು ಕಾರ್ಯರೂಪಕ್ಕೆ ಬರಲಿಲ್ಲ. 2017-18ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೆ 10 ತಾಲ್ಲೂಕುಗಳನ್ನು ಸೇರಿಸಿ ಒಟ್ಟು 53 ತಾಲ್ಲೂಕುಗಳನ್ನು ಹೊಸ ತಾಲ್ಲೂಕು ಕೇಂದ್ರಗಳನ್ನಾಗಿ ಘೋಷಿಸಿದ್ದರು.

2019ರಲ್ಲಿ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಎಚ್‌.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ಮತ್ತೆ 12 ಹೊಸ ತಾಲ್ಲೂಕುಗಳು ರಚನೆಯಾದವು. ಹತ್ತಾರು ಶಾಸಕರು ತಾವು ಪ್ರತಿನಿಧಿಸುವ ಕ್ಷೇತ್ರಗಳಲ್ಲಿ ಹೊಸ ತಾಲ್ಲೂಕು ರಚನೆ ಮಾಡಿಸಿಕೊಂಡು ಅದರ ಶ್ರೇಯ ಪಡೆದರು.

ತಾವು ಪ್ರತಿನಿಧಿಸುತ್ತಿದ್ದ ರಾಮನಗರ ವಿಧಾನಸಭಾ ಕ್ಷೇತ್ರದ ಹಾರೋಹಳ್ಳಿಗೆ ಕುಮಾರಸ್ವಾಮಿ ಹೊಸ ತಾಲ್ಲೂಕಿನ ಸ್ಥಾನಮಾನ ನೀಡಿದರು. ಆಗಷ್ಟೇ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೆ ಏರಿದ್ದ ಹಾರೋಹಳ್ಳಿಯಲ್ಲಿ ಹೊಸ ತಾಲ್ಲೂಕು ಕಾರ್ಯರೂಪಕ್ಕೆ ಬರಲು ಐದು ವರ್ಷವೇ ಹಿಡಿದಿದೆ. ಈಗಲೂ ಅಲ್ಲಿ ತಹಶೀಲ್ದಾರ್ ಕಚೇರಿಯಷ್ಟೇ ಇದೆ.

ರಾಜ್ಯದಲ್ಲೇ ಅತಿ ಹೆಚ್ಚು ಹೊಸ ತಾಲ್ಲೂಕುಗಳು ವಿಜಯಪುರ ಜಿಲ್ಲೆಯಲ್ಲಿ ರಚನೆಯಾಗಿವೆ. ಜಿಲ್ಲೆಯ ಕೊಲ್ಹಾರ, ನಿಡಗುಂದಿ, ಬಬಲೇಶ್ವರ, ತಿಕೋಟಾ, ಚಡಚಣ, ತಾಳಿಕೋಟೆ ಮತ್ತು ದೇವರಹಿಪ್ಪರಗಿಯನ್ನು ಹೊಸ ತಾಲ್ಲೂಕೆಂದು 2013ರಲ್ಲಿ ಶೆಟ್ಟರ್ ಘೋಷಿಸಿದ್ದರು. ಆದರೆ ಅವು ಅಸ್ತಿತ್ವಕ್ಕೆ ಬಂದಿದ್ದು ಮಾತ್ರ 2018ರಲ್ಲಿ. ಅವುಗಳ ಸಾಲಿಗೆ 2019ರಲ್ಲಿ ಆಲಮೇಲ ಹೊಸ ತಾಲ್ಲೂಕು ಕೇಂದ್ರವಾಗಿ ಸೇರಿಕೊಂಡಿತು. ಈ ಎಂಟೂ ತಾಲ್ಲೂಕಿನಲ್ಲಿ ಹೆಚ್ಚು ಬದಲಾವಣೆ ಆಗಿಲ್ಲ.

ರಾಯಚೂರು ಜಿಲ್ಲೆಯ ಸಿರವಾರದಲ್ಲಿ ಸಣ್ಣ ಕಟ್ಟಡದಲ್ಲಿರುವ ತಹಶೀಲ್ದಾರ್ ಕಚೇರಿ

ಎಲ್ಲೆಲ್ಲಿ ಹೊಸ ತಾಲ್ಲೂಕು?



● ನಕ್ಷೆಯಲ್ಲಿ ಜಿಲ್ಲಾವಾರು ಹೊಸ ತಾಲ್ಲೂಕುಗಳ ಸಂಖ್ಯೆಯನ್ನು ನೀಡಲಾಗಿದೆ

ಗಡಿ ಗುರುತು ಸ್ಪಷ್ಟವಾಗಿಲ್ಲ: ಬಾಗಲಕೋಟೆ ಜಿಲ್ಲೆಯ ತೇರದಾಳ, ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ತಾಲ್ಲೂಕು ರಚನೆಯಾಗಿ ಹಲವಾರು ವರ್ಷಗಳಾಗಿದ್ದರೂ ಗಡಿ ನಿಗದಿಯಾಗಿಲ್ಲ. ಅದಕ್ಕಾಗಿ ಅಲ್ಲಿ ಈಗಲೂ ಹೋರಾಟ ಮುಂದುವರೆದಿದೆ.

ದಾಂಡೇಲಿಯಲ್ಲಿ ಐದು ವರ್ಷವಾದರೂ ತಹಶೀಲ್ದಾರ್ ಕಚೇರಿಯು ನಾಡಕಚೇರಿಯ ಕಟ್ಟಡದಲ್ಲಿ ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯು ನಗರಸಭೆ ಕಚೇರಿಯ ಕೊಠಡಿಯೊಂದರಲ್ಲಿ ನಡೆಯುತ್ತಿದೆ. ಉಳಿದ ಇಲಾಖೆಗಳಿಗೆ ಸ್ವಂತ ಕಚೇರಿಗಳಿಲ್ಲ. ತಾಲ್ಲೂಕಿನ ಗಡಿ ಗುರುತು ಪ್ರಕ್ರಿಯೆಯೂ ಖಚಿತವಾಗದೆ, ಗಡಿಭಾಗದ ಜನ ಸೌಲಭ್ಯಗಳಿಗಾಗಿ ಯಾವ ತಾಲ್ಲೂಕಿನಲ್ಲಿ ಅರ್ಜಿ ಸಲ್ಲಿಸಬೇಕೆಂಬ ಗೊಂದಲದಲ್ಲಿದ್ದಾರೆ.

ಅನುದಾನದ ಕೊರತೆ–ಬಾಡಿಗೆ ಕಟ್ಟಡವೇ ಗತಿ: ಹೊಸ ತಾಲ್ಲೂಕುಗಳ ಅಭಿವೃದ್ಧಿಗೆ ಅನುದಾನ ನೀಡದ ಕಾರಣಕ್ಕೆ ಆಡಳಿತ ಭವನ, ಕಚೇರಿಗಳು ನಿರ್ಮಾಣವಾಗಿಲ್ಲ. ಬಹುತೇಕ ಕಡೆ ಜಾಗ ಗುರುತಿಸಿಕೊಂಡು ಅನುದಾನಕ್ಕಾಗಿ ಕಾಯಲಾಗುತ್ತಿದೆ. ಸದ್ಯ ಪಾಳು ಬಿದ್ದ ಕಟ್ಟಡಗಳನ್ನು ನವೀಕರಿಸಿ ಅವುಗಳಿಗೆ ತಹಶೀಲ್ದಾರ್ ಕಚೇರಿ ಎಂಬ ಬೋರ್ಡು ತೂಗು ಹಾಕಲಾಗಿದೆ. ಹೊಸದಾಗಿ ಆರಂಭವಾಗಿರುವ ಕಚೇರಿಗಳು ವಿವಿಧ ಸರ್ಕಾರಿ ಕಟ್ಟಡ ಹಾಗೂ ಖಾಸಗಿ ಕಟ್ಟಡಗಳಲ್ಲಿ ಎಲ್ಲೆಂದರಲ್ಲಿ ಕಾರ್ಯ ನಿರ್ವಹಿಸುತ್ತಿವೆ. ದಿಕ್ಕಿಗೊಂದು ಕಚೇರಿಗಳಿದ್ದು, ಎಲ್ಲಿವೆ ಎಂಬುದು ಸ್ಥಳೀಯರಿಗೂ ಸರಿಯಾಗಿ ಗೊತ್ತಿಲ್ಲ.

ರಾಮನಗರ ಜಿಲ್ಲೆಯ ಹಾರೋಹಳ್ಳಿ ತಾಲ್ಲೂಕು ಅಭಿವೃದ್ಧಿಗೆ ಒಟ್ಟು ₹109 ಕೋಟಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಕೆಯಾಗಿದೆ. ಆದರೆ ನಯಾಪೈಸೆ ಬಿಡುಗಡೆಯಾಗಿಲ್ಲ. ಅಲ್ಲಿ ತಹಶೀಲ್ದಾರ್ ಕಚೇರಿ ಮಾತ್ರ ಬಂದಿದೆ. ಉಳಿದವು ಕನಕಪುರದಲ್ಲಿಯೇ ಉಳಿದಿವೆ. ಬಹುತೇಕ ಕಡೆಗಳಲ್ಲಿ 2–3 ಕಚೇರಿಗಳಷ್ಟೇ ಸ್ಥಳಾಂತರವಾಗಿವೆ. ಇನ್ನೂ 35–40 ಇಲಾಖೆಗಳು ಸ್ಥಳಾಂತರವಾಗಬೇಕು.

ಗದಗ ಜಿಲ್ಲೆಯ ಗಜೇಂದ್ರಗಡ ಪಟ್ಟಣದ ಹೊರವಲಯದ ಕಾಲಕಾಲೇಶ್ವರ ರಸ್ತೆಯಲ್ಲಿರುವ ಗುಡ್ಡದ ಕೆಳಗಿನ 36 ಎಕರೆ ಪ್ರದೇಶದಲ್ಲಿ ಮಿನಿ ವಿಧಾನಸೌಧ, ಕೋರ್ಟ್ ಸೇರಿದಂತೆ ತಾಲ್ಲೂಕು ಕೇಂದ್ರದ ಎಲ್ಲ ಕಚೇರಿಗಳ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದೆ. ಆದರೆ ಭೌತಿಕವಾಗಿ ಯಾವುದೇ ಪ್ರಗತಿ ಆಗಿಲ್ಲ.

ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ಪಟ್ಟಣದ ಹೊರವಲಯದಲ್ಲಿರುವ ಕವಲಿಕುಪ್ಪಿಯಲ್ಲಿ ತುಂಗಾ ಮೇಲ್ದಂಡೆ ಯೋಜನೆಯ ನೀರಾವರಿ ಇಲಾಖೆಯ ಕಟ್ಟಡದಲ್ಲಿಯೇ ತಹಶೀಲ್ದಾರ್ ಕಾರ್ಯಾಲಯ ಕಾರ್ಯನಿರ್ವಹಿಸುತ್ತಿದೆ. ನೌಕರರ ಸುಮಾರು 15 ವಸತಿ ಕಟ್ಟಡಗಳಲ್ಲಿ ಉಪನೋಂದಣಿ ಕಚೇರಿ, ಶಿಶು ಅಭಿವೃದ್ಧಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಅರಣ್ಯ ಇಲಾಖೆ.. ಹೀಗೆ ಹಲವಾರು ತಾಲ್ಲೂಕು ಮಟ್ಟದ ಕಚೇರಿಗಳ ನಾಮಫಲಕಗಳನ್ನು ಮಾತ್ರ ತೂಗುಹಾಕಲಾಗಿದೆ. ಆದರೆ ಯಾವುದೂ ಕಾರ್ಯಾರಂಭ ಮಾಡಿಲ್ಲ.

ಏನೇನು ಬೇಕು?: 65 ಹೊಸ ತಾಲ್ಲೂಕು ಕೇಂದ್ರಗಳ ಪೈಕಿ ಸದ್ಯ 30 ಕೇಂದ್ರಗಳಲ್ಲಿ ಹೊಸ ತಾಲ್ಲೂಕು ಆಡಳಿತ ಸೌಧ ನಿರ್ಮಾಣಕ್ಕೆ ಚಾಲನೆ ದೊರೆತಿರುವುದಾಗಿ ಸರ್ಕಾರದ ದಾಖಲೆಗಳು ಹೇಳುತ್ತವೆ. ಆದರೆ ಬೆರಳೆಣಿಕೆಯಷ್ಟು ಕಡೆ ಮಾತ್ರ ಕಾಮಗಾರಿಗಳು ಮುಗಿದಿವೆ.

ಜನರಿಗೆ ಮುಖ್ಯವಾಗಿ ಬೇಕಾದ ಕಂದಾಯ, ಕೃಷಿ, ತೋಟಗಾರಿಕೆ, ಆಹಾರ, ಆರೋಗ್ಯ, ಸಮಾಜ ಕಲ್ಯಾಣ ಇಲಾಖೆಯಂತಹ ಅತ್ಯವಶ್ಯ ಸೇವೆಗಳ ಇಲಾಖೆಗಳನ್ನಾದರೂ ಆದ್ಯತೆಯ ಮೇರೆಗೆ ಹೊಸ ತಾಲ್ಲೂಕುಗಳಿಗೆ ವರ್ಗಾಯಿಸಬೇಕು. ಸುಸಜ್ಜಿತವಾದ ತಾಲ್ಲೂಕು ಆಸ್ಪತ್ರೆ, ನ್ಯಾಯಾಲಯ, ಸಂಚಾರ ಪೊಲೀಸ್ ಠಾಣೆ, ಅಗ್ನಿಶಾಮಕ ಠಾಣೆಯಂತಹ ಮೂಲಸೌಲಭ್ಯಗಳು ತುರ್ತಾಗಿ ಬೇಕು.

ಬೆಳೆದು ನಿಂತಿರುವ ಪಟ್ಟಣಗಳ ಹೃದಯ ಭಾಗದಲ್ಲಿ, ಜನರಿಗೆ ಅನುಕೂಲವಾಗುವಂಥ ಕಡೆಗಳಲ್ಲಿ ಕಚೇರಿ ಸ್ಥಾಪನೆಗೆ ಜಾಗಗಳ ಕೊರತೆ ಇದೆ. ಹಲವೆಡೆ ಹೊಸ ತಾಲ್ಲೂಕು ಕೇಂದ್ರಗಳ ಅಭಿವೃದ್ಧಿಯ ನೀಲನಕ್ಷೆಯೇ ಸಿದ್ಧವಾಗಿಲ್ಲ. ಕಚೇರಿಗಳನ್ನು ಎಲ್ಲಿ ನಿರ್ಮಿಸಬೇಕು? ಎಷ್ಟೆಲ್ಲ ಅನುದಾನ ಬೇಕೆಂಬ ಅಂದಾಜು ಆಗಬೇಕಿದೆ.

ಅಧಿಕಾರಿ–ಸಿಬ್ಬಂದಿ ಕೊರತೆ: ಹೊಸ ತಾಲ್ಲೂಕುಗಳಿಗೆ ಸರ್ಕಾರ ತಹಶೀಲ್ದಾರ್‌ಗಳನ್ನಷ್ಟೇ ನೇಮಿಸಿದೆ. ಕೆಲವೆಡೆ ಹಳೇ ತಾಲ್ಲೂಕಿನ ತಹಶೀಲ್ದಾರರೇ ಎರಡೂ ಕಡೆ ಉಸ್ತುವಾರಿ ಇದ್ದಾರೆ. ಪ್ರತಿ ಇಲಾಖೆಗೆ ಬೇಕಾದ ಅಧಿಕಾರಿ–ಸಿಬ್ಬಂದಿ ನಿಯೋಜನೆಯೇ ಆಗಿಲ್ಲ.

ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕು ಕೇಂದ್ರವು ಇದುವರೆಗೆ 9 ತಹಶೀಲ್ದಾರ್‌ಗಳನ್ನು ಕಂಡಿದೆ. ಅವರಲ್ಲಿ ಹೆಚ್ಚಿನವರು ದಾರ್ಶನಿಕರ ಜಯಂತಿಗಳ ಆಚರಣೆಗೆ ಸೀಮಿತರಾಗಿದ್ದಾರೆ. ತಾಲ್ಲೂಕು ಆಡಳಿತ ನಡೆಸಲು ಬೇಕಾದ ಅಧಿಕಾರಿ, ಸಿಬ್ಬಂದಿಯೇ ಇಲ್ಲ. ಎಲ್ಲಿಯೂ ಕೃಷಿ–ತೋಟಗಾರಿಕೆ, ಬಿಇಒ ಕಚೇರಿಗಳು ತೆರೆದಿಲ್ಲ.

‘ಈಗಿರುವ ತಾಲ್ಲೂಕು ಕೇಂದ್ರಗಳಲ್ಲಿಯೇ ಎಲ್ಲ ಇಲಾಖೆಗಳಲ್ಲೂ ಶೇ 30–40 ರಷ್ಟು ಸಿಬ್ಬಂದಿ ಕೊರತೆ ಇದೆ. ಒಂದೇ ಅಧಿಕಾರಿ ಎರಡೆರಡು ಕಡೆ ಉಸ್ತುವಾರಿ ಇದ್ದಾರೆ. ಗುತ್ತಿಗೆ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದೇವೆ. ಹೊಸ ತಾಲ್ಲೂಕುಗಳಿಗೆ ಅಗತ್ಯವಿರುವಷ್ಟು ನೌಕರರು ನಮ್ಮಲ್ಲಿಲ್ಲ’ ಎಂದು ಅಧಿಕಾರಿಯೊಬ್ಬರು ಹೇಳುತ್ತಾರೆ.

‘ನಮ್ಮದೂ ಸೇರಿ ಬಹುತೇಕ ಇಲಾಖೆಗಳಲ್ಲಿ ಸಿಬ್ಬಂದಿ ಕೊರತೆ ಇದೆ. ಹೊಸ ತಾಲ್ಲೂಕಿಗೆ ಇಲ್ಲಿಂದಲೇ ಕಳುಹಿಸಿದರೆ, ಇಲ್ಲಿನ ಕೆಲಸ ನಿಂತು ಬಿಡುತ್ತವೆ. ಹೊಸ ಸಿಬ್ಬಂದಿ ನೇಮಕವಾಗುವವರೆಗೆ ಹೊಸ ತಾಲ್ಲೂಕಿನಲ್ಲಿ ಕಚೇರಿ ಆರಂಭ ಕಷ್ಟ’ ಎನ್ನುತ್ತಾರೆ ಕೃಷಿ ಇಲಾಖೆಯ ಅಧಿಕಾರಿಯೊಬ್ಬರು.

ಕೆಲವೆಡೆ ಅಭಿವೃದ್ಧಿ: ಬೆರಳೆಣಿಕೆಯ ಹೊಸ ತಾಲ್ಲೂಕುಗಳು ಮಾತ್ರ ಆಡಳಿತಾತ್ಮಕವಾಗಿ ಅಭಿವೃದ್ಧಿ ಕಾಣುತ್ತಿವೆ. ಕೋಲಾರ ಜಿಲ್ಲೆಯ ಕೆಜಿಎಫ್‌ನಲ್ಲಿ ಹೊಸ ಮಿನಿ ವಿಧಾನ ಸೌಧ ತಲೆ ಎತ್ತಿದ್ದು, ಹತ್ತಾರು ಕಚೇರಿಗಳು ಸ್ಥಳಾಂತರಗೊಂಡಿವೆ. ಹೊಸ ಆಸ್ಪತ್ರೆ ಸಹ ನಿರ್ಮಾಣ ಆಗಿದೆ.

ನೂತನ ರಟ್ಟೀಹಳ್ಳಿ ತಾಲ್ಲೂಕು ಕೇಂದ್ರದಲ್ಲಿ ದ್ವಿಪಥ ರಸ್ತೆ ನಿರ್ಮಾಣ, ಎಲ್ಲ ಗ್ರಾಮಗಳಲ್ಲಿ ತುಂಗಭದ್ರಾ ನದಿಯಿಂದ ಕುಡಿಯುವ ನೀರಿನ ವ್ಯವಸ್ಥೆ, ಕುಮದ್ವತಿ ನದಿಗೆ ನಾಲ್ಕು ಕಡೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ, ಅಗ್ನಿಶಾಮಕ ದಳ ಕಚೇರಿ, ನೂತನ ಕಂದಾಯ ಭವನ, ಸರ್ಕಾರಿ ಪಿ.ಯು. ಕಾಲೇಜು ಸ್ಥಾಪನೆ, ಕೋಲ್ಡ್ ಸ್ಟೋರೇಜ್ ನಿರ್ಮಾಣ ಸೇರಿದಂತೆ ಹತ್ತು ಹಲವಾರು ಅಭಿವೃದ್ಧಿ ಕಾರ್ಯಗಳು ನಡೆದಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ಕಚೇರಿ ಸಂಕೀರ್ಣ ನಿರ್ಮಾಣ ಪೂರ್ಣಗೊಂಡಿದ್ದು, ಕಚೇರಿಗಳು ಕೆಲಸ ಶುರು ಮಾಡಿವೆ. ಕೋಲಾರ ಜಿಲ್ಲೆಯಲ್ಲಿ, ಆರು ವರ್ಷದ ಹಿಂದೆ ಬಂಗಾರಪೇಟೆಯಿಂದ ಬೇರ್ಪಟ್ಟು ಹೊಸ ತಾಲ್ಲೂಕಾದ ಕೆಜಿಎಫ್‌ನಲ್ಲಿ ತಾಲ್ಲೂಕು ಆಡಳಿತ ಸೌಧ, ಪೊಲೀಸ್ ಕಚೇರಿ, ಆಸ್ಪತ್ರೆ ನಿರ್ಮಾಣವಾಗಿವೆ. ಈ ಹಿಂದೆ ಇದು ಪ್ರತ್ಯೇಕ ಪೊಲೀಸ್ ಜಿಲ್ಲೆಯಾಗಿತ್ತು. ಹೀಗಾಗಿ ಇಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರವೂ ಇದೆ.

ಇನ್ನಷ್ಟು ಹೊಸ ತಾಲ್ಲೂಕಿಗೆ ಹೋರಾಟ: ಹೊಸ ತಾಲ್ಲೂಕುಗಳಿಗೆ ಮೂಲ ಸೌಕರ್ಯದ ಕೊರತೆ ಒಂದೆಡೆಯಾದರೆ, ಇನ್ನಷ್ಟು ಹೊಸ ತಾಲ್ಲೂಕುಗಳ ರಚನೆಗೆ ಜನರಿಂದ ಒತ್ತಾಯ ಕೇಳಿಬರುತ್ತಿದೆ. ಕನಕಪುರ ತಾಲ್ಲೂಕಿನ ಸಾತನೂರು, ಕೊಪ್ಪಳ ಜಿಲ್ಲೆಯ ಹನುಮಸಾಗರ.... ಹೀಗೆ ವಿವಿಧೆಡೆ ತಾಲ್ಲೂಕು ರಚನೆಗೆ ಒತ್ತಾಯಿಸಿ ಹೋರಾಟ ನಡೆದಿದೆ. ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದಲ್ಲಿ ವರ್ಷದಿಂದ ನಿರಂತರ ಹೋರಾಟ ನಡೆದಿದೆ. ಹಾಸನ ಜಿಲ್ಲೆಯ ಶಾಂತಿಗ್ರಾಮವನ್ನು ಹೊಸ ತಾಲ್ಲೂಕಾಗಿ ಸರ್ಕಾರ ಘೋಷಣೆ ಮಾಡಿದೆಯಾದರೂ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಹೀಗಾಗಿ ಅಲ್ಲಿಯೂ ಹೋರಾಟದ ಕಿಚ್ಚು ಹೊತ್ತಿಕೊಂಡಿದೆ.

ಕೊರತೆಗಳ ನಡುವೆ ನಲುಗಿರುವ ಹೊಸ ತಾಲ್ಲೂಕುಗಳಿಗೆ ಸರಿಯಾಗಿ ಜೀವ ತುಂಬಬೇಕಾದ ಸವಾಲು ಹೊಸ ಸರ್ಕಾರದ ಮುಂದಿದೆ. ಹೊಸ ತಾಲ್ಲೂಕುಗಳಿಗಾಗಿ ನಡೆದಿರುವ ಹೋರಾಟವೂ ಈ ಸವಾಲಿನ ಮೇಲೆ ಭಾರ ಹೊರಿಸಿದಂತಾಗಿದೆ.

(ಪೂರಕ ಮಾಹಿತಿ ಬ್ಯೂರೊಗಳಿಂದ)

ಬೇಸತ್ತ ಜನರೇ ನೀಡಿದ ಸೌಲಭ್ಯ!

ಕೊಡಗು ಜಿಲ್ಲೆಯ ಪೊನ್ನಂಪೇಟೆ ನೂತನ ತಾಲ್ಲೂಕಾಗಿ ನಾಲ್ಕು ವರ್ಷವಾದರೂ ತಹಶೀಲ್ದಾರ್, ಮೂವರು ಕ್ಲರ್ಕ್‌ಗಳನ್ನು ಬಿಟ್ಟರೆ ಬೇರೆ ಸಿಬ್ಬಂದಿ ಇಲ್ಲ.

ಬಾಡಿಗೆ ಕಟ್ಟಡದಲ್ಲಿರುವ ಕಚೇರಿಗೆ ಸೌಕರ್ಯವಿಲ್ಲದಿರುವುದನ್ನು ಕಂಡು ಬೇಸತ್ತು ಸ್ಥಳೀಯ ಹಿರಿಯ ನಾಗರಿಕರ ವೇದಿಕೆ ಪ್ರಮುಖರೇ ₹ 2 ಲಕ್ಷ ವೆಚ್ಚದಲ್ಲಿ ಟೇಬಲ್, ಕಂಪ್ಯೂಟರ್ ಹಾಗೂ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಿಕೊಟ್ಟಿದ್ದಾರೆ.

ಒಂದೆರಡು ಕಚೇರಿ ಬಂದದ್ದು ಬಿಟ್ಟರೆ ಹೊಸ ತಾಲ್ಲೂಕುಗಳಲ್ಲಿ ಬದಲಾವಣೆಯಾಗಿಲ್ಲ. ಜನ ಹಳೇ ತಾಲ್ಲೂಕು ಕೇಂದ್ರಕ್ಕೆ ಅಲೆಯುತ್ತಿದ್ದಾರೆ.
ಡಿ.ಬಿ. ಗಂಗಪ್ಪ, ನ್ಯಾಮತಿ ತಾಲ್ಲೂಕು ಹೋರಾಟ ಸಮಿತಿ ಅಧ್ಯಕ್ಷ, ದಾವಣಗೆರೆ

ವಿದ್ಯಾರ್ಥಿಗಳು ಬಿಇಒ ಕಚೇರಿಗೆ ಹೋಗಲು ಸುಮಾರು 50ರಿಂದ 70 ಕಿಮೀ ಪ್ರಯಾಣಿಸಬೇಕು. ಜಿಲ್ಲೆಯಲ್ಲಿ ಮೂರು ಹೊಸ ತಾಲ್ಲೂಕು ಮಾಡಿದ್ದಾದರೂ ಏಕೆ?
ಬಸವರಾಜ ಚನ್ನೂರು, ಯಾದಗಿರಿ

ಚೇಳೂರು ತಾಲ್ಲೂಕಾದರೂ ಹೋಬಳಿಯ ಚಹರೆ ಬದಲಾಗಲಿಲ್ಲ. ನಿರ್ಲಕ್ಷ್ಯ ಮುಂದುವರಿದರೆ ಪ್ರತಿಭಟನೆ ಅನಿವಾರ್ಯವಾಗುತ್ತದೆ.
ರಾಧಾಕೃಷ್ಣ ಚೇಳೂರು, ತಾಲ್ಲೂಕು ಹೋರಾಟ ಸಮಿತಿ ಮುಖಂಡ, ಚಿಕ್ಕಬಳ್ಳಾಪುರ

ಐದು ವರ್ಷದ ಹೋರಾಟದಿಂದ ಸಿರವಾರ ತಾಲ್ಲೂಕಾಯಿತು. ಕೆಲ ಕಚೇರಿಗಳ ತೆರೆದು ನಾಮಫಲಕ ಹಾಕಿದ್ದು ಬಿಟ್ಟರೆ ಅಧಿಕಾರಿ, ಸಿಬ್ಬಂದಿ ಇಲ್ಲ
ಜೆ. ದೇವರಾಜಗೌಡ, ಅಧ್ಯಕ್ಷ, ಸಿರವಾರ ತಾಲ್ಲೂಕು ಹೋರಾಟ ಸಮಿತಿ, ರಾಯಚೂರು

ಹೊಸ ತಾಲ್ಲೂಕು ರಚನೆಗೆ ದಶಕಗಳ ಕಾಲ ಹೋರಾಡಬೇಕಾಯಿತು. ಸೌಲಭ್ಯಗಳನ್ನು ಪಡೆಯಲು ಮತ್ತೆ ಹೋರಾಡಬೇಕು.
ಭುಜಬಲಿ ಕೆಂಗಾಲಿ, ತೇರದಾಳ ತಾಲ್ಲೂಕು ಹೋರಾಟ ಸಮಿತಿ ಅಧ್ಯಕ್ಷ, ಬಾಗಲಕೋಟೆ

ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕು ತಹಶೀಲ್ದಾರ್ ಕಚೇರಿ

ದೇಗುಲಗಳಲ್ಲಿ ‘ಸ್ವಚ್ಛ ಭಾರತ’ ಪರಿಣಾಮ

ವಾರಾಣಸಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ‘ಸ್ವಚ್ಛ ಭಾರತ ಅಭಿಯಾನ’ವು ದೇವಾಲಯಗಳು ಮತ್ತು ಅವುಗಳ ಸ್ವಚ್ಛತೆಯ ಮೇಲೆ ಆಳವಾದ ಪರಿಣಾಮ ಬೀರಿದೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಶನಿವಾರ ಹೇಳಿದ್ದಾರೆ.



ಮೋಹನ್ ಭಾಗವತ್

ಮೂರು ದಿನಗಳ ಅಂತರರಾಷ್ಟ್ರೀಯ ದೇವಾಲಯಗಳ ಸಮಾವೇಶ ಮತ್ತು ವಸ್ತುಪ್ರದರ್ಶನ (ಐಟಿಸಿಎಕ್ಸ್) 2023ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಪೂಜಾ ಸ್ಥಳಗಳು ಸಹ ‘ಶುದ್ಧತೆಯ ಸಂಕೇತ’ ಆಗಿರುವುದರಿಂದ ಸ್ವಚ್ಛತೆಯು ದೇವಾಲಯ ನಿರ್ವಹಣೆಯ ನಿರ್ಣಾಯಕ ಅಂಶವಾಗಿದೆ ಎಂದು ಪ್ರತಿಪಾದಿಸಿದರು.

‘ದೇವಾಲಯಗಳು ಪರಿಶುದ್ಧತೆಯ ಸಂಕೇತವಾಗಳಾಗಿವೆ. ಸ್ವಚ್ಛ ಭಾರತ ಅಭಿಯಾನ ದೇವಾಲಯಗಳ ಮೇಲೂ ಹೆಚ್ಚಿನ ಪರಿಣಾಮ ಬೀರಿದೆ. ದೇವಾಲಯ ಸೇವೆ ಪರಂಪರೆಯನ್ನು ಮುಂದಿನ ಪೀಳಿಗೆಗೆ ರವಾನಿಸಬೇಕಾಗಿದೆ. ಇದಕ್ಕಾಗಿ ದೇವಾಲಯ ಪರಿಸರ ವ್ಯವಸ್ಥೆಯ ಬಗ್ಗೆ ಶಿಕ್ಷಣ ಮತ್ತು ಜಾಗೃತಿ ಮುಖ್ಯವಾಗಿದೆ’ ಎಂದರು. 32 ದೇಶಗಳು ಮತ್ತು ಭಾರತದ 350 ದೇವಾಲಯಗಳ ಸಿಇಒಗಳು ಮತ್ತು ನಿರ್ವಹಣಾ ಮುಖ್ಯಸ್ಥರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಒಟ್ಟು 16 ಅಧಿವೇಶನಗಳು ನಡೆಯಲಿವೆ ಎಂದು ಐಟಿಸಿಎಕ್ಸ್– 2023ರ ಸಂಸ್ಥಾಪಕ ಗಿರೀಶ್ ಕುಲಕರ್ಣಿ ಹೇಳಿದ್ದಾರೆ.

ದೀರ್ಘಾವಧಿ ಸಿ.ಎಂ: ಪಟ್ನಾಯಕ್‌ಗೆ 2ನೇ ಸ್ಥಾನ

ಭುವನೇಶ್ವರ (ಪಿಟಿಐ): ದೇಶದಲ್ಲಿ ದೀರ್ಘಾವಧಿಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದವರ ಪಟ್ಟಿಯಲ್ಲಿ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಜ್ಯೋತಿ ಬಸು ಅವರನ್ನು ಮೀರಿಸಿರುವ ಒಡಿಶಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಎರಡನೇ ಸ್ಥಾನಕ್ಕೇರಿದ್ದಾರೆ.

ಪಟ್ನಾಯಕ್ ಅವರು 2000ನೇ ಇಸವಿಯ ಮಾರ್ಚ್ 5ರಂದು ಒಡಿಶಾದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಅಲ್ಲಿಂದ ಇಲ್ಲಿಯವರೆಗೆ ಸತತ 5 ಬಾರಿ ಮುಖ್ಯಮಂತ್ರಿಯಾಗಿರುವ ಅವರು, ಒಟ್ಟು 23 ವರ್ಷ 138 ದಿನ ಅಧಿಕಾರ ನಡೆಸಿದ್ದಾರೆ. 1977ರ ಜೂನ್ 21ರಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಜ್ಯೋತಿ ಬಸು ಅವರು ಸತತ 23 ವರ್ಷ 137 ದಿನ ಆ ಸ್ಥಾನದಲ್ಲಿದ್ದರು. ಸದ್ಯ ಬಸು ಅವರ ದಾಖಲೆಯನ್ನು ಪಟ್ನಾಯಕ್ ಮುರಿದಿದ್ದಾರೆ.

ಸಿಕ್ಕಿಂ ಮಾಜಿ ಮುಖ್ಯಮಂತ್ರಿ ಪವನ್ ಕುಮಾರ್ ದೀರ್ಘಾವಧಿಗೆ ಮುಖ್ಯಮಂತ್ರಿ ಆಗಿದ್ದವರಲ್ಲಿ ಮೊದಲಿಗರೆನಿಸಿದ್ದಾರೆ. 1994ರಿಂದ 2019ರ ವರೆಗೆ 24 ವರ್ಷಗಳಿಗೂ ಅಧಿಕ ಕಾಲ ಅವರು ಅಧಿಕಾರದಲ್ಲಿದ್ದರು.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 23-7-1998

● **ಪಾಕ್‌ಗೆ ನೆರವು: ಅಮೆರಿಕದ ಪ್ರಸ್ತಾವಕ್ಕೆ ಭಾರತ ಸಮ್ಮತಿ**

ವಾಷಿಂಗ್ಟನ್, ಜುಲೈ 22 (ಪಿಟಿಐ)– ದಿಗ್ಬಂಧನಗಳಿಂದಾಗಿ ಹದಗೆಟ್ಟ ಆರ್ಥಿಕ ಪರಿಸ್ಥಿತಿ ಎದುರಿಸಿರುವ ಪಾಕಿಸ್ತಾನಕ್ಕೆ ನೆರವು ನೀಡಲು ಅಂತರರಾಷ್ಟ್ರೀಯ ಹಣಕಾಸು ನಿಧಿಗೆ (ಐಎಂಎಫ್) ಅನುವು ಮಾಡಿ ಕೊಡಬೇಕು ಎಂಬ ಅಮೆರಿಕದ ಪ್ರಸ್ತಾವಕ್ಕೆ ಭಾರತ ಸಮ್ಮತಿಸಿದೆ.

ಈ ವಿಷಯವನ್ನು ಅಮೆರಿಕದ ವಿದೇಶಾಂಗ ವಿಭಾಗ ಮತ್ತು ಹಣಕಾಸು ಖಾತೆಯ ಹಿರಿಯ ಅಧಿಕಾರಿಗಳು ನಿನ್ನೆ ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 23-7-1973

● **ಕರ್ನಾಲ್‌ನಲ್ಲಿ ನಿಷೇಧಾಜ್ಞೆ ಉಲ್ಲಂಘನೆ: ಕೃಪಲಾನಿ, ವಾಜಪೇಯಿ ಬಂಧನ**

ಚಂಡೀಗಢ, ಜುಲೈ 22– ಕರ್ನಾಲ್ ಬಳಿ ವಿರೋಧ ಪಕ್ಷದವರು ಏರ್ಪಡಿಸಿದ್ದ ಸಮ್ಮೇಳನವೊಂದರಲ್ಲಿ ಭಾಗವಹಿಸಲು ಬರುತ್ತಿದ್ದ ಗಾಂಧೀವಾದಿ ಆಚಾರ್ಯ ಕೃಪಲಾನಿ, ಜನಸಂಘ ನಾಯಕರಾದ ಎ.ಪಿ. ವಾಜಪೇಯಿ, ವೈ.ಡಿ. ಶರ್ಮಾ ಮತ್ತು ಎಸ್‌ಎಸ್‌ಪಿ ನಾಯಕ ರಬಿರಾಯ್ ಅವರನ್ನು ಇಂದು ನಿಷೇಧಾಜ್ಞೆ ಉಲ್ಲಂಘನೆ ಆಪಾದನೆ ಮೇಲೆ ಬಂಧಿಸಲಾಯಿತು.

ಸೋಷಲಿಸ್ಟ್ ಪಕ್ಷದ ನಾಯಕ ರಾಜನಾರಾಯಣ್, ಸಂಸತ್ ಸದಸ್ಯರಾದ ಸೀತಾರಾಂ ಸಿಂಗ್, ಜನಸಂಘ ಸಂಸತ್ ಸದಸ್ಯ ಮುಖ್ತಿಯಾರ್ ಸಿಂಗ್ ಮಾಲಿಕ್ ಅವರನ್ನೂ ಸ್ಥಳೀಯ ಖಾಲ್ಸಾ ಕಾಲೇಜಿನ ಬಳಿ ಬಂಧಿಸಲಾಯಿತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಜುಲೈ 23, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ಪಂಚಮಿ ಗಂ. 11-45 ನಕ್ಷತ್ರ: ಉತ್ತರಫಲ್ಗುನಿ ಗಂ. 19-47 ಯೋಗ: ಪರಿಘ ಗಂ. 14-16 ಕರಣ: ಬಾಲವ ಗಂ. 11-45, ಕರ್ಕಾಟಕ ಮಾಸದ 06 ನೇ ದಿನ, ಮಳೆನಕ್ಷತ್ರ: ಪುಷ್ಯ 1.
ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-17 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 04 ಮೊಹರಂ
ಅದೃಷ್ಟ ಸಂಖ್ಯೆ : 9, 2

ಮೇಷ: ಅಣ್ಣ-ತಮ್ಮಂದಿರ ಮನೆಯಲ್ಲಿನ ಶುಭಕಾರ್ಯಗಳಲ್ಲಿ ಜವಾಬ್ದಾರಿ ವಹಿಸುವಿರಿ. ವಿವಾಹ ಸಂಬಂಧದ ಮಾತುಕತೆಗಳು ಫಲಕಾರಿಯಾಗುವುದು. ಗಂಟಲ ಬೇನೆ ಎದುರಾಗಬಹುದು, ಹಾಗಾಗಿ ಎಣ್ಣೆಯ ಆಹಾರ ಬೇಡ.

ವೃಷಭ: ರಾಜಕೀಯ ಭವಿಷ್ಯದ ಬಗ್ಗೆ ನಿರ್ಧಾರ ಕೈಗೊಳ್ಳಲು ಚಿಂತನೆ ನಡೆಸುವಿರಿ. ನಿಮಗಿರುವ ಶತ್ರು ಬಾಧೆ ಈ ದಿನದಿಂದ ಹಂತ ಹಂತವಾಗಿ ನಿವಾರಣೆ ಆಗಲಿದೆ. ಹೊಸ ವಾಹನ ಖರೀದಿಸುವ ಯೋಗವಿದೆ. ಹಸಿರು ಬಣ್ಣ ಶುಭ ತರುವುದು.

ಮಿಥುನ: ಶಸ್ತ್ರ ಚಿಕಿತ್ಸಾ ವೈದ್ಯರಿಗೆ ರೋಗಿಯ ಕುಟುಂಬಸ್ಥರ ಕಡೆಯಿಂದ ಪ್ರಶಂಸೆಯ ಮಾತುಗಳು ಕೇಳಿ ಬರುವುದು. ಉದ್ಯೋಗದಲ್ಲಿನ ಸಮಸ್ಯೆಯಿಂದ ಬದಲಾವಣೆ ಮನಸ್ಸು ಬರಲಿದೆ. ಮರಗೆಲಸದವರಿಗೆ ಸುದಿನ.

ಕರ್ಕಾಟಕ: ಹೊಸ ಕೆಲಸದ ಆರಂಭಕ್ಕೆ ಈ ದಿನ ಸರಿಯಲ್ಲ. ಆರೋಗ್ಯದಲ್ಲಿ ವಾಯು ಸಂಬಂಧವಾಗಿ ತೊಂದರೆಗಳು ಕಾಣಿಸಿಕೊಳ್ಳಬಹುದು. ಗುತ್ತಿಗೆದಾರರಿಗೆ ಬಿಡುವಿಲ್ಲದಂತಾದೀತು. ನಿಮ್ಮ ಉತ್ತಮ ಗುಣಧರ್ಮ ನಿಮ್ಮ ಬೆಂಬಲಕ್ಕಿದೆ.

ಸಿಂಹ: ಅನಿರೀಕ್ಷಿತವಾಗಿ ಹಾಗು ಅನಿವಾರ್ಯವಾಗಿ ಸಂಘ-ಸಂಸ್ಥೆಗಳ ಜವಾಬ್ದಾರಿಯ ಅಧಿಕಾರ ವಹಿಸಬೇಕಾಗುವುದು. ನಿವೇಶನ ಖರೀದಿಸುವ ಯೋಜನೆ ಹಾಕಿಕೊಳ್ಳುಬಹುದು. ಕೆಲಸದಲ್ಲಿ ಹೆಚ್ಚಿನ ಉತ್ಸಾಹವಿರುವುದು.

ಕನ್ಯಾ: ಪರಿಸ್ಥಿತಿ, ಅವಕಾಶಗಳನ್ನು ಜಾಣತನದಿಂದ ಉಪಯೋಗಿಸಿಕೊಂಡಲ್ಲಿ ಜೀವನದಲ್ಲಿ ಸ್ಥಿರತೆ ಪ್ರಾಪ್ತಿಯಾಗುವುದು. ನಿಸ್ವಾರ್ಥ, ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ. ಕೆಲಸಗಳು ಕಷ್ಟವಾದರೂ ನೀವು ಸೋಲುವುದಿಲ್ಲ.

ತುಲಾ: ಆತುರದ ಸ್ವಭಾವವನ್ನು ಕೊಂಚ ಸುಧಾರಿಸಿಕೊಂಡು ಮತ್ತೊಬ್ಬರ ಭಾವನೆಗಳಿಗೆ ನೀವು ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ತಿಳಿದುಕೊಂಡರೆ ಉತ್ತಮ ವ್ಯಕ್ತಿಯಾಗುವಿರಿ. ಹೊಸತನದಲ್ಲಿ ಜಯ ಕಾಣುವಿರಿ.

ವೃಶ್ಚಿಕ: ಸತ್ಯದ ಹಾದಿಗೆ ಯಾವಾಗಲೂ ಅಡೆತಡೆಯಿರುತ್ತದೆ ಎಂಬುದನ್ನು ಮರೆಯದಿರಿ. ಆದರೆ, ಜಯವು ಸಹ ಇರುವುದು ಎಂಬುದನ್ನು ಅರಿಯಿರಿ. ಯೋಗಾಭ್ಯಾಸ ಮನೋಲ್ಲಾಸ ಹೆಚ್ಚಿಸುತ್ತದೆ. ಆರ್ಥಿಕ ಸ್ಥಿತಿ ಸುಧಾರಿಸುವುದು.

ಧನು: ಮಾರಣಾಂತಿಕ ಕಾಯಿಲೆಯಿಂದ ಪಾರು ಮಾಡುವ ಪಾರಂಪರಿಕ ಔಷಧ ಕಲೆಯನ್ನು ಕಲಿಯುವ ಸದವಕಾಶ ಸಿಗಬಹುದು. ಅಧಿಕ ಮಾಸದ ಪ್ರಯುಕ್ತವಾಗಿ ದಾನ ಧರ್ಮದಂಥ ಉತ್ತಮ ಕಾರ್ಯಗಳನ್ನು ಮಾಡುವಿರಿ.

ಮಕರ: ಕೃತಕ ಅಂಗಾಂಗಗಳ ಅಳವಡಿಕೆ ಮಾಡಿಸಿಕೊಂಡವರು ಆರೋಗ್ಯದಲ್ಲಿ ಉಂಟಾಗುವ ಯಾವುದೇ ಬದಲಾವಣೆಗಳನ್ನು ಸಹ ಸಸಾರ ಮಾಡದಿರಿ. ಸೂಕ್ತ ವರ ಅಥವಾ ವಧುವು ದೊರೆಯದೆ ವಿವಾಹಕ್ಕೆ ಅವಸರಿಸುವುದು ಬೇಡ.

ಕುಂಭ: ಮನೆಗೆ ಬರುತ್ತಿರುವ ಮಗಳಿಗೆ ಪ್ರಿಯವಾಗುವ ಖಾದ್ಯಗಳನ್ನು ತಯಾರು ಮಾಡುವಿರಿ. ಮಹತ್ತರ ಕಾರ್ಯ ಸಾಧಿಸಲಿಕ್ಕಾಗಿ ಕುಟುಂಬ ಹಾಗೂ ಸ್ವಸ್ಥಾನದಿಂದ ದೂರವಾಗುವ ಸಾಧ್ಯತೆಗಳಿವೆ.

ಮೀನ: ನಂಬಿ ಕೆಟ್ಟವರಿಲ್ಲ ಎಂಬ ಮಾತು ನಿಮ್ಮ ಪಾಲಿಗೆ ಅಕ್ಷರಶಃ ಸತ್ಯವಾಗುವಂಥ ಘಟನಾವಳಿಗಳು ನಡೆಯುವವು. ಅರಿಷಡ್ವರ್ಗಗಳ ನಿವಾರಣೆಗಾಗಿ ಅಧಿಕ ಮಟ್ಟದಲ್ಲಿ ಸಾಧನೆಯನ್ನು ಮಾಡಲು ಪ್ರಾರಂಭಿಸಬಹುದು.

ಪದಬಂಧ 5388

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ನಿರಂಕುಶವಾದ ನಡುವಳಿಕೆ (6)
4. ಕನ್ನಡಿಗನಿಗೆ ನೀಡಿದ ಟ್ರೈನಿಂಗ್! (4)
5. ಹರುಷದಿಂದ ನೋಡುತ್ತಿರುವ ಪಟ್ಟಣ (3)
7. ಪದ ಹೇಳಿದ್ದಕ್ಕೆ ಬಹುಮಾನವಾಗಿ ದೊರೆತ ಬಿಲ್ಲೆ (3)
9. ಇದು ನಿಶ್ಚಯವಾದುದು (3)
12. ವನದಲ್ಲಿ ತೂರಿಸಿದ ಮುಖ (3)
13. ಮುಕ್ತಾಯ ಸಮಾರಂಭವಿದು (4)
15. ಜನರ ನಡತೆ (6)

ಮೇಲಿಂದ ಕೆಳಕ್ಕೆ
1. ದೂಷಣೆ ಮಾಡದಿರಿ! ಹಾಸ್ಯಗಾರ ಇಲ್ಲಿದ್ದಾನೆ (4)
2. ಅತ್ತಿತ್ತ ನೋಡುವಾಗ ಅಂಡವು ತಿರುವುಮುರುವಾಗಿದೆ! (2)
3. ಇದು ಕನ್ನಡದ ಟ್ಯಾಲೆಂಟ್ (3)
6. ಆಸ್ಪತ್ರೆಯನ್ನು ಹೀಗೂ ಕರೆವರು (4)
7. ದ್ರವ್ಯವನ್ನು ಹೀಗನ್ನಿ (3)
8. ಮಧುರವಾದ ಧ್ವನಿ (4)
10. ವರ ಪಡೆದಿರುವ ಬೇಡ (4)
11. ಮಣ್ಣು ಮಿಶ್ರಿತ ನೀರು (3)
14. ಕುಂದು ಇಲ್ಲಿ ಉಲ್ಟಾ ಕಾಣುತ್ತಿದೆ (2)



5387ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಬಳಸುದಾರಿ 4. ವಾಮನ
5. ರಾಯಸ 6. ನೆಗೆಣ್ಣೆ
8. ಕ್ಷರ 9. ಹಸು
11. ಗಾಯನ 14. ವಿನೋದ
15. ಅಮಲು 16. ವಿಧಾನಸೌಧ

ಮೇಲಿಂದ ಕೆಳಕ್ಕೆ:
1. ಬತ್ತಳಿಕೆ 2. ಸುಮನೋಹರ
3. ರಿರಾಪ 4. ವಾಸನೆ
7. ಗೆಣಸು 8. ಕ್ಷತ್ರಿಯ
9. ಹಯವದನ 10. ಅನುಬಂಧ
12. ನವಿಲು 13. ಪದವಿ

ಸುಡೊಕು 5774

1		3	5		6		4	7
				4				
7		4	9			5		3
9	1							8
		7		9			1	
5	2							4
8		1					6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5773 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಚಿಕ್ಕಪೇಟೆ, ಬಸವನಗುಡಿ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ 12 ಕಿ.ಮೀ; ವರ್ಷಾಂತ್ಯಕ್ಕೆ ಸಿದ್ಧ

ಕೆಂಪೇಗೌಡ ಪಾರಂಪರಿಕ ಕಾರಿಡಾರ್

• ಆರ್. ಮಂಜುನಾಥ್



ಬೆಂಗಳೂರು: ಚಿಕ್ಕಪೇಟೆ ಹಾಗೂ ಬಸವನಗುಡಿ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ‘ನಾಡಪ್ರಭು ಕೆಂಪೇಗೌಡ ಪಾರಂಪರಿಕ ಕಾರಿಡಾರ್’ ರೂಪಿಸಲು ಬಿಬಿಎಂಪಿ ನಿರ್ಧರಿಸಿದೆ.

ಲಾಲ್‌ಬಾಗ್ ಗೋಪುರ ಹಾಗೂ ಕೆಂಪಾಂಬುಧಿ ಕೆರೆ ಗೋಪುರಗಳ ನಡುವಿನ 12 ಕಿ.ಮೀ ಪ್ರದೇಶವನ್ನು ಇದಕ್ಕಾಗಿ ಗುರುತಿಸಲಾಗಿದೆ, ಇದನ್ನು ಶೀಘ್ರ ಅಂತಿಮಗೊಳಿಸಲು ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಂ ರಾಯ್‌ಪುರ ಅವರ ನೇತೃತ್ವದ ಸಭೆಯಲ್ಲಿ ನಿರ್ಧರಿಸಲಾಗಿದೆ.

ಈ ಕಾರಿಡಾರ್ ವ್ಯಾಪ್ತಿಯ ರಸ್ತೆಗಳು, ಪಾದಚಾರಿ ಮಾರ್ಗಗಳು, ಬೀದಿದೀಪದ ಕಂಬಗಳು ಸೇರಿದಂತೆ ಸಾರ್ವಜನಿಕ ಸೌಲಭ್ಯಗಳನ್ನು ಏಕರೂಪದಲ್ಲಿರಿಸಲು ನಿರ್ಧರಿಸಲಾಗಿದೆ. ಈಗಿರುವ ರಸ್ತೆ, ಪಾದಚಾರಿ ಮಾರ್ಗವನ್ನು ಹಾಳುಮಾಡದೆ, 1.5 ಎಂಎಂ ಪಾಲಿಥೀನ್ ಬಣ್ಣ ಬಳಿದು ಕಾರಿಡಾರ್ ಗುರುತಿಸಲಾಗುತ್ತದೆ.

ಕಾರಿಡಾರ್‌ನ ಸುಮಾರು 500 ಮೀಟರ್‌ಗೆ ಒಂದರಂತೆ 24 ಸ್ಥಳಗಳಲ್ಲಿ ಮುಕ್ತ ತಂಗುದಾಣ, ಬೀದಿದೀಪ, ಪೀಠೋಪಕರಣ, ಸೂಚನಾಫಲಕ, ಕಲಾಕೃತಿಗಳನ್ನು ಸ್ಥಾಪಿಸಲಾಗುತ್ತದೆ. ಸ್ಥಳ ಪರಿಚಯದ ಮಾಹಿತಿಯನ್ನು ಪ್ರಕಟಿಸಲಾಗುತ್ತದೆ.

24 ವಿಶೇಷ ತಂಗುದಾಣ, ಕಾರಿಡಾರ್‌ನ ಮುಖ್ಯ ಪಾರಂಪರಿಕ ತಾಣಗಳಲ್ಲಿ ವಿಶೇಷ ಹೊನಲು ಬೆಳಕಿನ ವ್ಯವಸ್ಥೆ ಮಾಡಲಾಗುತ್ತದೆ. ಬೆಳಕು– ಧ್ವನಿ ಸಹಿತವಾದ ‘ರೂಪಕ’ ಹಾಗೂ ಧ್ವನಿ–ಬೆಳಕಿನ ಪ್ರದರ್ಶನವನ್ನು ಏರ್ಪಡಿಸಲಾಗುತ್ತದೆ. ಪಾರಂಪರಿಕ ಶೈಲಿಯಲ್ಲೇ ಇದನ್ನು ಅಭಿವೃದ್ಧಿ ಮಾಡಲು ನಿರ್ಧರಿಸಲಾಗಿದೆ.

ಕಾರಿಡಾರ್ ವ್ಯಾಪ್ತಿಯಲ್ಲಿ ಕೃತಕ ಬುದ್ಧಿಮತ್ತೆಯ ಸೆಲ್‌ಫೋನ್ ಹಾಗೂ ಆ್ಯಪ್ ಆಧಾರಿತ ಗೈಡ್ ಸೃಷ್ಟಿಸಲಾಗುತ್ತದೆ. ಈ ಬಗ್ಗೆ ಶೀಘ್ರ ಅಂತಿಮ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಸೂಚಿಸಲಾಗಿದ್ದು, ಅದಕ್ಕೂ ಮುನ್ನ ತಜ್ಞರು, ಸ್ಥಳೀಯ ನಾಗರಿಕರ ಸಲಹೆ ಪಡೆಯಲು ನಿರ್ಧರಿಸಲಾಗಿದೆ ಎಂದು ಜಯರಾಂ ತಿಳಿಸಿದರು.

ಇಂದು ಪ್ರಾಯೋಗಿಕ ನಡಿಗೆ

ನಾಡಪ್ರಭು ಕೆಂಪೇಗೌಡ ಪಾರಂಪರಿಕ ಕಾರಿಡಾರ್’ನ 12 ಕಿ.ಮೀ.ನಲ್ಲಿ ಜುಲೈ 23 ರಂದು ಪ್ರಾಯೋಗಿಕ ನಡಿಗೆಯಲ್ಲಿ ಬಿಬಿಎಂಪಿ ಅಧಿಕಾರಿಗಳು ಭಾಗವಹಿಸಲಿದ್ದಾರೆ. ದಕ್ಷಿಣ ವಲಯ ಆಯುಕ್ತ ಜಯರಾಂ ರಾಯ್‌ಪುರ, ಮುಖ್ಯ ಎಂಜಿಯರ್ ಎಸ್.ವಿ. ರಾಜೇಶ್ ಸೇರಿದಂತೆ ಇತರೆ ಅಧಿಕಾರಿಗಳೊಂದಿಗೆ ನಡಿಗೆ ಮೂಲಕ ಭಾನುವಾರ ಬೆಳಿಗ್ಗೆ ಸಂಚರಿಸಲಿದ್ದಾರೆ.

‘ಮಲ್ಲೇಶ್ವರ, ಹಲಸೂರಿನಲ್ಲೂ ಕಾರಿಡಾರ್’

‘ನಾಡಪ್ರಭು ಕೆಂಪೇಗೌಡ ಪಾರಂಪರಿಕ ಕಾರಿಡಾರ್’ಗೆ ಇನ್ನೊಂದು ತಿಂಗಳಲ್ಲಿ ಡಿಪಿಆರ್ ಅಂತಿಮಗೊಳಿಸಲಾಗುತ್ತದೆ. ಈ ವರ್ಷಾಂತ್ಯಕ್ಕೆ ಕಾರಿಡಾರ್ ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ. ಇದಲ್ಲದೆ, ಮಲ್ಲೇಶ್ವರದಲ್ಲಿ ಸ್ಯಾಂಕಿ ಕೆರೆ, ಕಾಡು ಮಲ್ಲೇಶ್ವರ ದೇವಸ್ಥಾನ ವ್ಯಾಪ್ತಿಯಲ್ಲೊಂದು ಕಾರಿಡಾರ್ ಹಾಗೂ ಹಲಸೂರು ಕೆರೆ, ಸೋಮೇಶ್ವರ ದೇವಸ್ಥಾನದ ವ್ಯಾಪ್ತಿಯಲ್ಲಿ ಮತ್ತೊಂದು ಕಾರಿಡಾರ್ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಈ ಮೂರು ಕಾರಿಡಾರ್‌ಗಳಿಗೆ ₹180 ಕೋಟಿ ಯನ್ನು ಬಿಬಿಎಂಪಿ ಬಜೆಟ್‌ನಲ್ಲಿ ಮೀಸಲಿಡಲಾಗಿದೆ ಎಂದು ಹಣಕಾಸು ವಿಭಾಗದ ವಿಶೇಷ ಆಯುಕ್ತರೂ ಆದ ಜಯರಾಂ ರಾಯ್‌ಪುರ ತಿಳಿಸಿದರು.

ಉದ್ಘಾಟನೆ

ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ 2023-24 ನೇ ಸಾಲಿನ ವಿದ್ಯಾರ್ಥಿ ಪ್ರತಿನಿಧಿಗಳ ಪರಿಷತ್ತಿನ ಉದ್ಘಾಟನೆ ನಡೆಯಿತು. ಆದಾಯ ತೆರಿಗೆ ಆಯುಕ್ತೆ ವಂದನಾ ರಾಮಚಂದ್ರನ್, ಕಾಲೇಜಿನ ನಿರ್ದೇಶಕಿ ಸಿಸ್ಟರ್ ಅಲ್ಬಿನ, ಸ್ಥಳೀಯ ವ್ಯವಸ್ಥಾಪಕಿ ಸಿಸ್ಟರ್ ಅಪರ್ಣಾ, ಕಾರ್ಯದರ್ಶಿ ಸಿಸ್ಟರ್ ಡಾ. ಅರ್ಪಣಾ, ಪ್ರಾಂಶುಪಾಲರಾದ ಡಾ. ಜಾರ್ಜ್ ಲೇಖಾ ಇದ್ದರು

‘ಹಂಪನಾ’ಗೆ ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ ಪ್ರದಾನ

‘ವಿದೇಶಿಯರಲ್ಲೂ ಕನ್ನಡದ ಆಸಕ್ತಿ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ನೆಲ ಹಾಗೂ ಕನ್ನಡ ಭಾಷೆಯ ಬಗ್ಗೆ ವಿದೇಶಿಯರೂ ಈಗ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ’ ಎಂದು ಸಂಶೋಧಕ ಡಾ.ಹಂ.ಪ. ನಾಗರಾಜಯ್ಯ ಹೇಳಿದರು.

ನಗರದಲ್ಲಿ ಶನಿವಾರ ಬಿ.ಎಂ.ಶ್ರೀ. ಪ್ರತಿಷ್ಠಾನವು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು.

‘ಜಗತ್ತಿನ 28 ವಿಶ್ವವಿದ್ಯಾಲಯಗಳಲ್ಲಿ ಕನ್ನಡದ ಕುರಿತು ನಾನು ವಿಚಾರ ಮಂಡಿಸಿದ್ದೇನೆ. ಅಲ್ಲಿ ಕನ್ನಡಕ್ಕೆ ಸಿಗುತ್ತಿರುವ ಆದ್ಯತೆ ತಿಳಿಯಿತು. ಮುಂದಿನ ದಿನಗಳಲ್ಲಿ ಕನ್ನಡವು ಇನ್ನೂ 10 ಪಟ್ಟು ವಿಜೃಂಭಿಸುವ ಕಾಲ ಬರಲಿದೆ’ ಎಂದು ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಡಾ.ಮನು ಬಳಿಗಾರ್ ಮಾತನಾಡಿ, ‘ಹಂಪನಾ ಅವರು ಸಾಹಿತ್ಯ ಕ್ಷೇತ್ರದಲ್ಲಿ ಮಾದರಿ ಸೇವೆ ಸಲ್ಲಿಸಿದ್ದಾರೆ. ನಾಗರಾಜಯ್ಯ ಅವರು ಜ್ಞಾನ ಭಂಡಾರವಿದ್ದಂತೆ. ಹಳೆಗನ್ನಡದಲ್ಲಿ ಸೊಗಸಾಗಿ ಭಾಷಣ ಮಾಡುವಷ್ಟು ಸಾಮರ್ಥ್ಯ ಅವರಿಗಿದೆ. ಪಂಪ, ರನ್ನ ಅವರು ರಚಿಸಿದ ಸಾಹಿತ್ಯವನ್ನು ಆಳವಾಗಿ ಅಧ್ಯಯನ ನಡೆಸಿದ್ದಾರೆ’ ಎಂದು ಹೇಳಿದರು.

ಪತ್ರಕರ್ತ ಪದ್ಮರಾಜ ದಂಡಾವತಿ ಮಾತನಾಡಿ, ‘ಕಂಬತ್ತಳ್ಳಿ ಸಹೋದರರು ತಮ್ಮ ತಂದೆ–ತಾಯಿ ಹೆಸರಿನಲ್ಲಿ ದತ್ತಿ ಪ್ರಶಸ್ತಿ ಸ್ಥಾಪಿಸಿ, ಪೋಷಕರ ಹೆಸರು ಸದಾ ನೆನಪಿನಲ್ಲಿರುವಂತೆ ಮಾಡಿದ್ದಾರೆ. ಇದು ಶ್ಲಾಘನೀಯ ಕೆಲಸ’ ಎಂದು ಹೇಳಿದರು.

‘ಸಾಹಿತ್ಯ, ಸಂಶೋಧನಾ ಕ್ಷೇತ್ರದಲ್ಲಿ ಹಂಪನಾ ಅವರು ಸೇವೆ ಸ್ಮರಣೀಯ. ಹಂಪನಾ ದಂಪತಿ 65 ವರ್ಷಗಳಿಂದ ಸಾಹಿತ್ಯ ಸೇವೆ ಮಾಡಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾಂದಬರಿಕಾರರು, ವಿಮರ್ಶಕರು ಹಾಗೂ ಕವಿಗಳಿಗೆ ಸಿಕ್ಕಷ್ಟು ಮನ್ನಣೆ ಸಂಶೋಧಕರಿಗೆ ಸಿಗುತ್ತಿಲ್ಲ. ಅವರಿಗೆ ತಡವಾಗಿ ಮನ್ನಣೆಗಳು ಲಭಿಸುತ್ತಿವೆ’ ಎಂದು ಹೇಳಿದರು.

ಡಾ.ಬೈರಮಂಗಲ ರಾಮೇಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಿಎಂಶ್ರೀ ಪ್ರತಿಷ್ಠಾನ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಹಂ.ಪ.ನಾಗರಾಜಯ್ಯ ಅವರಿಗೆ ‘ಕಂಬತ್ತಳ್ಳಿ ಜೀವಣ್ಣ ಪದ್ಮಾವತ್ತಮ್ಮ ದತ್ತಿ ಪ್ರಶಸ್ತಿ’ ಪ್ರದಾನ ಮಾಡಿ ಗೌರವಿಸಲಾಯಿತು. (ಎಡದಿಂದ) ಕೆ.ಜೆ.ಪಾರ್ಶ್ವನಾಥ, ಮನು ಬಳಿಗಾರ್, ಶಾಂತರಾಜು, ಬೈರಮಂಗಲ ರಾಮೇಗೌಡ ಮತ್ತು ಪದ್ಮರಾಜ ದಂಡಾವತಿ ಇದ್ದರು — ಪ್ರಜಾವಾಣಿ ಚಿತ್ರ

ಸಂಶಯಾಸ್ಪದವಾಗಿ ಬಾಲಕಿ ಸಾವು

ಅಫಜಲಪುರ: ಗೊಬ್ಬುರ(ಬಿ) ವಾಡಿ ತಾಂಡಾದ ಮನೆಯೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಬಾಲಕಿ ಅಂಜಲಿ ರಮೇಶ ಅಡೆ(14) ಮೃತದೇಹ ಪತ್ತೆಯಾಗಿದೆ. ಬಾಲಕಿಯ ತಂದೆ ರಮೇಶ ಅಡೆ ಈ ಸಂಬಂಧ ದೇವಲ ಗಾಣಗಾಪುರ ಠಾಣೆಗೆ ದೂರು ನೀಡಿದ್ದಾರೆ.

ನಿಧನ ವಾರ್ತೆ

ಆ್ಯಂಟೊ ವಿಕ್ಟರ್

ಬೆಂಗಳೂರು: ಟಿಪಿಎಂಎಲ್ ಪ್ರಸರಣ ವಿಭಾಗದ ಹಿರಿಯ ಕಾರ್ಯನಿರ್ವಾಹಕರಾಗಿದ್ದ, ನಗರದ ಜಾಲಹಳ್ಳಿ ಕ್ರಾಸ್ ನಿವಾಸಿ ಆ್ಯಂಟೊ ವಿಕ್ಟರ್(53) ಅನಾರೋಗ್ಯದಿಂದ ಶುಕ್ರವಾರ ರಾತ್ರಿ ನಿಧನರಾದರು.

ಮೃತರಿಗೆ ತಾಯಿ, ಸಹೋದರ ಇದ್ದಾರೆ. ಶನಿವಾರ ಅಂತಿಮ ಸಂಸ್ಕಾರ ನೆರವೇರಿತು.

ಸುಧಾ ಮಯೂರ ಓದಿರಿ

ನಿಧನ ವಾರ್ತೆ

ಎ.ಆರ್.ರಾಮಯ್ಯ

ಬೆಂಗಳೂರು: ಆರೋಗ್ಯ ಇಲಾಖೆಯ ನಿವೃತ್ತ ಜಿಲ್ಲಾ ಕುಷ್ಟರೋಗ ಅಧಿಕಾರಿಯಾದ ಎ.ಆರ್. ರಾಮಯ್ಯ (90) ಅವರು ಶನಿವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು.

ಅವರು ಪತ್ನಿ ಎನ್.ಕಲಾವತಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಗೌರಿಬಿದನೂರಿನ ಆನೂಡಿಯವರಾದ ಅವರು ಕರ್ನಾಟಕ ಆರ್ಯ ಈಡಿಗರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಯಾಗಿದ್ದರು. ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ ಹೆಬ್ಬಾಳದ ಚಿತಾಗಾರದಲ್ಲಿ ನಡೆಯಲಿದೆ. ಸಂಬಂಧಿಗಳ ಸಂಪರ್ಕಕ್ಕೆ- 9845219114

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. CAO/CN/BNC/161/2023 ದಿನಾಂಕ: 22.03.2023 ಗೆ ತಿದ್ದುಪಡಿ

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಇಪಿಸಿ ಮೋಡ್‌ನಲ್ಲಿ ಸಿಗ್ನಲಿಂಗ್, ಟೆಲಿಕಮ್ಯುನಿಕೇಶನ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳು ಸೇರಿದಂತೆ ಗಿಣಿಗೇರಾ – ರಾಯಚೂರು ಹೊಸ ಮಾರ್ಗ ಯೋಜನೆಯಡಿ (165.57ಕಿಮೀ) ಸಿಂಧನೂರು (ಹೊರತುಪಡಿಸಿ) (84820) ಮತ್ತು ಹಿರೇಕೋಟಂಗಲ್ (ಸೇರಿದಂತೆ) (115500) (30.68 ಕಿಮೀ) ನಡುವೆ ಹೊಸ ಬ್ರಾಡ್ ಗೇಜ್ ಲೈನ್ ಟ್ರ್ಯಾಕ್ ನಿರ್ಮಾಣ (ಟೆಂಡರ್ ಉಲ್ಲೇಖ ಸಂಖ್ಯೆ: ಸಿಂಧನೂರು– ಹಿರೇಕೋಟಂಗಲ್)	ರೂ. 631,76,59,793/-

ಅಸ್ತಿತ್ವದಲ್ಲಿರುವ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–08–2023, 11:00 ಗಂಟೆಯವರೆಗೆ
ಪರಿಷ್ಕರಿಸಿದ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17–10–2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿಗಳು ಬೆಂಗಳೂರು ಕಂಟೋನ್ಮೆಂಟ್

PUB/255/AAV/PRB/SWR/2023-24

S.W.Railways | SWRRLY | SWRRLY

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ಸ್ವತ್ತಿನ ಮಾಲೀಕರಾದ ಶ್ರೀ. ಚನ್ನಪ್ಪ ನವರ ಮಗಳು ಮತ್ತು ಶ್ರೀ. ಚಂದ್ರಶೇಖರ್ ರವರ ಹೆಂಡತಿ ಶ್ರೀಮತಿ. ನಾಗಮಣಿ. ಟಿ. ಸಿ., ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತು ಸದರಿಯವರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಷೆಡ್ಯೂಲ್ ಸ್ವತ್ತಿನ ಮೇಲೆ ಅನಿರ್ಬಂಧಿತ ಮಾಲೀಕತ್ವದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯಾವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರೂ ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು ಸದರಿ ಮೇಲ್ಕಂಡ ಶ್ರೀಮತಿ. ನಾಗಮಣಿ. ಟಿ. ಸಿ., ರವರ ಮಾಲೀಕತ್ವಕ್ಕೆ ಹಾಗೂ ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತನ್ನು ಖರೀದಿಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ತಿಮ್ಮಸಂದ್ರ ಗ್ರಾಮದಲ್ಲಿರುವ 11½ ಗುಂಟೆ ವಿಸ್ತೀರ್ಣವುಳ್ಳ ಸರ್ವೆ ನಂ. 16/2B ರ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ : ಸರ್ವೆ ನಂ. 16/1 ರಲ್ಲಿ ಶ್ರೀ. ಜಯರಾಮ ರವರ ಜಮೀನು;
ಪಶ್ಚಿಮಕ್ಕೆ : ಸರ್ವೆ ನಂ. 16/3 ರಲ್ಲಿ ಶ್ರೀ. ಆನಂದ್. ಟಿ. ಪಿ., ರವರ ಜಮೀನು;
ಉತ್ತರಕ್ಕೆ : ಸರ್ವೆ ನಂ. 17/7 ರಲ್ಲಿ ಶ್ರೀ. ನಂಜಪ್ಪ ರವರ ಜಮೀನು; ಮತ್ತು
ದಕ್ಷಿಣಕ್ಕೆ : ಸರ್ವೆ ನಂ. 99/2 ರಲ್ಲಿ ಶ್ರೀ. ಅರವಿಂದ್ ರವರ ಜಮೀನು.

ಸ್ಥಳ: ಬೆಂಗಳೂರು | ದಿನಾಂಕ : 23/07/2023

ಸಹಿ./– ಎ. ಸುಪ್ರೀತ್, ವಕೀಲರು, ಕ್ರೆಸ್ಟ್ ಲಾ ಪಾರ್ಟ್ನರ್ಸ್, ವಕೀಲರು ಮತ್ತು ಸಾಲಿಸಿಟರ್ಸ್ 33, 1 ನೇ ಅಡ್ಡ ರಸ್ತೆ, ಝುವಿಯರ್ ಲೇಔಟ್, ವಿಕ್ಟೋರಿಯಾ ರಸ್ತೆ, ಬೆಂಗಳೂರು – 560 047. ದೂ: 41473535 / 41473536

ಊಟಕ್ಕಾಗಿ ಅಲೆದಾಟ: ಪಾಲಕರ ಮೇಲೆ ತಾರತಮ್ಯದ ಆರೋಪ

ತಂದೆ– ತಾಯಿ ಕೊಂದಿದ್ದ ಮಗ ಅರಣ್ಯದಲ್ಲಿ ಸಿಕ್ಕಿಬಿದ್ದ

ಪ್ರಜಾವಾಣಿ ವಾರ್ತೆ

ಶರತ್

ಬೆಂಗಳೂರು: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಭಾಸ್ಕರ್ (63) ಹಾಗೂ ಪತ್ನಿ ಶಾಂತಾ (60) ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿ ಮಗ ಶರತ್ (26), ಮಡಿಕೇರಿಯ ಅರಣ್ಯದಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

'ಬಳ್ಳಾರಿ ರಸ್ತೆಯ ಬ್ಯಾಟರಾಯನಪುರ ನಿವಾಸಿ ಭಾಸ್ಕರ್ ಹಾಗೂ ಶಾಂತಾ ಅವರನ್ನು ತಲೆಗೆ ರಾಡ್‌ನಿಂದ ಹೊಡೆದು ಜುಲೈ 17ರಂದು ಕೊಲೆ ಮಾಡಲಾಗಿತ್ತು. ಕೃತ್ಯ ಎಸಗಿ ಪರಾರಿಯಾಗಿದ್ದ ಶರತ್, ಮಂಗಳೂರು ಮೂಲಕ ಮಡಿಕೇರಿಗೆ ಹೋಗಿ ಅರಣ್ಯದಲ್ಲಿ ತಲೆಮರೆಸಿಕೊಂಡಿದ್ದ. ಈತನನ್ನು ಪತ್ತೆ ಮಾಡಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಂಗಳೂರಿನ ಭಾಸ್ಕರ್–ಶಾಂತಾ, ಬ್ಯಾಟರಾಯನಪುರದಲ್ಲಿ 12 ವರ್ಷಗಳಿಂದ ವಾಸವಿದ್ದರು. ಭಾಸ್ಕರ್, ಹೋಟೆಲ್‌ವೊಂದರಲ್ಲಿ ಕ್ಯಾಷಿಯರ್ ಆಗಿದ್ದರು. ಶಾಂತಾ, ಕೇಂದ್ರ ಸರ್ಕಾರದ ನಿವೃತ್ತ ಉದ್ಯೋಗಿ. ದಂಪತಿಗೆ ಇಬ್ಬರು ಮಕ್ಕಳು. ಹಿರಿಯ ಮಗ ಸಜಿತ್, ಪದವೀಧರ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಎರಡನೇ ಮಗ ಶರತ್, ಪಿಯುಸಿ ಓದಿದ್ದ. ಕೆಲಸವಿಲ್ಲದೇ ಮನೆಯಲ್ಲಿರುತ್ತಿದ್ದ' ಎಂದು ತಿಳಿಸಿವೆ.

'ಸೋಮವಾರ ಸಂಜೆ ತಂದೆ-ತಾಯಿ ಜೊತೆ ಜಗಳ ತೆಗೆದಿದ್ದ ಆರೋಪಿ, ತಲೆಗೆ ರಾಡ್‌ನಿಂದ ಹೊಡೆದು ಕೊಂದು, ಮನೆ ಬಾಗಿಲು ಹಾಕಿಕೊಂಡು ಪರಾರಿಯಾಗಿದ್ದ. ಸದ್ಯ ಬಂಧನದಲ್ಲಿರುವ ಶರತ್, 'ತಂದೆ- ತಾಯಿ, ನನ್ನ ಹಾಗೂ ಅಣ್ಣನ ನಡುವೆ ತಾರತಮ್ಯ ಮಾಡುತ್ತಿದ್ದರು. ಇದರಿಂದ ಬೇಸತ್ತು ಕೊಲೆ ಮಾಡಿದೆ ಎಂಬುದಾಗಿ ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಾಗಿಲು ಬಡಿದಿದ್ದಕ್ಕೆ ವಶ

'ತಂದೆ-ತಾಯಿ ಕೊಂದ ನಂತರ ಬಸ್ಸಿನಲ್ಲಿ ಮಂಗಳೂರಿಗೆ ಹೋಗಿದ್ದ ಆರೋಪಿ, ಅಲ್ಲಿಂದ ಮಡಿಕೇರಿಗೆ ತೆರಳಿದ್ದ. ಎರಡು ದಿನ ಅರಣ್ಯದಲ್ಲಿ ಸುತ್ತಾಡಿದ್ದ. ಈ ಸಂದರ್ಭದಲ್ಲಿ ತಿನ್ನಲು ಏನೂ ಸಿಕ್ಕಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

'ಹೊಟ್ಟೆ ವಿಪರೀತ ಹಸಿದಿದ್ದರಿಂದ ಆರೋಪಿ ಊಟಕ್ಕಾಗಿ ಹುಡುಕಾಡಿದ್ದ. ಅರಣ್ಯದಂಚಿನ ತೋಟದ ಮನೆಯೊಂದಕ್ಕೆ ಹೋಗಿ ಬಾಗಿಲು ಬಡಿದಿದ್ದ. ಈತನ ವರ್ತನೆಯಿಂದ ಅನುಮಾನಗೊಂಡಿದ್ದ ಮನೆ ನಿವಾಸಿಗಳು, ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರು, ಶರತ್‌ನನ್ನು ವಶಕ್ಕೆ ಪಡೆದಿದ್ದರು. ವಿಚಾರಣೆ ನಡೆಸಿದಾಗ, ಆತ ಕೊಲೆ ಆರೋಪಿ ಎಂಬುದು ಗೊತ್ತಾಗಿತ್ತು. ನಂತರವೇ ಮಡಿಕೇರಿಗೆ ಹೋಗಿ ಆತನನ್ನು ಕಸ್ಟಡಿಗೆ ಪಡೆಯಲಾಯಿತು' ಎಂದು ಹೇಳಿವೆ.

ಬಿಹಾರ ಸಿ.ಎಂ ಅವಹೇಳನ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ನಂದ್‌ಕುಮಾರ್

ಶ್ರೀರಾಮ್

ಕೆ. ಮೋಹನ್

ಬೆಂಗಳೂರು: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಅವಹೇಳನ ಮಾಡುವ ರೀತಿಯಲ್ಲಿ ಫ್ಲೆಕ್ಸ್‌ಗಳನ್ನು ಅಳವಡಿಸಿ ನಗರದ ಸೌಂದರ್ಯಕ್ಕೆ ಧಕ್ಕೆ ತಂದ ಆರೋಪದಡಿ ಬಿಜೆಪಿ ಮುಖಂಡ ಸೇರಿ ಮೂವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶೇಷಾದ್ರಿಪುರ ಎರಡನೇ ಮುಖ್ಯರಸ್ತೆಯ ನಿವಾಸಿ ಎಂ. ಶ್ರೀರಾಮ್ (48), ರಸಿಲ್ದಾರ್ ಸ್ಟ್ರೀಟ್‌ನ ನಂದ್‌ಕುಮಾರ್ (30) ಹಾಗೂ ಕೆ. ಮೋಹನ್ (42) ಬಂಧಿತರು.

'ಆರೋಪಿ ಶ್ರೀರಾಮ್, ಬಿಜೆಪಿಯ ಶೇಷಾದ್ರಿಪುರ ಪ್ರದೇಶದ ಮುಖಂಡ. ಫ್ಲೆಕ್ಸ್ ಅಳವಡಿಕೆ ಕೆಲಸಗಾರರಾದ ನಂದ್‌ಕುಮಾರ್ ಹಾಗೂ ಮೋಹನ್ ಜೊತೆ ಕೃತ್ಯ ಎಸಗಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರೇಸ್‌ಕೋರ್ಸ್ ರಸ್ತೆಯಲ್ಲಿರುವ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಇತ್ತೀಚೆಗೆ ಕೇಂದ್ರ ವಿರೋಧ ಪಕ್ಷಗಳ ನಾಯಕ ಸಭೆ ಆಯೋಜಿಸಲಾಗಿತ್ತು. ಖನಿಜ ಭವನ ಹಾಗೂ ಶಕ್ತಿ ಭವನ ಮುಂಭಾಗ, ಟ್ರಿಲೈಟ್ ಜಂಕ್ಷನ್, ಹರೇಕೃಷ್ಣ ರಸ್ತೆ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮುಂಭಾಗ, ಚಾಲುಕ್ಯ ವೃತ್ತ ಹಾಗೂ ಇತರೆಡೆ ಫ್ಲೆಕ್ಸ್ ಅಳವಡಿಸಲಾಗಿತ್ತು. ಇದು ಹೈಕೋರ್ಟ್ ಆದೇಶ ಉಲ್ಲಂಘನೆಯಾಗಿದ್ದು, ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಪ್ರಧಾನಿ ಹುದ್ದೆಯ ಅನಿಶ್ಚಿತ ಆಕಾಂಕ್ಷಿ' ಎಂಬ ಬರಹವಿದ್ದ ಫ್ಲೆಕ್ಸ್‌ನಲ್ಲಿ ನಿತೀಶ್‌ಕುಮಾರ್ ಭಾವಚಿತ್ರವಿತ್ತು. ಸುಲ್ತಾನ್ ಗಂಜ್ ಸೇತುವೆ ಕುಸಿತದ ಚಿತ್ರಗಳಿದ್ದವು. ಫ್ಲೆಕ್ಸ್ ಅಳವಡಿಸಲು ಯಾವುದೇ ಅನುಮತಿ ಪಡೆದಿರಲಿಲ್ಲ' ಎಂದು ಮೂಲಗಳು ಹೇಳಿವೆ.

ಫ್ಲೆಕ್ಸ್ ಹಾಕಲು ಹಣ ಪಾವತಿ

'ಫ್ಲೆಕ್ಸ್ ಮುದ್ರಿಸುವ ಮಳಿಗೆಯಲ್ಲಿ ನಂದ್‌ಕುಮಾರ್ ಕೆಲಸ ಮಾಡುತ್ತಿದ್ದ. ಈತನಿಗೆ ಹಣ ನೀಡಿದ್ದ ಶ್ರೀರಾಮ್, ಫ್ಲೆಕ್ಸ್ ಮುದ್ರಿಸಿ ಸಾರ್ವಜನಿಕ ಸ್ಥಳಗಳಲ್ಲಿ ಹಾಕುವಂತೆ ಹೇಳಿದ್ದ. ಮೋಹನ್‌ಗೆ ಸೇರಿದ್ದ ವಾಹನದಲ್ಲಿ ಫ್ಲೆಕ್ಸ್‌ಗಳನ್ನು ಸಾಗಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಅಪಘಾತ, ಸಂಚಾರ ವೇಳೆ ತುರ್ತು ಸಹಾಯಕ್ಕೆ 'ನಮ್ಮ-112'ಕ್ಕೆ ಕರೆ ಮಾಡಿ

ಬೆಂಗಳೂರು: 'ಜನರ ತುರ್ತು ಸಹಾಯಕ್ಕಾಗಿ ನಮ್ಮ 112 ಕಾರ್ಯನಿರ್ವಹಿಸುತ್ತಿದೆ. ಅಪರಾಧ ಪ್ರಕರಣಗಳ ಜೊತೆಯಲ್ಲಿ, ಅಪಘಾತ ಹಾಗೂ ಸಂಚಾರ ಸಂಬಂಧಿತ ತುರ್ತು ಸಹಾಯಕ್ಕಾಗಿಯೂ ಜನರು ಕರೆ ಮಾಡಬಹುದು' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದ್ದಾರೆ.

ಮಲ್ಲೇಶ್ವರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಜನಸಂಪರ್ಕ ಸಭೆಯಲ್ಲಿ ಪಾಲ್ಗೊಂಡಿದ್ದ ಜನ, 'ನಮ್ಮ 112 ಎಲ್ಲ ರೀತಿಯ ತುರ್ತು ಸಹಾಯಕ್ಕೂ ವಿಸ್ತರಣೆ ಮಾಡಿ' ಎಂದು ಕೋರಿದ್ದರು. ಈ ಬಗ್ಗೆ ಪರಿಶೀಲಿಸುವುದಾಗಿ ಹೇಳಿದ್ದ ದಯಾನಂದ್, 'ನಮ್ಮ 112 ವಿಸ್ತರಣೆ ಮಾಡಲಾಗಿದೆ' ಎಂದು ಟ್ವೀಟ್ ಮಾಡಿದ್ದಾರೆ.

'ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಅಪಾಯಕ್ಕೆ ಸಿಲುಕಿದರೆ, ಕಾನೂನು ಸುವ್ಯವಸ್ಥೆಗೆ ಯಾರಾದರೂ ಧಕ್ಕೆ ತಂದರೆ 112ಕ್ಕೆ ಕರೆ ಮಾಡಬಹುದು. ಅಪಘಾತದ ವೇಳೆ ಸಹಾಯ ಹಾಗೂ ಸಂಚಾರದಲ್ಲಿ ಏನಾದರೂ ತೊಂದರೆಯಾದರೆ ಜನರು 112ಕ್ಕೆ ಕರೆ ಮಾಡಿ ತುರ್ತು ಸಹಾಯ ಕೇಳಬಹುದು' ಎಂದು ಹೇಳಿದ್ದಾರೆ.



ಹೊಸ ಮಾರ್ಗಗಳಲ್ಲಿ ಬಿಎಂಟಿಸಿ ಬಸ್ ಸಂಚಾರ

ಬೆಂಗಳೂರು: ಪ್ರಯಾಣಿಕರ ಅನುಕೂಲಕ್ಕಾಗಿ ಬಿಎಂಟಿಸಿ ಹೊಸ ಮಾರ್ಗಗಳಲ್ಲಿ ಬಸ್ ಸೇವೆ ಆರಂಭಿಸಿದೆ.

ಜಯನಗರ ಬಸ್ ನಿಲ್ದಾಣದಿಂದ ತುರಹಳ್ಳಿಗೆ ಎರಡು ಮಾರ್ಗಗಳಲ್ಲಿ ಬಸ್ ಸಂಚಾರ ಶುರುವಾಗಿದೆ. ಜಯನಗರದಿಂದ ಬನಶಂಕರಿ ಬಸ್ ನಿಲ್ದಾಣ, ಚಿಕ್ಕಲಸಂದ್ರ ಅರಳಿಮರ, ಉತ್ತರಹಳ್ಳಿ, ಸುಬ್ರಮಣ್ಯಪುರ ಅಂಚೆ ಕಚೇರಿ, ಭುವನೇಶ್ವರಿ ನಗರ, ಗುಬ್ಬಲಾಳ ಕ್ರಾಸ್, ಜಯನಗರ ಹೌಸಿಂಗ್ ಸೊಸೈಟಿ ಲೇಔಟ್, ಪ್ರತ್ಯಂಗಿರ ದೇವಿ ದೇವಸ್ಥಾನಕ್ಕಾಗಿ ತುರಹಳ್ಳಿಗೆ ಬೆಳಿಗ್ಗೆ 5.45ರಿಂದ ರಾತ್ರಿ 9.30ರವರೆಗೆ 15 ಟ್ರಿಪ್‌ನಲ್ಲಿ ಬಸ್‌ಗಳು ಹೋಗಲಿವೆ. ಬೆಳಿಗ್ಗೆ 5ರಿಂದ ರಾತ್ರಿ 8.45ರವರೆಗೆ 15 ಟ್ರಿಪ್‌ನಲ್ಲಿ ಬಸ್‌ಗಳು ವಾಪಸ್ಸಾಗಲಿವೆ.

ಜಯನಗರದಿಂದ ಬನಶಂಕರಿ ಬಸ್ ನಿಲ್ದಾಣ, ಉತ್ತರಹಳ್ಳಿ, ಪೂರ್ಣಪ್ರಜ್ಞಾ ಲೇಔಟ್, ಪಾಕಶಾಲ, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬ್ರಿಗೇಡ್ ಒಮೇಗಾ ಅಪಾರ್ಟ್‌ಮೆಂಟ್ ಮೂಲಕ ತುರಹಳ್ಳಿಗೆ ಬೆಳಿಗ್ಗೆ 8.30ರಿಂದ ಸಂಜೆ 4.45ರವರೆಗೆ 6 ಟ್ರಿಪ್ ಮತ್ತು ಬೆಳಿಗ್ಗೆ 9.15ರಿಂದ ಸಂಜೆ 6ರವರೆಗೆ ವಾಪಸ್ 6 ಟ್ರಿಪ್‌ನಲ್ಲಿ ಬಸ್‌ಗಳು ಸಂಚರಿಸಲಿವೆ.

ಹವಾನಿಯಂತ್ರಿತ ಬಸ್: ವಿವಿಧ ಮಾರ್ಗಗಳಲ್ಲಿ ಬಿಎಂಟಿಸಿ ಹವಾನಿಯಂತ್ರಿತ ಬಸ್‌ಗಳ ಸಂಚಾರ ಆರಂಭಿಸಿದೆ. ವಿದ್ಯಾರಣ್ಯದಿಂದ ಲಗ್ಗೆರೆಗೆ 18 ಮತ್ತು ಲಗ್ಗೆರೆಯಿಂದ ವಿದ್ಯಾರಣ್ಯಪುರಕ್ಕೆ 20 ಬಾರಿ ಬಸ್‌ಗಳು ಸಂಚರಿಸಲಿವೆ. ಕೆ.ಆರ್. ಮಾರುಕಟ್ಟೆಯಿಂದ ವಿದ್ಯಾರಣ್ಯಪುರಕ್ಕೆ 19 ಹಾಗೂ ವಿದ್ಯಾರಣ್ಯಪುರದಿಂದ ಕೆ.ಆರ್. ಮಾರುಕಟ್ಟೆಗೆ 18 ಟ್ರಿಪ್, ಯಶವಂತಪುರದಿಂದ ನಾಯಂಡಹಳ್ಳಿಗೆ ಮತ್ತು ನಾಯಂಡಹಳ್ಳಿಯಿಂದ ಯಶವಂತಪುರಕ್ಕೆ ತಲಾ 40, ಗೊರಗುಂಟೆಪಾಳ್ಯದಿಂದ ಕೆ.ಆರ್.ಪುರಕ್ಕೆ 41 ಹಾಗೂ ಕೆ.ಆರ್.ಪುರದಿಂದ ಗೊರಗುಂಟೆಪಾಳ್ಯಕ್ಕೆ 46 ಬಾರಿ ಬಸ್‌ಗಳು ಸಂಚಾರ ಮಾಡಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

IMMEDIATELY REQUIRED following Teachers for SCHOOL at Mathikere: P.E, Computer and Primary Teacher Freshers can apply: gnanatejaenglishschool@gmail.com 080- 42168461/ 9019178890

VIDYA SOUDHA PU COLLEGE
No.9/1, 1st Main Peenya, 1st Stage, Near Basaveshwara Bus Station, Bangalore – 560 058
www.vidyasoudha.edu.in
Requires LECTURERS
Subject: Physics and Chemistry
Qualification: Master Degree in relevant Subject with B.Ed
Experience: Minimum 5 years. Experience in teaching PU-CET, NEET & JEE is preferred.
Apply Immediately
hr@vidyasoudha.edu.in
+91 89715 66659

WANTED ENGLISH MEDIUM TRAINED/ UNTRAINED Lady Teachers to teach ENGLISH /EVS, KANNADA/ HINDI for classes 1 to 4 / NTT Trained/ COMPUTER FACULTY/ Part-time Drawing/ Carnatic Music. Contact in person (10.00 am- 3.00 pm on all working days)- Secretary, Deccan Educational Society®, No. 95, 3rd Cross, Srirampuram, Bengaluru- 560021 (Near Sampige Theater, Malleswaram).

"NGO (BRAHMI.ORG) run"Anjana Vidya-Kendra High school", Bengaluru. requires graduate Teachers in Science,Sports, English,Computers, Primary.& Middle-school Good-salary Lunch.& Accomodation. Contact: 9448584569/ 6361243095/ 9035760473"

SOCIAL STUDIES /ENGLISH for High School & D.Ed./TCH Teacher Wanted. Contact: CAMLIN SCHOOL, 6th 'C' Main, 4th Cross, Hampinagar Vijayanagar 2nd Stage, Bangalore. Phone: 080-23301363.

WANTED FOR a reputed ICSE SCHOOL North Bangalore 1.TEACHERS in English for Primary and Middle level- Candidate must be BA(English) B.Ed. 2.PT TEACHERS with B.Ped. Experienced faculty preferred. Apply with full particulars to: faculty22recruit@gmail.com

WANTED KANNADA/ Physical Educaton teacher 20k to 25K, Computer Teacher/ Data entry 18 to 20k Matha's English high School, Garuve bhavi palya, Bangalore-68 M: 9449814917/ 8277258609

NIRMAN INTERNATIONAL PUBLIC SCHOOL, Near Automated RTO,7th Block, Vishweshwaraiah Layout, Bangalore-91 URGENT Requires Qualified English and Social TEACHERS for Higher classes. Contact: 8123030731/ 9986055970

WANTED TEACHING Faculties for M.Pharm, MPT, M.Sc Nursing and B.Sc Nursing. Contact: MGP College, Kanmanike, Kengeri, Mysore Road, Bangalore. Phone: 9886236341. Email: mgp_nc2001@yahoo.com

FRANK PUBLIC SCHOOL, JP.Nagar 6th Phase, Requires HIGH SCHOOL ENGLISH, HINDI, PHYSICAL EDUCATION TEACHERS. rumysud@gmail.com 7019301626

ST PATRIOT Convent requires experienced Principal/ Vice Principal. Retired can apply. Landmark: Lalbagh Main gate. Contact: 9008668790

Hospital & Medical Jobs

WE AT Athulya Assisted Living Hiring BDE's for Bengaluru who have experience of 1 to 3 years in Pharma, Health Insurance Sales and any Hospital Sales Background is Preferred. For more info Please mail your Resume to manalihr@athulyaliving.com

FPA INDIA Bengaluru requires MEDICAL OFFICER and LAB TECHNICIAN for satellite clinic near Peenya. Email: bengaluru@fpaindia.org

Marketing & Sales

WANTED SALES Executive Experienced Male Candidates Needed. Minimum Qualification: Any Degree Two Wheeler Must Interested People Send Resume to bangalore@agsar.net Call: 9840691864

Part-Time Jobs

TOP MNC COMPANY LICENSED BY GOVT. Restart Your 2nd Career Opportunity With Flexible Timings Age Limit 45yrs And Above: 7019215243/ 9886641282

General

CCTV SECURITYSYS Installer, Driver, Electrician. Daily 6Hour. Pay Rs18000-30000/-pm. Ph:9739002001

WANTED FOR Electric bike-showroom at Jayanagar Manager sales & field exec service manager`& advisor. automobile experience req Call:7760272827

WANTED GRAPHIC DESIGNER Computer Typt Male & Female Supervisor @ Jayanagar 9th Block Mob: 9845934508

BHUMIKA BUILDERS requires experienced SITE SUPERVISOR immediately for the projects in Bangalore Call : 9538223507

HOSMAT HOSPITAL
Requires following Consultants at
HOSMAT THIRD UNIT opening in few weeks at Sadashivanagar, Palace Orchards # 18, Bellary Road
HOSMAT SECOND UNIT / Hennur Junction opened 18 months ago (Multi Speciality)
HOSMAT UNIT ONE – Magrath Road, Bangalore
Full Time, Visiting Consultants and following Departmental Staff, are welcome to apply.
Medical/ Surgical groups can also respond

1. Neuro Physicians
2. Neuro Surgeons – Cranial & Spine
3. Orthopaedic Surgeon with sub-specialty
4. Orthopaedic Surgeon Trauma Specialist
5. Intensivists & ICU Registrar
6. HOD Anaesthesiology
7. Anaesthesiologists
8. Physician – Internal Medicine & Non-invasive cardiologist
9. Diabetologist / Endocrinologists
10. General Surgeon with Laparoscopy
11. Pain Management consultants/ Team for 3 Hospitals
12. Pulmonologist
13. Radiologist
14. Rheumatologist
15. Urologist
16. Gastro Entrologists Medical & Surgical
17. Paediatricians
18. Surgical Oncologist
19. Emergency Doctors
20. ENT Surgeon
21. Vascular Surgeons Team
22. Orthopaedic & General Medicine Registrars
23. Cosmetic Plastic Surgeons
24. Psychiatrist
25. Material Management Manager & Staff
26. Marketing Corporate Sales & referrals
27. Human Resources Executives
28. Front office Manager & Front office Staff
29. OT Incharge - Nursing
30. Scrub Nurses/Critical Care Nurses
31. MRI & CT Technicians
32. Radiographers
33. Housekeeping Manager

Call: 91084 50312
recruitment@hosmathospitals.com / coordinatorhosmat@gmail.com

Wanted

WE ARE HIRING 1.Tally-Trainer 2.Computer-Trainer 3.Python-Trainer 4.English-Trainer 5.Soft Skill-Trainer 6.Digital Marketing-Trainer Qualifications: BE`IT/B.Tech, IT Engineer, BCOM,BCA, MCOM,MCA, MSC(IT) or equivalent Experience: Minimum 1years in Providing Training. Locations: Bangalore. Candidates who meet these requirements may submit your application to: Augustin email: augustine.prasad@hopeww.in Only`WharsApp 9036766768

Situation Required

DIGITAL MARKETING / Event booking wanted with 2yr exp. Good comm in English. Work from home night shift. Computer / Internet must. Sal 25 to 45/mon. Ct: ashthroned@gmail.com

Accounts & Finance

ACCOUNTS ASSISTANT, OFFICE EXECUTIVES. Graduates With Minimum 2 Years RelevantExperience. SAFEGUARD SYSTEMS. 9343544350 8884524433.

Engg/ Production Technical

WANTED DIPLOMA Computer Science/BCA, Male/Female, speakfluent in English, for Institution at Kengeri. Contact:6363288544

PERSONAL

Change of Name

I, VIMALA Residing at Flat No.103, 1st-Floor Tetra Grands Green Aspire B Block, Chokkanahalli Village, Bengaluru-560064 have Changed My-Name to VIMALA PICHAIMUTHU vide Affidavit Dated:20.7.2023 sworn before Notary H.S.Sakalesh Aradhya, Bengaluru

Lost

ಕಳೆದುಹೋಗಿದೆ
ವಿ. ರಾಮಯ್ಯ, ದಿವಂಗತ ವೆಂಕಟ್ ಗೌಡ ಎಂಬುವವರ ಮಗನಾದ ನಾನು ದಿ: 3.7.2023 ರಂದು ಕೋಳಿ ಫಾರ್ಮ್ ಗೇಟ್, ಬನ್ನೇರುಘಟ್ಟ ರಸ್ತೆಯಲ್ಲಿ ಪ್ರಯಾಣಿಸುವಾಗ ನನ್ನ ಮೂಲ ಪತ್ರ Sale Deed ದಾಖಲೆಗಳನ್ನು ಕಳೆದುಕೊಂಡಿರುತ್ತೇನೆ. ಗುರುತಿನ ಸಂಖ್ಯೆ: 7413/2001–02, ಸರ್ವೇ ನಂ: 131, (1.10 ಗುಂಟೆ) ಕಿತ್ತಗನಹಳ್ಳಿ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್, ಬೆಂಗಳೂರು. ಪ್ರಕರಣ ದಾಖಲಾದ (FIR) ಸಂಖ್ಯೆ: 0652938/2023. ಯಾರಿಗಾದರು ಸಿಕ್ಕಿದ ಪಕ್ಷದಲ್ಲಿ ದಯವಿಟ್ಟು ಸಂಪರ್ಕಿಸಿ ಅಥವಾ ಈ ವಿಳಾಸಕ್ಕೆ ಹಿಂತಿರುಗಿಸಿ. ವಿ. ರಾಮಯ್ಯ, ಮನೆ ನಂ: 152, 2ನೇ 'ಡಿ' ಮೇನ್, ಕೋರಮಂಗಲ 8ನೇ ಬ್ಲಾಕ್, ಬೆಂಗಳೂರು–560095. ಸಂಪರ್ಕಿಸಿ: 9343083744.

ವಿದ್ಯಾರ್ಥಿಯ ಆತ್ಮಹತ್ಯೆಗೆ ಪ್ರಚೋದನೆ ನೀಡಿಲ್ಲ: ಪಿಇಎಸ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: 'ಪರೀಕ್ಷೆ ವೇಳೆ ವಿದ್ಯಾರ್ಥಿ ತಪ್ಪು ಎಸಗಿದಾಗ ತಿಳಿಹೇಳುವ ಕೆಲಸ ಮಾಡಿದ್ದೇವೆಯೇ ಹೊರತು ಆತ್ಮಹತ್ಯೆಗೆ ಪ್ರಚೋದನೆ ನೀಡಿಲ್ಲ' ಎಂದು ವಿದ್ಯಾರ್ಥಿ ಆದಿತ್ಯ ಪ್ರಭು ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿಇಎಸ್ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸ್ಪಷ್ಟನೆ ನೀಡಿದೆ.

'ಸದ್ಯ ತನಿಖೆ ಪ್ರಗತಿಯಲ್ಲಿ ಇರುವುದರಿಂದ ಹೆಚ್ಚಿನ ವಿಚಾರ ಬಹಿರಂಗವಾಗಿ ಹೇಳುವುದು ಕಾನೂನಿನ ಪ್ರಕಾರ ತಪ್ಪು. ಆದರೆ, ಸತ್ಯಾಂಶವನ್ನು ವರದಿ ಮೂಲಕ ತನಿಖಾ ಸಮಿತಿಗೆ ಸಲ್ಲಿಸಿದ್ದೇವೆ' ಎಂದು ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ತಿಳಿಸಿದ್ದಾರೆ.

'ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯನ್ನು ಕಳೆದುಕೊಂಡಿರುವ ಬಗ್ಗೆ ಕಾಲೇಜಿಗೂ ಅತೀವ ಬೇಸರವಿದೆ. ಆದಿತ್ಯ ಉತ್ತಮ ವಿದ್ಯಾರ್ಥಿಯಾಗಿದ್ದ. ಶೈಕ್ಷಣಿಕವಾಗಿಯೂ ಮುಂದಿದ್ದ. ಆತ್ಮಹತ್ಯೆ ಮಾಡಿಕೊಳ್ಳುವಂತಹ ವಿಚಾರಕ್ಕೆ ನಮ್ಮ ಖಂಡನೆ ಇದೆ' ಎಂದು ಹೇಳಿದ್ದಾರೆ.

'ಜುಲೈ 17ರಂದು ವಿದ್ಯಾರ್ಥಿಯು ಪರೀಕ್ಷೆಗೆ ಹಾಜರಾಗಿದ್ದ. ಆ ವೇಳೆ ಪರೀಕ್ಷಾ ಕೇಂದ್ರದ ಒಳಗೆ ಮೊಬೈಲ್ ಬಳಕೆ ಮಾಡಿದ್ದರಿಂದ ಬುದ್ಧಿ ಹೇಳಲಾಗಿತ್ತು. ಪ್ರಕರಣ ಸಂಬಂಧ ವಿದ್ಯಾರ್ಥಿ ಪೋಷಕರು ದೂರು ದಾಖಲಿಸಿದ್ದಾರೆ. ತನಿಖೆ ಪ್ರಗತಿಯಲ್ಲಿರುವಾಗ ವಿಶ್ವವಿದ್ಯಾಲಯ ತನ್ನ ಅಭಿಪ್ರಾಯ ವ್ಯಕ್ತಪಡಿಸುವುದು ಸರಿಯಲ್ಲ ಎಂಬ ಕಾರಣಕ್ಕೆ ಮೌನ ವಹಿಸಲಾಗಿತ್ತು. ಆದರೆ, ಮಾಧ್ಯಮಗಳಲ್ಲಿ ತಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ನಡೆಯ ಬಗ್ಗೆ ಬೇರೆ ರೀತಿಯಲ್ಲಿ ಆರೋಪ ಮಾಡಲಾಗುತ್ತಿದೆ. ಸ್ಪಷ್ಟನೆ ನೀಡುವುದು ವಿ.ವಿಯ ಕರ್ತವ್ಯ. ಅಧಿಕಾರಿಗಳಿಗೂ ಹೃದಯವಿದೆ. ಮಾನವೀಯತೆ ಇದೆ' ಎಂದು ಹೇಳಿದ್ದಾರೆ.

ಸಿಸಿಟಿವಿ ದೃಶ್ಯಾವಳಿ ಪೊಲೀಸರಿಗೆ ನೀಡಲಾಗಿದೆ. ಇದರಿಂದ ಸತ್ಯಾಂಶ ಹೊರಬರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಲಾ ವಾಹನ ಚಾಲಕನಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗರುಡಾಚಾರಪಾಳ್ಯ ಮೆಟ್ರೊ ನಿಲ್ದಾಣ ಬಳಿ ಸಂಚಾರ ನಿಯಮ ಉಲ್ಲಂಘಿಸಿ ಯೂ–ಟರ್ನ್ ಪಡೆದು ಅಪಾಯಕಾರಿ ರೀತಿಯಲ್ಲಿ ಶಾಲಾ ವಾಹನ ಚಲಾಯಿಸಿದ್ದ ಚಾಲಕನಿಗೆ ಪೊಲೀಸರು ದಂಡ ವಿಧಿಸಿದ್ದಾರೆ.

ಜುಲೈ 19ರಂದು ನಿಯಮ ಉಲ್ಲಂಘಿಸಿದ್ದ ಚಾಲಕನ ಕೃತ್ಯವನ್ನು ಮೊಬೈಲ್ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದ ಸಾರ್ವಜನಿಕರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು. ವಿಡಿಯೊ ಆಧರಿಸಿ ಕ್ರಮ ಜರುಗಿಸಿರುವ ಮಹದೇವಪುರ ಸಂಚಾರ ಠಾಣೆ ಪೊಲೀಸರು, ಚಾಲಕನನ್ನು ಪತ್ತೆ ಮಾಡಿ ದಂಡ ವಿಧಿಸಿದ್ದಾರೆ.

'ವಾಹನ ದಟ್ಟಣೆ ಹೆಚ್ಚಿರುವ ರಸ್ತೆಯಲ್ಲಿ ಹೊರಟಿದ್ದ ಚಾಲಕ, ಶಾಲಾ ವಾಹನವನ್ನು (ಕೆಎ 53 ಎಎ6189) ಅಪಾಯಕಾರಿ ರೀತಿಯಲ್ಲಿ ಚಲಾಯಿಸಿ ಯೂ– ಟರ್ನ್ ತೆಗೆದುಕೊಂಡಿದ್ದ. ಆದರೆ, ಈ ರಸ್ತೆಯಲ್ಲಿ ಯೂ–ಟರ್ನ್ ಪಡೆಯುವುದನ್ನು ನಿರ್ಬಂಧಿಸಲಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

'ವಿಡಿಯೊ ಗಮನಕ್ಕೆ ಬರುತ್ತಿದ್ದಂತೆ ವಾಹನವನ್ನು ಪತ್ತೆ ಮಾಡಿ ದಂಡ ವಿಧಿಸಿ, ಎಚ್ಚರಿಕೆ ನೀಡಲಾಗಿದೆ' ಎಂದು ತಿಳಿಸಿದರು.

ಬೈಕ್ ಟ್ಯಾಕ್ಸಿಯಲ್ಲಿ ಅಸಭ್ಯ ವರ್ತನೆ: ಬಂಧನ

ಬೆಂಗಳೂರು: ರ್‍ಯಾಪಿಡೊ ಬೈಕ್ ಟ್ಯಾಕ್ಸಿಯಲ್ಲಿ ಹೊರಟಿದ್ದ ಸಂದರ್ಭದಲ್ಲಿ ಮಹಿಳೆ ಜೊತೆ ಅಸಭ್ಯವಾಗಿ ವರ್ತಿಸಿದ್ದ ಆರೋಪದಡಿ ಸವಾರ ಗುರು ವೆಂಕಟಪ್ಪನನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.

'ಹಾವೇರಿ ಜಿಲ್ಲೆಯ ಸವಣೂರಿನ ಗುರು ವೆಂಕಟಪ್ಪ, ಸಂಪಂಗಿರಾಮನಗರದಲ್ಲಿ ಸ್ನೇಹಿತನ ಜೊತೆ ವಾಸವಿದ್ದ. ಈತನ ಕೃತ್ಯದ ಬಗ್ಗೆ ಮಹಿಳಾ ಪ್ರಯಾಣಿಕರೊಬ್ಬರು ಟ್ವೀಟ್ ಮಾಡಿದ್ದರು. ಅದನ್ನು ಆಧರಿಸಿ ಮಹಿಳೆಯಿಂದ ದೂರು ಪಡೆದು ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಯ ಸ್ನೇಹಿತ, ರ್‍ಯಾಪಿಡೊ ಬೈಕ್ ಟ್ಯಾಕ್ಸಿ ಸವಾರ. ಶುಕ್ರವಾರ ಕೊಠಡಿಯಲ್ಲಿದ್ದ ಸ್ನೇಹಿತ, ತಮ್ಮ ಬೈಕ್ ತೆಗೆದುಕೊಂಡು ಹೋಗುವಂತೆ ಗುರು ವೆಂಕಟಪ್ಪಗೆ ಹೇಳಿದ್ದರು. ಅದರಂತೆ ಆರೋಪಿ, ಬೈಕ್ ಸಮೇತ ರಸ್ತೆಗೆ ಬಂದಿದ್ದ. ಎಲೆಕ್ಟ್ರಾನಿಕ್ ಸಿಟಿಗೆ ಹೋಗಲು ಮಹಿಳೆ, ಬೈಕ್ ಕಾಯ್ದಿರಿಸಿದ್ದರು.'

'ಸ್ಥಳಕ್ಕೆ ಹೋಗಿದ್ದ ಆರೋಪಿ, ಮಹಿಳೆಯನ್ನು ಹತ್ತಿಸಿಕೊಂಡು ಎಲೆಕ್ಟ್ರಾನಿಕ್ ಸಿಟಿಯತ್ತ ಹೊರಟಿದ್ದ. ಮಾರ್ಗಮಧ್ಯೆ ಮಹಿಳೆ ಜೊತೆ ಆರೋಪಿ ಅಸಭ್ಯವಾಗಿ ವರ್ತಿಸಿದ್ದ. ಇದನ್ನು ಪ್ರಶ್ನಿಸಿದ್ದ ಮಹಿಳೆ, ತರಾಟೆಗೆ ತೆಗೆದುಕೊಂಡಿದ್ದರು. ನಂತರ, ಆರೋಪಿ ಮಹಿಳೆಯನ್ನು ನಿಗದಿತ ಸ್ಥಳಕ್ಕೆ ತಲುಪಿಸದೇ ಅರ್ಧದಲ್ಲಿ ಬಿಟ್ಟು ಹೊರಟು ಹೋಗಿದ್ದ. ನೊಂದ ಮಹಿಳೆ, ಟ್ವೀಟ್ ಮಾಡಿ ಅಳಲು ತೋಡಿಕೊಂಡಿದ್ದರು' ಎಂದು ತಿಳಿಸಿವೆ.

ಬಸವರಾಜ ಬೊಮ್ಮಾಯಿ ಹೇಳಿಕೆ • ವಿಶ್ವೇಶ್ವರ ಭಟ್ ಸೇರಿ ನಾಲ್ವರ ಪುಸ್ತಕಗಳು ಬಿಡುಗಡೆ

'ಸರ್ಕಾರದ ಪ್ರೋತ್ಸಾಹ ಹೆಚ್ಚಾದರೆ ಕಳಪೆ ಸಾಹಿತ್ಯ'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಬಸವರಾಜ ಬೊಮ್ಮಾಯಿ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ರೂಪಾ ಗುರುರಾಜ್, ಶಿಶಿರ್ ಹೆಗಡೆ, ಪ್ರದೀಪ್ ಈಶ್ವರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಶ್ವೇಶ್ವರ ಭಟ್ ಹಾಗೂ ಕಿರಣ್ ಉಪಾಧ್ಯಾಯ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪುಸ್ತಕೋದ್ಯಮಕ್ಕೆ ಸರ್ಕಾರದ ಪ್ರೋತ್ಸಾಹ ಹೆಚ್ಚಾದಂತೆ ಸಾಹಿತ್ಯದ ಗುಣಮಟ್ಟ ಕಡಿಮೆ ಆಗುತ್ತದೆ. ಆದ್ದರಿಂದ ಪುಸ್ತಕೋದ್ಯಮ ಬೆಳೆಯಲು ಸಮಾಜದ ಪ್ರೋತ್ಸಾಹ ಅತ್ಯಗತ್ಯ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

'ವಿಶ್ವವಾಣಿ ಪುಸ್ತಕ' ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ 'ಸಂಪಾದಕರ ಸದ್ಯಶೋಧನೆ' ಮೂರು ಭಾಗಗಳು, ಕಿರಣ್ ಉಪಾಧ್ಯಾಯ ಅವರ 'ಹೊರದೇಶವಾಸಿ', ರೂಪಾ ಗುರುರಾಜ್ ಅವರ 'ಒಂದೊಳ್ಳೆ ಮಾತು–2' ಹಾಗೂ ಶಿಶಿರ್ ಹೆಗಡೆ ಅವರ 'ಶಿಶಿರ ಕಾಲ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಪುಸ್ತಕೋದ್ಯಮ ಮೊದಲಿನಿಂದಲೂ ಸಂಕಷ್ಟ ಎದುರಿಸುತ್ತಿದೆ. ಈ ಉದ್ಯಮ ಓದುಗನಿಂದ ಬೆಳೆಯಬೇಕು. ಸರ್ಕಾರದ ಪ್ರೋತ್ಸಾಹ ಹೆಚ್ಚಾದಂತೆ ಕಳಪೆ ಸಾಹಿತ್ಯ ಹೆಚ್ಚಾಗುತ್ತದೆ. 200 ಪುಟಗಳ ಪುಸ್ತಕ ಬರೆದರೆ ಲಕ್ಷ ರೂಪಾಯಿ ಎಂದು ಘೋಷಿಸಿದರೆ ವರ್ಷಕ್ಕೆ 5–6 ಪುಸ್ತಕಗಳನ್ನು ಬರೆಯುವ ಸಾಹಿತಿಗಳು ಹುಟ್ಟಿಕೊಳ್ಳುತ್ತಾರೆ. ಓದುಗರು ಸಾಹಿತ್ಯ ಕೃತಿಗಳನ್ನು ಖರೀದಿ ಮಾಡಿ, ಅದರ ಆದಾಯ ಲೇಖಕನಿಗೆ ಸಿಗುವವರೆಗೂ ಪುಸ್ತಕೋದ್ಯಮ ಸಂಕಷ್ಟದಲ್ಲಿಯೇ ಇರುತ್ತದೆ. ಹೀಗಾಗಿ, ಸಮಾಜ ಹಾಗೂ ಸರ್ಕಾರದಿಂದ ಸೂಕ್ತ ಪ್ರೋತ್ಸಾಹ ಸಿಗಬೇಕು' ಎಂದರು.

ಶಾಸಕ ಪ್ರದೀಪ್ ಈಶ್ವರ್ ಮಾತನಾಡಿ, 'ರಾಜಕೀಯ ನಾಯಕರು ಇಷ್ಟವಾದರೆಂಬ ಕಾರಣಕ್ಕೆ ಅವರ ಹಿಂದೆ ಹೋಗಿ, ಜೀವನವನ್ನು ಹಾಳು ಮಾಡಿಕೊಳ್ಳಬಾರದು. ರಾಜಕೀಯ ನಾಯಕರು ಕೇವಲ ತಮ್ಮ ಭವಿಷ್ಯದ ಬಗ್ಗೆ ಯೋಚಿಸುತ್ತಾರೆ. ನಾಯಕರನ್ನು ನಂಬಿ ಜೀವನದಲ್ಲಿ ಕಷ್ಟ ಅನುಭವಿಸಿದ್ದೇನೆ' ಎಂದು ಹೇಳಿದರು.

‘ವಿಚಾರಣಾ ನ್ಯಾಯಾಲಯ ಆಜೀವ ಶಿಕ್ಷೆ ವಿಧಿಸುವಂತಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಿಯತಮೆಯ ಪತಿ ಕೊಲೆ ಪ್ರಕರಣದಲ್ಲಿ ಅಪರಾಧಿಗಳಿಗೆ ನೀಡಿದ್ದ ಆಜೀವ ಸಜೆಯನ್ನು, ಜೀವಾವಧಿ ಶಿಕ್ಷೆಯಾಗಿ ಹೈಕೋರ್ಟ್ ಪರಿವರ್ತಿಸಿದೆ.

‘ಆಜೀವ ಶಿಕ್ಷೆ ವಿಧಿಸಲು ವಿಚಾರಣಾ ನ್ಯಾಯಾಲಯಕ್ಕೆ ಅವಕಾಶವಿಲ್ಲ’ ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ವಿಭಾಗೀಯ ನ್ಯಾಯಪೀಠ ಎತ್ತಿ ಹಿಡಿದಿದೆ.

‘ಆಜೀವ ಸೆರೆಮನೆ ವಾಸದ ಶಿಕ್ಷೆ ವಿಧಿಸುವ ಹಕ್ಕು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಷ್ಟೇ ಇದೆ’ ಎಂದು ನ್ಯಾಯಮೂರ್ತಿಗಳಾದ ಕೆ.ಸೋಮಶೇಖರ್ ಮತ್ತು ರಾಜೇಶ್ ರೈ ಅವರಿದ್ದ ವಿಭಾಗೀಯ ನ್ಯಾಯಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಪ್ರಕರಣದ ಹಿನ್ನೆಲೆ: ‘ಹರೀಶ್, ರಾಧಾ ಅವರನ್ನು ಪ್ರೀತಿಸುತ್ತಿದ್ದರು. ಇದಕ್ಕೆ ರಾಧಾ ಪತಿ ಕುಮಾರ್ ಆಕ್ಷೇಪಿಸುತ್ತಾರೆ ಎಂದು, ಕುಮಾರ್ ಅವರನ್ನು ಕೊಲೆ ಮಾಡಿದ್ದರು’ ಎಂದು ಆರೋಪಿಸಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಇಬ್ಬರೂ ಅಪರಾಧಿಗಳಿಗೆ ವಿಚಾರಣಾ ನ್ಯಾಯಾಲಯ ಶಿಕ್ಷೆ ವಿಧಿಸಿ ಆದೇಶಿಸಿತ್ತು. ಈ ಶಿಕ್ಷೆಯನ್ನು ಪ್ರಶ್ನಿಸಿ ಇಬ್ಬರೂ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಲೋಕೇಶ್ ಅವರನ್ನು ಅರೋಪ ಮುಕ್ತಗೊಳಿಸಲಾಗಿದೆ.

ರಾಜಕಾಲುವೆ ಒತ್ತುವರಿ ತೆರವಿಗೆ ಜಾರಿಯಾಗದ ಸಮಗ್ರ ನಿಯಮ

ಬಿಬಿಎಂಪಿ ನಡೆಗೆ ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆ ಒತ್ತುವರಿ ತೆರವುಗೊಳಿಸುವ ನಿಟ್ಟಿನಲ್ಲಿ ಈ ಹಿಂದೆ ನೀಡಿದ್ದ ನಿರ್ದೇಶನಗಳ ಅನ್ವಯ ಸಮಗ್ರ ನಿಯಮಗಳನ್ನು ಜಾರಿ ಮಾಡದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ನಡೆಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಕೆರೆ-ರಾಜಕಾಲುವೆಗಳ ಸಂರಕ್ಷಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ, ‘ಸಿಟಿಜನ್ ಆ್ಯಕ್ಷನ್ ಗ್ರೂಪ್’ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.

ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

‘ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡು ಕಟ್ಟಡಗಳ ನಿರ್ಮಾಣ ಮಾಡುವ ಸಂದರ್ಭದಲ್ಲಿ ಯಾವುದೇ ಕ್ರಮಕ್ಕೆ ಮುಂದಾಗದೆ ಕೈ ಕಟ್ಟಿ ಕುಳಿತುಕೊಂಡಿದ್ದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಅಂಶವನ್ನು ಬಿಬಿಎಂಪಿ ತಿಳಿಸಿಲ್ಲ’ ಎಂದು ನ್ಯಾಯಪೀಠ ಬೇಸರ ವ್ಯಕ್ತಪಡಿಸಿದೆ.

‘ಒತ್ತುವರಿ ತೆರವು ಸಂದರ್ಭದಲ್ಲಿ ಕಾರ್ಯಾಚರಣೆಗೆ ಅಡ್ಡಿಪಡಿಸಿದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವುದಾಗಿ ಅಧಿಕಾರಿಗಳು ತಿಳಿಸಿದ್ದರೂ, ಅಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಅಂಶವನ್ನು ವಿವರಿಸಿಲ್ಲ’ ಎಂದು ಹೇಳಿದೆ.

‘ವೈಜ್ಞಾನಿಕ ಸಲಹೆಗಳನ್ನು ಪಡೆದುಕೊಂಡು ಸಮಗ್ರವಾದ ಯೋಜನೆ ರೂಪಿಸಿ ಎಂದು ಬಿಬಿಎಂಪಿಗೆ ಈ ಹಿಂದೆ ನಿರ್ದೇಶನ ನೀಡಲಾಗಿದ್ದರೂ ಪಾಲಿಕೆ ಅಧಿಕಾರಿಗಳು ನಿರೀಕ್ಷೆಯಂತೆ ಸಮಗ್ರ ಯೋಜನೆ ಜಾರಿಗೊಳಿಸಿಲ್ಲ’ ಎಂದು ಅತೃಪ್ತಿ ಹೊರಹಾಕಿದ್ದು, ವಿಚಾರಣೆಯನ್ನು ಆಗಸ್ಟ್ 1ಕ್ಕೆ ಮುಂದೂಡಿದೆ.

ಹಾಜರಿಗೆ ನಿರ್ದೇಶನ: ‘ಮುಂದಿನ ವಿಚಾರಣೆ ವೇಳೆ ಬಿಬಿಎಂಪಿ ಮುಖ್ಯ ಆಯುಕ್ತರು, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಹುದ್ದೆಗಿಂತ ಮೇಲಿನ ಅಧಿಕಾರಿಗಳು ಖುದ್ದು ಹಾಜರಾಗಬೇಕು’ ಎಂದು ನ್ಯಾಯಪೀಠ ಇದೇ ವೇಳೆ ನಿರ್ದೇಶಿಸಿದೆ.

108: ತಾಂತ್ರಿಕ ಸಮಿತಿ ರಚನೆ

ಬೆಂಗಳೂರು: ‘ಆರೋಗ್ಯ ಕವಚ 108’ ಯೋಜನೆಯಡಿ ಆಂಬುಲೆನ್ಸ್ ಸೇವೆ ಸುಧಾರಣೆಗೆ ಮುಂದಾಗಿರುವ ಆರೋಗ್ಯ ಇಲಾಖೆ, ತಾಂತ್ರಿಕ ಸಮಿತಿ ರಚಿಸಿದೆ.

‘104’ ಆರೋಗ್ಯ ಸಹಾಯವಾಣಿ ಸೇವೆ ಸುಧಾರಿಸಲು ಸಹ ಈ ಸಮಿತಿ ನೆರವಾಗಲಿದೆ. ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ) ಹಾಗೂ ನಿಮ್ಹಾನ್ಸ್ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಈ ಸಮಿತಿ ಕಾರ್ಯ ನಿರ್ವಹಿಸಲಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ-ವಿದ್ಯಾಲಯದ ಮಾಜಿ ಕುಲಪತಿ, ಕಾರ್ಮಿಕ ಇಲಾಖೆಯ ಆಯುಕ್ತ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರನ್ನು ಸಮಿತಿ ಒಳಗೊಂಡಿರಲಿದೆ ಎಂದು ಇಲಾಖೆ ತಿಳಿಸಿದೆ.

ಚೀನಾದ ವಂಚನೆ ಜಾಲ ಪತ್ತೆ

ಹೈದರಾಬಾದ್ (ಪಿಟಿಐ): ‘ಚೀನಾ ಮೂಲದವರು ನಿರ್ವಹಣೆ ಮಾಡುತ್ತಿದ್ದ ಸುಮಾರು ₹ 712 ಕೋಟಿ ಕ್ರಿಪ್ಟೊ ವಾಲೆಟ್ ಹೂಡಿಕೆಯ ವಂಚನೆ ಜಾಲ ಭೇದಿಸಿದ್ದು, ಈ ಸಂಬಂಧ 9 ಜನರನ್ನು ಬಂಧಿಸಲಾಗಿದೆ’ ಎಂದು ಹೈದರಾಬಾದ್‌ನ ಪೊಲೀಸರು ತಿಳಿಸಿದ್ದಾರೆ.

ಈ ಜಾಲದ ಮೂಲಕ, ಉಗ್ರರ ಹಣಕಾಸು ವಹಿವಾಟು ಜಾಲ ಹೆಜ್‌ಬೊಲ್ಲಾ ವಾಲೆಟ್ ಜೊತೆಗೆ ವಹಿವಾಟು ನಡೆಸಿರುವುದು ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸ್ಥಳೀಯ ನಿವಾಸಿ ದೂರು ಆಧರಿಸಿ ಸೈಬರ್ ಕ್ರೈಂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ‘ನಂಬಲರ್ಹ ಎಂದು ವೆಬ್‌ಸೈಟ್ ಮೂಲಕ ಹೆಸರು ನೋಂದಾಯಿಸಿದ್ದೆ. ಕೆಲಸಕ್ಕಾಗಿ ಮೆಸೆಂಜಿಂಗ್ ಆ್ಯಪ್ ಮೂಲಕ ಆಹ್ವಾನ ಬಂದಿತ್ತು’ ಎಂದು ದೂರುದಾರರು ತಿಳಿಸಿದ್ದಾರೆ.

ಬಂಧಿತ ಒಂಭತ್ತು ಜನರು ಚೀನಾದ ನಾಗರಿಕರಿಗೆ ಸುಮಾರು 65 ಖಾತೆಗಳ ವಿವರಗಳನ್ನು ನೀಡಿದ್ದರು. ಈ ಖಾತೆಗಳ ಮೂಲಕವಾಗಿ ಸುಮಾರು ₹ 128 ಕೋಟಿ ವಹಿವಾಟು ನಡೆಸಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಮಣಿಪುರ ಸಿ.ಎಂ ವಜಾಗೆ ಆಗ್ರಹ’

ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಣಿಪುರದಲ್ಲಿ ಅಮಾನವೀಯ ಘಟನೆಗಳು ನಡೆಯುತ್ತಿದ್ದು, ಕೇಂದ್ರ ಸರ್ಕಾರ ಮತ್ತು ಅಲ್ಲಿನ ರಾಜ್ಯ ಸರ್ಕಾರ ಸತ್ತಿದೆ. ಮಣಿಪುರದ ಮುಖ್ಯಮಂತ್ರಿಯನ್ನು ವಜಾ ಮಾಡಬೇಕು. ಪ್ರಧಾನಿ ನರೇಂದ್ರ ಮೋದಿ ಕ್ಷಮೆ ಯಾಚಿಸಬೇಕು’ ಎಂದು ಆಮ್ ಆದ್ಮಿ ಪಾರ್ಟಿಯ ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಆಗ್ರಹಿಸಿದರು.

ಎಎಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಶನಿವಾರ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ‘ಕರ್ನಾಟಕದಲ್ಲಿ ಸದನ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡಿದ್ದೀರಿ. ವಾದ, ಪ್ರತಿವಾದ ಮಾಡಬೇಕು. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಸಿಟ್ಟನ್ನು ಮಾತಿನ ಮೂಲಕ ತೋರಿಸಬೇಕು. ಕಾಗದ ಹರಿದು, ಸ್ಪೀಕರ್ ಮೇಲೆ ಎಸೆದು ತೋರಿಸುವುದಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

‘ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಬಿಬಿಎಂಪಿ, ಲೋಕಸಭಾ ಚುನಾವಣೆಗಳು ಒಂದು ವರ್ಷದ ಒಳಗೆ ನಡೆಯಲಿವೆ. ಇದೇ ಸಮಯದಲ್ಲಿ ಘಟಬಂಧನ್ ಕೂಡ ನಡೆದಿದೆ. ನಾವೇನು ಮಾಡಬೇಕು ಎಂಬ ಪ್ರಶ್ನೆ ಈ ಸಂದರ್ಭದಲ್ಲಿ ಮೂಡುತ್ತದೆ. ಪ್ರಜಾಪ್ರಭುತ್ವ ಉಳಿಸಲು, ಸಂವಿಧಾನ ರಕ್ಷಿಸಲು, ಕೋಮುವಾದ ದೂರ ಮಾಡಲು ರಾಷ್ಟ್ರಮಟ್ಟದಲ್ಲಿ ಪಕ್ಷಗಳು ಕೈಜೋಡಿಸಿವೆ. ಆದರೆ, ರಾಜ್ಯದಲ್ಲಿನ ಚುನಾವಣೆಗಳಲ್ಲಿ ನಾವು ಸ್ವತಂತ್ರವಾಗಿ ಸ್ಪರ್ಧಿಸುತ್ತೇವೆ’ ಎಂದು ಹೇಳಿದರು.

ಎಎಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ‘ಮುಖ್ಯಮಂತ್ರಿ’ ಚಂದ್ರು ಶನಿವಾರ ಅಧಿಕಾರ ಸ್ವೀಕರಿಸಿದರು. ರಾಜ್ಯ ದಕ್ಷಿಣ ಭಾಗ ಸಂಘಟನಾ ಕಾರ್ಯದರ್ಶಿ ಬಿ.ಟಿ. ನಾಗಣ್ಣ, ರಾಷ್ಟ್ರೀಯ ಜಂಟಿ ಕಾರ್ಯದರ್ಶಿಯಾಗಿ ಪೃಥ್ವಿ ರೆಡ್ಡಿ, ರಾಷ್ಟ್ರೀಯ ಪಕ್ಷದ ಪ್ರಧಾನ ಕಾರ್ಯದರ್ಶಿ ಪಂಕಜ್ ಗುಪ್ತ, ಸಂಘಟನಾ ಮಂತ್ರಿ ದಾಮೋದರನ್, ಸಹ ಸಂಘಟಕ ಉಪೇಂದ್ರ ಗೋಯಂಕ, ರಾಜ್ಯ ಉತ್ತರ ಭಾಗ ಸಂಘಟನಾ ಕಾರ್ಯದರ್ಶಿ ಅರ್ಜುನ ಹಲಗಿಗೌಡರ ಇದ್ದರು ಪ್ರಜಾವಾಣಿ ಚಿತ್ರ

ಎಎಪಿ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿ ರೆಡ್ಡಿ ಮಾತನಾಡಿ, ‘ದೆಹಲಿಯಲ್ಲಿ ಅರವಿಂದ್ ಕೇಜ್ರಿವಾಲ್ ನೀಡಿರುವ ಯೋಜನೆಗಳನ್ನೇ ಕಾಪಿ ಮಾಡಿ ಕಾಂಗ್ರೆಸ್ ಗ್ಯಾರಂಟಿಗಳನ್ನು ನೀಡಿದೆ. ಯಾವ ಗ್ಯಾರಂಟಿಯೂ ಯಶಸ್ವಿಯಾಗಲ್ಲ. ಕಮಿಷನ್ ಸೊನ್ನೆ ಇದ್ದಾಗ ಮಾತ್ರ ಯಶಸ್ವಿಯಾಗುತ್ತದೆ. ಅದು ಅವರಿಂದ ಆಗಲ್ಲ. ದೇಶಕ್ಕೆ ಎಎಪಿ ಅವಶ್ಯಕ’ ಎಂದರು.

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪಂಕಜ್ ಗುಪ್ತ, ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ದಾಮೋದರ್, ರಾಜ್ಯ ಸಹ ಸಂಘಟಕ ಉಪೇಂದ್ರ ಗೋಯಂಕ, ಕರ್ನಾಟಕ ದಕ್ಷಿಣ ಭಾಗದ ಸಂಘಟನಾ ಕಾರ್ಯದರ್ಶಿ ಬಿ.ಟಿ. ನಾಗಣ್ಣ, ಉತ್ತರ ಭಾಗದ ಸಂಘಟನಾ ಕಾರ್ಯದರ್ಶಿ ಅರ್ಜುನ ಹಲಗಿ ಗೌಡರ ಮಾತನಾಡಿದರು.

‘ನಮ್ಮ ಯೋಜನೆ ಕದ್ದ ಕಾಂಗ್ರೆಸ್’

‘ಕಾಂಗ್ರೆಸ್ ನಮ್ಮ ಯೋಜನೆಗಳನ್ನು ಕದ್ದಿದೆ. ಅವರೇ 2013ರಲ್ಲಿ ಅಧಿಕಾರಕ್ಕೆ ಬಂದಿದ್ದಾಗ ಉಚಿತ ವಿದ್ಯುತ್ ಯಾಕೆ ನೀಡಿಲ್ಲ? ಉಳಿದ ಯೋಜನೆಗಳನ್ನು ಯಾಕೆ ಕೊಟ್ಟಿಲ್ಲ? ಕದ್ದಿರುವ ಮಾಲು ಇಟ್ಟುಕೊಂಡೇ ಮುಖ್ಯಮಂತ್ರಿ ದರ್ಪ ದೌಲತ್ತು ತೋರಿಸುತ್ತಿದ್ದಾರೆ. ಕದ್ದಮಾಲು ಬಹಳ ಸಮಯ ಉಳಿಯುವುದಿಲ್ಲ. ಸ್ವಂತದ್ದು ಮಾತ್ರ ಶಾಶ್ವತ’ ಎಂದು ‘ಮುಖ್ಯಮಂತ್ರಿ’ ಚಂದ್ರು ವ್ಯಂಗ್ಯವಾಡಿದರು.

ಬೆತ್ತಲೆ ಮೆರವಣಿಗೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪುರದಲ್ಲಿ ಮೇ 4ರಂದು ನಡೆದಿದ್ದ ಹಿಂಸಾಚಾರದ ವೇಳೆ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿರುವ ಘಟನೆಯನ್ನು ಖಂಡಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ (ಎಐಎಂಎಸ್‌ಎಸ್) ಸದಸ್ಯರು ಶನಿವಾರ ಪ್ರತಿಭಟನೆ ನಡೆಸಿದರು.

ಈ ಬಗ್ಗೆ ಜಿಲ್ಲಾಧಿಕಾರಿ ಮೂಲಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮನವಿ ಸಲ್ಲಿಸಿದರು.

‘ಮಣಿಪುರದ ಕುಕಿ ಸಮುದಾಯದ ಇಬ್ಬರು ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹರಿದಾಡುವವರೆಗೂ ಮಣಿಪುರದ ಪೊಲೀಸರು ತನಿಖೆ ಕೈಗೊಂಡಿಲ್ಲ’ ಎಂದು ಪ್ರತಿಭಟನಕಾರರು ಆರೋಪಿಸಿದರು.

‘ಬೇಟಿ ಬಚಾವೊ, ಬೇಟಿ ಪಡಾವೊ ಎಂಬುದು ಕೇವಲ ಘೋಷಣೆಗೆ ಮಾತ್ರ ಸೀಮಿತವಾಗಿದೆ. ಕೆಲವು ತಿಂಗಳಿಂದ ಮಣಿಪುರ ಹೊತ್ತಿ ಉರಿಯುತ್ತಿದೆ. ಶಾಂತಿ ಸ್ಥಾಪಿಸಲು ರಾಜ್ಯ ಹಾಗೂ ಕೇಂದ್ರ ಬಿಜೆಪಿ ಸರ್ಕಾರ ವಿಫಲವಾಗಿದೆ. ಮಾನವೀಯತೆಯ ಮೇಲಿನ ದಾಳಿಯನ್ನು ಪ್ರಜ್ಞಾವಂತ ಸಮಾಜ ಒಗ್ಗಟ್ಟಾಗಿ ಧ್ವನಿ ಎತ್ತಬೇಕು. ಮಣಿಪುರದಲ್ಲಿ ಮಹಿಳೆಯರ ಮೇಲೆ ಅಮಾನವೀಯ ದೌರ್ಜನ್ಯ ಎಸಗಿದ ದುಷ್ಕರ್ಮಿಗಳನ್ನು ಬಂಧಿಸಿ ಶಿಕ್ಷೆ ನೀಡಬೇಕು’ ಎಂದು ಆಗ್ರಹಿಸಿದರು.

ಸಂಘಟನೆಯ ರಾಜ್ಯ ಸಮಿತಿಯ ಸದಸ್ಯೆಯರಾದ ಭಾಗ್ಯ, ಹೇಮಾವತಿ, ಶಾಂತ ಎ, ನಿರ್ಮಲ ಇದ್ದರು.

ಬಂಡಾಯ ಸಾಹಿತ್ಯ ಸಂಘಟನೆ ಖಂಡನೆ

ಬೆಂಗಳೂರು: ಮಣಿಪುರದಲ್ಲಿ ಬೆತ್ತಲೆ ಮೆರಣಿಗೆ ಮಾಡಿ ಅತ್ಯಾಚಾರ ನಡೆಸಿರುವ ಕೃತ್ಯವನ್ನು ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಖಂಡಿಸಿದೆ.

ಬಂಡಾಯ ಸಾಹಿತ್ಯ ಸಂಘಟನೆಯ ಬರಗೂರು ರಾಮಚಂದ್ರಪ್ಪ, ಜಿ. ರಾಮಕೃಷ್ಣ, ಆರ್.ಜಿ.ಹಳ್ಳಿ ನಾಗರಾಜ್, ಭಕ್ತರಹಳ್ಳಿ ಕಾಮರಾಜ್, ಎಚ್. ಎಲ್. ಪುಷ್ಪ, ಸುಕನ್ಯಾ ಮಾರುತಿ, ಎಲ್. ಹನುಮಂತಯ್ಯ, ವೈ.ಬಿ. ಹಿಮ್ಮಡಿ, ಕೆ. ಶರೀಫಾ, ಸಿದ್ದನಗೌಡ ಪಾಟೀಲ, ಅಶ್ವಿನಿ ಮದನಕರ, ಬಿ.ಎಂ. ಹನೀಫ್, ಪಿ.ಆರ್. ವೆಂಕಟೇಶ್, ಗುರುಶಾಂತ್, ಬಿ. ರಾಜಶೇಖರ ಮೂರ್ತಿ, ಬಿ.ಎನ್. ಮಲ್ಲೇಶ್, ಎ.ಬಿ. ರಾಮಚಂದ್ರಪ್ಪ ಅವರು ಖಂಡನಾ ಹೇಳಿಕೆ ನೀಡಿದ್ದಾರೆ.

ಇದೊಂದು ಆಘಾತಕಾರಿ ಘಟನೆಯಾಗಿದ್ದು, ಮಾನವೀಯ ಮೌಲ್ಯದ ದಿವಾಳಿತನಕ್ಕೆ ಸಾಕ್ಷಿಯಾಗಿದೆ. ಹಿಂಸೆಯನ್ನು ನಿಯಂತ್ರಿಸದ ಕೇಂದ್ರ –ರಾಜ್ಯ ಸರ್ಕಾರಗಳು ಇನ್ನಾದರೂ ಶಾಂತಿ ಸ್ಥಾಪನೆಗೆ ಮುಂದಾಗಬೇಕು ಎಂದಿದ್ದಾರೆ.

‘ಕೇಂದ್ರ–ರಾಜ್ಯದ ವೈಫಲ್ಯವೇ ಕಾರಣ’

ಬೆಂಗಳೂರು: ‘ಮಣಿಪುರದಲ್ಲಿ ಎರಡು ಬುಡಕಟ್ಟುಗಳ ಮಧ್ಯೆ ನಡೆಯುತ್ತಿರುವ ಸಂಘರ್ಷ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಚರ್ಚೆಯಾಗುತ್ತಿದೆ. ಅಲ್ಲಿ ನಡೆದ ಬೆತ್ತಲೆ ಮೆರವಣಿಗೆ, ಅತ್ಯಾಚಾರ, ಕೊಲೆ ಘಟನೆಗಳಿಗೆ ಯುರೋಪಿನ ಸಂಸತ್ತು ತೀವ್ರ ಕಳವಳ ವ್ಯಕ್ತಪಡಿಸಿದೆ. ಕೇಂದ್ರ ಮತ್ತು ಮಣಿಪುರ ಸರ್ಕಾರದ ವೈಫಲ್ಯಕ್ಕೆ ಇದಕ್ಕಿಂತ ನಿದರ್ಶನ ಬೇಕಿಲ್ಲ’ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

‘ಮಣಿಪುರದ ಪರಿಸ್ಥಿತಿಯನ್ನು ಸರ್ಕಾರವೇ ನಿಭಾಯಿಸಬೇಕು ಅಥವಾ ನಿಮ್ಮಿಂದ ಆಗದಿದ್ದಲ್ಲಿ ನಾವೇ ಕ್ರಮ ಕೈಗೊಳ್ಳಬೇಕಾಗುತ್ತದೆ’ ಎಂದು ಜುಲೈ 20ರಂದು ಸುಪ್ರೀಂ ಕೋರ್ಟ್ ಎಚ್ಚರಿಸಿದೆ. ಮಹಿಳೆಯರನ್ನು ಹಿಂಸೆಯ ಸಾಧನವಾಗಿ ಬಳಸುವುದು ಒಪ್ಪುವಂಥದ್ದಲ್ಲ ಎಂದೂ ಕೋರ್ಟ್ ಹೇಳಿದೆ. ಸುಪ್ರೀಂ ಕೋರ್ಟ್‌ನ ಈ ಕಟ್ಟುನಿಟ್ಟಿನ ಸೂಚನೆಯನ್ನು ನಿರೀಕ್ಷಿಸಿದ್ದ ಪ್ರಧಾನಿ ಮೋದಿ, ಸಂಸತ್ತಿನ ಮುಂಗಾರು ಅಧಿವೇಶನ ಆರಂಭವಾಗುವ ಕೆಲವು ನಿಮಿಷಗಳ ಮೊದಲಷ್ಟೇ ಮೌನ ಮುರಿದಿದ್ದಾರೆ. ಮಣಿಪುರದ ಹಿಂಸೆಯನ್ನು ತಡೆಯಲು ಗೃಹ ಸಚಿವ ಅಮಿತ್ ಶಾ ಯಾವುದೇ ಪ್ರಯತ್ನ ಮಾಡಿಲ್ಲ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ’ ಎಂದೂ ಅವರು ಆರೋಪಿಸಿದ್ದಾರೆ.

‘ಮಣಿಪುರದಲ್ಲಿರುವಂಥ ದಾರುಣ ಸ್ಥಿತಿಯನ್ನು ಕೇರಳ ಕೂಡಾ ಎದುರಿಸಬಹುದು ಎಂಬ ಭಯವನ್ನು ಕೋಯಿಕ್ಕೋಡ್‌ನ ಬಿಷಪ್ ಹೇಳಿರುವುದರಲ್ಲಿ ಆಶ್ಚರ್ಯ ಇಲ್ಲ’ ಎಂದೂ ಅವರು ಹೇಳಿದ್ದಾರೆ.

‘ಹಿಂದುಳಿದ ವರ್ಗಕ್ಕೆ ಶಾಸನ ಸಭೆಗಳಲ್ಲೂ ಮೀಸಲಾತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ರೀತಿ ಶಾಸನ ಸಭೆಗಳಲ್ಲೂ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನಿಗದಿ ಮಾಡಬೇಕು ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್.ಕಾಂತರಾಜು ಪ್ರತಿಪಾದಿಸಿದರು.

ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಶನಿವಾರ ಹಮ್ಮಿಕೊಂಡಿದ್ದ ‘ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಯ ಇಕ್ಕಟ್ಟು- ಬಿಕ್ಕಟ್ಟು’ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಧಾನಸಭೆ, ಲೋಕಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ ನೀಡಿದಾಗಲೇ ಹಿಂದುಳಿದ ವರ್ಗಗಳಿಗೂ ಪ್ರತ್ಯೇಕ ಮೀಸಲು ಕ್ಷೇತ್ರ ನಿಗದಿ ಮಾಡಬೇಕಿತ್ತು. ಆದರೆ, ಅವರು ಸ್ವಶಕ್ತಿಯಿಂದ ಮುಖ್ಯವಾಹಿನಿಗೆ ಬರಬಹುದು ಎನ್ನುವ ಕಾರಣ ನೀಡಲಾಗಿತ್ತು. ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಹಿಂದುಳಿದ ವರ್ಗಗಳ ಸ್ಥಿತಿಗತಿ ಬದಲಾಗಿಲ್ಲ. ರಾಜಕೀಯ ಮೀಸಲಾತಿ ನೀಡಿದರೆ ಹಲವು ಜಾತಿಗಳಿಗೆ ಶಕ್ತಿ ತುಂಬಬಹುದು ಎಂದರು.

ಅಲೆಮಾರಿ ಸಮುದಾಯವೂ ಶೈಕ್ಷಣಿಕವಾಗಿ, ಆರ್ಥಿಕವಾಗಿ ಅತ್ಯಂತ ಹಿಂದುಳಿದಿದೆ. ಅವರಿಗೆ ಮೀಸಲಾತಿ ಕಲ್ಪಿಸಿದರೆ ಪ್ರಯೋಜನವಾಗದು. ಹಾಗಾಗಿ, ನಾಮಕರಣದ (ನಾಮಿನೇಶನ್) ಮೂಲಕ ಅವರಿಗೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು ಎಂದು ಹೇಳಿದರು.

ನಗರದಲ್ಲಿ ಶನಿವಾರ ನಡೆದ ‘ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಯ ಇಕ್ಕಟ್ಟು–ಬಿಕ್ಕಟ್ಟು’ ಸಂವಾದ ಕಾರ್ಯಕ್ರಮದಲ್ಲಿ ನ್ಯಾ.ಎಚ್‌.ಎನ್‌. ನಾಗಮೋಹನದಾಸ್, ಎಂ.ಸಿ.ವೇಣುಗೋಪಾಲ್ ಚರ್ಚೆಯಲ್ಲಿ ತೊಡಗಿದ್ದರು. ಕೆ.ಎನ್‌. ಲಿಂಗಪ್ಪ, ಕಾಂತರಾಜು, ತಿಪ್ಪಣ್ಣಪ್ಪ ಕಮಕನೂರ, ನೆ.ಲ. ನರೇಂದ್ರಬಾಬು ಇದ್ದರು –ಪ್ರಜಾವಾಣಿ ಚಿತ್ರ

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಮಾತನಾಡಿ, ಸ್ಥಳೀಯ ಸಂಸ್ಥೆಗಳಿಗೆ ತಕ್ಷಣ ಚುನಾವಣೆ ನಡೆಸಬೇಕು. ಮೀಸಲಾತಿ ಗೊಂದಲವಿದ್ದರೆ ಕಾಂತರಾಜು ಆಯೋಗದ ಶಿಫಾರಸಿನಂತೆ ಮೀಸಲಾತಿ ನಿಗದಿ ಮಾಡಬೇಕು. ಇಲ್ಲವೇ, ಹಿಂದಿನ ಮೀಸಲಾತಿಗೆ ಅನುಗುಣವಾಗಿ ನಡೆಸಬೇಕು. ಸಬೂಬು ಹೇಳಬಾರದು ಎಂದರು.

1931ರ ನಂತರ ದೇಶದಲ್ಲಿ ಜಾತಿಗಣತಿಯೇ ನಡೆದಿಲ್ಲ. ಸದ್ಯಕ್ಕೆ ಜಾತಿಗಣತಿ ನಡೆಸಲಾಗದು ಎಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದೆ. ಕೋರ್ಟ್‌ಗಳು ಹೇಳಿದಂತೆ ಬರಿ ಜಾತಿ ಆಧಾರದಲ್ಲಿ ಸಮೀಕ್ಷೆ ಸರಿಯಲ್ಲ. ಶೈಕ್ಷಣಿಕ, ಆರ್ಥಿಕ ಮತ್ತು ಇತರೆ ಅಂಶಗಳನ್ನು ಆಧಾರವಾಗಿ ಇಟ್ಟುಕೊಂಡು ಸಮೀಕ್ಷೆ ನಡೆಸಬೇಕು. ಜಾತಿಗಳ ನಿರ್ಮೂಲನೆಗೆ ಮೊದಲ ಹಂತದಲ್ಲಿ ಜಾತಿ ಪಟ್ಟಿ ಸಿದ್ಧಪಡಿಬೇಕು. ಸ್ಥಿತಿಗತಿ ಆಧರಿಸಿ ಮೀಸಲಾತಿ ನೀಡಬೇಕು ಎಂದು ಪ್ರತಿಪಾದಿಸಿದರು.

ಮೀಸಲಾತಿ ಪ್ರಮಾಣವನ್ನು ಶೇ 50ಕ್ಕೆ ನಿಗದಿ ಮಾಡಿದ್ದರೂ ಅಗತ್ಯ ಸನ್ನಿವೇಶಗಳಲ್ಲಿ ದುರ್ಬಲ ವರ್ಗಗಳಿಗೆ ಮೀಸಲಾತಿ ಕಲ್ಪಿಸಲು ಅವಕಾಶವಿದೆ. ದೇಶದ 9 ರಾಜ್ಯಗಳಲ್ಲಿ ಮೀಸಲಾತಿ ಮಿತಿ ಶೇ 50ಕ್ಕಿಂತ ಹೆಚ್ಚಿದೆ. ಕೇಂದ್ರ ಸರ್ಕಾರವೂ ಆರ್ಥಿಕ ದುರ್ಬಲ ವರ್ಗಗಳಿಗೆ ಶೇ 10 ಮೀಸಲಾತಿ ಕಲ್ಪಿಸಿದ ನಂತರ ಮಿಸಲಾತಿ ಪ್ರಮಾಣ ಶೇ 59.5ಕ್ಕೆ ತಲುಪಿದೆ. ರಾಜ್ಯ ಸರ್ಕಾರವೂ ಅಂತಹ ಅವಕಾಶ ಬಳಸಿಕೊಳ್ಳಬೇಕು ಎಂದರು ಸಲಹೆ ನೀಡಿದರು.

ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ, ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಎಂ.ಸಿ.ವೇಣುಗೋಪಾಲ್, ಮಾಜಿ ಶಾಸಕ ನೆ.ಲ.ನರೇಂದ್ರಬಾಬು, ಮುಖಂಡ ಕೆ.ಎನ್.ಲಿಂಗಪ್ಪ ಇದ್ದರು.

ರಾಷ್ಟ್ರಧ್ವಜ ದಿನ: ವಿಶೇಷ ಲಕೋಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಧ್ವಜ ದಿನದ ಅಂಗವಾಗಿ ಅಂಚೆ ಇಲಾಖೆ ಕರ್ನಾಟಕ ವೃತ್ತದಿಂದ ವಿಶೇಷ ಲಕೋಟೆ ಮತ್ತು ವಿಶೇಷ ರಾಖಿ ಲಕೋಟೆಯನ್ನು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ಬಿಡುಗಡೆ ಮಾಡಿದರು.

ವಿಶೇಷ ಲಕೋಟೆಗಳು ಬೆಂಗಳೂರು ಜಿಪಿಒ ಅಂಚೆಚೀಟಿಗಳ ಸಂಗ್ರಹಾಲಯ, ಮಂಗಳೂರು, ಮೈಸೂರು ಮತ್ತು ಕರ್ನಾಟಕ ಪೋಸ್ಟಲ್ ಸರ್ಕಲ್‌ನಲ್ಲಿರುವ ಬೆಳಗಾವಿ ಮುಖ್ಯ ಕಚೇರಿಗಳಲ್ಲಿ ಮತ್ತು ಇ-ಪೋಸ್ಟ್ ಆಫೀಸ್‌ನಲ್ಲಿ (www.Indiapost.gov.in) ಮಾರಾಟಕ್ಕೆ ಲಭ್ಯವಿದೆ ಎಂದು ರಾಜೇಂದ್ರ ಕುಮಾರ್ ತಿಳಿಸಿದರು.

ರಕ್ಷಾ ಬಂಧನ ಆಚರಣೆಯ ಸಂದರ್ಭದಲ್ಲಿ ‘ರಾಖಿ ಪೋಸ್ಟ್’ ಅನ್ನು ಆನ್‌ಲೈನ್‌ನಲ್ಲಿ ಬುಕ್ ಮಾಡಬಹುದು. ಆಗಸ್ಟ್ 26ರವರೆಗೆ ಈ ಸೇವೆ ಇರಲಿದ್ದು, ಭಾರತದ ಯಾವುದೇ ಮೂಲೆಯ ವಿಳಾಸ ನೀಡಿದರೂ ತಲುಪಿಸಲಾಗುವುದು. ಆ.10ರ ನಂತರ https://www.karnatakapost.gov.in/Rakhi_Post ಗೆ ಪ್ರವೇಶಿಸುವ ಮೂಲಕ ರಾಖಿ ಪೋಸ್ಟ್ ಸೇವೆ ಪಡೆಯಬಹುದು ಎಂದು ಮಾಹಿತಿ ನೀಡಿದರು.

ವಿಶೇಷ ಲಕೋಟೆಯನ್ನು ಪ್ರದರ್ಶಿಸಿದ ಅಂಚೆ ಕಚೇರಿಯ ಸಿಬ್ಬಂದಿ ಪ್ರಜಾವಾಣಿ ಚಿತ್ರ

ರಾಖಿ ಲಕೋಟೆಗಳು ಕರ್ನಾಟಕದಲ್ಲಿ ₹ 15ಕ್ಕೆ ಎಲ್ಲ ಪ್ರಧಾನ ಅಂಚೆ ಕಚೇರಿಗಳು ಮತ್ತು ಇತರ ಆಯ್ದ ಅಂಚೆ ಕಚೇರಿಗಳಲ್ಲಿ ಲಭ್ಯವಿದೆ ಎಂದರು.

ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ. ಡ್ಯಾಶ್, ಅಂಚೆ ಸೇವೆ ನಿರ್ದೇಶಕಿ ಕೈಯ ಆರೋರಾ ಇದ್ದರು.

ನಗರದಲ್ಲಿ ಇಂದು

ವಾರ್ಷಿಕೋತ್ಸವ ಸಮಾರಂಭ: ಅಧ್ಯಕ್ಷತೆ: ಪ್ರಿಯಕೃಷ್ಣ, ಅತಿಥಿಗಳು: ಎಂ. ಕೃಷ್ಣಪ್ಪ, ಪ್ರದೀಪ್ ಕೃಷ್ಣಪ್ಪ, ಆಯೋಜನೆ: ಸಂಕಷ್ಟಹರ ವಿದ್ಯಾ ವಿನಾಯಕ, ಪಾಂಡುರಂಗ ಸ್ವಾಮಿ, ಮಹಾಲಕ್ಷ್ಮಿ ಹಾಗೂ ಮಹದಾಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್, ಸ್ಥಳ: ಗೋವಿಂದರಾಜನಗರ, ಬೆಳಿಗ್ಗೆ 8.30ರಿಂದ

ವಾರ್ಷಿಕ ಮಹಿಳಾ ಮತ್ತು ಮಕ್ಕಳ ಕ್ರೀಡಾಕೂಟ-2023: ಉದ್ಘಾಟನೆ: ಜೆ. ಕೃಷ್ಣಮೂರ್ತಿ, ಅತಿಥಿಗಳು: ಚಂದ್ರಕಾಂತ್ ಭಂಡಾರೆ, ಪುಷ್ಪಾ ಕ್ಷೀರಸಾಗರ್, ಅಧ್ಯಕ್ಷತೆ: ಜಲಜಾ ಸವ್ವಾಸೇರೆ, ಉಪಸ್ಥಿತಿ: ಪ್ರದೀಪ್ ರೋಖಡೆ, ಆಯೋಜನೆ: ಸಂಯುಕ್ತ ಸ್ವಕುಳಸಾಳಿ ಮಹಿಳಾ ಮಂಡಳಿ, ಸ್ಥಳ: ವೀನಸ್ ಇಂಟರ್‌ನ್ಯಾಷನಲ್ ಸ್ಕೂಲ್, ರಾಜಾಜಿನಗರ, ಬೆಳಿಗ್ಗೆ 9ರಿಂದ

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಉದ್ಘಾಟನೆ: ಭಾ.ಮ. ಹರೀಶ, ಸಮ್ಮೇಳನಾಧ್ಯಕ್ಷೆ: ಜಿ. ವೈ. ಪದ್ಮಾ ನಾಗರಾಜು, ಅತಿಥಿಗಳು: ಕ.ಸುಚೇಂದ್ರ ಪ್ರಸಾದ್, ಸಮತಾ ಬಿ. ದೇಶಮಾನೆ, ಆಯೋಜನೆ: ಚೇತನ ಫೌಂಡೇಷನ್ ಕರ್ನಾಟಕ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 9.30ರಿಂದ

ಸುಚೇಂದ್ರ ಪ್ರಸಾದ್

‘ಪ್ರತಿಭಾ ಪುರಸ್ಕಾರ’ ಶಿಕ್ಷಕರಿಗೆ ಪುನಶ್ಚೇತನ ಕಾರ್ಯಕ್ರಮ: ಅಧ್ಯಕ್ಷತೆ: ಕೆ.ಆರ್. ವೇಣುಗೋಪಾಲ್, ಅತಿಥಿ: ಉಮೇಶ್, ಆಯೋಜನೆ: ಮಂಗಳ ಶಿಕ್ಷಣ ಸಮಿತಿ, ಸ್ಥಳ: ಐ.ಇ.ಟಿ.ಇ ಕಟ್ಟಡ, ಮೇಕ್ರಿ ವೃತ್ತ, ಬೆಳಿಗ್ಗೆ 10

‘ಭಾವ ಮಾಧುರ್ಯ’ ಭಾವಗೀತೆಗಳ ಸಂಗ್ರಹದ ಬಿಡುಗಡೆ: ಅತಿಥಿಗಳು: ವಿಜಯ ಹಾವನೂರು, ಆರ್.ಎಸ್. ಗಣೇಶ್ ನಾರಾಯಣನ್, ಗಣಪತಿ ಎಸ್. ಹೆಗಡೆ, ಗಾಯನ: ಗಣೇಶ್ ದೇಸಾಯಿ, ಪ್ರೀತಿ ಅಶೋಕ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಬಸವ ಜಯಂತಿ: ಸಾನ್ನಿಧ್ಯ: ಅಲ್ಲಮಪ್ರಭು ಸ್ವಾಮೀಜಿ, ಉದ್ಘಾಟನೆ: ಮಹಾಂತೇಶ, ಸನ್ಮಾನ ಮತ್ತು ಉಪನ್ಯಾಸ: ಪುಲಿಗೆರೆ ಸಂಪದಾ, ಅತಿಥಿ: ಮಹೇಶ ಎಂ., ‘ಬೆಮೆಲ್ ಬಸವಶ್ರೀ’ ಪ್ರಶಸ್ತಿ ಪುರಸ್ಕೃತರು: ಪರಶುರಾಮ ಗಾಣಿಗೇರ, ಆಯೋಜನೆ: ಬಸವ ಬಳಗ, ಸ್ಥಳ: ನಿಜಗುಣರ ಕ್ಷೇತ್ರ, ದೊಡ್ಡ ಗಣೇಶ ದೇವಸ್ಥಾನದ ಎದುರು, ಬಸವನಗುಡಿ, ಬೆಳಿಗ್ಗೆ 10

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಗೀತಾ ಹೆಬ್ಳೀಕರ್, ಹಾರ್ಮೋನಿಯಂ: ಶಿವಕುಮಾರ್ ಜಿ. ಮಹಾಂತ, ತಬಲಾ: ಪ್ರಜ್ವಲ್ ಶರ್ಮಾ, ಆಯೋಜನೆ: ಸಂಗೀತ ಕೃಪಾ ಕುಟೀರ, ಸ್ಥಳ: ಸ್ವಾಮಿ ವಿವೇಕಾನಂದ, ವಿದ್ಯಾಶಾಲಾ, ಹನುಮಂತನಗರ, ಬೆಳಿಗ್ಗೆ 10

ಪ್ರತಿಭಾ ಪುರಸ್ಕಾರ: ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಶಿವರಾಜ ತಂಗಡಗಿ, ಅತಿಥಿಗಳು: ಶಿವಾನಂದ ಪಾಟೀಲ, ಉಪನ್ಯಾಸ: ಶ್ರೀನಿವಾಸ ಬಳ್ಳಿ, ಕೆ. ನಾರಾಯಣ, ತೇಜಸ್ವಿ ಸೂರ್ಯ, ಉಮಾಶ್ರೀ, ಎಂ.ಡಿ. ಲಕ್ಷ್ಮೀನಾರಾಯಣ, ಕೆ.ಆರ್. ಶ್ರೀನಿವಾಸ್, ಜಿ. ರಮೇಶ್, ಬಿ. ನಾಗರಾಜ್, ಅಧ್ಯಕ್ಷತೆ: ರವೀಂದ್ರ ಪಿ. ಕಲಬುರಗಿ, ಆಯೋಜನೆ: ಕರ್ನಾಟಕ ರಾಜ್ಯ ದೇವಾಂಗ ಸಂಘ ಮತ್ತು ಕರ್ನಾಟಕ ರಾಜ್ಯ ದೇವಾಂಗ ನೌಕರರ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಬರಗೂರು ರಾಮಚಂದ್ರಪ್ಪ ಅವರ ‘ಕಾಗೆ ಕಾರುಣ್ಯದ ಕಣ್ಣು’ ಪುಸ್ತಕ ಬಿಡುಗಡೆ: ಡಾ.ಜಿ. ಪರಮೇಶ್ವರ್, ಅತಿಥಿ: ಕೆ.ವಿ. ನಾರಾಯಣ, ಅಧ್ಯಕ್ಷತೆ: ಡಾ.ಸಿ.ಎನ್. ಮಂಜುನಾಥ್, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಬರಗೂರು ರಾಮಚಂದ್ರಪ್ಪ

‘ಏಕರೂಪ ನಾಗರಿಕ ಸಂಹಿತೆ’ ಕುರಿತು ವಿಚಾರಸಂಕಿರಣ: ಭಾಷಣಕಾರರು: ವಿ. ನಾಗರಾಜ್, ಎ.ವಿ. ಚಂದ್ರಶೇಖರ, ವಿವೇಕ್ ಸುಬ್ಬಾರೆಡ್ಡಿ, ಅಶ್ವಿನಿ ಉಪಾಧ್ಯಾಯ, ಹರೀಶ್ ಎಸ್., ಆಯೋಜನೆ: ಸ್ಪಂದನ ಟ್ರಸ್ಟ್, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಪ್ರೊ. ಬಿ. ಕೃಷ್ಣಪ್ಪ ಅವರ ಜಯಂತಿಯ ಅಂಗವಾಗಿ ‘ಬಹುಜನ ಸ್ವಾಭಿಮಾನ ದಿನಾಚರಣೆ’: ಉದ್ಘಾಟನೆ: ಹರಿರಾಮ್, ಪ್ರಾಸ್ತಾವಿಕ ನುಡಿ: ತಿಲಕನಗರ ರಮೇಶ್, ಅಧ್ಯಕ್ಷತೆ: ಮಾ. ಮುನಿರಾಜ್, ‘ಕರ್ನಾಟಕದ ಅಂಬೇಡ್ಕರ್ ಪ್ರೊ. ಬಿ. ಕೃಷ್ಣಪ್ಪ’ ಪುಸ್ತಕ ಬಿಡುಗಡೆ: ಎಚ್. ಗೋವಿಂದಯ್ಯ, ಪುಸ್ತಕ ಪರಿಚಯ: ವಡ್ಡಗೆರೆ ನಾಗರಾಜಯ್ಯ, ಆಯೋಜನೆ: ದಲಿತ ವಿಮೋಚನಾ ಸೇನೆ, ಸ್ಥಳ: ಜೈಭೀಮ್ ಭವನ, ಜೈಭೀಮ್ ವೃತ್ತ, ಪೂರ್ಣಿಮಾ ಚಿತ್ರಮಂದಿರದ ಮುಂಭಾಗ, ಬೆಳಿಗ್ಗೆ 10.30

‘ಗೋವಿಂದ ಜಾಲಿಹಾಳ ದತ್ತಿ’ ಭಕ್ತಿಗೀತೆಗಳ ಗಾಯನ ಸ್ಪರ್ಧೆ ಮತ್ತು ಬಹುಮಾನ ವಿತರಣೆ: ಉದ್ಘಾಟನೆ: ಪಿ.ವಿ. ನಾರಾಯಣ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸಿ., ಸಭಾಂಗಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30ರಿಂದ

ಅದಿತಿ ಕಿಶೋರ್

ಭರತನಾಟ್ಯ, ಮೋಹಿನಿ ಅಟ್ಟಂ ಪ್ರದರ್ಶನ: ಅದಿತಿ ಕಿಶೋರ್, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ, ಸ್ಯಾಂಕಿ ರಸ್ತೆ, ಮಲ್ಲೇಶ್ವರ, ಸಂಜೆ 6

ಕಾವಾಡ್ ಜಿ. ಶ್ರೀನಿವಾಸ್ ಅವರ ‘ಮುಂಜಾನೆಯ ಸೊಬಗು’, ‘ಪಾತರಗಿತ್ತಿ’ ಪುಸ್ತಕಗಳ ಬಿಡುಗಡೆ: ಮನು ಬಳಿಗಾರ್, ಪುಸ್ತಕಗಳ ಪರಿಚಯ: ಪದ್ಮಿನಿ ನಾಗರಾಜು, ವಿಜಯಲಕ್ಷ್ಮಿ ಸತ್ಯಮೂರ್ತಿ, ಅತಿಥಿಗಳು: ಕೇಶವರೆಡ್ಡಿ ಹಂದ್ರಾಳ, ಎನ್.ಆರ್. ರಾಮಕೃಷ್ಣ, ಉಪಸ್ಥಿತಿ: ಕಾವಾಡ್ ಜಿ. ಶ್ರೀನಿವಾಸ್, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಆಯೋಜನೆ: ಜಾನಪದ ಕಲಾ ತರಂಗ, ಪ್ರತಿಭಾ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

‘ಆಟಿಡೊಂಜಿ ದಿನ’, ‘ಭಸ್ಮಾಸುರ ಮೋಹಿನಿ’ ಯಕ್ಷಗಾಯನ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಬಿಲ್ಲವ ಅಸೋಸಿಯೇಷನ್ ಬೆಂಗಳೂರು, ಬಿಲ್ಲವ ಭವನ, ಹುಳಿಮಾವು, ಮಧ್ಯಾಹ್ನ 12ರಿಂದ

ಮಂಜುಳ ನಾದ ಟ್ರಸ್ಟ್‌ನ ಉದ್ಘಾಟನೆ, ಸಂಗೀತ ಸಂಜೆ: ಉದ್ಘಾಟನೆ: ಸಾ.ರಾ. ಗೋವಿಂದು, ಅಧ್ಯಕ್ಷತೆ: ಕೆ.ಎಸ್. ನಾಗೇಂದ್ರ, ಅತಿಥಿಗಳು: ಸಿ.ಕೆ. ರಾಮೇಗೌಡ, ಎಂ. ಅಮೃತ್ ರಾಜ್, ಆಯೋಜನೆ: ಮಂಜುಳ ನಾದ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3.30

‘ಕರ್ನಾಟಕ ಲೇಖಕಿಯರ ಸಂಘದ ವಾರ್ಷಿಕೋತ್ಸವ’, ‘ದತ್ತಿಗಳ ಪ್ರಶಸ್ತಿ’ ಪ್ರದಾನ: ಉದ್ಘಾಟನೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಪ್ರಶಸ್ತಿ ಪ್ರದಾನ: ರಾಣಿ ಸತೀಶ್, ಬೈರಮಂಗಲ ರಾಮೇಗೌಡ, ಎಂ.ಎಸ್. ಆಶಾದೇವಿ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.30ರಿಂದ

ಚಂದ್ರಶೇಖರ ಕಂಬಾರ

‘ಸೇವಾ ಸಂಭ್ರಮ-2023’: ಅತಿಥಿ: ಮಾಲತಿ ಹೊಳ್ಳ, ಆಯೋಜನೆ: ಯೂಥ್ ಫಾರ್ ಸೇವಾ, ಸ್ಥಳ: ಆರ್. ವಿ. ಡೆಂಟಲ್ ಕಾಲೇಜು, ಜೆ.ಪಿ. ನಗರ 1ನೇ ಹಂತ, ಮಧ್ಯಾಹ್ನ 3.30ರಿಂದ

ಮಾಲತಿ ಹೊಳ್ಳ

ಕವಿಗೋಷ್ಠಿ, ಗೀತಗಾಯನ, ಪುಸ್ತಕ ಬಿಡುಗಡೆ: ಉದ್ಘಾಟನೆ: ಎಲ್. ಜಯಸಿಂಹ, ಅತಿಥಿ: ಎಸ್. ಸತೀಶ್ ರೆಡ್ಡಿ, ಎಚ್. ಕೆ. ಅನಂತಸುಬ್ಬರಾವ್ ಅವರ ‘ಕುಮಾರವ್ಯಾಸ ಭಾರತದ ಎಂಟು ರಸ ಪ್ರಸಂಗಗಳು’ ಪುಸ್ತಕ ಬಿಡುಗಡೆ: ಕೆ. ರಮೇಶ್ ಜಮದಗ್ನಿ, ಅಧ್ಯಕ್ಷತೆ: ಡಬ್ಲ್ಯೂ. ಕೆ. ವೆಂಕಟೇಶಮೂರ್ತಿ, ಆಯೋಜನೆ: ಸಿರಿಗನ್ನಡ ಮಿತ್ರ ತಂಡ, ಸ್ಥಳ: ಪಂಚಾಂಗದ ಮನೆ, ಭೂಪಸಂದ್ರ, ಆರ್.ಎಂ.ವಿ. 2ನೇ ಹಂತ, ಮಧ್ಯಾಹ್ನ 3.30

‘ಭೃಗು ಶಾಪ’ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಕೃಷ್ಣಮೂರ್ತಿ ತುಂಗಾ, ಚಿತ್ಕಲಾ ತುಂಗಾ, ಚಿನ್ಮಯ್ ಅಂಬಾರಗೋಡ್ಲು, ಅರ್ಥಧಾರಿಗಳು: ಡಿ.ಎಸ್. ಶ್ರೀಧರ್, ಅಜಿತ ಕಾರಂತ, ಶಶಾಂಕ ಅರ್ನಾಡಿ, ಗಣೇಶ ಭಟ್ ಸುಂಕಸಾಳ, ರವಿ ಮಡೋಡಿ, ಆಯೋಜನೆ: ಯಕ್ಷವಾಹಿನಿ, ಯಕ್ಷಕಲಾ ಅಕಾಡೆಮಿ, ಸ್ಥಳ: ನಂ.45, 5ನೇ ಅಡ್ಡರಸ್ತೆ, 14ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಸಂಜೆ 4ರಿಂದ

ಸಮಕಾಲೀನ ಕನ್ನಡ ಕಥಾ ಜಗತ್ತು: ಉದ್ಘಾಟನೆ: ಕುಸುಮಾ ಹೆಗಡೆ, ಅಧ್ಯಕ್ಷತೆ: ಕೇಶವ ಮಳಗಿ, ಉಪನ್ಯಾಸ: ಹರ್ಷ ಸಾಲಿಮಠ, ಪದ್ಮನಾಭ ಭಟ್ ಶೇವ್ಕಾರ, ದೀಪಾ ಫಡ್ಕೆ, ಆಯೋಜನೆ: ಈ ಹೊತ್ತಿಗೆ, ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 5ರಿಂದ

‘ನಕ್ಸಲೀಯರ ನಾಡಿನಲ್ಲಿ ರವಿ ಬೆಳಗೆರೆ’ ಪುಸ್ತಕ ಬಿಡುಗಡೆ: ಶಂಕರ ಬಿದರಿ, ಅತಿಥಿ: ಪ್ರೇಮ್, ಪುಸ್ತಕದ ಕುರಿತು: ಬಿ.ಆರ್. ಲಕ್ಷ್ಮಣರಾವ್, ‘ನಕ್ಸಲೀಯ ಜಗತ್ತಿನಲ್ಲಿ ಹೆಣ್ಣಿನ ಸವಾಲುಗಳು’ ಕುರಿತು: ಶಶಿಕಲಾ ವಸ್ತ್ರದ್, ಆಯೋಜನೆ: ರವಿಬೆಳಗೆರೆ ಪ್ರಕಾಶನ, ಸ್ಥಳ: ಶ್ರೀಕೃಷ್ಣರಾಜ ಪರಿಷನ್ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಬಿ.ಆರ್. ಲಕ್ಷ್ಮಣರಾವ್

‘ಬಿ ಕಮಿಂಗ್ ಬಾಬಾಸಾಹೇಬ್’ ಪುಸ್ತಕದ ಲೇಖಕರಾದ ಆಕಾಶ್ ಸಿಂಗ್ ರಾಥೋರ್ ಅವರೊಂದಿಗೆ ಸಂವಾದ: ಅತಿಥಿಗಳು: ವಿಜಯಶಾಂತಿ ಮೂರ್ತಿ, ದಿಶಾ ಕೆ.ಆರ್., ನರಸಿಂಹಮೂರ್ತಿ ವಿ.ಎಲ್., ಆಯೋಜನೆ ಮತ್ತು ಸ್ಥಳ: ಆಕೃತಿ ಪುಸ್ತಕ, ರಾಜಾಜಿನಗರ, ಸಂಜೆ 5ರಿಂದ

‘ಮಾರುತಿ ಪ್ರತಾಪ’ ಯಕ್ಷಗಾನ ಪ್ರದರ್ಶನ: ಭಾಗವತರು: ಚಂದ್ರಕಾಂತ್ ಮೂಡುಬೆಳ್ಳೆ, ಸುಬ್ರಾಯ ಹೆಬ್ಬಾರ್, ಮದ್ದಳೆ: ಅಕ್ಷಯ್ ಆಚಾರ್ ಬಿದ್ಕಲ್‌ಕಟ್ಟೆ, ಚೆಂಡೆ: ಆದಿತ್ಯ ಕಾಶ್ಯನ್, ಆಯೋಜನೆ: ಹವ್ಯಕ ಒಕ್ಕೂಟ ಯಲಹಂಕ, ಯಕ್ಷೇಶ್ವರಿ ಯಕ್ಷಗಾನ ಶಾಲೆ, ಸ್ಥಳ: ಶಿವಕುಮಾರ ಸ್ವಾಮೀಜಿ ಸಭಾಂಗಣ, ಯಲಹಂಕ ಉಪನಗರ, ಸಂಜೆ 5.30ರಿಂದ

‘ಕೃಷ್ಣ ಕಲರವ’: ಅತಿಥಿಗಳು: ರಂಗಶ್ರೀ, ಎನ್. ರಘು, ಸತ್ಯನಾರಾಯಣ ರಾಜು, ‘ಲಯ ಸಮ್ಮಿಲನ’: ಮೃದಂಗ: ಆನೂರು ವಿನೋದ್ ಶ್ಯಾಮ್, ತಬಲಾ: ಆದರ್ಶ ಶೆಣೈ. ಹಾರ್ಮೋನಿಯಂ: ಆನೂರು ಪ್ರಬುದ್ಧ ಶ್ಯಾಮ್, ‘ನಿರೀಕ್ಷೆ’ ಭರತನಾಟ್ಯ ಪ್ರದರ್ಶನ: ಪೃಥ್ವಿ ಪಾರ್ಥಸಾರಥಿ, ಆಯೋಜನೆ: ಕೃಷ್ಣ ಕಲಾ ಕೇಂದ್ರ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30ರಿಂದ

ಪ್ರವಚನ ವಾಹಿನಿ: ಭರತನಾಟ್ಯ ಪ್ರದರ್ಶನ: ಹರಿಣಿ ಕೋಟಮ್‌ರಾಜ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

‘ಕರ್ಣಭಾರ’ ನಾಟಕ ಪ್ರದರ್ಶನ: ನಿರ್ದೇಶನ: ಶಿವು ಹೊನ್ನಿಗನಹಳ್ಳಿ, ಆಯೋಜನೆ: ಬಿಂಕ ಬಿನ್ನಾಣರು ರಂಗ ತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಚಿತ್ರಾವಳಿ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜನ್ಮದಿನದ ಅಂಗವಾಗಿ ರಾಜ್ಯದ ಗೃಹಸಚಿವ ಡಾ.ಜಿ. ಪರಮೇಶ್ವರ್ ಶುಭಕೋರಿದರು. ಸಚಿವ ಶಿವರಾಜ್ ತಂಗಡಿ, ಶಾಸಕರಾದ ಎಚ್‌. ವಿಶ್ವನಾಥ್, ಪ್ರಸಾದ್ ಅಬ್ಬಯ್ಯ, ಕಾಂಗ್ರೆಸ್ ಮುಖಂಡರಾದ ಅಮರೇಗೌಡ ಬಯ್ಯಾಪುರ, ಬಿ.ವಿ.ಜಯರಾಂ, ಕೇಶವಮೂರ್ತಿ ಇದ್ದರು

ಶೇಷಾದ್ರಿಪುರ ಕಾನೂನು ಮಹಾವಿದ್ಯಾಲಯ ಆಯೋಜಿಸಿದ್ದ 5ನೇ ರಾಷ್ಟ್ರೀಯ ಮಟ್ಟದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಪಿಇಎಸ್ ವಿ.ವಿ ವಿದ್ಯಾರ್ಥಿಗಳಿಗೆ ಹೈಕೋರ್ಟ್ ನ್ಯಾಯಮೂರ್ತಿ ಅನಂತ್ ರಾಮನಾಥ್ ಹೆಗ್ಡೆ ₹30 ಸಾವಿರ ನಗದು, ಟ್ರೋಫಿ ವಿತರಿಸಿದರು. ಜಸ್ಟೀಸ್ ಸಿ.ಎಂ. ಪೂಣಚ್ಚ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆಗಳ ಟ್ರಸ್ಟ್‌ನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಟ್ರಸ್ಟಿ ಮೃತ್ಯುಂಜಯ ಆರ್‌.ಬಿ. ಇದ್ದರು

ನಗರದ ವಿವೇಕಾನಂದ ಮಹಿಳಾ ಪದವಿ ಕಾಲೇಜಿನಲ್ಲಿ ಶನಿವಾರ ನಡೆದ ವಾರ್ಷಿಕೋತ್ಸವದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಎಚ್‌. ಶಶಿಧರ್ ಬಹುಮಾನ ವಿತರಿಸಿದರು. ಕಾಲೇಜಿನ ಅಧ್ಯಕ್ಷ ಕೆ.ಪಿ. ಮಂಜು, ಪ್ರಾಂಶುಪಾಲೆ ಪುಷ್ಪಲತಾ ಕೆ.ಪಿ., ಜನತಾ ಶಿಕ್ಷಣ ಸಂಸ್ಥೆಯ ಮಾರ್ಗದರ್ಶಕ ಜಿ.ಕೆ. ನಾರಾಯಣರೆಡ್ಡಿ, ಜಂಟಿ ಕಾರ್ಯದರ್ಶಿ ಐ ನಾರಾಯಣರೆಡ್ಡಿ ಇದ್ದರು

ಗುಜರಾತ್‌ನ ಜುನಾಗಢ ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಯಿಂದಾಗಿ ಜನವಸತಿ ಪ್ರದೇಶಗಳಿಗೆ ಶನಿವಾರ ನೀರು ನುಗ್ಗಿದ್ದು, ವಾಹನಗಳು ಕೊಚ್ಚಿಹೋದವು (ಎಡ ಚಿತ್ರ). ಹಿಮಾಚಲ ಪ್ರದೇಶದಲ್ಲಿನ ಶಿಮ್ಲಾದ ಕೋಟಖಾಯ್ ಪ್ರದೇಶದಲ್ಲಿ ಮಳೆಯಿಂದಾಗಿ ರಸ್ತೆಗಳು ಬಿರುಕು ಬಿಟ್ಟಿದ್ದು, ವಾಹನ ಸಂಚಾರ ನಿರ್ಬಂಧಿಸಲಾಗಿದೆ —ಪಿಟಿಐ ಚಿತ್ರಗಳು

ದೇಶದ ವಿವಿಧೆಡೆ ಭಾರಿ ಮಳೆ: ರಸ್ತೆಗಳು ಬಂದ್, ವಿದ್ಯುತ್–ನೀರು ಪೂರೈಕೆ ಸ್ಥಗಿತ

ಪ್ರವಾಹ: ಕೊಚ್ಚಿಹೋದ ಅಜ್ಜ–ಅಜ್ಜಿ, ಮೊಮ್ಮಗ

ಶಿಮ್ಲಾ (ಪಿಟಿಐ): ಮಹಾರಾಷ್ಟ್ರ, ಹಿಮಾಚಲಪ್ರದೇಶ, ಉತ್ತರಾಖಂಡ, ಗುಜರಾತ್ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಭಾರಿ ಮಳೆಯಾಗಿರುವ ವರದಿಯಾಗಿದೆ.

ಶಿಮ್ಲಾ ಜಿಲ್ಲೆಯ ರೊಹ್ರು ಪ್ರದೇಶದ ಬದಿಯಾರಾ ಗ್ರಾಮದಲ್ಲಿ ಶನಿವಾರ ಬೆಳಿಗ್ಗೆ ಉಂಟಾದ ಹಠಾತ್ ಪ್ರವಾಹದಲ್ಲಿ ಡಾಬಾ ಮತ್ತು ಅದರಲ್ಲಿದ್ದ ವೃದ್ಧ ದಂಪತಿ ಹಾಗೂ ಅವರ ಮೊಮ್ಮಗ ಕೊಚ್ಚಿಕೊಂಡು ಹೋಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಇಲ್ಲಿನ ಲೈಲಾ ನದಿಯಲ್ಲಿ ಹಠಾತ್ ಪ್ರವಾಹ ಉಂಟಾದ್ದರಿಂದ ಈ ಘಟನೆ ನಡೆದಿದ್ದು, ಮೂವರನ್ನು ಪತ್ತೆ ಹಚ್ಚಲು ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಡಾಬಾ ನಡೆಸುತ್ತಿದ್ದ ಅಜ್ಜ-ಅಜ್ಜಿಯನ್ನು ನೋಡಲು ಕಾರ್ತಿಕ್ ತೆರಳಿದ್ದ ವೇಳೆ ಈ ಘಟನೆ ನಡೆದಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭೂಕುಸಿತದಿಂದಾಗಿ ಕಲಾಲಿ ಗ್ರಾಮದಲ್ಲಿ ನೇಪಾಳಿ ದಂಪತಿ ಮೃತಪಟ್ಟಿದ್ದಾರೆ.

ಶುಕ್ರವಾರ ಸಂಜೆಯಿಂದ ನಿರಂತರ ಮಳೆಯಾಗುತ್ತಿದ್ದು, ಈ ಪ್ರದೇಶದಲ್ಲಿ ಮೂರು ಕುಟುಂಬಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಶಿಮ್ಲಾದಲ್ಲಿ ಸೇಬು ಬೆಳೆಯ ಹಂಗಾಮು ಆರಂಭವಾಗಲಿದ್ದು, ಇಲ್ಲಿನ ಖಾಲ್ತುನುಲ್ಲಾ ಮಾರುಕಟ್ಟೆಯ ಸುತ್ತಲಿನ ಗ್ರಾಮಗಳ ಸೇಬು ಬೆಳೆಗಾರರು ಮಳೆಯಿಂದಾಗಿ ಚಿಂತಿತರಾಗಿ ದ್ದಾರೆ. ಮಾರುಕಟ್ಟೆ ಪ್ರದೇಶದಲ್ಲಾಗಿರುವ ಭೂಕುಸಿತವು ಶಿಮ್ಲಾ ಮತ್ತು ರಾಜ್ಯದ ಇತರ ಪ್ರಮುಖ ಮಾರುಕಟ್ಟೆಗಳಿಗೆ ಸರಕು ಸಾಗಿಸಲು ಅಡ್ಡಿಯಾಗಬಹುದು.

ರಾಜ್ಯದಲ್ಲಿ ಜೂನ್ 24ರಿಂದ ಮಳೆ ಆರಂಭವಾಗಿದ್ದು ಇದುವರೆಗೆ ಮಳೆಸಂಬಂಧಿ ಅವಘಡಗಳಲ್ಲಿ ಸುಮಾರು 138 ಜನರು ಮೃತಪಟ್ಟಿದ್ದಾರೆ. ಒಟ್ಟಾರೆ ₹4,986 ಕೋಟಿ ನಷ್ಟವುಂಟಾಗಿದೆ. ಮಳೆಯಿಂದಾಗಿ ರಾಜ್ಯದಲ್ಲಿ 656 ರಸ್ತೆ ಬಂದ್ ಮಾಡಲಾಗಿದೆ. 1,673 ಟ್ರಾನ್ಸ್‌ಫಾರ್ಮರ್‌ಗಳು ಹಾಳಾಗಿದ್ದು, 376 ಸ್ಥಳಗಳಲ್ಲಿ ನೀರು ಸರಬರಾಜು ಸ್ಥಗಿತಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪರಿಹಾರಕ್ಕೆ ಆಗ್ರಹ: ಹಿಮಾಚಲ ಪ್ರದೇಶದಲ್ಲಿ ಮಳೆಪೀಡಿತ ಜನರ ಸಂಕಷ್ಟಕ್ಕೆ ನೆರವಾಗಲು ವಿಪತ್ತು ನಿರ್ವಹಣಾ ನಿಧಿಯಲ್ಲಿ ಬಾಕಿ ಉಳಿದಿರುವ ರಾಜ್ಯದ ಪಾಲಿನ ₹315 ಕೋಟಿಯನ್ನು ಕೇಂದ್ರ ಸರ್ಕಾರ ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಶನಿವಾರ ಒತ್ತಾಯಿಸಿದ್ದಾರೆ.

ಪಂಜಾಬ್‌ನ ಅಮೃತಸರದಲ್ಲಿ ಭಾರಿ ಮಳೆಯಿಂದ ಜಲಾವೃತಗೊಂಡಿದ್ದ ರಸ್ತೆಯಲ್ಲೇ ಶಾಲಾ ಮಕ್ಕಳು ಸಾಗಿದರು —ಪಿಟಿಐ ಚಿತ್ರ

ಯವತ್ಮಾಳ್: ಪ್ರವಾಹಕ್ಕೆ ಸಿಲುಕಿದ 100ಕ್ಕೂ ಹೆಚ್ಚು ಜನರ ರಕ್ಷಣೆ

ಯವತ್ಮಾಳ್, ಮಹಾರಾಷ್ಟ್ರ (ಪಿಟಿಐ): ಯವತ್ಮಾಳ್ ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಪ್ರವಾಹ ಉಂಟಾಗಿದೆ. ಜಿಲ್ಲೆಯ ಮಹಾಗಾಂವ್ ತಾಲ್ಲೂಕಿನಲ್ಲಿ ಪ್ರವಾಹದಲ್ಲಿ ಸಿಲುಕಿದ್ದ 110 ಜನರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಮಹಾಗಾಂವ್ ತಾಲೂಕಿನ ಆನಂದನಗರ ತಾಂಡಾ ಗ್ರಾಮದಲ್ಲಿ ಪ್ರವಾಹದಲ್ಲಿ ಸಿಲುಕಿದ್ದ ನಿವಾಸಿಗಳ ರಕ್ಷಣೆಗೆ ವಾಯುಪಡೆಯ ಎಂಐ-17 ವಿ5 ಹೆಲಿಕಾಪ್ಟರ್ ಮತ್ತು ರಾಜ್ಯ ವಿಪತ್ತು ಸ್ಪಂದನಾ ಪಡೆ (ಎಸ್‌ಡಿಆರ್‌ಎಫ್) ತಂಡವನ್ನು ಕಳುಹಿಸಲಾಗಿತ್ತು. ಸಂತ್ರಸ್ತರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡಿದೆ ಎಂದು ಜಿಲ್ಲಾಧಿಕಾರಿ ಅಮೋಲ್ ಯೆಡ್ಗೆ ತಿಳಿಸಿದ್ದಾರೆ.

ಯವತ್ಮಾಳ್ ಜಿಲ್ಲೆಯ ಹಲವು ಭಾಗಗಳಲ್ಲಿ ಶುಕ್ರವಾರದಿಂದ ಸುರಿಯುತ್ತಿರುವ ಭಾರಿ ಮಳೆ, ತಗ್ಗು ಪ್ರದೇಶಗಳಲ್ಲಿ ಮನೆಗಳನ್ನು ಜಲಾವೃತಗೊಳಿಸಿದೆ. ಜನರು ಎತ್ತರದಲ್ಲಿನ ಸ್ಥಳಗಳಿಗೆ ಸ್ಥಳಾಂತರವಾಗುವಂತೆ ಮಾಡಿದೆ. ಯವತ್ಮಾಳ್ ನಗರದಲ್ಲಿ ಶುಕ್ರವಾರ ರಾತ್ರಿಯಿಂದ ಭಾರಿ ಮಳೆಯಾಗುತ್ತಿದ್ದು, ಮಧ್ಯ ರಾತ್ರಿಯಿಂದ ಬೆಳಿಗ್ಗೆವರೆಗೆ 117.5 ಮಿ.ಮೀ ಮಳೆ ಸುರಿದಿದೆ. ನಗರದ ಕೆಲವು ಭಾಗಗಳಲ್ಲಿ ಮನೆಗಳು ಮತ್ತು ರಸ್ತೆಗಳು ಜಲಾವೃತವಾಗಿವೆ ಎಂದು ಅವರು ತಿಳಿಸಿದ್ದಾರೆ.

ಪೂರ್ವದ ಇನ್ನೊಂದು ಜಿಲ್ಲೆ ಬುಲ್‌ಧಾಣಾದ ಸಂಗ್ರಾಮ್‌ಪುರ ತಾಲ್ಲೂಕಿನ ಕಸೆರ್‌ಗಾವ್ ಗ್ರಾಮದಲ್ಲಿ ಸುಮಾರು 140 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಭೂಕುಸಿತ: ಅಮರನಾಥ ಯಾತ್ರಿಕರ ಬೆಂಗಾವಲು ವಾಹನ ಕೆಲಕಾಲ ಸ್ಥಗಿತ

ಬನಿಹಾಲ್/ಜಮ್ಮು(ಪಿಟಿಐ): ಜಮ್ಮು– ಶ್ರೀನಗರ ಹೆದ್ದಾರಿಯ ಎರಡು ಸ್ಥಳಗಳಲ್ಲಿ ಭೂಕುಸಿತ ಉಂಟಾಗಿದೆ. ಹೀಗಾಗಿ ಅಮರನಾಥ ಯಾತ್ರೆಗೆ ಮೂಲ ಶಿಬಿರದಿಂದ ಹೊರಟಿರುವ ಸುಮಾರು 3 ಸಾವಿರಕ್ಕೂ ಹೆಚ್ಚಿನ ಯಾತ್ರಾರ್ಥಿಗಳ ಹೊಸ ತಂಡದ ಬೆಂಗಾವಲು ವಾಹನಗಳ ಸಂಚಾರವನ್ನು, ಶನಿವಾರ ರಾಂಬನ್‌ನಲ್ಲಿ ಕೆಲಕಾಲ ಸ್ಥಗಿತಗೊಳಿಸಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

270 ಕಿ.ಮೀ. ಹೆದ್ದಾರಿಯಲ್ಲಿ ಮೆಹರ್ ಮತ್ತು ದಲ್ವಾಸ್ ಪ್ರದೇಶಗಳಲ್ಲಿ ಮಳೆಯಿಂದಾಗಿ ಭೂಕುಸಿತ ಉಂಟಾಗಿತ್ತು. ಆದರೆ, ಕಲ್ಲುಮಣ್ಣಿನ ಅವಶೇಷಗಳನ್ನು ತೆರವುಗೊಳಿಸಿದ ನಂತರ ವಾಹನ ಸಂಚಾರ ಮತ್ತೆ ಆರಂಭವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

3,472 ಯಾತ್ರಾರ್ಥಿಗಳ 20ನೇ ತಂಡವು ಶನಿವಾರ ನಸುಕಿನಲ್ಲಿ ಜಮ್ಮುವಿನ ಭಗವತಿ ನಗರ ಮೂಲ ಶಿಬಿರದಿಂದ 132 ವಾಹನಗಳಲ್ಲಿ ಹೊರಟಿತು. ಆದರೆ, ಹೆದ್ದಾರಿಯನ್ನು ಮುಚ್ಚಿದ್ದರಿಂದ ಬೆಂಗಾವಲು ವಾಹನಗಳನ್ನು ಚಂದರ್‌ಕೋಟೆಯಲ್ಲಿ ನಿಲ್ಲಿಸಲಾಯಿತು. ಕೆಲ ಸಮಯದ ನಂತರ ಯಾತ್ರಾರ್ಥಿಗಳಿಗೆ ಯಾತ್ರೆ ಸೇರಿಕೊಳ್ಳಲು ಅವಕಾಶ ನೀಡಲಾಯಿತು. ಅವರೆಲ್ಲರೂ ಮಧ್ಯಾಹ್ನ ಬನಿಹಾಲ್ ತಲುಪಿದರು.

‘ಇವರಲ್ಲಿ, 2,515 ಯಾತ್ರಾರ್ಥಿಗಳು ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಿಂದ ಮತ್ತು 957 ಯಾತ್ರಾರ್ಥಿಗಳು ಗಂದರ್‌ಬಲ್ ಜಿಲ್ಲೆಯ ಬಾಲ್‌ಟಾಲ್ ಮಾರ್ಗದಿಂದ ಅಮರನಾಥ ಗುಹೆ ದೇಗುಲಕ್ಕೆ ಯಾತ್ರೆ ಕೈಗೊಳ್ಳಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ನಸುಕಿನಲ್ಲಿ ದೋಡಾ ಜಿಲ್ಲೆಯ ಕೋಟಾ ನುಲ್ಲಾದ ಸುತ್ತಲೂ ಮೇಘಸ್ಫೋಟ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಸ್‌ನಲ್ಲಿದ್ದ 40 ಪ್ರಯಾಣಿಕರ ರಕ್ಷಣೆ

ಬಿಜ್ನೋರ್ (ಉತ್ತರ ಪ್ರದೇಶ): 40 ಪ್ರಯಾಣಿಕರಿದ್ದ ಉತ್ತರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್, ಉತ್ತರ ಪ್ರದೇಶ-ಉತ್ತರಾಖಂಡ ಗಡಿ ಸೇತುವೆ ಮೂಲಕ ಹಾದುಹೋಗುವಾಗ ನದಿ ನೀರಿನ ಪ್ರವಾಹದಲ್ಲಿ ಶನಿವಾರ ಸಿಲುಕಿಕೊಂಡಿತು.

ಎಲ್ಲಾ ಪ್ರಯಾಣಿಕರನ್ನು ರಕ್ಷಿಸಲಾಗಿದೆ. ಯಂತ್ರಗಳ ಸಹಾಯದಿಂದ ಬಸ್ಸನ್ನು ಅಲ್ಲಿಂದ ಹೊರ ತರಲಾಗಿದೆ ಎಂದು ನಜೀಬಾಬಾದ್ ಪೊಲೀಸರು ತಿಳಿಸಿದ್ದಾರೆ.

ಭಾರಿ ಮಳೆಯಿಂದ ಕೋಟಾವಾಲಿ ನದಿ ನೀರಿನ ಮಟ್ಟ ಶನಿವಾರ ಮುಂಜಾನೆ ಏರಿತು. ಮಂದವಾಲಿ ಪ್ರದೇಶದಲ್ಲಿ ಬಸ್ ಪ್ರವಾಹದಲ್ಲಿ ಸಿಲುಕಿತು. ಸಾಕಷ್ಟು ಪ್ರಯತ್ನದ ನಂತರ, ಜೆಸಿಬಿ ಯಂತ್ರಗಳ ಸಹಾಯದಿಂದ ಪ್ರಯಾಣಿಕರನ್ನು ರಕ್ಷಿಸಲಾಗಿದೆ. ರೂಪೇದಿಹಾದಿಂದ ಹರಿದ್ವಾರಕ್ಕೆ ಬಸ್ ಪ್ರಯಾಣಿಸುತ್ತಿತ್ತು.

ಸುದ್ದಿ 2 ನಿಮಿಷ

ಲಡಾಖ್‌ನಲ್ಲಿ ಮೇಘಸ್ಫೋಟ

ಶ್ರೀನಗರ (ಪಿಟಿಐ): ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನಲ್ಲಿ ಸಂಭವಿಸಿದ ಮೇಘಸ್ಫೋಟದಿಂದ ಹಠಾತ್ ಪ್ರವಾಹ ಉಂಟಾಗಿದೆ. ಇದರಿಂದ ಮುಖ್ಯ ಮಾರುಕಟ್ಟೆ ಪ್ರದೇಶಕ್ಕೆ ಅವಶೇಷಗಳ ರಾಶಿಯೇ ನುಗ್ಗಿಬಂದಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಆದರೆ, ಯಾವುದೇ ಜೀವಹಾನಿ ಆಗಿರುವ ಬಗ್ಗೆ ವರದಿ ಬಂದಿಲ್ಲ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಮೇಘಸ್ಫೋಟವು ಶುಕ್ರವಾರ ತಡರಾತ್ರಿ ಕೇಂದ್ರಾಡಳಿತ ಪ್ರದೇಶದ ಗ್ಯಾಂಗಲ್ಸ್ ಪ್ರದೇಶಕ್ಕೆ ಅಪ್ಪಳಿಸಿದೆ. ಲೇಹ್ ಪಟ್ಟಣದ ಹಲವು ಭಾಗಗಳು ಜಲಾವೃತವಾಗಿವೆ. ಪ್ರವಾಹದ ನೀರಿನಲ್ಲಿ ಕೊಚ್ಚಿಕೊಂಡ ಬಂದ ಅವಶೇಷಗಳು ತಗ್ಗು ಪ್ರದೇಶಗಳಲ್ಲಿನ ಅನೇಕ ಕಟ್ಟಡಗಳಿಗೆ ನುಗ್ಗಿ, ಹಾನಿ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಹಠಾತ್ ಪ್ರವಾಹ ಸಂಭವಿಸಿದ ಕೂಡಲೇ ಸೇನೆಯ ಯೋಧರು ಸ್ವಯಂಪ್ರೇರಿತವಾಗಿ ತಕ್ಷಣವೇ ಆಗಮಿಸಿ ಹಾನಿ ತಗ್ಗಿಸಲು ನೆರವಾದರು. ಸೇನೆಗೆ ಧನ್ಯವಾದ ಹೇಳುವೆ’ ಎಂದು ಲಡಾಖ್ ಬೌದ್ಧ ಸಂಘದ ಅಧ್ಯಕ್ಷ ಥುಪ್‌ಸ್ತಾನ್ ಚೆವ್ವಾಂಗ್ ತಿಳಿಸಿದ್ದಾರೆ.

ಭೂಕುಸಿತ: ಮೃತರ ಸಂಖ್ಯೆ 27ಕ್ಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ಖಲಾಪುರ ತಾಲ್ಲೂಕಿನ ಇರ್ಶಾಲವಾಡಿ ಗ್ರಾಮದಲ್ಲಿ ಬುಧವಾರ ರಾತ್ರಿ ಸಂಭವಿಸಿದ ಭೂಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ 27ಕ್ಕೇರಿದೆ. ಶೋಧ ಮತ್ತು ರಕ್ಷಣಾ ತಂಡಗಳು ಅವಶೇಷಗಳಡಿ ಸಿಲುಕಿದ್ದ ಇನ್ನೂ ಐವರ ಶವಗಳನ್ನು ಶನಿವಾರ ಹೊರ ತೆಗೆದಿವೆ.

ಮೂವರು ಮಹಿಳೆಯರು ಮತ್ತು ಒಬ್ಬ ಪುರುಷನ ಮೃತದೇಹ ಪತ್ತೆಯಾಗಿದೆ. ಮತ್ತೊಂದು ಶವದ ಗುರುತು ಪತ್ತೆಯಾಗಿಲ್ಲ. ಇದರೊಂದಿಗೆ ಮೃತರ ಸಂಖ್ಯೆ 27 ತಲುಪಿದೆ. 82 ಮಂದಿ ನಾಪತ್ತೆಯಾಗಿರುವುದರಿಂದ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ತಂಡದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ಇತರೆ ಸರ್ಕಾರಿ ಸಂಸ್ಥೆಗಳು ಭೂಕುಸಿತ ಪ್ರದೇಶದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ಮೂರನೇ ದಿನವೂ ಮುಂದುವರಿಸಿವೆ. ಧಾರಾಕಾರವಾಗಿ ಸುರಿದ ಮಳೆಯೇ ಅವಘಡಕ್ಕೆ ಕಾರಣವಾಗಿದೆ. ಈ ಹಳ್ಳಿಯಲ್ಲಿ 48 ಮನೆಗಳಿದ್ದು, ಈ ಪೈಕಿ 17 ಮನೆಗಳು ನೆಲಸಮಗೊಂಡಿವೆ.

ಯಮುನಾ ನೀರಿನ ಮಟ್ಟ ಏರಿಕೆ ಸಂಭವ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಕಳೆದ ಕೆಲ ದಿನಗಳಿಂದ ಅಪಾಯ ಮಟ್ಟದಲ್ಲಿದ್ದ ಯಮುನಾ ನದಿ ನೀರಿನ ಹರಿವು ಶನಿವಾರ ಬೆಳಿಗ್ಗೆ ತುಸು ತಗ್ಗಿತ್ತು. ಆದರೆ, ಉತ್ತರಾಖಂಡದಲ್ಲಿ ಭಾರಿ ಮಳೆ ಸುರಿಯುತ್ತಿರುವ ಕಾರಣ ನದಿ ನೀರಿನ ಮಟ್ಟದಲ್ಲಿ ಮತ್ತೆ ಏರಿಕೆ ಆಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಕೇಂದ್ರ ಜಲ ಆಯೋಗದ (ಸಿಡಬ್ಲ್ಯುಸಿ) ದತ್ತಾಂಶದ ಪ್ರಕಾರ, ಶುಕ್ರವಾರ ಬೆಳಿಗ್ಗೆ 6 ಗಂಟೆ ವೇಳೆಗೆ ನದಿ ನೀರಿನ ಮಟ್ಟ 205.29 ಮೀಟರ್ ಇತ್ತು. ಶನಿವಾರ ಸಂಜೆ 4 ಗಂಟೆ ವೇಳೆಗೆ 205.16 ಮೀಟರ್‌ಗೆ ಇಳಿದಿತ್ತು. ಯಮುನಾ ನಗರದಲ್ಲಿಯ ಹಥನಿಕುಂಡ ಬ್ಯಾರೇಜ್‌ನಲ್ಲಿ ಬೆಳಿಗ್ಗೆ 9 ಗಂಟೆ ವೇಳೆ ನೀರಿನ ಹರಿವಿನ ಪ್ರಮಾಣ 1.47 ಲಕ್ಷ ಕ್ಯುಸೆಕ್ ಇತ್ತು. ಮಧ್ಯಾಹ್ನದ 2 ಗಂಟೆ ವೇಳೆಗೆ 2,51,987 ಲಕ್ಷ ಕ್ಯುಸೆಕ್ ನೀರು ಹರಿಯುತ್ತಿತ್ತು. ಈ ನೀರು 36 ಗಂಟೆಗಳಲ್ಲಿ ದೆಹಲಿ ತಲುಪಲಿದೆ. ಇದರಿಂದಾಗಿ ದೆಹಲಿಯಲ್ಲಿ ಪುನಃ ಪ್ರವಾಹ ಪರಿಸ್ಥಿತಿ ತಲೆದೂರಲಿದೆ ಎನ್ನಲಾಗಿದೆ.

ಜುಲೈ 25ರವರೆಗೆ ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ನೆಚ್ಚರಿಕೆ ನೀಡಿದೆ.

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

ಮಣಿಪುರ: ಭುಗಿಲೆದ್ದ ನಾಗಾ ಆಕ್ರೋಶ

ಇಂಫಾಲ್ (ಪಿಟಿಐ): ಮಹಿಳೆಯರ ಬೆತ್ತಲೆ ಮೆರವಣಿಗೆ ಕೃತ್ಯ ಖಂಡಿಸಿ ಮಣಿಪುರದಲ್ಲಿ ಆಕ್ರೋಶ ಭುಗಿಲೆದ್ದಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಮುಂದೆ ನಾಗಾ ಸಂಘಟನೆಗಳು ಬೇಡಿಕೆ ಮುಂದಿಟ್ಟಿವೆ.

ಈ ನಡುವೆಯೇ ಕುಕಿ ಬುಡಕಟ್ಟು ಸಮುದಾಯದವರಿಗೆ ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸಬೇಕು ಎಂದು ಕೂಗು ಮತ್ತೆ ಕೇಳಿಬಂದಿದೆ. ಈ ಸಮುದಾಯ ಹೆಚ್ಚಿರುವ ಚುರಚಂದಪುರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದ ಕುಕಿ ಸಮುದಾಯದವರು, ತ್ವರಿತವಾಗಿ ಕ್ರಮಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದರು.

ನಾಗಾ ನಾಗರಿಕ ಸೊಸೈಟಿ, ಯುನೈಟೆಡ್ ನಾಗಾ ಕೌನ್ಸಿಲ್ (ಯುಎನ್‌ಸಿ), ಅಖಿಲ ಮಣಿಪುರ ನಾಗಾ ವಿದ್ಯಾರ್ಥಿಗಳ ಒಕ್ಕೂಟ (ಎಎನ್‌ಎಸ್‌ಎಂ), ನಾಗಾ ಪೀಪಲ್ ಫ್ರಂಟ್, ಕೃತ್ಯವನ್ನು ಕಟುವಾಗಿ ಖಂಡಿಸಿ ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಿವೆ.

ಅಮಾನವೀಯ ಕೃತ್ಯ ಎಸಗಿರುವ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. ಶೀಘ್ರಗತಿ ನ್ಯಾಯಾಲಯದಲ್ಲಿ ಈ ಪ್ರಕರಣದ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು. ಆ ಮೂಲಕ ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಒದಗಿಸಬೇಕು ಎಂದು ಯುಎನ್‌ಸಿ ಆಗ್ರಹಿಸಿದೆ.

ಮಹಿಳೆಯರನ್ನು ನಗ್ನಗೊಳಿಸಿ ಮೆರವಣಿಗೆ ನಡೆಸಿರುವುದು ಖಂಡನೀಯ. ಇದು ರಾಜ್ಯ ಸರ್ಕಾರ ಹಾಗೂ ಪೊಲೀಸರ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ ಎಂದು ದೂರಿದೆ.

ರಾಜ್ಯದಾದ್ಯಂತ ಕಟ್ಟೆಚ್ಚರವಹಿಸಲಾಗಿದ್ದು, ರಕ್ಷಣಾ ಪಡೆಗಳು ಮತ್ತು ಪೊಲೀಸರು ಭದ್ರತೆಯನ್ನು ಬಿಗಿಗೊಳಿಸಿದ್ದಾರೆ.

> **ಮಣಿಪುರದ ಸದ್ಯದ ಸ್ಥಿತಿಗತಿ ಬಗ್ಗೆ ಕೇಂದ್ರ ಸರ್ಕಾರವು ಸಂಸತ್ ಅಧಿವೇಶನದಲ್ಲಿಯೇ ಪ್ರತಿಪಕ್ಷಗಳ ಪ್ರಶ್ನೆಗೆ ಉತ್ತರ ನೀಡಲು ಸಿದ್ಧವಿದೆ**
> **ಕಿರಣ್ ರಿಜಿಜು,** ಕೇಂದ್ರ ಭೂವಿಜ್ಞಾನ ಸಚಿವ

ಹಿಂಸಾಚಾರ ನಿಯಂತ್ರಣಕ್ಕೆ ಆಗ್ರಹಿಸಿ ಮಣಿಪುರದ ಚುರಚಂದಪುರ ನಗರದಲ್ಲಿ ಐಟಿಎಲ್‌ಎಫ್ ಸಂಘಟನೆಯ ನೇತೃತ್ವದಡಿ ಮಹಿಳೆಯರು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಬಂಗಾಳದಲ್ಲಿಯೂ ಹೀನ ಕೃತ್ಯ: ಟಿಎಂಸಿ–ಬಿಜೆಪಿ ವಾಗ್ಯುದ್ಧ

ಒಂದನೇ ಪುಟದಿಂದ...

ಆದರೆ, ಈ ಆರೋಪವನ್ನು ಸಚಿವೆ ಶಶಿ ಪಂಜಾ ತಳ್ಳಿಹಾಕಿದ್ದಾರೆ. ಸ್ಥಳೀಯ ಮಾರುಕಟ್ಟೆಯಲ್ಲಿ ಮಹಿಳೆಯರ ನಡುವಣ ಜಗಳಕ್ಕೆ ಸಂಬಂಧಿಸಿದ ಬೆಳವಣಿಗೆ ಇದು. ಆ ಘಟನೆಗೆ ಬಿಜೆಪಿ ರಾಜಕೀಯ ಬಣ್ಣ ನೀಡುತ್ತಿದೆ ಎಂದು ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಾಲ್ದಾ ಮಾರುಕಟ್ಟೆಗೆ ಸಂಬಂಧಿಸಿದ ಘಟನೆಯಲ್ಲಿ ಕಳ್ಳತನ ಆರೋಪದಲ್ಲಿ ಇಬ್ಬರು ಮಹಿಳೆಯರನ್ನು ಸ್ಥಳೀಯ ಮಹಿಳೆಯರು ಹಿಡಿದುಕೊಂಡಿದ್ದರು. ಜಗಳದಲ್ಲಿ ಬಟ್ಟೆ ಹರಿದಿದೆ. ಸ್ಥಳೀಯ ಪೊಲೀಸರು ಜಗಳ ನಿಲ್ಲಿಸಲು ಯತ್ನಿಸಿದ್ದರಾದರೂ ಆಗಿಲ್ಲ. ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ’ ಎಂದು ವಿವರಿಸಿದರು.

‘ಪಶ್ಚಿಮ ಬಂಗಾಳದ ಈ ಸಣ್ಣ ಪ್ರಕರಣವನ್ನು, 150ಕ್ಕೂ ಹೆಚ್ಚು ಜನರ ಸಾವಿಗೆ ಕಾರಣವಾಗಿರುವ ಹಾಗೂ ಮೂರು ತಿಂಗಳಿಂದಲೂ ನಡೆಯುತ್ತಿರುವ ಹಿಂಸೆಗೆ ಹೋಲಿಸುವುದು ಜನಸೇವೆಯಿಂದ ವಿಮುಖವಾದಂತೆ’ ಎಂದೂ ಸಚಿವೆ ಟ್ವೀಟ್ ಮಾಡಿದ್ದಾರೆ.

ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ರಾಜ್ಯ ಬಿಜೆಪಿ ಅಧ್ಯಕ್ಷ ಸುಕಾಂತ ಮಜುಂದಾರ್ ಅವರು, ‘ಇದು, ಇನ್ನೊಂದು ಘೋರ ಕೃತ್ಯ. ದೀದಿ (ಮಮತಾ ಬ್ಯಾನರ್ಜಿ) ಹಾಗೂ ವಿಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ದ ಮೌನ ಪ್ರಶ್ನಾರ್ಹವಾದುದು’ ಎಂದಿದ್ದಾರೆ.

ಈ ಕುರಿತು ಟ್ವೀಟ್ ಮಾಡಿ, ವಿಡಿಯೊ ಹಂಚಿಕೊಂಡಿದ್ದ ಬಿಜೆಪಿಯ ಅಮಿತ್ ಮಾಳವೀಯ, ‘ಪಶ್ಚಿಮ ಬಂಗಾಳದಲ್ಲಿ ಭೀಕರತೆ ಮುಂದುವರಿದಿದೆ. ಇಬ್ಬರು ಬುಡಕಟ್ಟು ಮಹಿಳೆಯರನ್ನು ಬೆತ್ತಲೆಗೊಳಿಸಿ, ನಿರ್ದಯವಾಗಿ ಥಳಿಸಲಾಗಿದೆ. ಇದಕ್ಕೆ ಬಮಂಗೋಲಾ ಪೊಲೀಸ್ ಠಾಣೆ ಪೊಲೀಸರೊಬ್ಬರು ಮೂಕಪ್ರೇಕ್ಷಕರಾಗಿದ್ದರು’ ಎಂದು ಆರೋಪಿಸಿದ್ದರು.

ಈ ಬೆಳವಣಿಗೆಗೆ ಪ್ರತಿಕ್ರಿಯಿಸಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕ ಮನೋಜ್ ಮಾಳವೀಯ ಅವರು, ‘ರಾಜ್ಯದಲ್ಲಿ ಅಂಥ ಕೃತ್ಯ ನಡೆದಿರುವುದಕ್ಕೆ ಯಾವುದೇ ಪುರಾವೆ ಇಲ್ಲ‘ ಎಂದು ಸ್ಪಷ್ಟಪಡಿಸಿದ್ದಾರೆ.

- ಕಣಿವೆ ರಾಜ್ಯದಲ್ಲಿ ಅಧ್ಯಯನಕ್ಕೆ ತೊಡಕಾಗಿದೆ. ಹಾಗಾಗಿ, ಬೇರೆ ವಿಶ್ವವಿದ್ಯಾಲಯಗಳಿಗೆ ನಮ್ಮನ್ನು ವರ್ಗಾವಣೆ ಮಾಡಬೇಕು ಎಂದು ಮಣಿಪುರ ವಿಶ್ವವಿದ್ಯಾಲಯದ 99 ವಿದ್ಯಾರ್ಥಿಗಳು ಬೇಡಿಕೆ ಮುಂದಿಟ್ಟಿದ್ದಾರೆ.
- ಮಣಿಪುರದಲ್ಲಿ ಮಹಿಳೆಯರಿಗೆ ಭದ್ರತೆ ಇಲ್ಲದಂತಾಗಿದ್ದು, ಶಾಂತಿ ಪುನರ್ ಸ್ಥಾಪನೆಗಾಗಿ ಮಧ್ಯ ಪ್ರವೇಶಿಸುವಂತೆ ಕೋರಿ ಜಾರ್ಖಂಡ್‌ನ ಮುಖ್ಯಮಂತ್ರಿ ಹೇಮಂತ್ ಸೊರೆನ್ ಅವರು, ರಾಷ್ಟ್ರಪತಿ ಅವರಿಗೆ ಪತ್ರ ಬರೆದಿದ್ದಾರೆ.

‘ರಾಜಸ್ಥಾನದ ಆತ್ಮಗೌರವಕ್ಕೆ ಧಕ್ಕೆ’

ಜೈಪುರ (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ರಾಜಸ್ಥಾನದ ಆತ್ಮಗೌರವಕ್ಕೆ ಧಕ್ಕೆ ತಂದಿದ್ದಾರೆ’ ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಶನಿವಾರ ಬೇಸರ ವ್ಯಕ್ತಪಡಿಸಿದ್ದಾರೆ.

ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ವಿವಸ್ತ್ರಗೊಳಿಸಿ ದೌರ್ಜನ್ಯ ನಡೆಸಿದ ಪ್ರಕರಣ ಕುರಿತು ಹೇಳಿಕೆ ನೀಡುವ ವೇಳೆ ಪ್ರಧಾನಿ ಮೋದಿ ಅವರು, ‘ಮಣಿಪುರದ ಘಟನೆಯಿಂದಾಗಿ ದೇಶದ 140 ಕೋಟಿ ಜನರು ತಲೆತಗ್ಗಿಸುವಂತಾಗಿದೆ. ಮಣಿಪುರ, ಛತ್ತೀಸ್‌ಗಢ ಅಥವಾ ರಾಜಸ್ಥಾನ ಯಾವುದೇ ರಾಜ್ಯವಾಗಲಿ ಮಹಿಳೆಯರ ಸುರಕ್ಷತೆಯು ಎಲ್ಲದ್ದಕ್ಕಿಂತ ಮುಖ್ಯ’ ಎಂದಿದ್ದರು.

ರಾಜಸ್ಥಾನವನ್ನು ಉಲ್ಲೇಖಿಸಿದ್ದಕ್ಕೆ ತಿರುಗೇಟು ನೀಡಿರುವ ಗೆಹಲೋತ್, ‘ದೇಶದ 140 ಕೋಟಿ ಜನರು ತಲೆತಗ್ಗಿಸಿಲ್ಲ, ಬದಲಾಗಿ ಮೋದಿ ನೇತೃತ್ವದ ಸರ್ಕಾರ ನಡೆದುಕೊಳ್ಳುತ್ತಿರುವ ರೀತಿ ಮತ್ತು ನಿರ್ಲಕ್ಷ್ಯ ಧೋರಣೆ ಕುರಿತು ವಿಷಾದ ವ್ಯಕ್ತಪಡಿಸುತ್ತಿದ್ದಾರೆ’ ಎಂದು ಹೇಳಿದರು.

ಮಣಿಪುರ ಸಂಘರ್ಷ ಕುರಿತು ಮೋದಿ ಅವರು ಕೆಲವೇ ಸೆಕೆಂಡುಗಳ ಭಾಷಣ ಮಾಡಿದರು. ಆದರೆ, ಅಲ್ಲಿಯ ಪರಿಸ್ಥಿತಿ ಕುರಿತು ಮತ್ತು ಹಿಂಸಾಚಾರವನ್ನು ತಡೆಗಟ್ಟುವ ಕುರಿತು ಅವರು ಪರಿಶೀಲನಾ ಸಭೆ ನಡೆಸಬೇಕಿತ್ತು ಎಂದಿದ್ದಾರೆ.

ಐಎಎಸ್ ಅಧಿಕಾರಿ ಬಂಧಿಸಿದ ಇ.ಡಿ

ರಾಯ್‌ಪುರ, ಛತ್ತೀಸ್‌ಗಢ (ಪಿಟಿಐ): ಕಲ್ಲಿದ್ದಲು ತೆರಿಗೆ ಹಗರಣ ಕುರಿತ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳಾ ಐಎಎಸ್ ಅಧಿಕಾರಿ ರಾನು ಸಾಹು ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ಬಂಧಿಸಿದೆ.

ರಾಜ್ಯ ಕೃಷಿ ಇಲಾಖೆ ನಿರ್ದೇಶಕಿ ಸಾಹು ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಮೂರು ದಿನಗಳ ಇ.ಡಿ ವಶಕ್ಕೆ ನೀಡಲಾಗಿದೆ. ಇವರು, ಈ ಪ್ರಕರಣದಲ್ಲಿ ಬಂಧನಕ್ಕೊಳಗಾದ ರಾಜ್ಯದ ಎರಡನೇ ಐಎಎಸ್ ಅಧಿಕಾರಿ.

ಬೆತ್ತಲೆ ಮೆರವಣಿಗೆ; ಬಿಜೆಪಿ ಪ್ರಶ್ನೆ

ಬಿಜೆಪಿಯೇತರ ಸರ್ಕಾರವಿರುವ ರಾಜ್ಯಗಳಲ್ಲಿ ನಡೆದಿಲ್ಲವೇ?

ನವದೆಹಲಿ (ಪಿಟಿಐ): ‘ರಾಜಸ್ಥಾನ, ಪಶ್ಚಿಮ ಬಂಗಾಳ, ಬಿಹಾರ ಸೇರಿದಂತೆ ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿಯೂ ಮಹಿಳೆಯರ ವಿರುದ್ಧ ಘೋರ ಅಪರಾಧ ನಡೆದಿವೆ. ಆದರೆ, ವಿಪಕ್ಷಗಳು ಮಣಿಪುರದ ಬೆಳವಣಿಗೆ ವಿಷಯದಲ್ಲಿ ರಾಜಕಾರಣ ಮಾಡುತ್ತಿವೆ’ ಎಂದು ಬಿಜೆಪಿ ಶನಿವಾರ ಆರೋಪಿಸಿದೆ.

ಮಣಿಪುರದ ಬೆತ್ತಲೆ ಮೆರವಣಿಗೆ ಪ್ರಕರಣ ಸಂಬಂಧ ಪ್ರತಿಪಕ್ಷಗಳ ಟೀಕೆಗಳ ಹಿನ್ನೆಲೆಯಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಅನುರಾಗ್ ಠಾಕೂರ್, ಬಿಜೆಪಿಯೇತರ ಪಕ್ಷಗಳ ಸರ್ಕಾರವುಳ್ಳ ರಾಜ್ಯಗಳ ಕೃತ್ಯ ಉಲ್ಲೇಖಿಸಿ, ಸೋನಿಯಾಗಾಂಧಿ ಒಳಗೊಂಡಂತೆ ಕಾಂಗ್ರೆಸ್ ಮುಖಂಡರ ವಿರುದ್ಧ ವಾಗ್ದಾಳಿ ನಡೆಸಿದರು.

‘ಬಿಜೆಪಿಯೇತರ ಪಕ್ಷಗಳ ಆಡಳಿತ ವುಳ್ಳ ರಾಜ್ಯಗಳಲ್ಲಿನ ಅಪರಾಧ ಕೃತ್ಯಗಳ ಬಗ್ಗೆ ಪ್ರತಿಪಕ್ಷಗಳು ಮೌನವಾಗಿವೆ. ರಾಜಸ್ಥಾನ ದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಮಹಿಳೆಯರ ವಿರುದ್ಧದ ಅಪರಾಧ ಸಂಬಂಧ ಲಕ್ಷಕ್ಕೂ ಅಧಿಕ ಪ್ರಕರಣ ದಾಖಲಾಗಿವೆ. ಇದರಲ್ಲಿ ಲೈಂಗಿಕ ದೌರ್ಜನ್ಯದ್ದೇ 33 ಸಾವಿರ ಪ್ರಕರಣ ಗಳಿವೆ’ ಎಂದರು.

‘ಮಹಿಳೆಯರ ಮೇಲಿನ ಅಪರಾಧ ಕೃತ್ಯಗಳ ಏರಿಕೆ ಕುರಿತು ಆತ್ಮಾವಲೋಕನ, ಚರ್ಚೆ ಅಗತ್ಯ ಎಂದು ರಾಜಸ್ಥಾನದ ಸಚಿವ ರಾಜೇಂದ್ರ ಗುಢಾ ಹೇಳಿದ್ದರು. ಸಂಪುಟದ ಸಚಿವರ ಹೇಳಿಕೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ರಾಜೀನಾಮೆ ನೀಡುವರೇ? ಮುಖ್ಯಮಂತ್ರಿ ಅವರ ತವರು ಜಿಲ್ಲೆಯಲ್ಲಿಯೇ ಮಹಿಳೆಯನ್ನು ಕೊಲೆ ಮಾಡಿ ಸುಟ್ಟುಹಾಕಲಾಗಿತ್ತು. ಅವರ ಮನೆಗೆ ಐದು ಕಿ.ಮೀ. ದೂರದಲ್ಲಿ ಅತ್ಯಾಚಾರ, ಕೊಲೆ ನಡೆದಿತ್ತು’ ಎಂದೂ ಠಾಕೂರ್ ಉಲ್ಲೇಖಿಸಿದರು.

ಮಹಿಳೆಯರ ಮೇಲಿನ ದೌರ್ಜನ್ಯ, ಅಪರಾಧ ಕೃತ್ಯಗಳು

‘ರಾಜಸ್ಥಾನ ನಂ.1 ಎಂದಿದ್ದ ಸಚಿವರ ವಜಾ’

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಸಚಿವ ರಾಜೇಂದ್ರ ಗುಢಾ ವಿಧಾನಸಭೆಯಲ್ಲಿಯೇ ಕಳವಳ ವ್ಯಕ್ತಪಡಿಸಿದ್ದಾರೆ. ಸರ್ಕಾರದ ವಿರುದ್ಧವೇ ಅಸಮಾಧಾನ ವ್ಯಕ್ತಪಡಿಸಿದ ಹಿಂದೆಯೇ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಗುಢಾ ಅವರನ್ನು ಶುಕ್ರವಾರ ರಾತ್ರಿ ಸಚಿವ ಸಂಪುಟದಿಂದ ವಜಾ ಮಾಡಿದ್ದಾರೆ.

ಈ ಬೆಳವಣಿಗೆಗೆ ಬಿಜೆಪಿ ಕಟುವಾಗಿ ಪ್ರತಿಕ್ರಿಯಿಸಿದೆ. ‘ಸತ್ಯ ಹೇಳಿದ್ದಕ್ಕಾಗಿ ಮುಖ್ಯಮಂತ್ರಿ ಅವರು ಸಚಿವರನ್ನೇ ವಜಾ ಮಾಡಿದ್ದಾರೆ. ಇದು, ಮಹಿಳೆಯರ ವಿರುದ್ಧದ ಅಪರಾಧ ಕುರಿತು ಕಾಂಗ್ರೆಸ್ ಸರ್ಕಾರ ಎಷ್ಟು ಗಂಭೀರವಾಗಿದೆ ಎಂಬುದಕ್ಕೆ ನಿದರ್ಶನ’ ಎಂದು ಟೀಕಿಸಿದೆ.

ಗುಢಾ ಸೈನಿಕ ಕಲ್ಯಾಣ, ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ‘ಸಿ.ಎಂ ಶಿಫಾರಸು ಆಧರಿಸಿ ತಕ್ಷಣದಿಂದ ಅನ್ವಯ ವಾಗುವಂತೆ ಗುಢಾ ಅವರನ್ನು ಸಂಪುಟದಿಂದ ವಜಾ ಮಾಡಲಾಗಿದೆ’ ಎಂದು ರಾಜಭವನದ ಪ್ರಕಟಣೆ ತಿಳಿಸಿದೆ.

ಶುಕ್ರವಾರ ವಿಧಾನಸಭೆಯಲ್ಲಿ ಕನಿಷ್ಠ ಆದಾಯ ಖಾತರಿ ಮಸೂದೆ ಚರ್ಚೆಯ ವೇಳೆ ಕಾಂಗ್ರೆಸ್ ಶಾಸಕರು ಮಣಿಪುರ ಹಿಂಸಾಚಾರ ಪ್ರಸ್ತಾಪಿಸಿದ್ದರು. ಆಗ ಗುಢಾ ಅವರು, ಮಹಿಳೆಯರ ವಿರುದ್ಧದ ಅಪರಾಧ ತಡೆಯುವಲ್ಲಿ ಸರ್ಕಾರದ ಸಾಧನೆ ಪ್ರಶ್ನಿಸಿದ್ದರು.

‘ರಾಜಸ್ಥಾನದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿವೆ. ಮಹಿಳೆಯರಿಗೆ ರಕ್ಷಣೆ ನೀಡಲು ನಾವು ವಿಫಲರಾಗಿದ್ದೇವೆ. ಮಣಿಪುರದ ವಿಷಯ ಪ್ರಸ್ತಾಪಿಸುವ ಬದಲು ನಾವು ಸ್ವತಃ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ’ ಎಂದು ಗುಢಾ ಪ್ರತಿಕ್ರಿಯಿಸಿದ್ದರು.

ಸಚಿವರ ಹೇಳಿಕೆಯನ್ನೇ ಆಧರಿಸಿ ಪ್ರತಿಪಕ್ಷದ ನಾಯಕ ರಾಜೇಂದ್ರ ರಾಠೋಡ್, ‘ಕಾನೂನು ಮತ್ತು ಸುವ್ಯವಸ್ಥೆ ವೈಫಲ್ಯದ ನೈತಿಕ ಹೊಣೆಯನ್ನು ಹೊತ್ತು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು’ ಎಂದು ಒತ್ತಾಯಿಸಿದ್ದರು.

ಬಳಿಕ ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಸಂಪುಟದಿಂದ ಸಚಿವರ ವಜಾಗೆ ಸಿ.ಎಂ ಶಿಫಾರಸು ಮಾಡಿದ್ದರು. ಇದಕ್ಕೆ ‘ಮಹಿಳೆಯರ ವಿರುದ್ಧದ ದೌರ್ಜನ್ಯದಲ್ಲಿ ರಾಜಸ್ಥಾನ ಮೊದಲ ಸ್ಥಾನದಲ್ಲಿದೆ. ನಾನು ಹೇಳಿದ್ದರಲ್ಲಿ ತಪ್ಪೇನಿದೆ’ ಎಂದು ಗುಢಾ ಪ್ರಶ್ನಿಸಿದ್ದರು.

ಗುಢಾ ಅವರು 2018ರ ಚುನಾವಣೆಯಲ್ಲಿ ಬಿಎಸ್‌ಪಿ ಚಿಹ್ನೆಯಡಿ ಆಯ್ಕೆಯಾಗಿದ್ದರು. ಆರು ಶಾಸಕರ ಜೊತೆಗೂಡಿ ಕಾಂಗ್ರೆಸ್‌ಗೆ 2019ರ ಸೆಪ್ಟೆಂಬರ್‌ನಲ್ಲಿ ಪಕ್ಷಾಂತರ ಮಾಡಿದ್ದರು. 2021ರ ನವೆಂಬರ್‌ನಲ್ಲಿ ಸಚಿವ ಸಂಪುಟಕ್ಕೆ ಸೇರ್ಪಡೆಯಾಗಿದ್ದರು.

‘ಸಿ.ಎಂಗೆ ಸರ್ಕಾರದ ಮೇಲೆ ನಿಯಂತ್ರಣವಿಲ್ಲ’

ಜೈಪುರ (ಪಿಟಿಐ): ‘ಮುಖ್ಯಮಂತ್ರಿಗೆ ರಾಜ್ಯದ ಮೇಲೆ ನಿಯಂತ್ರಣವೇ ಇಲ್ಲ. ಅದರ ಪರಿಣಾಮ ರಾಜಸ್ಥಾನದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಕೃತ್ಯಗಳು ಹೆಚ್ಚುತ್ತಿವೆ’ ಎಂದು ಸಂಪುಟದಿಂದ ವಜಾಗೊಂಡ ರಾಜೇಂದ್ರ ಗುಢಾ ಶನಿವಾರ ಟೀಕಿಸಿದ್ದಾರೆ.

‘ನನ್ನನ್ನು ವಜಾ ಮಾಡುವುದರಿಂದ ಏನೂ ಆಗುವುದಿಲ್ಲ. ರಾಜ್ಯದ ಹೆಣ್ಣುಮಕ್ಕಳಲ್ಲಿ ಮೊದಲು ಸುರಕ್ಷತೆಯ ಭಾವನೆ ಮೂಡಿಸಿ. ಕಾಲಿಗೆ ಬ್ಯಾಂಡೇಜ್ ಅನ್ನು ಕಟ್ಟಿಕೊಂಡಿರುವ ಮುಖ್ಯಮಂತ್ರಿ ಗೃಹ ಖಾತೆಯನ್ನು ನಿಭಾಯಿಸುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದ್ದಾರೆ.

‘ಸರ್ಕಾರಕ್ಕೆ ಯುವತಿಯರು, ಮಹಿಳೆಯರನ್ನು ರಕ್ಷಿಸುವ ಸಾಮರ್ಥ್ಯವಿಲ್ಲ. ರಾಜ್ಯ ಮುಖ್ಯಮಂತ್ರಿಯವರ ನಿಯಂತ್ರಣದಲ್ಲಿಯೂ ಇಲ್ಲ’ ಎಂದು ಗೆಹಲೋತ್ ವಿರುದ್ಧ ಹರಿಹಾಯ್ದಿದ್ದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮುಂಗಾರುಪೂರ್ವ ತಪಾಸಣೆ; ಜಲಶಕ್ತಿ ಸಚಿವಾಲಯದ ತಜ್ಞರ ತಂಡದ ಅಧ್ಯಯನದಲ್ಲಿ ದೃಢ

ಕರ್ನಾಟಕದ ಅಣೆಕಟ್ಟೆಗಳು ಸುರಕ್ಷಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 100 ವರ್ಷಕ್ಕಿಂತ ಹಳೆಯ 15 ಅಣೆಕಟ್ಟೆಗಳಿವೆ. 50 ವರ್ಷದಿಂದ 100 ವರ್ಷಗಳ ನಡುವಿನ 72 ಅಣೆಕಟ್ಟೆಗಳಿವೆ. ಇವುಗಳು ಸೇರಿದಂತೆ ರಾಜ್ಯದ ಎಲ್ಲ ಅಣೆಕಟ್ಟೆಗಳು ಸುರಕ್ಷಿತವಾಗಿವೆ ಎಂದು ಜಲಶಕ್ತಿ ಸಚಿವಾಲಯದ ತಜ್ಞರ ತಂಡದ ಅಧ್ಯಯನದಿಂದ ಗೊತ್ತಾಗಿದೆ.

ಅಣೆಕಟ್ಟೆಗಳ ವೈಫಲ್ಯ ತಡೆಗಟ್ಟಲು ದೇಶದ ಎಲ್ಲ ಅಣೆಕಟ್ಟೆಗಳ ಕಣ್ಗಾವಲು, ತಪಾಸಣೆ, ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ ಕೇಂದ್ರ ಸರ್ಕಾರವು 'ಅಣೆಕಟ್ಟೆ ಸುರಕ್ಷತಾ ಕಾಯ್ದೆ-2021' ಜಾರಿಗೆ ತಂದಿದೆ. ಅವುಗಳ ಸುರಕ್ಷತೆ ಕಾರ್ಯವಿಧಾನವನ್ನು ಖಚಿತಪಡಿಸಿಕೊಳ್ಳಲು ಮುಂಗಾರು ಪೂರ್ವದಲ್ಲಿ ಹಾಗೂ ಮುಂಗಾರು ನಂತರದಲ್ಲಿ ತಪಾಸಣೆ ನಡೆಸಲಾಗುತ್ತದೆ. ನಿಯಮಿತ ತಪಾಸಣೆಯ ಆಧಾರದಲ್ಲಿ ಅವುಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗುತ್ತದೆ. ಮೊದಲ ವರ್ಗದ ಅಣೆಕಟ್ಟೆಗಳು ಅಪಾಯಕಾರಿ. ತ್ವರಿತ ಪರಿಹಾರ ಕ್ರಮಗಳು ಅಗತ್ಯವಿರುವ ಅಣೆಕಟ್ಟೆಗಳನ್ನು ಎರಡನೇ ವರ್ಗದವು ಎಂದು ವಿಂಗಡಿಸಲಾಗಿದೆ. ಮೂರನೇ ವರ್ಗದವು ಸುರಕ್ಷಿತ.

2023–24ನೇ ಆರ್ಥಿಕ ವರ್ಷದಲ್ಲಿ ಸಚಿವಾಲಯದ ತಜ್ಞರ ತಂಡವು ಮುಂಗಾರು ಪೂರ್ವದಲ್ಲಿ (ಜುಲೈ 11ರ ವರೆಗೆ) ಅಣೆಕಟ್ಟೆಗಳ ತಪಾಸಣೆ ನಡೆಸಿದೆ. ನಾಲ್ಕು ಅಣೆಕಟ್ಟೆಗಳು ಅಪಾಯಕಾರಿ ಎಂದು ಗೊತ್ತಾಗಿದೆ. ಒಡಿಶಾದ ಎರಡು ಹಾಗೂ ಉತ್ತರ ಪ್ರದೇಶದ ಎರಡು ಈ ಪಟ್ಟಿಯಲ್ಲಿವೆ. ಎರಡನೇ ವರ್ಗದಲ್ಲಿ 169 ಜಲಾಶಯಗಳಿವೆ. ಈ ಪಟ್ಟಿಯಲ್ಲಿ, ಕರ್ನಾಟಕದ ಅಣೆಕಟ್ಟೆಗಳು ಇಲ್ಲ. ಇದರಲ್ಲಿ ಉತ್ತರ ಪ್ರದೇಶದ 16, ಒಡಿಶಾದ 29, ತೆಲಂಗಾಣದ 15, ಬಿಹಾರ ಹಾಗೂ ಹಿಮಾಚಲ ಪ್ರದೇಶದ ತಲಾ 1, ಪಂಜಾಬ್‌ನ 3, ಉತ್ತರಾಖಂಡ ಹಾಗೂ ಛತ್ತೀಸಗಢದ ತಲಾ 4, ಜಾರ್ಖಂಡ್‌ನ 12, ತಮಿಳುನಾಡಿನ 19, ಪಶ್ಚಿಮ ಬಂಗಾಳದ 5, ಮಧ್ಯಪ್ರದೇಶದ 41, ಕೇರಳದ 17 ಅಣೆಕಟ್ಟೆಗಳಿವೆ. ಅವುಗಳ ನಿರಂತರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಜಲಸಂಪನ್ಮೂಲ ಇಲಾಖೆಗಳು ಹಾಗೂ ರಾಜ್ಯ ಅಣೆಕಟ್ಟೆ ಸುರಕ್ಷತಾ ಸಂಸ್ಥೆಗಳಿಗೆ ಜಲಶಕ್ತಿ ಸಚಿವಾಲಯ ಸೂಚಿಸಿದೆ.

'ಡ್ರಿಪ್' ಯೋಜನೆಗೆ ₹612 ಕೋಟಿ

ಜಲ ಶಕ್ತಿ ಸಚಿವಾಲಯವು ವಿಶ್ವ ಬ್ಯಾಂಕ್ ಸಹಯೋಗದಲ್ಲಿ ಅಣೆಕಟ್ಟೆಗಳ ಪುನರ್ವಸತಿ ಹಾಗೂ ಸುಧಾರಣಾ ಯೋಜನೆಯನ್ನು ('ಡ್ರಿಪ್') ಮೂರು ಹಂತಗಳಲ್ಲಿ ಕೈಗೆತ್ತಿಕೊಂಡಿದೆ. ಈ ಯೋಜನೆಯಡಿ ಕರ್ನಾಟಕದ 41 ಅಣೆಕಟ್ಟೆಗಳಿಗೆ ₹612 ಕೋಟಿ ವಿನಿಯೋಗಿಸಲಾಗುತ್ತಿದೆ.

ಮೊದಲ ಹಂತದಲ್ಲಿ (2012ರಿಂದ 2021) ಏಳು ರಾಜ್ಯಗಳ 223 ಜಲಾಶಯಗಳನ್ನು ₹2,567 ಕೋಟಿ ವೆಚ್ಚದಲ್ಲಿ ಸುಧಾರಣೆ ಮಾಡಲಾಗಿದೆ. ಕೆಲವು ಅಣೆಕಟ್ಟೆಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದವು. ಅವುಗಳ ದುರಸ್ತಿ ಮಾಡಲಾಗಿದೆ.

ಬೀದರ್ ಜಿಲ್ಲೆಯ ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಜಲಾಶಯದಲ್ಲಿ ದೋಷ ಕಾಣಿಸಿಕೊಂಡಿತ್ತು. ಅದನ್ನು ಸರಿಪಡಿಸಲಾಗಿದೆ.

ಎರಡು ಹಾಗೂ ಮೂರನೇ ಹಂತದ ಯೋಜನೆಗಳಿಗೆ ಚಾಲನೆ ನೀಡಲಾಗಿದ್ದು, 2031ರಲ್ಲಿ ಪೂರ್ಣಗೊಳ್ಳಲಿವೆ. ₹10,211 ಕೋಟಿ ವೆಚ್ಚದಲ್ಲಿ 19 ರಾಜ್ಯಗಳ 736 ಜಲಾಶಯಗಳ ಪುನರ್ವಸತಿ ಹಾಗೂ ಅಭಿವೃದ್ಧಿ ಮಾಡಲಾಗುತ್ತದೆ ಎಂದು ಜಲಶಕ್ತಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಅಂಕಿ–ಅಂಶಗಳು

234 ದೇಶದಲ್ಲಿರುವ 100 ವರ್ಷಕ್ಕಿಂತ ಹಳೆಯ ಅಣೆಕಟ್ಟೆಗಳು

1,034 ದೇಶದಲ್ಲಿರುವ 50ರಿಂದ 100 ವರ್ಷ ಹಳೆಯ ಅಣೆಕಟ್ಟೆಗಳು

ಆನ್‌ಲೈನ್ ಜೂಜು: ₹58 ಕೋಟಿ ಕಳೆದುಕೊಂಡ ನಾಗ್ಪುರ ಉದ್ಯಮಿ!

ನಾಗ್ಪುರ (ಪಿಟಿಐ): ನಾಗ್ಪುರ ಮೂಲದ ಉದ್ಯಮಿಯೊಬ್ಬರು ಆನ್‌ಲೈನ್ ಜೂಜಾಟದಲ್ಲಿ ₹58 ಕೋಟಿ ಕಳೆದುಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬುಕಿ ಅನಂತ್ ಅಲಿಯಾಸ್ ಸಂತು ನವರತ್ನ ಜೈನ್ ಎಂಬುವವರ ಮನೆ ಮೇಲೆ ಶನಿವಾರ ದಾಳಿ ನಡೆಸಿರುವ ಪೊಲೀಸರು ₹14 ಕೋಟಿ ಹಣ, ನಾಲ್ಕು ಕೆ.ಜಿ ಚಿನ್ನದ ಬಿಸ್ಕತ್ತುಗಳನ್ನು ವಶಕ್ಕೆ ಪಡೆದಿದ್ದಾರೆ. ದಾಳಿಯ ಮುನ್ನವೇ ಆರೋಪಿ ಪರಾರಿಯಾಗಿದ್ದು, ದುಬೈಗೆ ಹಾರಿರುವ ಶಂಕೆ ಇದೆ.

ಆನ್‌ಲೈನ್ ಜೂಜಿನಲ್ಲಿ ಭಾರಿ ಹಣ ಗಳಿಸುವ ಬಗ್ಗೆ ಉದ್ಯಮಿಗೆ ಆರೋಪಿ ಜೈನ್ ಆಮಿಷವೊಡ್ಡಿದ್ದರು. ಆರಂಭದಲ್ಲಿ ಜೂಜಾಡಲು ನಿರಾಕರಿಸಿದ್ದ ಉದ್ಯಮಿ, ನಂತರ ಹವಾಲ ಮೂಲಕ ಜೈನ್‌ಗೆ ₹8 ಲಕ್ಷ ರವಾನಿಸಿದ್ದರು. ಹಣ ಪಡೆದ ಜೈನ್, ಉದ್ಯಮಿಯ ವಾಟ್ಸ್‌ಆ್ಯಪ್‌ಗೆ ಲಿಂಕ್‌ವೊಂದನ್ನು ಕಳುಹಿಸಿ, ಜೂಜಿನ ಖಾತೆ ತೆರೆಯುವಂತೆ ತಿಳಿಸಿದ್ದರು. ಖಾತೆ ತೆರೆದಾಗ ಅದರಲ್ಲಿ ₹8 ಲಕ್ಷ ಜಮೆಯಾಗಿದ್ದನ್ನು ಕಂಡು ಖುಷಿಯಾದ ಉದ್ಯಮಿ, ಜೂಜು ಆರಂಭಿಸಿದ್ದರು. ನಂತರ ಹಂತ ಹಂತವಾಗಿ ₹58 ಕೋಟಿ ನಷ್ಟ ಮಾಡಿಕೊಂಡಿದ್ದಾರೆ. ಇದಕ್ಕೆ ಪ್ರತಿಯಾಗಿ ಅವರು ₹5 ಕೋಟಿ ಮಾತ್ರ ಗೆದ್ದಿದ್ದರು. ಆಟದ ಬಗ್ಗೆ ಅನುಮಾನಗೊಂಡ ಉದ್ಯಮಿ, ತಮ್ಮ ಹಣ ಹಿಂದಿರುಗಿಸುವಂತೆ ಜೈನ್‌ಗೆ ತಿಳಿಸಿದ್ದರು. ಹಣ ಕೊಡಲು ಜೈನ್ ನಿರಾಕರಿಸಿದ್ದರಿಂದ ಉದ್ಯಮಿಯು ಪೊಲೀಸರಿಗೆ ದೂರು ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿಯೆಟ್ನಾಂಗೆ ಭಾರತದ ಐಎನ್ಎಸ್ ಕೃಪಾಣ್ ಉಡುಗೊರೆ

ನವದೆಹಲಿ: ಭಾರತವು ತನ್ನ ಸ್ನೇಹರಾಷ್ಟ್ರ ವಿಯೆಟ್ನಾಂಗೆ ಯುದ್ಧ ವಿಮಾನ 'ಐಎನ್ಎಸ್ ಕೃಪಾಣ್' ಅನ್ನು ಕೊಡುಗೆ ನೀಡಿದೆ. ನೌಕಾಪಡೆಯ ಚೀಫ್ ಅಡ್ಮಿರಲ್ ಆರ್.ಹರಿಕುಮಾರ್ ಅವರು ವಿಯೆಟ್ನಾಂ ಪೀಪಲ್ಸ್ ನೇವಿಗೆ ಇದನ್ನು ಹಸ್ತಾಂತರಿಸಿದರು.

ಹಿಂದೂ ಮಹಾಸಾಗರ ವಲಯದಲ್ಲಿ ತನ್ನ ಅಸ್ತಿತ್ವ ವಿಸ್ತರಿಸುತ್ತಿರುವ ಚೀನಾದ ಕಾರ್ಯತಂತ್ರ ತಡೆ ಕ್ರಮವಾಗಿ ಭಾರತವು ಇದನ್ನು ನೀಡಿದೆ. ಯುದ್ಧನೌಕೆ ಜೊತೆ ಶಸ್ತ್ರಾಸ್ತ್ರ ಕ್ಷಿಪಣಿ ಅಳವಡಿಸಿದ ನಂತರ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳಿಸಲಾಯಿತು.

ವಿಯೆಟ್ನಾಂ ಸಿಬ್ಬಂದಿಗೆ ಭಾರತೀಯ ಸಿಬ್ಬಂದಿಯು ಕೆಲ ಕಾಲ ತರಬೇತಿ ನೀಡಲಿದ್ದಾರೆ. ದೇಶಿ ತಯಾರಿಕೆಯ ಈ ಯುದ್ಧ ನೌಕೆಯು ನೌಕಾಪಡೆಯಲ್ಲಿ 32 ವರ್ಷ ಇತ್ತು. ಈಗ ಇದಕ್ಕೆ ಮಧ್ಯಮ ಮತ್ತು ಹತ್ತಿರದ ನೆಲೆ ಗುರಿಯಾಗಿಸಿ ಪ್ರಯೋಗಿಸಬಹುದಾದ ಗನ್‌ಗಳು, ಲಾಂಚರ್‌ಗಳು, ಕ್ಷಿಪಣಿಗಳನ್ನು ಅಳವಡಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಗಗನಯಾತ್ರಿಗಳನ್ನು ಸುರಕ್ಷಿತ ಇಳಿಸಲು ತಾಲೀಮು

ಬೆಂಗಳೂರು (ಪಿಟಿಐ): 'ಚಂದ್ರಯಾನ-3'ರ ಯಶಸ್ವಿ ಉಡ್ಡಯನದಿಂದ ಬೀಗುತ್ತಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ), ಮಾನವಸಹಿತ ಚೊಚ್ಚಲ ಗಗನಯಾನಕ್ಕೂ ಭರದ ಸಿದ್ಧತೆ ನಡೆಸಿದೆ.

ಗಗನಯಾನ ಮುಗಿಸಿ ಭೂಮಿಗೆ ಮರಳುವ ಗಗನಯಾತ್ರಿಗಳನ್ನು ಸುರಕ್ಷಿತವಾಗಿ ನಿಗದಿತ ಪ್ರದೇಶಕ್ಕೆ ಕರೆತರುವ ಬಗ್ಗೆ ಭಾರತೀಯ ನೌಕಾಪಡೆ ಮತ್ತು ಇಸ್ರೊ ಜಂಟಿಯಾಗಿ ಸಿಬ್ಬಂದಿಗೆ ತರಬೇತಿ ನೀಡುತ್ತಿವೆ. ಕೇರಳದ ಕೊಚ್ಚಿಯಲ್ಲಿರುವ ಐಎನ್ಎಸ್ ಗರುಡ ನೌಕಾ ನೆಲೆಯಲ್ಲಿ ಮೊದಲ ತರಬೇತಿ ನಡೆದಿತ್ತು. ಆಂಧ್ರಪ್ರದೇಶದ ವಿಶಾಖಪಟ್ಟಣ ಪೂರ್ವ ಭಾಗದ ನೌಕಾ ನೆಲೆಯಲ್ಲಿ ಶುಕ್ರವಾರದಿಂದ ದ್ವಿತೀಯ ಹಂತದ ಪರೀಕ್ಷಾ ತರಬೇತಿ ಆರಂಭವಾಗಿದೆ.

ಗಗನಯಾನಿಗಳನ್ನು ಹೊತ್ತೊಯ್ಯುವ ಕ್ರ್ಯೂ ಮಾಡ್ಯೂಲ್ ಅನ್ನು ಸಮುದ್ರದಲ್ಲಿ ಇಳಿಸಲಾಯಿತು. ಬಳಿಕ ಅದನ್ನು ಸುರಕ್ಷಿತವಾಗಿ ನಿರ್ದಿಷ್ಟ ಸ್ಥಳಕ್ಕೆ ತರುವ ತಾಲೀಮು ನಡೆಯಿತು ಎಂದು ಇಸ್ರೊ ಶನಿವಾರ ಹೇಳಿಕೊಂಡಿದೆ.

ಮನೆಯಂಗಳದಲ್ಲಿ ಶವ ಸಂಸ್ಕಾರ ಯತ್ನ

ಒಂದನೇ ಪುಟದಿಂದ...

ನಂತರ ಭೇಟಿ ನೀಡಿದ ತಹಶೀಲ್ದಾರ್ ಬಸವರೆಡ್ಡಪ್ಪ ರೋಣದ್ ಅವರಿಗೂ ಅದೇ ಮಾತನ್ನೇ ಹೇಳಿದರು. 'ನಮಗೆ ಪ್ರತ್ಯೇಕ ಸ್ಮಶಾನ ಒದಗಿಸಿ' ಎಂದು ಆಗ್ರಹಿಸಿದರು.

ಅವರಿಗೆ ಪ್ರತಿಕ್ರಿಯಿಸಿದ ತಹಶೀಲ್ದಾರ್, 'ಗ್ರಾಮಕ್ಕೆ ಈಗಾಗಲೇ 14 ಗುಂಟೆ ಸ್ಮಶಾನ ಜಾಗ ಮಂಜೂರು ಮಾಡಿ ಪಂಚಾಯಿತಿಗೆ ಹಸ್ತಾಂತರಿಸಲಾಗಿದೆ. ಈಗ ಇರುವ ಸ್ಮಶಾನದಲ್ಲಿ ಸೌಕರ್ಯಗಳ ಕೊರತೆ ಇದ್ದರೆ ಸರಿಪಡಿಸಲಾಗುವುದು. ಮತ್ತೊಂದು ಸ್ಮಶಾನಕ್ಕೆ ಜಾಗ ನೀಡಲು ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ನಂತರ, ಗ್ರಾಮಸ್ಥರೊಬ್ಬರ ಜಮೀನಿನಲ್ಲೇ ಅಂತ್ಯಸಂಸ್ಕಾರ ನಡೆಸಲು ನಿರ್ಧರಿಸಲಾಯಿತು. ಜಮೀನು ಮಾಲೀಕರ ಜೊತೆಗೆ ತಹಶೀಲ್ದಾರ್ ಚರ್ಚಿಸಿದ ಬಳಿಕ, ಅವರ ಸಮ್ಮತಿಯೊಂದಿಗೆ ಅಂತ್ಯಸಂಸ್ಕಾರ ನಡೆಯಿತು.

ಅರಕಲಗೂಡು ತಾಲ್ಲೂಕಿನ ಶಂಭುನಾಥಪುರ ಗ್ರಾಮಕ್ಕೆ ಶನಿವಾರ ಭೇಟಿ ನೀಡಿದ ತಹಶೀಲ್ದಾರ್ ಬಸವ ರೆಡ್ಡಪ್ಪ ರೋಣದ ಗ್ರಾಮಸ್ಥರ ಮನವೊಲಿಸಿದರು.

ಹಲಾಲ್ ಚಹಾ ವಿವಾದ: ರೈಲ್ವೆಯಿಂದ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಹಲಾಲ್ ಪ್ರಮಾಣೀಕೃತ' ಚಹಾ ಪೊಟ್ಟಣ (ಟೀ ಬ್ಯಾಗ್) ನೀಡಿದ್ದಾಗಿ ಆರೋಪಿಸಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಪ್ರಯಾಣಿಕರೊಬ್ಬರು ರೈಲ್ವೆ ಸಿಬ್ಬಂದಿಯನ್ನು ಪ್ರಶ್ನಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಬೆನ್ನಲ್ಲೇ, ರೈಲುಗಳಲ್ಲಿ ಒದಗಿಸುವ ಚಹಾ ಸಂಪೂರ್ಣ ಸಸ್ಯಾಹಾರಿ ಎಂದು ಭಾರತೀಯ ರೈಲ್ವೆ ಸ್ಪಷ್ಟೀಕರಣ ನೀಡಿದೆ.

'ಹಲಾಲ್ ಪ್ರಮಾಣೀಕೃತ ಚಹಾ ಪೊಟ್ಟಣ ನೀಡಿದ್ದರಿಂದ ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆಯಾಗಿದೆ' ಎಂದು ಪ್ರಯಾಣಿಕರು ಆರೋಪಿಸಿದ್ದಾರೆ.

ರೈಲ್ವೆಯಲ್ಲಿ ನೀಡುವ ಚಹಾ ಅಂತರ ರಾಷ್ಟ್ರೀಯ ಗುಣಮಟ್ಟದ್ದಾಗಿರುತ್ತದೆ. ಹೀಗಾಗಿ ದೇಶದಲ್ಲಿ ಬಳಸುವ ಮತ್ತು ವಿದೇಶಗಳಿಗೆ ರಫ್ತು ಮಾಡುವ ಉದ್ದೇಶದಿಂದ ಚಹಾ ಪೊಟ್ಟಣಗಳ ಮೇಲೆ ಭಾರತದ ಎಫ್‌ಎಸ್‌ಎಸ್‌ಎಐ ಪ್ರಮಾಣೀಕರಣದೊಂದಿಗೆ ಐಎಸ್‌ಒ, ಹಲಾಲ್ ಮುಂತಾದ ಪ್ರಮಾಣೀಕರಣವನ್ನೂ ಚಹಾ ತಯಾರಿಕಾ ಸಂಸ್ಥೆಗಳು ನಮೂದಿಸಿರುತ್ತವೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

'ಸಿ.ಎಂ ಮಾಡುವುದೂ ಗೊತ್ತು, ಇಳಿಸುವುದೂ ಗೊತ್ತು'

ಒಂದನೇ ಪುಟದಿಂದ...

'ನಮ್ಮನ್ನು ವ್ಯವಸ್ಥಿತವಾಗಿ ತುಳಿಯುತ್ತಾರೆ. ನಾನು ಮಂತ್ರಿ ಆಗು ವುದು ಬಿಡುವುದು ಬೇರೆ ಪ್ರಶ್ನೆ. ಆದರೆ, ದೇಶದ ಬೇರೆ ರಾಜ್ಯಗಳಲ್ಲಿನ ಐವರು ಮುಖ್ಯಮಂತ್ರಿ ಆಯ್ಕೆಯಲ್ಲಿ ನಾನು ಪ್ರಮುಖ ಪಾತ್ರ ವಹಿಸಿದ್ದೇನೆ. ಛತ್ತೀಸಗಢ ಮುಖ್ಯಮಂತ್ರಿ ನಮ್ಮ ಸಂಬಂಧಿಯೇನೂ ಅಲ್ಲ. ಹಾಗಿದ್ದರೂ ಹಿಂದುಳಿದ ವರ್ಗದವರೆಂದು ಮುಖ್ಯ ಮಂತ್ರಿ ಮಾಡಿದ್ದೇನೆ' ಎಂದಿದ್ದಾರೆ.

'ನಾನು ಯಾರ ಬಳಿಯೂ ಭಿಕ್ಷೆ ಬೇಡುವುದಿಲ್ಲ. ಎದೆ ಕೊಟ್ಟು ನಿಲ್ಲುತ್ತೇನೆ. ಆ ಧೈರ್ಯ ಇಲ್ಲದೇ ಇರುತ್ತಿದ್ದರೆ ಬೆಂಗಳೂರಿನಲ್ಲಿ 49 ವರ್ಷ ರಾಜಕಾರಣ ಮಾಡಲು ಆಗುತ್ತಿರಲಿಲ್ಲ' ಎಂದಿದ್ದಾರೆ.

'ಸಮುದಾಯದವರು ಅವಕಾಶ ವಂಚಿತರಾಗುತ್ತಿರುವುದು ನೋಡಿದರೆ ಯಾರದ್ದೊ ಷಡ್ಯಂತ್ರಕ್ಕೆ ಬಲಿಯಾಗುತ್ತಿದ್ದೇವೆ ಅನಿಸುತ್ತದೆ. ಸಿದ್ದರಾಮಯ್ಯ ಅವರೂ ಹಿಂದುಳಿದ ವರ್ಗಕ್ಕೆ ಸೇರಿದವರು. ಎಲ್ಲರೂ ಒಟ್ಟಿಗೆ ಇರಬೇಕು ಎಂದು 2013ರಲ್ಲಿ ನಾವು ಬೆಂಬಲ ಕೊಟ್ಟಿದ್ದೆವು. ಆದರೆ, ಕಾರ್ಕಳದಲ್ಲಿ ಕೋಟಿ ಚೆನ್ನಯ ಥೀಮ್ ಪಾರ್ಕ್‌ಗೆ ₹5 ಕೋಟಿ ಕೊಡಿ ಎಂದು ಕೇಳಿದಾಗ 'ಕೊಡುತ್ತೇನೆ' ಅಂದವರು ಕೊಟ್ಟಿಲ್ಲ. ನನಗೆ ಅವರು (ಸಿದ್ದರಾಮಯ್ಯ) ರಾಜಕೀಯವಾಗಿ ಏನೂ ಸಹಾಯ ಮಾಡಲು ಆಗುವುದಿಲ್ಲ. ನಾನೇ ಅವರಿಗೆ ಸಹಾಯ ಮಾಡುತ್ತೇನೆ' ಎಂದಿದ್ದಾರೆ.

'ನಾನೂ ಚುನಾವಣಾ ಸಮಿತಿಯಲ್ಲಿದ್ದೆ. ಇಬ್ಬರು ಬಿಲ್ಲವರು, ತಲಾ ಒಬ್ಬರು ಈಡಿಗ ಮತ್ತು ದೀವರು ಟಿಕೆಟ್ ವಂಚಿತರಾದರು. ನಮಗೆ ಸಿಗಬೇಕಿದ್ದ ಮಂಗಳೂರು ಉತ್ತರ, ದಕ್ಷಿಣ ಮತ್ತು ಕುಮಟಾ ಕ್ಷೇತ್ರದ ಟಿಕೆಟ್ ಅಲ್ಪಸಂಖ್ಯಾತರಿಗೆ ಕೊಟ್ಟಿದ್ದಾರೆ. ಗಂಗಾವತಿಯೂ ಸಿಗಲಿಲ್ಲ. ಅಲ್ಪಸಂಖ್ಯಾತರನ್ನು ಮುಂದಿಟ್ಟು ನಮ್ಮನ್ನು ಟಿಕೆಟ್ ವಂಚಿತರನ್ನಾಗಿ ಮಾಡುತ್ತಾರೆ. ಲಿಂಗಾಯತರು, ಒಕ್ಕಲಿಗರು, ಬ್ರಾಹ್ಮಣರು, ಕುರುಬರು ಮುಖ್ಯಮಂತ್ರಿಸ್ಥಾನಕ್ಕೆಹೋರಾಟಮಾಡುತ್ತಾರೆ.ಅವರುಅಧಿಕಾರಕ್ಕೆಬರಬೇಕಾದರೆ ಅವರ ಸ್ಥಾನಗಳನ್ನೇ ಅಲ್ಪಸಂಖ್ಯಾತರಿಗೆ ಬಿಟ್ಟುಕೊಡಲಿ, ನಮ್ಮ ಸ್ಥಾನಗಳ ಮೇಲೆ ಏಕೆ ಕಣ್ಣು' ಎಂದಿದ್ದಾರೆ.

ಕೆನರಾ ಬ್ಯಾಂಕ್ Canara Bank Together We Can
ಸಿಂಡಿಕೇಟ್ Syndicate
ಭವನ ಮತ್ತು ಆಸ್ತಿ ವಿಭಾಗ, ವೃತ್ತ ಕಚೇರಿ, ಹುಬ್ಬಳ್ಳಿ
2ನೇ ಮಹಡಿ, ಸೆಂಟ್ರಮ್ ಬಿಲ್ಡಿಂಗ್, ಏರ್‌ಪೋರ್ಟ್ ರಸ್ತೆ, ಹುಬ್ಬಳ್ಳಿ – 580030.
ಫೋ: 0836-2239424/433/434

ಬಾಗಲಕೋಟೆ ಸೆಕ್ಟರ್ 25 ಪ್ಲಾಟ್ ನಂ.33 ಮತ್ತು 34 ರಲ್ಲಿ ಬ್ಯಾಂಕ್ ಮಾಲೀಕತ್ವದ ಕಟ್ಟಡ 1ನೇ ಮಹಡಿ ನಿರ್ಮಾಣಕ್ಕೆ ಟೆಂಡರ್

ಬಾಗಲಕೋಟೆ ಸೆಕ್ಟರ್ 25 ಪ್ಲಾಟ್ ನಂ.33 ಮತ್ತು 34 ರಲ್ಲಿ ಬ್ಯಾಂಕ್ ಮಾಲೀಕತ್ವದ ಕಟ್ಟಡ 1ನೇ ಮಹಡಿ ನಿರ್ಮಾಣಕ್ಕೆ ಅರ್ಹ ಸಿವಿಲ್ ಕಾಮಗಾರಿ ಗುತ್ತಿಗೆದಾರರಿಂದ ಅರ್ಜಿಗಳನ್ನು ಎರಡು ಬಿಡ್ ವ್ಯವಸ್ಥೆಯ ಅಡಿಯಲ್ಲಿ ಆಹ್ವಾನಿಸಲಾಗಿದೆ.
ಹೆಚ್ಚಿನ ವಿವರ ಮತ್ತು ಟೆಂಡರ ಫಾರ್ಮ್‌ಗಾಗಿ ನಮ್ಮ ವೆಬ್ ಸೈಟ್ www.canarabank.com, https://eprocure.gov.in ಅಥವಾ ಮೇಲ್ಕಾಣಿಸಿದ ವಿಳಾಸದಲ್ಲಿರುವ ನಮ್ಮ ಕಚೇರಿಯನ್ನು ಸಂಪರ್ಕಿಸಬಹುದು.
ಮುಚ್ಚಿದ ಲಕೋಟೆಯಲ್ಲಿ ಟೆಂಡರ ಸಲ್ಲಿಸಲು 14-08-2023 ಮಧ್ಯಾಹ್ನ 3:00ರ ವರೆಗೆ ಕೊನೆಯ ದಿನವಾಗಿದೆ. ಮುಂದಿನ ಯಾವುದೇ ಮಾಹಿತಿ, ತಿದ್ದುಪಡಿ ಏನೇ ಇದ್ದರೂ ಬ್ಯಾಂಕ್ ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಅಪೂರ್ಣ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವುದಿಲ್ಲ.
ಸ್ಥಳ: ಹುಬ್ಬಳ್ಳಿ
ದಿನಾಂಕ : 21-7-2023
ಸಹಿ/–
ವಿಭಾಗೀಯ ಪ್ರಬಂಧಕರು

ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ
JNCASR
ಜಕ್ಕೂರು ಅಂಚೆ, ಬೆಂಗಳೂರು – 560064, ಕರ್ನಾಟಕ, ಭಾರತ
ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಧೀನದ ಸ್ವಾಯುತ್ತ ಸಂಸ್ಥೆ ಹಾಗೂ ಪರಿಗಣಿತವಾಗಿರುವ ವಿಶ್ವವಿದ್ಯಾನಿಲಯ
ಜಾಹೀರಾತು ಸಂ. ಜೆಎನ್‌ಸಿ/ಎಂ/ನಂ.04/2023 ದಿನಾಂಕ: 21.07.2023

ಅಧಿಸೂಚನೆ

ಜೆಎನ್‌ಸಿಎಎಸ್‌ಆರ್ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಧೀನದ ಸ್ವಾಯುತ್ತ ಸಂಸ್ಥೆ ಆಗಿದ್ದು, ಸದರಿ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದಲ್ಲಿ **ಅತಿಥಿ ಬೋಧಕರ** (Guest Instructors) ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಸ್ಥೆಯ ಕೆಳಗೆ ತಿಳಿಸಿದ ವೆಬ್‌ಸೈಟ್ ಪರಿಶೀಲಿಸಬಹುದು:
https://www.jncasr.ac.in/openings/guest-instructor
ಸಹಿ/–
ಆಡಳಿತಾಧಿಕಾರಿ, ಜೆಎನ್‌ಸಿಎಎಸ್‌ಆರ್

ಅವಿತಿರುವ ಶಂಕಿತರಿಗೆ ಜಂಟಿ ಶೋಧ

ಒಂದನೇ ಪುಟದಿಂದ...

ಹೀಗಾಗಿ, ನಾಸೀರ್ ಸಂಪರ್ಕದಲ್ಲಿದ್ದ ಎಲ್ಲರನ್ನೂ ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರ್.ಟಿ.ನಗರದಲ್ಲಿ 2017ರಲ್ಲಿ ನಡೆದಿದ್ದ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಜುನೇದ್ ಅಹಮ್ಮದ್ ಹಾಗೂ ಇತರರು, ನಾಸೀರ್ ಜೊತೆ ಒಡನಾಟ ಬೆಳೆಸಿಕೊಂಡಿದ್ದರು. ಜುನೇದ್ ಹಾಗೂ ಇತರರು, ಯುವಕರಾಗಿದ್ದರಿಂದ ಅವರನ್ನೇ ಬಳಸಿಕೊಂಡು ಬಾಂಬ್ ಸ್ಫೋಟಿಸಲು ಮುಂದಾಗಿದ್ದ. ನಾಸೀರ್ ಮಾತು ಕೇಳಿ ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ ಸೈಯದ್ ಸುಹೇಲ್ ಖಾನ್ (24), ಜಾಹೀದ್ ತಬ್ರೇಜ್ (25), ಸೈಯದ್ ಮುದಾಸೀರ್ ಪಾಷಾ (28), ಮಹಮ್ಮದ್ ಫೈಜಲ್ ರಬ್ಬಾನಿ (30) ಹಾಗೂ ಮೊಹಮ್ಮದ್ ಉಮರ್‌ನನ್ನು (29) ಈಗಾಗಲೇ ಬಂಧಿಸಲಾಗಿದೆ. ಜುನೇದ್ ವಿದೇಶದಲ್ಲಿದ್ದು, ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ' ಎಂದು ತಿಳಿಸಿವೆ.

'ಜುನೇದ್ ಹಾಗೂ ಐವರಲ್ಲದೇ ಮತ್ತಷ್ಟು ಮಂದಿ ನಾಸೀರ್ ಜೊತೆ ಸಂಪರ್ಕದಲ್ಲಿದ್ದಾರೆ. ಅವರೆಲ್ಲರೂ ಸ್ಥಳೀಯರೆಂಬ ಮಾಹಿತಿ ಇದೆ. ಮನೆ, ಸಂಬಂಧಿಕರ ಮನೆ ಹಾಗೂ ಸ್ನೇಹಿತರ ಮನೆಗಳಲ್ಲಿ ಶೋಧ ನಡೆಸಲಾಗುತ್ತಿದೆ. ಕೆಲವರು ನಾಪತ್ತೆಯಾಗಿದ್ದಾರೆ' ಎಂದು ಹೇಳಿವೆ.

ಹಂಚಿಕೆ ಆಗಿರುವ ಸ್ಫೋಟಕ: 'ಭಯೋತ್ಪಾದನಾ ಕೃತ್ಯಗಳನ್ನು ತಡೆಯಲು ಕೇಂದ್ರ ಹಾಗೂ ರಾಜ್ಯಗಳ ತನಿಖಾ ಸಂಸ್ಥೆಗಳು ಚುರುಕಿನಿಂದ ಕೆಲಸ ಮಾಡುತ್ತಿವೆ. ಸಣ್ಣದೊಂದು ಸುಳಿವು ಸಿಕ್ಕರೂ ಆರೋಪಿಗಳನ್ನು ಬಂಧಿಸುತ್ತಿವೆ. ಈ ಸಂಗತಿ ತಿಳಿದಿದ್ದ ನಾಸೀರ್, ಯಾರಿಗೂ ಸುಳಿವು ಸಿಗಬಾರದೆಂದು ಸ್ಫೋಟಕಗಳನ್ನು ಬೇರೆ ಬೇರೆ ಕಡೆ ಹಂಚಿಕೆ ಮಾಡಿರುವ ಮಾಹಿತಿ ತನಿಖೆಯಿಂದ ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

'ಯಾರ ಬಳಿ ಯಾವ ಸ್ಫೋಟಕ ಇರಬೇಕು? ಅದನ್ನು ಎಲ್ಲಿಂದ ತರಬೇಕು? ಯಾರಿಗೂ ಕೊಡಬೇಕು? ಅದಕ್ಕೆ ಹಣ ನೀಡುವವರು ಯಾರು? ಎಂಬಿತ್ಯಾದಿ ಮಾಹಿತಿ ನಾಸೀರ್‌ಗೆ ಗೊತ್ತಿತ್ತು. ಆತನೇ, ಸ್ಫೋಟಕಗಳನ್ನು ತರಿಸಿ ಶಂಕಿತರ ಬಳಿ ಇರಿಸಿದ್ದ. ರಾಜ್ಯದಲ್ಲಿ ಇದ್ದಾರೆ ಎನ್ನಲಾದ ಮತ್ತಷ್ಟು ಶಂಕಿತರ ಬಳಿ ಸ್ಫೋಟಕಗಳು ಇರುವ ಮಾಹಿತಿಯೂ ಇದೆ' ಎಂದು ಹೇಳಿವೆ.

ನಾಸೀರ್ ಕಸ್ಟಡಿಗೆ ಪ್ರಕ್ರಿಯೆ: 'ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಟಿ. ನಾಸೀರ್, ಪ್ರಮುಖ ಆರೋಪಿ. ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿರುವ ಈತನನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲು ಪ್ರಕ್ರಿಯೆ ಆರಂಭಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಹಣ ನೀಡುತ್ತಿದ್ದವರ ಮಾಹಿತಿ ಸಂಗ್ರಹ'

'ಬಂಧಿತ ಶಂಕಿತರಿಗೆ ಕೆಲವರು ಹಣ ನೀಡುತ್ತಿದ್ದರು. ಅವರು ಯಾರು ಎಂಬ ಬಗ್ಗೆ ವಿವರ ಸಂಗ್ರಹಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಗದು ರೂಪದಲ್ಲಿ ಶಂಕಿತರಿಗೆ ಹಣ ನೀಡಲಾಗಿದೆ. ಕೆಲ ಬಾರಿ, ಆನ್‌ಲೈನ್ ಮೂಲಕವೂ ಹಣ ವರ್ಗಾವಣೆ ಆಗಿರುವ ಅನುಮಾನವಿದೆ. ನಾಸೀರ್ ಹಾಗೂ ಜುನೇದ್, ಯಾರಿಗೆ ಎಷ್ಟು ಹಣ ಎಂಬುದನ್ನು ಹೇಳುತ್ತಿದ್ದರು. ಅದರನ್ವಯ ವಿದೇಶದಲ್ಲಿರುವ ಕೆಲವರು, ಹವಾಲಾ ಹಾಗೂ ಇತರೆ ಮಾರ್ಗದಲ್ಲಿ ಹಣ ಕಳುಹಿಸುತ್ತಿದ್ದರೆಂಬ ಶಂಕೆ ಇದೆ' ಎಂದು ತಿಳಿಸಿವೆ.

ಛತ್ತೀಸಗಢ: ವಿಶ್ವಾಸಮತ ಗೆದ್ದ ಕಾಂಗ್ರೆಸ್, ಬಿಜೆಪಿಗೆ ಸೋಲು

ರಾಯ್‌ಪುರ (ಪಿಟಿಐ): ಛತ್ತೀಸಗಢದಲ್ಲಿ ಶನಿವಾರ ಮುಖ್ಯಮಂತ್ರಿ ಭೂಪೇಶ್ ಬಘೇಲ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಅವಿಶ್ವಾಸ ನಿರ್ಣಯ ಮಂಡಿಸಿದ್ದು, ಕಾಂಗ್ರೆಸ್ ವಿಶ್ವಾಸಮತ ಗೆದ್ದಿದೆ.

ರಾಜ್ಯ ವಿಧಾನಸಭೆಯ ಮುಂಗಾರು ಅಧಿವೇಶನದ ಕೊನೆಯ ದಿನವಾದ ಶನಿವಾರ 13 ಗಂಟೆಗಳ ಚರ್ಚೆಯ ಬಳಿಕ ಧ್ವನಿ ಮತದ ಮೂಲಕ ಬಿಜೆಪಿ ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಯಿತು.

ಶುಕ್ರವಾರ ಮಧ್ಯಾಹ್ನದ ನಂತರ ಆರಂಭವಾದ ಚರ್ಚೆಯಲ್ಲಿ ಬಿಜೆಪಿಯು ಬಾಘೆಲ್ ಸರ್ಕಾರದ ವಿರುದ್ಧ 109 ಅಂಶಗಳ ಆರೋಪಪಟ್ಟಿಯನ್ನು ಪ್ರಸ್ತುತಪಡಿಸಿತು. ಕಾಂಗ್ರೆಸ್ ನೇತೃತ್ವದ ಸರ್ಕಾರವು ಭ್ರಷ್ಟಾಚಾರ ನಡೆಸಿದ್ದು, ಚುನಾವಣೆ ವೇಳೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂದೂ ಬಿಜೆಪಿ ಆರೋಪಿಸಿತು.

ಛತ್ತೀಸಗಢ ವಿಧಾನಸಭೆಯ ಒಟ್ಟು 90 ಸದಸ್ಯರಲ್ಲಿ ಕಾಂಗ್ರೆಸ್‌ನ 71 ಹಾಗೂ ಬಿಜೆಪಿಯ 13 ಸದಸ್ಯರಿದ್ದಾರೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ-ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.
No.PCB/07/INFRA/EPH/22/2130 Date : 21.07.2023

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಇವರು ಭಾರತ್ ಮಾಲಾ ಪರಿಯೋಜನಾ ಅಡಿಯಲ್ಲಿ ಭಾರತದಲ್ಲಿ ಸರಕು ಸಾಗಣೆಯ ದಕ್ಷತೆಯನ್ನು ಸುಧಾರಿಸಲು ಆರ್ಥಿಕ ಕಾರಿಡಾರ್‌ಗಳು, ಇಂಟರ್ ಕಾರಿಡಾರ್‌ಗಳು ಮತ್ತು ಫೀಡರ್ ಮಾರ್ಗಗಳ ಸಂಪರ್ಕ ಜೋಡಣೆಯನ್ನು ಚತುಷ್ಪಥ ಪ್ರವೇಶ–ನಿಯಂತ್ರಿತ ಸಂರಚನೆಗಾಗಿ ಹಾಸನದಿಂದ ಹಿರಿಯೂರು ಇಸಿ–20 ಕಿಮೀ 00.000 ಹಾಸನದಿಂದ ಕಿಮೀ 114.091 ವರೆಗೆ ಸುಸಜ್ಜಿತ ಭುಜದ ನಾಲ್ಕು ಪಥದ ನಿರ್ಮಾಣ ಕರ್ನಾಟಕ ರಾಜ್ಯದಲ್ಲಿ ಭಾರತ್ ಮಾಲಾ ಪರಿಯೋಜನಾ ಅಡಿಯಲ್ಲಿ ಹುಲಗುಲಕುಂಟ ಗ್ರಾಮ, ರಾಷ್ಟ್ರೀಯ ಹೆದ್ದಾರಿ–234, ರಾಷ್ಟ್ರೀಯ ಹೆದ್ದಾರಿ–48 ಮತ್ತು ರಾಷ್ಟ್ರೀಯ ಹೆದ್ದಾರಿ–206ರ ನಡುವಿನ ಸಂಪರ್ಕವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಈ ಯೋಜನೆಯು ರಾಜ್ಯ ಹಾಸನ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹಾದುಹೋಗುತ್ತದೆ (ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ 36.120 ಕಿ.ಮೀ.ಉದ್ದ – ತಿಪಟೂರು ತಾಲ್ಲೂಕಿನ ಮಲ್ಲಿದೇವಿಹಳ್ಳಿ 50.040 ಕಿ.ಮೀ ಚೈನ್ ಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆಂಕೆರೆ 86.160 ಕಿ.ಮೀ ಚೈನ್ ವರೆಗೆ). ಸದರಿ ಯೋಜನೆಗೆ ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006 ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಇದರನ್ವಯ ಸದರಿ ಪ್ರವರ್ತಕರು ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಾಗಿರುತ್ತದೆ. ಅದರಂತೆಕೇಂದ್ರಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿ ಇವರಿಂದ ಉಲ್ಲೇಖದ ನಿಯಮಗಳು (Terms of Reference, TOR) ಪತ್ರವನ್ನು No. F.No.10-34/2021-IA.III ದಿನಾಂಕ 22.09.2021 ರಂದು ಪಡೆದಿರುತ್ತಾರೆ ಮತ್ತು ಪ್ರವರ್ತಕರ ಪತ್ರ ಸಂಖ್ಯೆ.NHAI/PIU-HSN/29001/14/1089 ದಿನಾಂಕ 16.12.2022, ಕೋರಿಕೆಯ ಪ್ರಕಾರ ಹಾಗೂ ಪ್ರಾದೇಶಿಕ ಕಛೇರಿ–ತುಮಕೂರುರವರ ದಿನಾಂಕ:11–07–2023 ರ ಪತ್ರದ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ತುಮಕೂರು ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 24.08.2023 ರಂದು ಬೆಳಗ್ಗೆ 10.30 ಗಂಟೆಗೆ ನಿಗಧಿಪಡಿಸಿರುತ್ತಾರೆ. ಸದರಿ ವಿವರಗಳು ಈ ಕೆಳಕಂಡಂತಿವೆ.

1 ಸಂಸ್ಥೆಯಹೆಸರು ಮತ್ತು ವಿಳಾಸ : ಶ್ರೀ. ಡಿ.ಕೆ. ಹನ್ಸಾರಿಯಾ, GM (Tech.) and Project Director, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, 44/1, ಎ1. 1ನೇ ಮುಖ್ಯ ರಸ್ತೆ, ಕುವೆಂಪು ರಸ್ತೆ, ಇಂದಿರಾನಗರ, ಸತ್ಯಮಂಗಲ ಲೇಔಟ್, ಹಾಸನ–573 201.

2 ಉದ್ದೇಶಿತ ಯೋಜನೆಯ ಸ್ಥಳ: ಭಾರತದಲ್ಲಿ ಸರಕು ಸಾಗಣೆಯ ದಕ್ಷತೆಯನ್ನು ಸುಧಾರಿಸಲು ಆರ್ಥಿಕ ಕಾರಿಡಾರ್‌ಗಳು, ಇಂಟರ್ ಕಾರಿಡಾರ್‌ಗಳು ಮತ್ತು ಫೀಡರ್ ಮಾರ್ಗಗಳ ಸಂಪರ್ಕ ಜೋಡಣೆಯನ್ನು ಚತುಷ್ಪಥ ಪ್ರವೇಶ–ನಿಯಂತ್ರಿತ ಸಂರಚನೆಗಾಗಿ ಹಾಸನದಿಂದ ಹಿರಿಯೂರು ಇಸಿ–20 ಕಿಮೀ 00.000 ಹಾಸನದಿಂದ ಕಿಮೀ 114.091 ವರೆಗೆ (ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ 36.120 ಕಿ.ಮೀ. ಉದ್ದ – ತಿಪಟೂರುತಾಲ್ಲೂಕಿನ ಮಲ್ಲಿದೇವಿಹಳ್ಳಿ 50.040 ಕಿ.ಮೀ ಚೈನ್ ಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಕೆಂಕೆರೆ 86.160 ಕಿ.ಮೀ ಚೈನ್ ವರೆಗೆ) ಸುಸಜ್ಜಿತ ಡಾಂಭರೀಕೃತ ನಾಲ್ಕು ಪಥದ ನಿರ್ಮಾಣ ಕರ್ನಾಟಕ ರಾಜ್ಯದಲ್ಲಿ ಭಾರತ್‌ಮಾಲಾ ಪರಿಯೋಜನಾ ಅಡಿಯಲ್ಲಿ ಹುಲಗುಲಕುಂಟೆ ಗ್ರಾಮ, ರಾಷ್ಟ್ರೀಯ ಹೆದ್ದಾರಿ–234, ರಾಷ್ಟ್ರೀಯ ಹೆದ್ದಾರಿ–48 ಮತ್ತು ರಾಷ್ಟ್ರೀಯ ಹೆದ್ದಾರಿ–206ರ ನಡುವಿನ ಸಂಪರ್ಕವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ.

3 ಯೋಜನೆಯ ಕಾರ್ಯಚಟುವಟಿಕೆ: ಪ್ರಸ್ತಾವಿತಜೋಡಣೆಯನ್ನು ನಾಲ್ಕು ಪಥಕ್ಕಾಗಿ ವಿನ್ಯಾಸಗೊಳಿಸಲಾಗಿದೆ.

4 ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: 24ನೇ ಆಗಸ್ಟ್2023 ರಂದು ಗುರುವಾರ ಬೆಳಿಗ್ಗೆ 10.30 ಘಂಟೆಗೆ ಯೋಜನಾ ಪ್ರದೇಶದ ಹತ್ತಿರವಿರುವ ವಾಲ್ಮೀಕಿ ಕಲ್ಯಾಣ ಮಂಟಪ, ಹಂದನಕೆರೆ, ಹಂದನಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರುಜಿಲ್ಲೆ.

5. ಯೋಜನೆಯ ವೆಚ್ಚ: ರೂ. 4801 ಕೋಟಿಗಳು.

6 ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಶೆಗೆಇಡುವ ಸ್ಥಳ. (ಅ)ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್ ತುಮಕೂರು. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು (ಈ) ತಹಶೀಲ್ದಾರರ ಕಛೇರಿ – ತಾಲ್ಲೂಕು ಕಛೇರಿ, ಚಿಕ್ಕನಾಯಕನಹಳ್ಳಿ ಮತ್ತು ತಾಲ್ಲೂಕು ಕಛೇರಿ, ತಿಪಟೂರು (ಉ) ತಾಲ್ಲೂಕು ಪಂಚಾಯತ್‌ಕಛೇರಿ – ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು (ಊ) ಗ್ರಾಮ ಪಂಚಾಯಿತಿ ಕಾರ್ಯಾಲಯಗಳು–ಬಲುವನೆರಳು, ಮಲ್ಲಿಗೆರೆ, ಚೌಲಕಟ್ಟೆ ಮತ್ತುಕೆಂಕೆರೆ. (ಋ) ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ–ತುಮಕೂರು, ನಿವೇಶನ ಸಂಖ್ಯೆ : 97, ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ಶಿರಾ ರಸ್ತೆ, ಲಿಂಗಾಪುರ, ತುಮಕೂರು–572 106 (ಎ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತುಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. (ಐ) ಸಹಾಯಕೇಂದ್ರ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ (ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ : http://kspcb.karnataka.gov.in ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

" ಏಕ ಬಳಕೆ ಪ್ಲಾಸ್ಟಿಕ್ ಉಪಯೋಗಿಸುವುದನ್ನು ನಿಲ್ಲಿಸಿ"

ಪ್ರಜಾವಾಣಿ

ಭಾನುವಾರದ ಪುರವಣಿ

ಭಾನುವಾರ, 23 ಜುಲೈ 2023

‘ನಿತ್ಯ ಸಚಿವ’... ವರ್ಣರಂಜಿತ ವ್ಯಕ್ತಿತ್ವಕ್ಕೆ ರಂಗರೂಪ 9

‘ಸುಖವಿಲ್ಲದ ಧಾವತಿಯನ್ನು ತಿರಸ್ಕರಿಸಬೇಕು’ 10

ನದೀಪಾತ್ರದ ಚಾರಣ... ಹೊಸ ನೋಟದ ಚರಣ 11

ಜಾತಿ ನೆತ್ತರಿನ ನಂಜೂ... ಮರ್ಯಾದೆಗೇಡು ಹತ್ಯೆಯೂ

ಮರ್ಯಾದೆಗೇಡು ಹತ್ಯೆ ಪ್ರಕರಣಗಳಲ್ಲಿ ಭಾರತವು ದಾಂಗುಡಿ ಇಡುತ್ತಿರುವುದು ತಲೆ ತಗ್ಗಿಸುವ ಸಂಗತಿಯಾಗಿದೆ. ಹೆತ್ತವರೇ ಕೊಲ್ಲುವ ಈ ಮನಃಸ್ಥಿತಿಯ ಹಿಂದಿನ ಸಾಮಾಜಿಕ ಕಾರಣಗಳ ಸಿಕ್ಕು ಕಾಣಿಸುವ ಪ್ರಯತ್ನ ಮಾಡುತ್ತಿದೆ ಈ ಲೇಖನ.

ಮಂಜುಶ್ರೀ ಎಂ. ಕಡಕೋಳ

ಮಗಳೆಂದರೆ ಆ ತಂದೆಗೆ ಪ್ರಾಣ. ಮಗಳಿಗೂ ಅಷ್ಟೇ, ಅಪ್ಪ ಅಂದರೆ ಆಕಾಶದಷ್ಟು ಪ್ರೀತಿ. ಅಪ್ಪ ಹಾಕಿದ್ದ ಗೆರೆ ಎಂದಿಗೂ ದಾಟದ ಅವಳು, ಎದುರು ಮನೆಯಾತನ ಪ್ರೀತಿಯ ಸೆಳೆತಕ್ಕೆ ಸಿಲುಕಿದ್ದಳು. ಹೇಗೋ ವಿಷಯ ಅವಳ ಅಪ್ಪನ ಕಿವಿಗೆ ಮುಟ್ಟಿದ್ದೇ ತಡ ಅದುವರೆಗೆ ಪ್ರೀತಿಯ ಸಾಹುಕಾರನಾಗಿದ್ದ ಆತನೇ ಮಗಳ ಪಾಲಿಗೆ ಖಳನಾಗಿಬಿಟ್ಟಿದ್ದ. ಪ್ರೀತಿಸಿದವನನ್ನು ಬಿಡಲೊಪ್ಪದ ಮಗಳ ಹಟಕ್ಕೆ ಮಣಿಯದ ತಂದೆ ಕುಟುಂಬದ ಮರ್ಯಾದೆಯ ಹೆಸರಿನಲ್ಲಿ ಅದೊಂದು ದಿನ ಮನೆಯಲ್ಲಿ ಯಾರೂ ಇಲ್ಲದ ವೇಳೆ ಮಗಳ ಉಸಿರನ್ನು ಸದ್ದಿಲ್ಲದೇ ನಿಲ್ಲಿಸಿಬಿಟ್ಟಿದ್ದ! ಇತ್ತ ವಿಷಯ ತಿಳಿದ ಅವಳ ಗೆಳೆಯ ರೈಲಿಗೆ ಹಾರಿ ಪ್ರಾಣ ಬಿಟ್ಟಿದ್ದ.

– ಇದು ಯಾವುದೋ ಸಿನಿಮಾದ ದೃಶ್ಯವಾಗಲಿ, ಕಥೆ ಅಥವಾ ಕಾದಂಬರಿಯಾಗಲಿ ಅಲ್ಲ. ರಾಜ್ಯದ ಕೋಲಾರ ಜಿಲ್ಲೆಯಲ್ಲಿ ಈಚೆಗಷ್ಟೇ ನಡೆದ ಮರ್ಯಾದೆಗೇಡು ಹತ್ಯೆಯ ಘಟನೆ. ಕುಟುಂಬದ ಮರ್ಯಾದೆ, ಜಾತಿ ನೆತ್ತರಿನ ನಂಜು ಸದ್ದಿಲ್ಲದೇ ಇಬ್ಬರು ಮುಗ್ಧಪ್ರೇಮಿಗಳನ್ನು ಬಲಿಪಡೆದ ಘಟನೆಯಿದು.

ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಮಕ್ಕಳ ಹಕ್ಕಿಗೆ ಪೋಷಕರ ಮಾನ್ಯತೆ ದೊರೆಯದಿದ್ದಾಗ ಆ ಮಕ್ಕಳ ಪಾಲಿಗೆ ಹೆತ್ತವರೇ ಕಟುಕರಾಗಿಬಿಡುವ ಪೀಡೆಯೇ ಮರ್ಯಾದೆಗೇಡು ಹತ್ಯೆ. ಜಾತಿ ಮತ್ತು ಧರ್ಮ ಶ್ರೇಷ್ಠತೆಯ ವ್ಯಸನ, ಶುದ್ಧ ರಕ್ತದ ಭ್ರಮೆ, ಕುಟುಂಬ–ಸಮಾಜದಲ್ಲಿ ಮರ್ಯಾದೆ ಕೆಡುವ ಭಯದ ಹೆಸರಿನಲ್ಲಿ ಪ್ರತಿವರ್ಷ ವಿಶ್ವದಾದ್ಯಂತ ಮರ್ಯಾದೆಗೇಡು ಹತ್ಯೆಗೀಡಾಗುವವರ ಸಂಖ್ಯೆ ಸುಮಾರು ಐದು ಸಾವಿರದಷ್ಟಿದ್ದರೆ, ಭಾರತದಲ್ಲಿ ಈ ಸಂಖ್ಯೆ ಸಾವಿರದಷ್ಟಿದೆ ಅನ್ನುವುದು ಆತಂಕಕಾರಿ. ‘ಆನರ್‌ಬೇಸ್ಡ್ ವಯಲೆನ್ಸ್ ಅವೇರ್‌ನೆಸ್ ನೆಟ್‌ವರ್ಕ್’ ಸಂಘಟನೆ ನೀಡುವ ಅಂಕಿ–ಅಂಶಗಳು, ಮಾಹಿತಿಗಳು ಮನುಷ್ಯರಾದವರ ಎದೆ ನಡುಗಿಸುವಂತಿವೆ. ಭಾರತವೂ ಸೇರಿದಂತೆ ಮರ್ಯಾದೆಗೇಡು ಹತ್ಯೆಗಳ ಕುರಿತು ಮಾಧ್ಯಮಗಳಲ್ಲಿ ವರದಿಯಾಗುವ ಸಂಖ್ಯೆಗಳು ಬೆರಳೆಣಿಕೆಯಷ್ಟಾದರೆ, ವರದಿಯಾಗದ ಪ್ರಕರಣಗಳು ಅಸಂಖ್ಯ.

ಕೆಲ ವರ್ಷಗಳ ಹಿಂದೆ ಉತ್ತರ ಪ್ರದೇಶ, ಹರಿಯಾಣದಂಥ ಉತ್ತರಭಾರತದ ರಾಜ್ಯಗಳಲ್ಲಷ್ಟೇ ಕೇಳಿಬರುತ್ತಿದ್ದ, ಆಗಾಗ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದ ಮರ್ಯಾದೆಗೇಡು ಹತ್ಯೆಗಳು ಸದ್ದಿಲ್ಲದೇ ದಕ್ಷಿಣ ಭಾರತಕ್ಕೂ ಕಾಲಿಟ್ಟಿರುವುದು ಆತಂಕಕಾರಿ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕರ್ನಾಟಕದ ಬೇರೆಬೇರೆ ಜಿಲ್ಲೆಗಳಲ್ಲಿ 10 ಮರ್ಯಾದೆಗೇಡು ಹತ್ಯೆಗಳಾಗಿರುವುದು ಕಳವಳಕಾರಿ ಸಂಗತಿ. ಕಳೆದ ವರ್ಷದ ಕೊನೆಯಲ್ಲಿ ಬಾಗಲಕೋಟೆ ಜಿಲ್ಲೆಯೊಂದರಲ್ಲೇ ಎರಡು ಮರ್ಯಾದೆಗೇಡು ಹತ್ಯೆಗಳು ವರದಿಯಾಗಿವೆ. ಇಂಥ ಹತ್ಯೆಗಳ ಹಿಂದಿನ ಜಾಡು ಹಿಡಿದು ಹೊರಟರೆ ವರ್ಣಸಂಕರದ ಭೀತಿಯ ಕಥನಗಳು ತೆರೆದುಕೊಳ್ಳುತ್ತವೆ.

ಹರಿಯಾಣ ಮತ್ತು ಉತ್ತರ ಪ್ರದೇಶಗಳಲ್ಲಿನ ಖಾಪ್ ಪಂಚಾಯಿತಿಗಳಲ್ಲಿ ಹೊರಡುತ್ತಿದ್ದ ಆದೇಶಗಳು ಮರ್ಯಾದೆಗೇಡು ಹತ್ಯೆಗಳಲ್ಲಿ ಪರ್ಯವಸಾನಗೊಳ್ಳುತ್ತಿದ್ದವು. ಒಂದು ಜಾತಿಗಿಂತ ಮತ್ತೊಂದು ಜಾತಿ ಶ್ರೇಷ್ಠ ಎಂಬ ಅಹಂ ಮತ್ತು ಕುಟುಂಬದ ಹಿರಿಯರ ಕಟ್ಟಾಜ್ಞೆ ಮೀರಿ ಸ್ವತಂತ್ರವಾಗಿ ಸಂಗಾತಿಗಳ ಆಯ್ಕೆಯ ನಿರ್ಧಾರ ಖಾಪ್ ಪಂಚರ ಕಣ್ಣುಗಳನ್ನು ಕೆಂಪಗೆ ಮಾಡುತ್ತಿತ್ತು. ಉತ್ತರಕ್ಕೆ ಹೋಲಿಸಿದರೆ ದಕ್ಷಿಣ ಭಾರತದಲ್ಲಿ ಖಾಪ್ ಪಂಚಾಯ್ತಿಗಳ ಮಾದರಿ ಇಲ್ಲವಾದರೂ, ಮರ್ಯಾದೆಗೇಡು ಹತ್ಯೆಗಳ ಹಿಂದಿರುವ ಕಾರಣಗಳೇ ಇಲ್ಲೂ ಪ್ರತಿಫಲಿಸುತ್ತಿವೆ.

ಕಲೆ: ಸಂತೋಷ್ ಸಸಿಹಿತ್ಲು

ಜಾತಿಪ್ರಾಬಲ್ಯದ ಪ್ರಬಲ ಮುದ್ರೆಯಾಗಿರುವ ಇಂಥ ಹತ್ಯೆಗಳಲ್ಲಿ ಹೆಣ್ಣೇ ಮುಖ್ಯವಾದ ಬಲಿಪಶು. ಕೆಳಜಾತಿಯ ಗಂಡುಗಳಾದರೆ ಆತನಿಗೂ ಬಲಿಪಶುವಿನ ಸ್ಥಾನ ಕಾಯಂ. ಸಂಸ್ಕೃತಿ, ಕುಟುಂಬದ ಗೌರವವನ್ನು ಹೆಣ್ಣಿನ ಉಡಿಯೊಳಗೆ ಕಟ್ಟಿರುವ ಪಿತೃಪ್ರಧಾನ ಸಮಾಜ ನಮ್ಮದು. ಬಾಲ್ಯವಿವಾಹ, ಸತಿಸಹಗಮನ ಪದ್ಧತಿ, ಹೆಣ್ಣಿನ ಲೈಂಗಿಕ ನಿಯಂತ್ರಣದ ಮೂಲಕ ಜಾತಿ ವ್ಯವಸ್ಥೆಯನ್ನು ಸದಾ ಜೀವಂತವಾಗಿಡುವ ಪ್ರಯತ್ನಗಳು ಅನಾದಿಕಾಲದಿಂದಲೂ ನಡೆಯುತ್ತಲೇ ಇರುವ ಸಮಾಜದಲ್ಲಿ ಹೆಣ್ಣಾಗಲೀ ಗಂಡಾಗಲೀ ಮುಕ್ತವಾಗಿ ಸಂಗಾತಿ ಆಯ್ಕೆ ಮಾಡಿಕೊಳ್ಳಲು ಸ್ವತಂತ್ರರಲ್ಲ. ಮರ್ಯಾದೆಗೇಡು ಹತ್ಯೆಗಳಾಗುವ ಬಹುತೇಕ ಪ್ರಕರಣಗಳಲ್ಲಿ ಪರಿಶಿಷ್ಟರ ಸಂಖ್ಯೆಯೇ ಹೆಚ್ಚು. ಮೇಲ್ಜಾತಿ, ಅಂತರಧರ್ಮೀಯ ಕೆಲ ಪ್ರಕರಣಗಳೂ ಇದಕ್ಕೆ ಹೊರತಲ್ಲ.

ಕರ್ನಾಟಕದಲ್ಲಿ ಮರ್ಯಾದೆಗೇಡು ಹತ್ಯೆಯ ಹಿಂದಿನ ಇತಿಹಾಸವನ್ನು ಕೆದಕಿದರೆ, ಇತಿಹಾಸದ ಪುಟಗಳು 12ನೇ ಶತಮಾನಕ್ಕೆ ನಮ್ಮನ್ನು ನಿಲ್ಲಿಸುತ್ತವೆ. ಆಗಲೇ ಜಾತಿ ವಿನಾಶಕಾರಿ ಚಳವಳಿಗೆ ಮುನ್ನುಡಿ ಬರೆದಿದ್ದ ಬಸವಣ್ಣನವರು, ಸಮಗಾರ ಹರಳಯ್ಯ ಅವರ ಮಗ ಶೀಲವಂತನ ಜೊತೆಗೆ ಬ್ರಾಹ್ಮಣ ಮಧುವರಸ ಅವರ ಮಗಳು ಲಾವಣ್ಯಳ ಮದುವೆ ಮಾಡಿಸಿದ್ದರು. ಈ ವರ್ಣಸಂಕರವನ್ನು ಸಹಿಸಲಾಗದೇ ಕುಪಿತರಾದ ಮನುವಾದಿಗಳು ಚಪ್ಪಲಿ ಹೊಲೆಯುವ ಜಾತಿಯ ವರನಿಗೆ ಬ್ರಾಹ್ಮಣ ಹೆಣ್ಣನ್ನು ಕೊಡುವುದು ಧರ್ಮಬಾಹಿರ, ವಿಲೋಮ ವಿವಾಹ ಎಂದು ಕಲ್ಯಾಣದ ದೊರೆ ಬಿಜ್ಜಳನ ಕಿವಿ ಕಚ್ಚಿದ್ದರು.

9ನೇ ಪುಟಕ್ಕೆ...

ಯಾವ ಪಾಡ್ದನದಲ್ಲೂ ಭೂತಗಳನ್ನು ಶಿವಗಣಗಳೆಂದು ಹೇಳಿರಲಿಲ್ಲ. ಇತ್ತೀಚೆಗೆ ತನಿಯನಿಗೆ ಈಶ್ವರನನ್ನು ಹೋಲುವ ಶಿಲ್ಪ ರಚಿಸಿದ್ದಾರೆ, ಬಾಲಕನಿದ್ದಾಗಲೇ ಮಾಯವಾದ ತನಿಯನನ್ನು ತನಿಯಜ್ಜ ಮಾಡಿದ್ದಾರೆ. ಕೊರಗರು ಮಾತ್ರ ಪೂಪೂಜನ ಮಾಡುತ್ತಿದ್ದ ತನಿಯನನ್ನು ಮೇಲ್ವರ್ಗದ ಅಬ್ರಾಹ್ಮಣರು ಪೂಜಿಸತೊಡಗಿದ್ದಾರೆ.

ನಮ್ಮೂರ ಕೊರಗತನಿಯ

ಇಂದಿರಾ ಹೆಗ್ಗಡೆ

ಭೂತಗಳಲ್ಲಿ ಶ್ರೇಣೀಕೃತ ವ್ಯವಸ್ಥೆ ಇದೆ. ತುತ್ತತುದಿಯಲ್ಲಿ ಅರಸು ಭೂತ ಇದ್ದರೆ ಕಟ್ಟಕಡೆಯಲ್ಲಿ ಕೊರಗತನಿಯ ಭೂತ ಇದೆ. ತುಳುನಾಡು ನಾಗಾರಾಧನೆ ಮತ್ತು ಭೂತಾರಾಧನೆಯ ನೆಲ. ಭೂತಾರಾಧನೆಯ ಮೂಲ ನಾಗಾರಾಧನೆಯಲ್ಲಿದೆ.

ಸಂಗಂ ಕಾಲದಲ್ಲಿಯೇ ಭೂತಾರಾಧನೆ ಈ ನೆಲದ ಧರ್ಮ ನಂಬಿಕೆಯಾಗಿತ್ತು. ಭೂತಾರಾಧನೆ ಪರಿಸರದ ಜನರನ್ನು ಒಳಗೊಳಿಸುವ ಬಹುತ್ವದ ಧರ್ಮ. ಭೂತದ ನುಡಿಯಲ್ಲಿಯೇ ಹೇಳುವುದಾದರೆ ಹತ್ತು ತಾಯಿಯ ಮಕ್ಕಳನ್ನು ಒಂದು ಮಡಿಲಲ್ಲಿರಿಸಿ ರಮಿಸಿ ಎದೆ ಹಾಲು ಕುಡಿಸಿ ಪೋಷಿಸುವ ಶಕ್ತಿಗಳು ಇವು. ಇಲ್ಲಿ ಭೂತ ಶಕ್ತಿಗಳು ತಾಯಿ ಶಕ್ತಿಗಳು ಎನ್ನುವುದು ನಂಬಿಕೆ. ಕೆಲವು ಶಕ್ತಿಗಳಿಗೆ ತುಟಿಯ ಮೇಲೆ ಮೀಸೆ ಇದ್ದರೂ ಮೂಲದಲ್ಲಿ ಕಾಡಿನಕಲ್ಲಿನಲ್ಲಿ ಇದ್ದವುಗಳು.

ಬೆರ್ಮರ ಪಾಡ್ದನಗಳ ಪ್ರಕಾರ ಎಲ್ಲಾ ಭೂತಗಳು ಬೆರ್ಮೆರ್ ಭೂತದ ಪರಿವಾರ ಶಕ್ತಿಗಳು. ಕಾಡಿನಲ್ಲಿ ಇದ್ದ ಬೆರ್ಮೆರ್ ಬೀಡಿನ, ಗುತ್ತಿನ ಚಾವಡಿಗೆ ಬಂದಾಗ ಉಲ್ಲಾಯ ಆಗುತ್ತಾನೆ! ಉಲ್ಲಾಯ ಸ್ತ್ರೀಯೂ ಆಗಬಹುದು, ಪುರುಷನೂ ಆಗಬಹುದು. ರಕ್ಷಣೆಗೆ ಗಂಡು, ಪೋಷಣೆಗೆ ಹೆಣ್ಣು!

ಅತಿಕಾರೆ ಭತ್ತದ ಬೀಜವನ್ನು ತುಳುನಾಡಿಗೆ ತಂದಾಗ ಸಾವಿರಾರು ನಾಗ, ಸಾವಿರಾರು ಭೂತ, ನೂರಾರು ಗಂಡ ಗಣಗಳು, ಜೋಡಿ ಸಿರಿಗಳು, ಕಾಡಿನ ಕೋಣಗಳು (ಉಳುಮೆಗೆ) ಹಾಗೂ ಬೆರ್ಮರು ಬಂದ ವಿವರ ಇದೆ. ಈ ಆಧಾರದಿಂದ ಬೆರ್ಮರನ್ನು ಸೇರಿ ಎಲ್ಲಾ ಭೂತಗಳು ‘ಜೋಡಿ ಸಿರಿಗಳ’ ಪರಿವಾರಗಳು. ಭೂತಗಳೆಲ್ಲ ‘ಸಿರಿ ಪರಿವಾರ’ಗಳೆಂದು ‘ಅತಿಕಾರೆ ಭತ್ತದ ಸಿರಿಪಾಡ್ದನ’ ನಿರೂಪಿಸುತ್ತದೆ.

ಯಾವ ಪಾಡ್ದನದಲ್ಲೂ ಭೂತಗಳನ್ನು ಶಿವಗಣಗಳೆಂದು ಹೇಳಿದ್ದು ನನ್ನ ಗಮನಕ್ಕೆ ಬಂದಿಲ್ಲ.

ಇತ್ತೀಚೆಗೆ ತನಿಯನಿಗೆ ಈಶ್ವರನನ್ನು ಹೋಲುವ ಶಿಲ್ಪ ರಚಿಸಿದ್ದಾರೆ, ಬಾಲಕನಿದ್ದಾಗಲೇ ಮಾಯವಾದ ತನಿಯನನ್ನು ತನಿಯಜ್ಜ ಮಾಡಿದ್ದಾರೆ. ಕೊರಗರು ಮಾತ್ರ ಪೂಪೂಜನ ಮಾಡುತ್ತಿದ್ದ ತನಿಯನನ್ನು ಮೇಲ್ವರ್ಗದ ಅಬ್ರಾಹ್ಮಣರು ಪೂಜಿಸತೊಡಗಿದ್ದಾರೆ.

ನಮ್ಮಗುತ್ತು ಮನೆಯಲ್ಲೂ ಕೊರಗತನಿಯನ ಕಾಡು ಇದೆ. ಕೆಳಭಾಗದಲ್ಲಿ 100 ಮೀಟರ್ ಒಳಗೆ ಚೇಳಾರುಗುತ್ತು. ಆದರೂ ನಾನೆಂದೂ ತನಿಯನನ್ನು ನೋಡಿಲ್ಲ. ಇತ್ತೀಚಿನ ದಿನಗಳಲ್ಲಿ ತನಿಯನನ್ನು ಕೊರಗೇತರರು ‘ಹಣ ಮಾಡುವ ದಂಧೆಯಾಗಿ’ ಬಳಸಿಕೊಳ್ಳುವುದು ಕಂಡು ಕಸಿವಿಸಿಯಾಗುತ್ತಿದೆ. ಹೀಗಾಗಿ ಚೇಳ್ಯಾರು ಕಾಡಿನಲ್ಲಿ ಇರುವ ಕೊರಗತನಿಯನೂ ಬದಲಾಗಿದ್ದಾನೆಯೋ ಎಂದು ನಾನು ಚೇಳ್ಯಾರು ಗುತ್ತಿನ ಕರುಮಾರು ಕಾಡಿಗೆ ಹೋದೆ.

ಮೂಲದ ಕೊರಗರ ಮನೆ ಗುತ್ತಿನಗುಡ್ಡದಲ್ಲಿ ಇದೆ. ಕೊರಗರ ತಾಯಿ ಮೂಲದ ಕುಟುಂಬ ಸದಸ್ಯರು ಮಂಗಳೂರು ನಗರದ ವಿವಿಧೆಡೆ ಸರ್ಕಾರಿ ನೌಕರರಾಗಿ ಇದ್ದಾರೆ. ಅವರು ಪೂಪೂಜನ ಸೇವೆಗೆ ಈ ಕ್ಷೇತ್ರಕ್ಕೆ ಪ್ರತಿ ತಿಂಗಳ ಸಂಕ್ರಮಣದಂದು ಬರುತ್ತಾರೆ. ಪ್ರತಿ ತಿಂಗಳ ಸಂಕ್ರಮಣದಂದು ತುಳುನಾಡಿನ ಎಲ್ಲಾ ಭೂತಗಳಿಗೆ ಪೂನೀರ್ ಸೇವೆ ನಡೆಯುತ್ತದೆ.

ಆ ದಿನ ಕೊರಗರು ಗುತ್ತಿನ ಬಾವಿಯಿಂದ ನೀರನ್ನು ತಾವು ತರುವ ಕಡ್ಯಕ್ಕೆ ತುಂಬಿಸಿ ಕಾಡಿನತನಿಯನ ನೆಲೆಗೆ ಕೊಂಡು ಹೋಗಿ ಅಲ್ಲಿ ಪೂನೀರ್ ಇಟ್ಟು ಪೂಪೂಜನ ಮಾಡುತ್ತಿದ್ದುದನ್ನು ಗುತ್ತಿಗೆ ಸೊಸೆಯಾಗಿ ಬಂದ ದಿನದಿಂದಲೂ ಬಲ್ಲೆ. ಹೀಗಾಗಿ ಏಪ್ರಿಲ್ 14ರಂದು ಕೊರಗರು ತನಿಯನ ಪೂಪೂಜನಕ್ಕೆ ಬರುವ ಸಮಯಕ್ಕೆ ತನಿಯನ ಕಾಡಿಗೆ ಹೋದೆ.

ವಿಶಾಲ ಗುಡ್ಡದ ಒಂದು ಭಾಗವನ್ನು ಕೊಂಕಣ ರೈಲ್ವೆ ಆಕ್ರಮಿಸಿದೆ. ಉಳಿದ ಜಾಗ ಮಾರಾಟವಾಗಿದೆ ಅಥವಾ ಎಮ್‌ಆರ್‌ಪಿಎಲ್ ನಿರಾಶ್ರಿತರ ಕಾಲನಿ ಆಗಿದೆ. ಈಗ ಕೊರಗತನಿಯ ಉಳಿಸಿಕೊಂಡಿರುವ ಜಾಗ ನೆಲಮಟ್ಟದಿಂದ ಸುಮಾರು 10 ಅಡಿ ಎತ್ತರದ ಕರುಮಾರು ಕಾಡು. ಸುತ್ತಲಿನಲ್ಲಿ ಮುರಕಲ್ಲು ತೆಗೆದು ಕೊರಗತನಿಯನ ಕಾಲದ ಜಾಗವನ್ನು ಉಳಿಸಿದ್ದರು ಗುತ್ತಿನವರು. ಈಗ ತನಿಯನ ಕರುಮಾರು ಕಾಡು ಸುಮಾರು 600-700 ಚದರ ಅಡಿ ಇರಬಹುದು.

ಚೇಳಾರು ಗುತ್ತಿನ ಮೂಲದ ಕೊರಗ ಹರೇರಾಂ ಪೂಪೂಜನ ಮಾಡಲು ಬಂದಿದ್ದ. ತಂದೆಗೆ ಸಹಕಾರ ನೀಡಲು ಮಗ ಬಂದಿದ್ದ. ಹರೇರಾಮನ ಮತ್ತೊಬ್ಬ ಮಗ ತನ್ನ ಮೂಲದ (ತಾಯಿ ಮೂಲ) ತನಿಯ ಕ್ಷೇತ್ರಕ್ಕೆ ಹೋಗಿದ್ದಾನೆ ಎಂದರು.

ಈ ಕಾಡಿನಲ್ಲಿ ಒಟ್ಟು 14 ಕಲ್ಲುಗಳಿದ್ದವು. ಹೀಗಾಗಿ 14 ಭೂತಗಳು ಇರಲೇಬೇಕು. ಅವುಗಳಲ್ಲಿ ‘ಪಂಜುರ್ಲಿ’, ‘ತನಿಯ’, ಮತ್ತು ‘ಚವುಂಡಿ’ ಭೂತಗಳ ಹೆಸರು ಹೇಳಿ ಮೂರು ಕಲ್ಲುಗಳನ್ನು ಹರೇರಾಮ ತೋರಿಸಿದ. ಉಳಿದ ಹನ್ನೊಂದು ಮುರಕಲ್ಲುಗಳು ಯಾವ ಭೂತಗಳು ಎಂದು ತನಗೆ ತಿಳಿದಿಲ್ಲ ಎಂದ. ತುಳುನಾಡಿನ ಗುತ್ತು ಬೀಡುಗಳ ಚಾವಡಿಗಳ ಭೂತಗಳು ಮೂಲದಲ್ಲಿ ಕಾಡಿನಕಲ್ಲಿನಲ್ಲಿ ಇದ್ದವು. ರಾಜನ್ ದೈವ ಇರಲಿ ಪರಿವಾರ ದೈವ ಇರಲಿ, ಎಲ್ಲ ಭೂತಗಳ ಮೂಲಸ್ಥಾನವು ಕಾಡು ಆಗಿತ್ತು.

ಕೊರಗತನಿಯ ಆಚರಣೆ

ಈ ಕೊರಗತನಿಯನ ಕ್ಷೇತ್ರದಲ್ಲಿ ಮೊದಲ ಪೂಪೂಜನ ಪಂಜುರ್ಲಿ ಭೂತಕ್ಕೆ ನಡೆಸಿದ ಹರೇರಾಮ. ಪಂಜುರ್ಲಿಗೆ ಮಾತ್ರ ಕಡ್ಸಲೆ ಇದೆ. ಪುಟ್ಟ ಈಟಿ ಇದೆ. ದೊಡ್ಡ ಮುರಕಲ್ಲನ್ನು ತೋರಿಸಿ ಅದು ‘ತನಿಯನದ್ದು’ ಎಂದ. ಅಲ್ಲಿ ಚಿಕ್ಕ ಗಂಟೆ, ಕಬ್ಬಿಣದ ಎರಡು ಅಡಿ ಉದ್ದದ ಕೋಲು ಇತ್ತು. ಕೋಲು ‘ಕೊರಗಜ್ಜನ’ ದಂಟೆ ಎಂದ ಹರೇರಾಮ (ಎಲ್ಲರೂ ಕೊರಗಜ್ಜ ಅನ್ನುತ್ತಾರೆ, ಹೀಗಾಗಿ ನಾನೂ ಕೊರಗಜ್ಜ ಅಂದೆ ಎಂದನಾತ).

ಪಂಜುರ್ಲಿಯ ಸಾಲಲ್ಲಿ ಸ್ವಲ್ಪ ಆಚೆ ಸಾಲಾಗಿ ಏಳು ಮುರಕಲ್ಲುಗಳಿವೆ. ಇವು ಸಪ್ತ ಕನ್ನಿಕೆಯರು ಎಂದು ಊಹಿಸಬೇಕಷ್ಟೆ. ಅದರ ಹಿಂಭಾಗದಲ್ಲಿ ಎರಡೆರಡು ಮುರಕಲ್ಲುಗಳನ್ನು ಪ್ರತ್ಯೇಕವಾಗಿ ಇಡಲಾಗಿದೆ. ಕೊರಗ ಕುಟುಂಬದವರಿಗೆ ಈ ಕಲ್ಲುಗಳ ಭೂತದ ಹೆಸರು ತಿಳಿದಿಲ್ಲ.

ಪಂಜುರ್ಲಿಯ ಸಾಲಲ್ಲಿ ಆಚೆ ‘ಚವುಂಡಿ’ಯ ಕಲ್ಲು ಇದೆ.

ಎಲ್ಲಾ ಭೂತದ ಮುರಕಲ್ಲುಗಳಿಗೆ ‘ಮುಗಯಿ’(ಮಣ್ಣಿನ ಪುಟ್ಟ ಬಿಂದಿಗೆ) ಯಲ್ಲಿ ನೀರು ಹಾಕಿ ಆ ನೀರೊಳಗೆ ಕೇಪುಲ ಹೂ ಹಾಕಿ ಇಟ್ಟರು. ಇದೇ ‘ಪೂನೀರು.’

9ನೇ ಪುಟಕ್ಕೆ...

ಗೊತ್ತಿರದ ಹಾದಿಯಲಿ ಅರಿವಿನ ಪಯಣ

ವಿಶಾಖ ಎನ್.

ಬೆಂಗಳೂರಿನ ‘ಉದ್ಭವಃ’ ಶಾಲೆಯ ಚಿಣ್ಣರು ವರ್ಷಕ್ಕೊಮ್ಮೆ ಪಾದಯಾತ್ರೆ ಹೊರಡುತ್ತಾರೆ. ಉಳಿದುಕೊಳ್ಳುವುದು ಎಲ್ಲಿ, ತಿನ್ನುವುದು ಏನನ್ನು ಎನ್ನುವ ಪೂರ್ವಯೋಜನೆಯೇ ಇಲ್ಲದ ಈ ಯಾತ್ರೆಯನ್ನು ಶಾಲೆಯವರು ಅರಿವಿನ ಪಯಣದ ‘ಹೆಜ್ಜೆಗಳು’ ಎಂದೇ ಕರೆದುಕೊಳ್ಳುತ್ತಾರೆ.

2019 ಸಂಕ್ರಾಂತಿ ಮುಗಿದ ನಂತರದ ಸಂದರ್ಭ. ಎತ್ತಿನ ಬಂಡಿಯೊಂದು ಗೌರಿಬಿದನೂರು ಹತ್ತಿರದ ಚಿಂಚನಹಳ್ಳಿಗೆ ತಲುಪಿತು. ಇನ್ನೇನು ಸೂರ್ಯ ಕಂತುವ ಹೊತ್ತು. ಬಂಡಿಯ ಹಿಂದೆ ಪುಟಾಣಿ ಮಕ್ಕಳು. ಜತೆಗೆ ಒಂದಿಷ್ಟು ದೊಡ್ಡವರು. ಕೆಲವರದ್ದು ಚಪ್ಪಲಿಗಳೇ ಇಲ್ಲದ ಪಾದಗಳು. ಆ ಊರನ್ನು ದಾಟಿಕೊಂಡು ಬಂಡಿ ಮುಂದಿನ ಹಳ್ಳಿ ಸೇರಬೇಕಿತ್ತು.

ಚಿಂಚನಹಳ್ಳಿಯ ಹೊರವಲಯದಿಂದ 50 ಅಡಿಗಳಷ್ಟು ದಾಟಿರಬಹುದಷ್ಟೆ. ಅಲ್ಲಿ ಇದ್ದ ಮಹಿಳೆಯರಲ್ಲಿ ಒಬ್ಬರು ಬಂಡಿಯ ಬಳಿಗೆ ಧಾವಿಸಿ ಬಂದರು. ‘ಹೊರಟಿದ್ದೆಲ್ಲಿಗೆ’ ಎಂಬ ಪ್ರಶ್ನೆ. ‘ಇವರೆಲ್ಲ ಶಾಲೆಯ ಮಕ್ಕಳು. ಪಾದಯಾತ್ರೆ ಹೊರಟಿದ್ದೇವೆ. ಮುಂದಿನ ಹಳ್ಳಿಯಲ್ಲಿ ಇಳಿದುಕೊಳ್ಳಬೇಕು. ಕತ್ತಲಾಗುವಷ್ಟರಲ್ಲಿ ತಲುಪಿಕೊಳ್ಳುತ್ತೇವೆ’ ಎಂದರು ಆ ಮಕ್ಕಳನ್ನೆಲ್ಲ ಸಾಹಸಕ್ಕೆ ಹಚ್ಚಿದ್ದ ದಿವಾಕರ್. ‘ಆ ಊರಲ್ಲಿಯೇ ಉಳಿಯಬೇಕೆ? ನಮ್ಮೂರಲ್ಲಿ ಉಳಿದರೆ ಆಗದೆ?’ ಎಂದು ಕೇಳಿದ ಮಹಿಳೆಗೆ ಏನು ಉತ್ತರ ಹೇಳಬೇಕೆಂದು ದಿವಾಕರ್ ಅವರಿಗೆ ತೋಚಲಿಲ್ಲ. ಬಂಡಿ ಮುಂದೆ ಸಾಗಿತು. ಹತ್ತು ಅಡಿಗಳಷ್ಟು ದಾಟಿರಬಹುದಷ್ಟೆ. ಆ ಊರಲ್ಲಿಯೇ ಯಾಕೆ ಇಳಿದುಕೊಳ್ಳಬಾರದು ಎಂದು ಒಳಮನಸ್ಸು ತಡೆಯಿತು. ಆಮೇಲೆ ಚಿಂಚಾನಹಳ್ಳಿಯ ದೇವಸ್ಥಾನದ ಆವರಣದಲ್ಲಿ ಊಟದ ವ್ಯವಸ್ಥೆ ಆಯಿತು. ಮಕ್ಕಳು ತಂಗಲು ತಾಣವೂ ಸಿಕ್ಕಿತು. ಮರುದಿನ ಈ ಅನಿಶ್ಚಿತ ಪಯಣದ ಮುಂದುವರಿಕೆ. ಇನ್ನೊಂದು ಹಳ್ಳಿ, ಮತ್ತೊಂದು ಅನಿರೀಕ್ಷಿತ ಅನುಭವ. ಅಭ್ಯಾಗತರಿಗೆ ಯಾರೋ ಸಹೃದಯರಿಂದ ಆತಿಥ್ಯ.

ಅರಿವಿನ ಪಯಣಕೆ ಸಜ್ಜಾದ ಗಳಿಗೆ

ಇಲ್ಲಿ ಊಟ ಆದೀತೆನ್ನುವ ಅಂದಾಜೇ ಇವರ್ಯಾರಿಗೂ ಇರಲಿಲ್ಲ

ಕೆಂಗೇರಿ ದಾಟಿಕೊಂಡು ತಾವರೆಕೆರೆ ರಸ್ತೆಯಲ್ಲಿ ಸಾಗಿದರೆ ಸಿಗುವ ಮುದ್ದಯ್ಯನಪಾಳ್ಯದಲ್ಲಿ ‘ಉದ್ಭವಃ’ ಎನ್ನುವ ಮುಕ್ತ ಕಲಿಕೆಯ ಶಾಲೆಯಿದೆ. ಅಲ್ಲಿನ ಮಕ್ಕಳನ್ನು ಪ್ರತಿವರ್ಷ ಒಮ್ಮೆ ಹೀಗೆ ಐದು ದಿನಗಳ ಅನಿಶ್ಚಿತ ಪಾದಯಾತ್ರೆ ಹೊರಡಿಸುವುದು ರೂಢಿ. ಕೋವಿಡ್ ಬಂದಾಗ ಯಾತ್ರೆ ಸಾಧ್ಯವಾಗಿರಲಿಲ್ಲ. ಹೋದವರ್ಷ ಮತ್ತೆ ಪಾದಗಳು ಹೊರಟದ್ದು 2019ರಲ್ಲಿ ಸಾಗಿದ್ದ ಅದೇ ಹಾದಿಯಲ್ಲಿ. ಆದರೆ ಕಾಲ ಬೇರೆ; ಮಳೆಗಾಲ. ಅನುಭವವೂ ಬೇರೆ. ಮೊದಲ ಯಾತ್ರೆಯಲ್ಲಿ ಮಕ್ಕಳ ಮುಗ್ಧ ನಗು ಕಂಡುಂಡಿದ್ದ ಹಳ್ಳಿಗರು ಈ ಸಲ ಆತಿಥ್ಯಕ್ಕೆ ಸ್ವಪ್ರೇರಣೆಯಿಂದ ಒಪ್ಪಿದ್ದರೆನ್ನುವುದು ವಿಶೇಷ.

ಗೌರಿಬಿದನೂರಿನಲ್ಲಿ ‘ಮರಳಿ ಮಣ್ಣಿಗೆ’ ಎನ್ನುವ ತೋಟದಲ್ಲಿ ಶಾಲೆಯ ಮಕ್ಕಳು ತಾವೇ ಬೆಳೆ ಬೆಳೆಯುವ ಚಟುವಟಿಕೆಯೊಂದಿದೆ. ಹೀಗಾಗಿ ಆಗೀಗ ಅಲ್ಲಿಗೆ ಹೋಗಿ ಬರುವ ಮಕ್ಕಳಿಗೆ ಅಲ್ಲಿನ ಮಣ್ಣು ಚಿರಪರಿಚಿತ. ಅದರ ಮುಂದುವರಿದ ಕಲಿಕೆಯ ಭಾಗ ಈ ಪಾದಯಾತ್ರೆ. ಎಲ್ಲಿಗೋ ಪಯಣ, ಯಾವುದೋ ದಾರಿ. ಯಾರೂ ಏಕಾಂಗಿ ಸಂಚಾರಿ ಅಲ್ಲ. ಮೊದಲ ವರ್ಷ 13–14 ಮಕ್ಕಳು ಪಾದಯಾತ್ರೆ ಹೊರಟಿದ್ದು. ಈಗ ಸಂಖ್ಯೆ 46ಕ್ಕೆ ಏರಿದೆ. ಪುಟ್ಟ ಮಕ್ಕಳು ಮನಸ್ಸು ಮಾಡಿದರೆ, ಅವರೊಟ್ಟಿಗೆ ಪೋಷಕರೂ ಈ ಅನಿರೀಕ್ಷಿತ ಅನುಭವ ದಕ್ಕಿಸಿಕೊಳ್ಳಲು ಮುಂದಾಗುತ್ತಾರೆ. ಹಾದಿಯಲ್ಲಿ ಅಲ್ಲಲ್ಲಿ ಬೆಟ್ಟಗಳು. ಅವನ್ನು ಏರಬಹುದು, ಅವುಗಳ ಮೇಲೆ ಅಂಗಾತವಾಗಬಹುದು. ನೀರಿನ ತೊರೆಯಲ್ಲಿ ಕಾಲಿಳಿಸಿಕೊಂಡು ಕೂರಬಹುದು. ಕುರಿಮಂದೆಯ ಒಡೆಯನ ಜತೆ ಲೋಕಾಭಿರಾಮ ಹರಟಬಹುದು. ದಿಢೀರನೆ ಮಳೆ ಬಂದರೆ ಬಂಡಿಯೊಳಗಿನಿಂದ ತಾಡಪಾಲು ತೆಗೆದು ಎಲ್ಲರೂ ಅದರಡಿ ಮಳೆ ನೋಡುತ್ತಲೇ ಸಾಗಬಹುದು. ಇವೆಲ್ಲವನ್ನೂ ಮಕ್ಕಳು ಮಾಡಿದ್ದಾರೆ. ಅವರೊಟ್ಟಿಗೆ ಇದ್ದ ದೊಡ್ಡವರೂ ಮಕ್ಕಳೇ ಆಗಿದ್ದಾರೆ.

ಸುಮಾರು 50 ಕಿ.ಮೀ.ಗಿಂತ ಹೆಚ್ಚು ದೂರದ ಪಾದಯಾತ್ರೆಯಲ್ಲಿ ಮಕ್ಕಳು ಕಟ್ಟಿಕೊಂಡ ಅನುಭವಗಳು ಭಿನ್ನ. ನಲುಗುಮನಹಳ್ಳಿ ಎನ್ನುವಲ್ಲಿ ಸಂಜೆ ಮಕ್ಕಳು ‘ಕಿವುಡು ಸಾರ್ ಕಿವುಡು’ ಎಂಬ ನಾಟಕ ಪ್ರದರ್ಶಿಸಿದರು. ಎಂ.ಎಸ್. ನರಸಿಂಹಮೂರ್ತಿ ಅವರ ಈ ನಾಟಕವನ್ನು ಮಕ್ಕಳಿಗೆ ಕಲಿಸಿಕೊಟ್ಟವರು ಮಂಜುನಾಥ್ ಹಾಗೂ ಹರೀಶ್. ರಸ್ತೆ ಮಧ್ಯೆಯೇ ಮಕ್ಕಳ ನಾಟಕ. ಅದು ಜನಪ್ರಿಯ ಧಾರಾವಾಹಿ ಬರುವ ಹೊತ್ತು. ಪ್ರೇಕ್ಷಕರು ಅಲ್ಲೊಬ್ಬರು ಇಲ್ಲೊಬ್ಬರು ಕಂಡರಷ್ಟೆ. ಮಕ್ಕಳೇ ಮನೆಮನೆಗೆ ಹೋಗಿ ಟೀವಿ ಮುಂದೆ ಕುಳಿತಿದ್ದವರನ್ನು ಎಬ್ಬಿಸಿಕೊಂಡು ಬಂದರು. ಮನರಂಜನೆಯ ಇನ್ನೊಂದು ನಮೂನೆ ಜನರಿಗೆ. ರಸ್ತೆ ಮಧ್ಯೆ ನಾಟಕ ನಡೆದಿದ್ದರಿಂದ, ನಡುವೆ ದ್ವಿಚಕ್ರವಾಹನ ಸವಾರನ ಹಾರ್ನ್ ಸದ್ದನ್ನು ಮೀರಿ ಜನರಿಗೆ ವಿಷಯ ದಾಟಿಸುವ ಜರೂರು ಮಕ್ಕಳಿಗೆ ಆದ ರಿಯಲ್ ಟೈಮ್ ಅನುಭವ.

ಇನ್ನೊಂದು ಹಳ್ಳಿಗೆ ಮೊದಲ ಸಲ ಹೋದಾಗ ಮಕ್ಕಳಲ್ಲಿ ಸಹಜವಾಗಿಯೇ ‘ಮಲಗುವುದೆಲ್ಲಿ’ ಎಂಬ ಪ್ರಶ್ನೆ. ‘ನೀವೇ ಹೋಗಿ ಯಾರನ್ನಾದರೂ ಒಪ್ಪಿಸಿ’. ಆರು ಮಕ್ಕಳಿಗೆ ದಿವಾಕರ್ ಹೋಂವರ್ಕ್ ಕೊಟ್ಟರು. ಬಹುಶಃ ಮಕ್ಕಳು ಸಂಕೋಚದಿಂದ ಒಲ್ಲೆ ಎನ್ನಬಹುದೇನೊ ಎಂಬ ಅವರ ಭಾವನೆ ಸುಳ್ಳಾಯಿತು. ‘ಮೂರು ಮನೆಗಳಲ್ಲಿ ಮಲಗುವ ವ್ಯವಸ್ಥೆ ಆಯಿತು’ ಎಂದು ಮಕ್ಕಳು ಮುಖದ ತುಂಬಾ ನಗು ಹೊತ್ತು ಮರಳಿದರು.

ದಿಣ್ಣೇಮೇಲನಹಳ್ಳಿಯಲ್ಲಿ ಇದ್ದಿದ್ದು ಆರು ಮನೆ. ಮೂರು ಶೌಚಾಲಯ. ಇಷ್ಟೂ ಜನರಿಗೆ ಉಳಿದುಕೊಳ್ಳುವ ವ್ಯವಸ್ಥೆ ಆಯಿತು. ಮರುದಿನ ಸ್ನಾನಾದಿಗಳನ್ನು ಮುಗಿಸಿಕೊಂಡ ಮೇಲೆ ತಿಂಡಿ. ಯಾರು ಎಲ್ಲಿ ಶೌಚ ಮುಗಿಸಿಕೊಂಡರೆನ್ನುವುದು ಕೂಡ ಚರ್ಚೆಗೆ ಬರಲಿಲ್ಲ. ಬೊಮ್ಮಸಂದ್ರ ಎನ್ನುವಲ್ಲಿ ನೂರು ವರ್ಷಗಳ ಹಳೆಯ ಶಾಲೆ ಇದೆ. ಅಲ್ಲಿ ತಂಗಲು ಹೊರಟಿದ್ದಾಗ, ಜನರು ರಸ್ತೆ ಸ್ವಚ್ಛಗೊಳಿಸಿ, ಎತ್ತಿನಗಾಡಿಯ ಹಸುಗಳಿಗೆ ಆರತಿ ಎತ್ತಿದರು. ಅವರೆಲ್ಲ ದಲಿತ ಕಾಲೊನಿಯ ಜನ. ಪಾನಮತ್ತರಾಗಿದ್ದ ಮೂವರು ಇಡೀ ಕಾಲೊನಿಯ ಜನರನ್ನು ಒಂದೆಡೆ ಸೇರಿಸಿ ಇಂತಹ ಪ್ರೀತಿ ತೋರಿದ್ದು ದಿವಾಕರ್ ಹಾಗೂ ತಂಡದವರಿಗೆ ಮರೆಯಲಾಗದ ಅನುಭವ.

ನಡೆದ ದಾರಿಯಲ್ಲೇ ಈಗ ನಡೆದರೂ, ಹೊಸದಾಗಿ ಪಾದಯಾತ್ರೆ ಹೊರಡುವ ಮಕ್ಕಳಿಗೆ ಅದು ಹೊಸದಾರಿ. ಹಿಂದೆ ಸಾಗಿದವರಿಗೆ ಕಳೆದ ವರ್ಷದ ಬಾಂಧವ್ಯದ ಸರಿದಾರಿ. ಪ್ರಕೃತಿಯಲ್ಲಾಗುವ ಬದಲಾವಣೆಯ ಅರಿಯುವ ದಾರಿಯೂ ಹೌದು. ‘ಬಡವರ ತರಹ ಕಾಣುವ ಅವರೆಲ್ಲ ಎಷ್ಟೊಂದು ಜನರಿಗೆ ಸಲೀಸಾಗಿ ಇಷ್ಟೆಲ್ಲ ಮಾಡುತ್ತಾರೆ. ನಗರದಲ್ಲಿ ಇರುವ ನಮಗೇಕೆ ಹೀಗೆ ಮಾಡಲು ಆಗುವುದಿಲ್ಲ’ ಎಂದು ಮಗುವೊಂದು ಕೇಳಿದ ತೂಕದ ಪ್ರಶ್ನೆಗೆ ಕಣ್ಣಾಲಿಗಳಲ್ಲಿ ನೀರು ತುಂಬ ಬೇಕಷ್ಟೆ. ಇಂಥ ಪಾದಯಾತ್ರೆ ಅರ್ಥ ಪಡೆಯುವುದೇ ಈ ಪ್ರಶ್ನೆಯಿಂದ. ಇಷ್ಟಕ್ಕೂ ಬಂಡಿಯೊಳಗೆ ತುರ್ತಿಗೆ ಇರಲಿ ಎಂದು ತೆಗೆದುಕೊಂಡು ಹೋಗಿದ್ದ ದಿನಸಿ, ತರಕಾರಿ ಯಾವುದನ್ನೂ ಇರುವರೆಗೆ ಬಳಸಿಕೊಳ್ಳುವ ಪ್ರಮೇಯ ಶಾಲೆಯ ಉಸ್ತುವಾರಿ ದಿವಾಕರ್ ಹಾಗೂ ಸ್ನೇಹಿತರಿಗೆ ಬಂದಿಲ್ಲ. ಹಳ್ಳಿ ಹಳ್ಳಿಗಳಲ್ಲಿ ಇರುವ ಮಾನವೀಯತೆಯ ಒರತೆಗೆ ಇದೇ ಸಾಕ್ಷ್ಯ.

ಹೆಜ್ಜೆ ಹೆಜ್ಜೆಯಲ್ಲಿ ಹಲವು ಕಥೆ, ಅನುಭವ

ಪಾದಯಾತ್ರೆಯಲ್ಲಿ ಸೇರಿಕೊಂಡ ನಾಯಿಯೊಂದು ಅಷ್ಟೂ ದಿನ ಎಲ್ಲರೊಳಗೆ ಒಂದಾದ ಕಥೆಯಿದೆ. ಪಾದಯಾತ್ರೆಗೆ ಹೋಗಿದ್ದ ಮಗುವಿನ ತಾಯಿ ಪವಿತ್ರಾ ಎಂಬುವವರ ಚಪ್ಪಲಿ ಕಿತ್ತುಹೋದಾಗ, ಯಾರೋ ಹಳ್ಳಿಯವರೇ ಅವರಿಗೆ ಚಪ್ಪಲಿಗಳನ್ನು ಕೊಟ್ಟು ಕಳುಹಿಸಿದ ಬೆಚ್ಚಗಿನ ನೆನಪಿದೆ. ತಿರುಪತಿಗೆ ತಾವು ಪಾದಯಾತ್ರೆ ಹೋದಾಗ ಯಾರೋ ಮಾಡಿದ ಅನ್ನದಾನದ ಋಣವನ್ನು ಹೀಗೆ ಮಕ್ಕಳಿಗೆ ಉಣಬಡಿಸಿ ತೀರಿಸಿಕೊಳ್ಳುವುದಾಗಿ ಹೇಳಿ ಅನ್ನವೀಯುವ ಸುಖದ ಸರಪಳಿ ತೆರೆಯುವ ಯಜಮಾನರ ಮಾನವೀಯತೆಯ ನಡೆ ಇದೆ. ನೀರ ಒರತೆ ಇರುವ ಕಡೆ ಸ್ವಲ್ಪ ಭೂಮಿ ಅಗೆದಾಗ ನೀರು ಉಕ್ಕುವುದನ್ನು ಕಂಡು ಚಿಣ್ಣರು ವಸುಂಧರೆಯ ಒಡಲಾಳ ಅರಿತ ಪಾಠವೂ ಇದೆ.

‘ನಿತ್ಯ ಸಚಿವ’...

ವರ್ಣರಂಜಿತ ವ್ಯಕ್ತಿತ್ವಕ್ಕೆ ರಂಗರೂಪ

ಎಂ.ಎನ್.ಯೋಗೇಶ್

ನೇಪಥ್ಯ

ಮಂಡ್ಯದ ಕರ್ನಾಟಕ ಸಂಘ ಹಿರಿಯ ಮುತ್ಸದ್ದಿ ರಾಜಕಾರಣಿಯೊಬ್ಬರ ಜೀವನಗಾಥೆಗೆ ರಂಗ ರೂಪ ನೀಡುತ್ತಿದೆ. ಏಷ್ಯಾಖಂಡದಲ್ಲೇ ಮೊದಲ ಸಮಗ್ರ ಸಹಕಾರ ಬ್ಯಾಂಕ್ ಕಟ್ಟಿದ, ಶಿಕ್ಷಣ ಸಚಿವರಾಗಿ ಶೈಕ್ಷಣಿಕವಾಗಿ ಕ್ರಾಂತಿಕಾರಿ ಬದಲಾವಣೆ ತಂದ ದಿವಂಗತ ಕೆ.ವಿ.ಶಂಕರಗೌಡರ ಯಶೋಗಾಥೆ ‘ನಿತ್ಯ ಸಚಿವ’ ರಂಗಪ್ರಯೋಗವಾಗಿ ಜನರ ಮುಂದೆ ಬರುತ್ತಿದೆ.

ಇದಕ್ಕೂ ಮೊದಲು 2017ರಲ್ಲಿ ಡಿ.ದೇವರಾಜ ಅರಸು ಜೀವನಾಧಾರಿತ ‘ಮುಖ್ಯಮಂತ್ರಿ ಅರಸು’ ನಾಟಕ ರಂಗಕ್ಕೆ ಬಂದಿತ್ತು. ಅದಾದ ನಂತರ ಶಂಕರಗೌಡ ಜೀವನಾಧಾರಿತ ರಂಗಪ್ರಯೋಗ ಸಿದ್ಧಗೊಂಡಿದೆ. ಅರಸು ಬದುಕಿಗೆ ರಂಗರೂಪ ನೀಡಿದ್ದ ಪ್ರೊ.ರಾಜಪ್ಪ ದಳವಾಯಿ ಅವರೇ ‘ನಿತ್ಯಸಚಿವ’ರಿಗೂ ರಂಗರೂಪ ನೀಡುತ್ತಿರುವುದು ವಿಶೇಷ. ಪ್ರಮೋದ್ ಶಿಗ್ಗಾಂವ್ ನಿರ್ದೇಶಿಸಿದ್ದಾರೆ.



ಕೆ.ವಿ.ಶಂಕರಗೌಡ

ಸ್ವಾತಂತ್ರ್ಯ ಹೋರಾಟಗಾರ, ರಾಜಕಾರಣಿ, ಸಾಹಿತಿ, ನಾಟಕಕಾರ, ರಂಗ ನಿರ್ದೇಶಕ, ನಟ, ಚಲನಚಿತ್ರ ನಿರ್ಮಾಪಕ, ಸಹಕಾರಿ ಧುರೀಣರಾಗಿ ಬಹುಮುಖಗಳಲ್ಲಿರುವ ಕೆವಿಎಸ್ ಬದುಕು ರಂಗರೂಪ ಪಡೆಯುತ್ತಿರುವುದು ಸಹಜವಾಗಿ ಹಳೇ ಮೈಸೂರು ಭಾಗದಲ್ಲಿ ಕುತೂಹಲ ಮೂಡಿಸಿದೆ. ಆದರೆ, ನಾಟಕ ಮಂಡ್ಯ ಭಾಗಕ್ಕಷ್ಟೇ ಸೀಮಿತವಾಗಿಲ್ಲ. ಕೃಷಿ– ಖಾದಿ– ಶಿಕ್ಷಣ– ಸಹಕಾರ ಕ್ಷೇತ್ರಗಳಲ್ಲಿ ದೇಶಮೆಚ್ಚುವ ಸಾಧನೆ ಮಾಡಿರುವ ಶಂಕರಗೌಡರ ಯಶೋಗಾಥೆ ವಿಶ್ವವ್ಯಾಪಿಯಾಗಿದೆ.

ಸಕ್ಕರೆ ಜಿಲ್ಲೆಯ ಶಿಲ್ಪಿ ಎಂದೇ ಪ್ರಸಿದ್ಧಿ ಪಡೆದಿರುವ ಕೆ.ವಿ.ಶಂಕರಗೌಡರ ಪಯಣ ಸಂಕೀರ್ಣವಾದುದು. ಕೀಲಾರದ ರೈತ ಕುಟುಂಬದಲ್ಲಿ ಹುಟ್ಟಿದ ಅವರು ಸಣ್ಣ ವಯಸ್ಸಿನಲ್ಲೇ ಗಾಂಧೀಜಿಯಿಂದ ಪ್ರೇರಣೆಗೊಂಡಿದ್ದರು. ಗಾಂಧಿ ಕೊಟ್ಟ ಹೋರಾಟದ ಕರೆಗೆ ಹಳ್ಳಿಯಿಂದಲೇ ಪ್ರತಿಕ್ರಿಯೆ ಕೊಡುತ್ತಿದ್ದರು.

ಬೆಳಗಾವಿಯ ಕೆಎಲ್ಇ ಕಾಲೇಜಿನಲ್ಲಿ ಕಾನೂನು ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ್ದ ಅವರು ಜೀವನದುದ್ದಕ್ಕೂ ಹೋರಾಟದ ಬದುಕು ಮುಂದುವರಿಸಿದರು. ‘ಕೋರ್ಟ್‌ನಲ್ಲಿ ನಾಟಕ ಮಾಡಲಾರೆ, ರಂಗದ ಮೇಲೆ ನಾಟಕ ಮಾಡುವೆ’ ಎನ್ನುತ್ತಾ ವಕೀಲಿ ವೃತ್ತಿ ತ್ಯಜಿಸಿದ್ದ ಶಂಕರಗೌಡರು ಜನಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು. ರಂಗಭೂಮಿ ಮೇಲಿದ್ದ ಆಸಕ್ತಿಯನ್ನೂ ಅನಾವರಣಗೊಳಿಸಿದರು.

ದೇಶದಲ್ಲೇ ಮೊದಲ ಪದವೀಧರ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂಬ ಕೀರ್ತಿ ಪಡೆದಿದ್ದ ಶಂಕರಗೌಡರು, ತಳಮಟ್ಟದಿಂದ ರಾಜಕಾರಣ ಆರಂಭಿಸಿದ್ದರು. 1952ರಲ್ಲಿ ಮಂಡ್ಯ ಕ್ಷೇತ್ರದಿಂದ ಗೆದ್ದು ವಿಧಾನಸಭೆಯ ಮೆಟ್ಟಿಲು ಹತ್ತಿದರು. ಆದರೆ, ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಾಗ ರಾಜೀನಾಮೆ ಕೊಟ್ಟು ಹೊರಬಂದರು. ‘ಮಂಡ್ಯ ಸ್ವಾಭಿಮಾನ’, ‘ಮಂಡ್ಯ ಎಂದರೆ ಇಂಡಿಯಾ’ ಎಂಬ ಭಾವನೆಗಳು ಆರಂಭವಾಗಿದ್ದು ಅಲ್ಲಿಂದಲೇ. ರೈತರ ಮೇಲೆ ಹೆಚ್ಚುವರಿ ಕಂದಾಯ ವಿಧಿಸಿದ್ದಕ್ಕೆ ಸ್ವಪಕ್ಷೀಯ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ವಿರುದ್ಧವೇ ಬಂಡೆದ್ದು ರಾಜೀನಾಮೆ ಸಲ್ಲಿಸಿದ್ದರು.

ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಶಿಕ್ಷಣ ಸಚಿವರಾದ ಅವರು ಶಿಕ್ಷಕರಿಗೆ ಚೆಕ್ ಮೂಲಕ ವೇತನ ನೀಡುವ ವ್ಯವಸ್ಥೆ, ಕೊಠಾರಿ ಆಯೋಗದ ಶಿಫಾರಸು ಜಾರಿಗೆ ಕೈಗೊಂಡ ಕ್ರಮಗಳು ಶಿಕ್ಷಣ ಕ್ಷೇತ್ರದಲ್ಲಿ ಇಂದಿಗೂ ಮಾದರಿಯಾಗಿವೆ. ಶಂಕರಗೌಡರು ಚುನಾವಣಾ ರಾಜಕಾರಣದಲ್ಲಿ ಗೆಲುವಿಗಿಂತ ಸೋಲನ್ನೇ ಹೆಚ್ಚು ಕಂಡರು. ಅವರು ಗೆದ್ದದ್ದು ಮೂರು ಸಲ ಮಾತ್ರ. ಸೋತರೂ ಸೇವೆ ನಿಲ್ಲಿಸದ ಅವರನ್ನು ಕುವೆಂಪು ‘ನಿತ್ಯ ಸಚಿವ’ ಎಂದು ಕರೆದಿದ್ದರು. ಅದೇ ಈಗ ನಾಟಕದ ಶೀರ್ಷಿಕೆಯಾಗಿದೆ.

ರಾಜಕಾರಣದ ಜೊತೆಜೊತೆಗೆ ರಂಗಭೂಮಿಯಲ್ಲೂ ಕೃಷಿ ಮಾಡಿದ್ದ ಅವರು, ‘ಪಾದುಕಾ ಕಿರೀಟಿ’ ನಾಟಕ ಬರೆದು, ನಿರ್ದೇಶಿಸಿ ‘ದಶರಥ’ ಪಾತ್ರ ಮಾಡಿದ್ದನ್ನು ಜನ ಮರೆತಿಲ್ಲ. ವೈಯಕ್ತಿಕ ಬದುಕಿನಲ್ಲುಂಟಾದ ಏರಿಳಿತಗಳನ್ನಿಟ್ಟುಕೊಂಡು ‘ಕೂಡಿ ಬಾಳೋಣ’ ಚಲನಚಿತ್ರ ನಿರ್ಮಿಸಿದ್ದರು.

ಮಂಡ್ಯದಲ್ಲಿ ಜನತಾ ಶಿಕ್ಷಣ ಟ್ರಸ್ಟ್ (ಪಿಇಟಿ) ಸ್ಥಾಪಿಸಿ ಎಂಜಿನಿಯರಿಂಗ್ ಕಾಲೇಜು ಕಟ್ಟಿದ್ದರ ಹಿಂದೆ ರೋಚಕ ಇತಿಹಾಸವಿದೆ. ‘ರೈತರ ಮಕ್ಕಳು ಎಂಜಿನಿಯರ್ ಆಗಬೇಕು’ ಎಂಬುದು ಅವರ ಗುರಿಯಾಗಿತ್ತು. ಹಣದ ಕೊರತೆ ಎದುರಾದಾಗಲೆಲ್ಲ ನಾಟಕವಾಡಿಸಿ, ಟಿಕೆಟ್ ಹಣದಲ್ಲಿ ಕಾಲೇಜು ಕಟ್ಟಿದ ನೆನಪು ಹಳೇ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಹಸಿರು.

ಪಟಾಪಟ್ಟಿ ಚಡ್ಡಿಯಿಂದ ಹಿಡಿದು ರೈತ ಬಳಸುವ ನೇಗಿಲು, ನೊಗ, ಬಿತ್ತನೆ ಬೀಜ ಎಲ್ಲವೂ ಒಂದೇ ಸೂರಿನಡಿ ಸಿಗಬೇಕು ಎಂಬ ಉದ್ದೇಶದೊಂದಿಗೆ ನಿರ್ಮಿಸಿದ್ದ ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ಆರ್‌ಎಪಿಸಿಎಂಎಸ್) ಏಷ್ಯಾ ಖಂಡದಲ್ಲೇ ಮೊದಲ ಸಮಗ್ರ ಸಹಕಾರ ಸಂಘ ಎಂಬ ಕೀರ್ತಿ ಪಡೆದಿತ್ತು. ಅವರ ಸಹಕಾರ ಚಳವಳಿ ವಿಶ್ವದ ಗಮನ ಸೆಳೆದಿತ್ತು.

ವೈಯಕ್ತಿಕ ಜೀವನವನ್ನೇ ಪಕ್ಕಕ್ಕಿಟ್ಟು ಸಮಾಜಕ್ಕೆ ಆಸ್ತಿ ಮಾಡಿದ ಶಂಕರಗೌಡರ ಬದುಕು ತಲೆಮಾರುಗಳಿಗೆ ಸ್ಫೂರ್ತಿ ತುಂಬುವ ಕಥನ. ಸಿಟ್ಟು, ಸಿಡುಕು, ಕನಸು, ಕನವರಿಕೆಗಳ ಜೊತೆಗೆ ಅವರ ಒಡನಾಡಿಯಾಗಿದ್ದ ಬೀಡಿ, ಸಿಗರೇಟು, ಇಸ್ಪೀಟು ಅವರನ್ನೊಬ್ಬ ವರ್ಣರಂಜಿತ ವ್ಯಕ್ತಿಯನ್ನಾಗಿಸಿದ್ದವು. ಪ್ರೊ.ರಾಜಪ್ಪ ದಳವಾಯಿ ಇವೆಲ್ಲವನ್ನೂ ಬೊಗಸೆಯಲ್ಲಿ ಹಿಡಿಯುವ ಯತ್ನ ಮಾಡಿದ್ದಾರೆ. ಜುಲೈ 27, 28ರಂದು ಮಂಡ್ಯದ ವಿವೇಕಾನಂದ ರಂಗಮಂದಿರದಲ್ಲಿ ಸಂಜೆ 6.30ಕ್ಕೆ ನಾಟಕ ಪ್ರದರ್ಶನಗೊಳ್ಳಲಿದೆ.



ಪ್ರಮೋದ್ ಶಿಗ್ಗಾಂವ್

ಪ್ರೊ.ರಾಜಪ್ಪ ದಳವಾಯಿ

ಬಹುರೂಪಗಳ ಸವಾಲು

‘ಮುಖ್ಯಮಂತ್ರಿ ಅರಸು’ ಬರೆದಾಗ ಏಕತಾನತೆ ಕಾಡಿತ್ತು. ಆದರೆ ‘ನಿತ್ಯ ಸಚಿವ’ ಬರೆಯುವಾಗ ಬಹುರೂಪಗಳ ಸವಾಲು ಎದುರಾಯಿತು. ಶಂಕರಗೌಡರ ಬಗ್ಗೆ ಪ್ರಕಟವಾಗಿರುವ ಪುಸ್ತಕಗಳ ರಾಶಿ ರಾಜ್ಯದಲ್ಲಿ ಮತ್ತ್ಯಾವ ರಾಜಕಾರಣಿಗೂ ಸಿಗುವುದಿಲ್ಲ. ಸಾಹಿತ್ಯ ಸಂಪನ್ಮೂಲಗಳ ಸಹಾಯದಿಂದ ‘ನಿತ್ಯ ಸಚಿವ’ ಮೂಡಿಬಂದಿದೆ ಎನ್ನುತ್ತಾರೆ ಪ್ರೊ.ರಾಜಪ್ಪ ದಳವಾಯಿ.

‘ನಾಟಕದಲ್ಲಿ ನಿರೂಪಣೆಯ ರೂಪವಿಲ್ಲ, ರೂಪಕದ ಛಾಯೆ ಇದೆ. ಕಲ್ಪನೆಯಲ್ಲಿ ಗಾಂಧಿ ಜೊತೆಗಿನ ಮಾತು, ಸಾವಿನ ಮನೆಯಲ್ಲಿ ಯಮನ ಜೊತೆಗಿನ ಸಂಭಾಷಣೆ ಎಲ್ಲವೂ ಭಾವ ಲೋಕ ಸೃಷ್ಟಿಸುತ್ತವೆ. ಹನುಮಂತು ಅವರ ಸಂಗೀತ ಆಪ್ತವಾಗಿದೆ. 1960, 70, 80ರ ದಶಕದ ವಸ್ತ್ರವಿನ್ಯಾಸ ಗಮನ ಸೆಳೆಯುತ್ತದೆ ಎಂದು ನಾಟಕಕ್ಕೆ ಆಹ್ವಾನಿಸುತ್ತಾರೆ ನಿರ್ದೇಶಕ ಪ್ರಮೋದ್ ಶಿಗ್ಗಾಂವ್.

ನಿತ್ಯಸಚಿವ ನಾಟಕದ ತಾಲೀಮು

ಮುನ್ನೋಟ 23-07-2023 ರಿಂದ -29-07-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಮನೆಯಲ್ಲಿ ಆನಂದದ ವಾತಾವರಣವಿದ್ದರೂ ಒಳಗೊಳಗೆ ಬಿಸಿಗಾಳಿ ಇರುತ್ತದೆ. ಬರಹಗಾರರಿಗೆ ಉತ್ತೇಜನ ದೊರೆಯುವ ಸಾಧ್ಯತೆ ಇದೆ. ವ್ಯವಹಾರವನ್ನು ಅಭಿವೃದ್ಧಿಪಡಿಸಲು ವಿದೇಶದಲ್ಲಿರುವ ಮಿತ್ರನ ನೆರವನ್ನು ಪಡೆಯುವಿರಿ. ಸಾಕಷ್ಟು ಅಲೆದಾಡಿಸಿದ್ದ ಸರ್ಕಾರಿ ಕಚೇರಿ ಕೆಲಸಗಳು ಈಗ ಆಗುತ್ತವೆ. ಚತುರತೆಯಿಂದ ವ್ಯವಹಾರಗಳಲ್ಲಿ ಲಾಭ ಪಡೆಯುವಿರಿ. ಆಸ್ತಿ ಮಾಡುವ ವಿಚಾರಗಳಲ್ಲಿ ಮುನ್ನಡೆ ಇರುತ್ತದೆ

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಿರುತ್ತದೆ. ಹೊಸ ಮನೆಯನ್ನು ಕೊಳ್ಳುವಾಗ ದಳ್ಳಾಳಿಗಳ ಬಗ್ಗೆ ಹೆಚ್ಚು ಜಾಗರೂಕತೆಯಿಂದ ಇರಿ. ಉದ್ಯೋಗ ಸ್ಥಳದಲ್ಲಿ ಸಹೋದ್ಯೋಗಿಗಳ ಜೊತೆ ಇದ್ದ ಮನಸ್ತಾಪವನ್ನು ದೂರ ಮಾಡಿಕೊಳ್ಳುವುದು ಬಹಳ ಒಳ್ಳೆಯದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗುವ ಯೋಗವಿದೆ. ಸಂಗಾತಿಗೆ ಕೃಷಿ ಭೂಮಿ ದೊರೆಯುವ ಯೋಗವಿದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಆಭರಣ ಮಾರಾಟಗಾರರಿಗೆ ಹೆಚ್ಚಿನ ವ್ಯವಹಾರ ನಡೆಯುವ ಸಾಧ್ಯತೆ ಇದೆ. ವ್ಯಾಪಾರಗಳಿಂದ ಹೆಚ್ಚು ಹಣ ನಿರೀಕ್ಷೆ ಮಾಡಬಹುದು. ಉಪನ್ಯಾಸಕರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಸೋದರಿಯರಿಂದ ಆಸ್ತಿ ವಿಚಾರದಲ್ಲಿ ಇದ್ದ ತಕರಾರುಗಳು ಪರಿಹಾರವಾಗುತ್ತವೆ. ವಿದ್ಯಾರ್ಥಿಗಳಿಗೆ ಸಿಗಬೇಕಾಗಿದ್ದ ವಿದ್ಯಾರ್ಥಿವೇತನ ದೊರೆಯುತ್ತದೆ. ಸಂಸಾರ ಸುಖಕ್ಕಾಗಿ ಸ್ವಲ್ಪ ಹಣ ಖರ್ಚು ಮಾಡುವಿರಿ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಅತಿಯಾದ ಆತ್ಮಾಭಿಮಾನದಿಂದ ಮಾತುಗಳಲ್ಲಿ ವ್ಯತ್ಯಾಸವಾಗಬಹುದು. ತಾಯಿಯ ಅಥವಾ ಸಹೋದರಿಯರ ಸಹಕಾರ ನಿಮ್ಮ ಎಲ್ಲಾ ಕೆಲಸಗಳಿಗೆ ಸಿಗುತ್ತದೆ. ಕೃಷಿಯಿಂದ ಹೆಚ್ಚಿನ ಆದಾಯವನ್ನು ನಿರೀಕ್ಷೆ ಮಾಡಬಹುದು. ನವೀನ ರೀತಿಯ ಹಣ್ಣು ತರಕಾರಿಗಳನ್ನು ಮಾರುವವರಿಗೆ ಈಗ ಆದಾಯ ಹೆಚ್ಚುತ್ತದೆ. ರಾಜಕೀಯ ವ್ಯಕ್ತಿಗಳು ಕೆಲವರ ಮೇಲೆ ಒತ್ತಡ ಹಾಕಬಹುದು.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಸ್ತ್ರೀಯರು ನಡೆಸುವ ಆಹಾರೋದ್ಯಮಗಳಲ್ಲಿ ಹೆಚ್ಚಿನ ವ್ಯವಹಾರ ನಡೆದು ಲಾಭವಿರುತ್ತದೆ. ಹೈನುಗಾರಿಕೆ ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ. ತಾಯಿಯಿಂದ ನಿಮ್ಮ ಕೆಲಸಗಳಿಗೆ ಧನ ಸಹಾಯ ಸಿಗುತ್ತದೆ. ಸಂಗೀತಗಾರರಿಗೆ ಹೆಚ್ಚಿನ ಸಂಭಾವನೆ ಸಿಗುವ ಸಾಧ್ಯತೆ ಇದೆ. ಒಡಹುಟ್ಟಿದವರು ನಿಮ್ಮ ಕೆಲಸಗಳಿಗೆ ಸ್ವಲ್ಪ ಅಡ್ಡಿ ಮಾಡುವರು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಜಮೀನು ಖರೀದಿ ಅಥವಾ ಜಮೀನು ಮಾರಾಟ ಮಾಡಿಸುವವರಿಗೆ ಹೆಚ್ಚಿನ ಆದಾಯವಿರುತ್ತದೆ. ಹಿರಿಯರು ಹೆಚ್ಚು ಆಧ್ಯಾತ್ಮದತ್ತ ಗಮನಹರಿಸುವರು. ಬಂಧುಗಳೊಡನೆ ಮಾಡಿದ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ ಇರುತ್ತದೆ. ವ್ಯವಹಾರದಲ್ಲಿ ಈಗ ಸಾಮಾನ್ಯ ಲಾಭ ಇರುತ್ತದೆ. ನಿಮ್ಮದೇ ತಪ್ಪು ನಿರ್ಧಾರಗಳಿಂದ ಕೆಲವು ಲಾಭಾಂಶ ಕಡಿಮೆ ಆಗುವ ಸಾಧ್ಯತೆ ಇದೆ. ಮೂಳೆ ತೊಂದರೆಗಳು ಕಾಣಿಸಿಕೊಳ್ಳಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ಪ್ರವಾಸೋದ್ಯಮವನ್ನು ನಡೆಸುತ್ತಿರುವವರಿಗೆ ಹೆಚ್ಚಿನ ಆದಾಯವಿರುತ್ತದೆ. ತಾಂತ್ರಿಕ ಕ್ಷೇತ್ರದಲ್ಲಿರುವವರಿಗೆ ಹೊಸ ರೀತಿಯ ಆವಿಷ್ಕಾರಗಳನ್ನು ಮಾಡುವ ಯೋಗವಿದೆ. ಸ್ನೇಹಿತರ ಮತ್ತು ಹಿರಿಯರ ಸಲಹೆಯಂತೆ ನಿಮ್ಮ ನಡವಳಿಕೆಯಲ್ಲಿ ಸಾಕಷ್ಟು ಬದಲಾವಣೆಯನ್ನು ಮಾಡಿಕೊಳ್ಳುವಿರಿ. ಜನ ಸಂಪರ್ಕದಲ್ಲಿರುವ ರಾಜಕಾರಣಿಗಳಿಗೆ ಹೆಚ್ಚಿನ ಕೆಲಸದ ಒತ್ತಡ ಇರುತ್ತದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ಸರ್ಕಾರಿ ನೌಕರರಿಗೆ ಹೆಚ್ಚಿನ ಅನುಕೂಲ ಸಿಗುವ ಸಾಧ್ಯತೆ ಇದೆ. ಆಹಾರ ಪದಾರ್ಥಗಳನ್ನು ತಯಾರಿಸಿ ಮಾರುವವರಿಗೆ ವ್ಯವಹಾರ ಹೆಚ್ಚುತ್ತದೆ. ಕೌಟುಂಬಿಕವಾಗಿ ಇರುವ ಜವಾಬ್ದಾರಿಗಳನ್ನು ಹಿರಿಯರು ಇತರರಿಗೆ ಹಂಚುವುದು ಉತ್ತಮ. ಅಪೇಕ್ಷಿಸಿದ ಸಾಲಗಳು ಖಂಡಿತ ದೊರೆಯುತ್ತದೆ. ಕೃಷಿಕರಿಗೆ ಇಲಾಖೆಯಿಂದ ಸಾಕಷ್ಟು ಮಾರ್ಗದರ್ಶನ ಹಾಗೂ ಸಹಾಯಗಳು ದೊರೆಯುತ್ತವೆ.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಉತ್ತಮ ಹೆಸರು ಬರುತ್ತದೆ. ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರು ದಕ್ಷತೆಗೆ ಹೆಸರಾಗುವವರು. ಉದ್ಯೋಗ ಸ್ಥಳದಲ್ಲಿ ಹೆಚ್ಚಿನ ಆತ್ಮವಿಶ್ವಾಸದಿಂದ ಕೆಲಸ ಮಾಡುವುದು ಒಳ್ಳೆಯದು. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮಗೆ ಅನುಕೂಲವಿರುತ್ತದೆ. ತಂದೆಯು ತನ್ನ ವ್ಯವಹಾರಗಳನ್ನು ನಿಮಗೆ ವಹಿಸುವ ಸಾಧ್ಯತೆ ಇದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಪಶು ಆಹಾರವನ್ನು ಮಾರಾಟ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಪಶು ಸಂಗೋಪನೆಯನ್ನು ಮಾಡುವವರಿಗೆ ಸಾಮಾನ್ಯ ಅಭಿವೃದ್ಧಿ ಇರುತ್ತದೆ. ಉದ್ಯೋಗ ಸ್ಥಳದಲ್ಲಿ ಕೆಲವು ಅನಿರೀಕ್ಷಿತ ಘಟನೆಗಳಿಂದ ನಿಮಗೆ ಪ್ರಾಮುಖ್ಯ ಬರುತ್ತದೆ. ಹೊಸದಾಗಿ ರಾಜಕೀಯರಂಗಕ್ಕೆ ಸೇರಬೇಕೆನ್ನುವವರು ಸರಿಯಾಗಿ ಆಲೋಚನೆಮಾಡಿ ಸೇರಿ. ವಿದ್ಯಾರ್ಥಿಗಳು ಅಭ್ಯಾಸದಲ್ಲಿ ಹೆಚ್ಚಿನ ಗಮನಹರಿಸಲೇಬೇಕು.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ನಿಮ್ಮ ಯೋಜಿತ ಕೆಲಸಗಳು ನಿಧಾನವಾದರೂ ಮುಂದುವರೆದಿರುತ್ತವೆ. ಸ್ನೇಹಿತರಿಗೆ ಮಾಡಿದ್ದ ಹಣಕಾಸಿನ ನೆರವುಗಳು ವಾಪಸು ಬರುತ್ತವೆ. ಕಳೆದು ಹೋದ ಆಸ್ತಿಯ ಬಗ್ಗೆ ಚಿಂತಿಸುವುದು ಬೇಡ. ತಂದೆಯಿಂದ ಹೆಚ್ಚು ಪ್ರತಿಫಲ ಅಪೇಕ್ಷೆ ಪಡೆಯುವುದು ಬೇಡ. ಯುವಕರು ಅತಿಯಾದ ಹಣದಾಸೆಯಿಂದ ವಾಮಮಾರ್ಗ ಹಿಡಿಯುವುದು ಬೇಡ. ಶ್ರಮಪಟ್ಟು ದುಡಿದ ಹಣದಲ್ಲಿ ಸಂತಸವಿರುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ಸಹೋದ್ಯೋಗಿಗಳ ಸಹಕಾರದಿಂದ ನಿಮ್ಮ ಕೆಲಸ ಪರಿಪೂರ್ಣವಾಗುವುದು. ಹಿರಿಯರಿಗೆ ವಿದೇಶದಲ್ಲಿ ಇರುವ ಅವರ ಮಕ್ಕಳಿಂದ ಧನಸಹಾಯ ಒದಗಿ ಬರುತ್ತದೆ. ಅಲಂಕಾರಕ್ಕಾಗಿ ಅಥವಾ ನಡವಳಿಕೆಯಿಂದ ಹೆಚ್ಚು ಹಣ ಖರ್ಚು ಮಾಡುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಾಕಷ್ಟು ಯಶಸ್ಸು ದೊರೆಯುತ್ತದೆ. ಧರ್ಮ ವಿದ್ಯೆಯನ್ನು ಕಲಿಯುತ್ತಿರುವವರಿಗೆ ಉತ್ತಮ ಅವಕಾಶವಿರುತ್ತದೆ

ಜಾತಿ ನೆತ್ತರಿನ ನಂಜೂ...

8ನೇ ಪುಟದಿಂದ...

ಹರಳಯ್ಯ, ಶೀಲವಂತ ಮತ್ತು ಮಧುವರಸರ ಕಣ್ಣುಗಳನ್ನು ಕಿತ್ತು, ಆನೆಯ ಕಾಲಿಗೆ ಕಟ್ಟಿ ಎಳಹೂಟಿಯ ಶಿಕ್ಷೆ ವಿಧಿಸಿ ಹತ್ಯೆ ಮಾಡಲಾಗಿತ್ತು.

21ನೇ ಶತಮಾನದಲ್ಲಿ ಅಭಿವೃದ್ಧಿಯ ಮಂತ್ರ ಜಪಿಸುತ್ತಿರುವಾಗಲೂ 12ನೇ ಶತಮಾನದ ಇಂಥ ಹತ್ಯೆಯ ಪಳೆಯುಳಿಕೆಯಂತೂ ಉಳಿದಿದೆ. ರಾಜ್ಯದ ಮಂಡ್ಯ, ಮೈಸೂರು, ಕೋಲಾರ ಭಾಗಗಳಲ್ಲಿನ ಪದೇಪದೇ ವರದಿಯಾಗುವ ಮರ್ಯಾದೆಗೇಡು ಹತ್ಯೆಗಳ ಹಿಂದೆ ಊಳಿಗಮಾನ್ಯ ಪದ್ಧತಿ, ಭೂಮಾಲೀಕತ್ವದ ಧೋರಣೆ, ಜಾತಿ ಶ್ರೇಷ್ಠತೆಯ ವ್ಯಸನವನ್ನು ಗುರುತಿಸುತ್ತಾರೆ ಮಹಿಳಾ ಹೋರಾಟಗಾರ್ತಿಯರು. ಪರಿಶಿಷ್ಟರ ಹುಡುಗ ಮೇಲ್ಜಾತಿಯ ಹುಡುಗಿಯನ್ನು ಪ್ರೀತಿಸಿದರೆ ಒಪ್ಪಿಕೊಳ್ಳುವ ಪರಿಶಿಷ್ಟರ ಕುಟುಂಬಗಳು, ತಮ್ಮಲ್ಲೇ ಇರುವ ಕೆಳಜಾತಿಗಳ ಇಲ್ಲವೇ ಉಪಜಾತಿಗಳ ಹೆಣ್ಣನ್ನು ಒಪ್ಪಿಕೊಳ್ಳುವುದರಲ್ಲಿ ಹಿಂದೇಟು ಹಾಕುತ್ತವೆ. ಪರಿಶಿಷ್ಟರಲ್ಲಿ ಹೊಲೆಯ–ಮಾದಿಗರ ನಡುವೆ ಹೆಣ್ಣು–ಗಂಡಿನ ಕೊಡುಕೊಳ್ಳುವಿಕೆಯೇ ಇಲ್ಲ. ಇಂಥದ್ದೊಂದು ವಿವಾಹ ಮಾಡಿಸುವಾಗ ಕನ್ನಡದ ಪ್ರಸಿದ್ಧ ಲೇಖಕರೊಬ್ಬರು ಪರಿಶಿಷ್ಟ ಸಮುದಾಯದ ಆಕ್ರೋಶಕ್ಕೆ ಕಾರಣರಾಗಬೇಕಾಯಿತು. ಪರಿಶಿಷ್ಟ ಜಾತಿಯ ಯುವಕ, ಪರಿಶಿಷ್ಟ ಪಂಗಡದ ಯುವತಿ ವಿವಾಹ ಪ್ರಕರಣದಲ್ಲಿ ವರನ ಸ್ನೇಹಿತನನ್ನು ಸ್ವಜಾತಿಯವರೇ ಕೈಗೆ ಸಿಕ್ಕಂತೆ ಹೊಡೆದಿದ್ದರು. ಅಂದು ಆತ ಉಳಿದದ್ದೇ ಹೆಚ್ಚು ಎನ್ನುವಂಥ ಸ್ಥಿತಿಯಾಗಿತ್ತು ಎಂದು ನೆನಪಿಸಿಕೊಳ್ಳುತ್ತಾರೆ ದಲಿತ ಸಂಘರ್ಷ ಸಮಿತಿಯ ಮುಖಂಡರೊಬ್ಬರು.

ಸಾಮಾಜಿಕ ಜಾತಿ ಶ್ರೇಣೀಕರಣದಲ್ಲಿ ಕೆಳಗಿರುವ ಜಾತಿಗಳಲ್ಲೇ ತಾರತಮ್ಯಗಳಿರುವುದನ್ನು ಗುರುತಿಸುವ ದಲಿತ ಸಂಘಟನೆಗಳು ಮತ್ತು ಜನವಾದಿ, ಗಮನ ಅನೇಕ ಸಂಘಟನೆಗಳು ಈ ನಿಟ್ಟಿನಲ್ಲಿ ಹೋರಾಟ, ಬೀದಿನಾಟಕ, ಜಾಗೃತಿಯ ಕಾರ್ಯಕ್ರಮಗಳನ್ನು ಮಾಡುತ್ತಿವೆ. ಆದರೆ, ಜಾತಿವ್ಯಸನ ಮಾನಸಿಕವಾಗಿ ಸ್ಥಿರೀಕರಣಗೊಂಡಿರುವ ಸಮುದಾಯಗಳಲ್ಲಿ ಬದಲಾವಣೆ ತರುವುದು ಅಷ್ಟು ಸುಲಭವಲ್ಲ ಎಂಬುದು ಈ ಸಂಘಟನೆಗಳು ಕಂಡುಕೊಂಡಿರುವ ಸತ್ಯ.

ಮೇಲ್ಜಾತಿಯ ಸಂಪ್ರದಾಯ, ಆಚಾರ–ವಿಚಾರಗಳನ್ನು ಅನುಸರಿಸುವ ಕೆಳಜಾತಿಗಳು, ಅದೇ ಮೇಲ್ಜಾತಿಯ ಕೆಲ ಸಮುದಾಯಗಳಲ್ಲಿ ನಡೆಯುತ್ತಿರುವ ಅಂತರ್ಜಾತಿ ವಿವಾಹಗಳನ್ನು ಅನುಕರಿಸುವಲ್ಲಿ ವಿಫಲವಾಗಿವೆ. ಆಧುನಿಕತೆ, ತಂತ್ರಜ್ಞಾನವನ್ನು ಶರವೇಗದಲ್ಲಿ ಒಗ್ಗಿಸಿಕೊಳ್ಳುತ್ತಿರುವ ಮೇಲ್ಜಾತಿ– ಕೆಳಜಾತಿಗಳು ಪ್ರೀತಿ, ವಿವಾಹದಂಥ ಸಮಯದಲ್ಲಿ ಇನ್ನೂ ಜಾತಿಶ್ರೇಷ್ಠತೆಯ ವ್ಯಸನವನ್ನೇ ಉಳಿಸಿಕೊಂಡಿವೆ. ಇದಕ್ಕೆ ಜಾತಿಗೊಂದು ಮ್ಯಾಟ್ರಿಮೋನಿಯಲ್ ವೆಬ್‌ಸೈಟ್‌ಗಳು, ಜಾತಿಗೊಂದು ವಸತಿ ಸಮುಚ್ಚಯಗಳು, ಬಡಾವಣೆಗಳೂ ಇಂಬುಗೊಡುತ್ತಿವೆ.

ಇತ್ತೀಚಿನ ದಶಕಗಳಲ್ಲಿ ಅಲ್ಪಮಟ್ಟಿಗೆ ಸಂಘಟಿತವಾಗುತ್ತಿರುವ ಕೆಳಜಾತಿ– ಸಮುದಾಯಗಳು ಆಧುನೀಕರಣಕ್ಕೆ ತಮ್ಮನ್ನು ಒಗ್ಗಿಸಿಕೊಂಡರೂ ಆಂತರ್ಯದಲ್ಲಿ ಮಾತ್ರ ತಮ್ಮಲ್ಲೇ ದ್ವೀಪಗಳಾಗಿಬಿಟ್ಟಿವೆ. ಅಂತರಜಾತಿಯ ವಿವಾಹದ ಸಂದರ್ಭದಲ್ಲಿ ವಿರೋಧಾತ್ಮಕ ನೀತಿಯ ಮೊರೆಹೋಗುತ್ತವೆ. ಈ ವಿರೋಧದ ನೆಲೆಯೇ ಮರ್ಯಾದೆಗೇಡು ಹತ್ಯೆಗೆ ಪ್ರಚೋದನೆ ನೀಡುತ್ತಿದೆ.

ಅಂತರಜಾತಿಯ ವಿವಾಹವಾದರೆ ಊರೊಳಗೆ ತಮ್ಮ ಕುಟುಂಬದ ಮರ್ಯಾದೆಗೆ ಧಕ್ಕೆಯಾಗುವ ಭೀತಿಯ ಜತೆಗೆ ಗ್ರಾಮದೊಳಗಿನ ಆರ್ಥಿಕ ಚಟುವಟಿಕೆಗಳಲ್ಲಿನ ತಮ್ಮ ಪಾಲು ತಪ್ಪಿಹೋಗುವ ಭೀತಿಯೂ ಮತ್ತೊಂದೆಡೆ ಆವರಿಸಿಕೊಂಡಿದೆ. ಈಗಲೂ ದಲಿತರು ಎಲ್ಲಿ ಕೂರಬೇಕು, ಎಲ್ಲಿ ನೀರು ಕುಡಿಯಬೇಕು, ಎಲ್ಲಿ ಕ್ಷೌರ ಮಾಡಿಸಿಕೊಳ್ಳಬೇಕು ಎಂಬ ಸಾಮಾಜಿಕ ಬಹಿಷ್ಕಾರಗಳು ಸಕ್ರಿಯವಾಗಿರುವ ಕಾರಣ ಜಾತಿಯ ವ್ಯಸನ ಮತ್ತಷ್ಟು ಹೆಚ್ಚುತ್ತಿದೆ. ಹಿಂದೆ ಆಯಾ ಕುಟುಂಬಗಳಿಗಷ್ಟೇ ಸೀಮಿತವಾಗಿದ್ದ ವಿವಾಹ ಪ್ರಕರಣಗಳಲ್ಲಿ ಈಗ ಆಯಾ ಜಾತಿಯ ಸಮುದಾಯವೇ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಹಾಗೆಂದು ಸ್ವಜಾತಿಯಲ್ಲೇ ಆಗುವ ವಿವಾಹಗಳಲ್ಲಿ ವರ್ಗ, ಅಂತಸ್ತಿನ ಪ್ರಶ್ನೆಗಳು ನೀಗಿವೆ ಎಂದರ್ಥವಲ್ಲ.

ಸಾಮಾನ್ಯವಾಗಿ ಅಧಿಕಾರಸ್ಥ ದಲಿತ ರಾಜಕಾರಣಿ ಮಕ್ಕಳು ಮೇಲ್ಜಾತಿಯ ಸುಶಿಕ್ಷಿತ ಹೆಣ್ಣುಗಳನ್ನೇ ಮದುವೆಯಾಗಲು ಇಚ್ಛಿಸುತ್ತಾರೆ. ಕೆಳವರ್ಗದ ಶ್ರೀಮಂತರೂ ಮೇಲ್ವರ್ಗದವರೊಂದಿಗೆ ಗುರುತಿಸಿಕೊಳ್ಳುವ ಹವಣಿಕೆಯಲ್ಲಿರುವಾಗ ಇವರ ನಡುವೆ ಪರಸ್ಪರ ಸಂಬಂಧಗಳು ಸುಲಭವಾಗಿ ಬೆಸೆದುಕೊಂಡುಬಿಡುತ್ತವೆ. ಇಲ್ಲಿ ಅಂತಸ್ತು, ವರ್ಗವಷ್ಟೇ ಮುಖ್ಯವಾಗಿ ಕೆಲವೊಮ್ಮೆ ಜಾತಿ ನಗಣ್ಯವಾಗುತ್ತದೆ. ಇದಕ್ಕೆ ಸಿನಿಮಾ ಕ್ಷೇತ್ರ ಮತ್ತು ರಾಜಕಾರಣ ಕ್ಷೇತ್ರದಲ್ಲಿನ ಗಣ್ಯರ ವಿವಾಹಗಳೇ ಉದಾಹರಣೆ.

ಜಾತಿ–ಧರ್ಮದ ಶ್ರೇಷ್ಠತೆಯ ಅಮಲು, ಕುಟುಂಬದ ಪ್ರತಿಷ್ಠೆ, ಸಾಮಾಜಿಕ ಅಂತಸ್ತಿನ ಭ್ರಮೆಯಲ್ಲಿ ಜರುಗುತ್ತಿರುವ ಮರ್ಯಾದೆಗೇಡು ಹತ್ಯೆಗಳು ಭಾರತವಷ್ಟೇ ಅಲ್ಲ, ನೆರೆಯ ಪಾಕಿಸ್ತಾನ, ಅಭಿವೃದ್ಧಿ ರಾಷ್ಟ್ರಗಳೆಂದು ಮುಂಚೂಣಿಯಲ್ಲಿರುವ ಬ್ರಿಟನ್, ನೆದರ್‌ಲೆಂಡ್, ಜರ್ಮನಿ, ಸ್ವೀಡನ್‌ನಲ್ಲೂ ಆಗುತ್ತಿವೆ.

ಜಾಗತಿಕವಾಗಿ ಹಬ್ಬಿರುವ ಮರ್ಯಾದೆಗೇಡು ಹತ್ಯೆ ಎಂಬ ವೈರಸ್ ಅನ್ನು ತಡೆಯುವಲ್ಲಿ ಮಾಧ್ಯಮಗಳ ಪಾತ್ರವೂ ಮಹತ್ವದ್ದು. ಮರಾಠಿಯಲ್ಲಿ ಕೆಲ ವರ್ಷಗಳ ಹಿಂದೆ ಬಂದಿದ್ದ ನಾಗರಾಜ್ ಮಂಜುಳೆ ನಿರ್ದೇಶನದ ‘ಸೈರಾಟ್’ ಸಿನಿಮಾ ಮರ್ಯಾದೆಗೇಡು ಹತ್ಯೆಯ ಭೀಕರತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿತ್ತು.

ಹೆತ್ತ ಮಕ್ಕಳನ್ನೇ ಹತ್ಯೆ ಮಾಡುವವರ ಮಾನಸಿಕ ಸ್ಥಿತಿ ಎಂಥದ್ದಿರಬಹುದು ಎಂದು ಪ್ರಶ್ನಿಸಿದರೆ, ‘ಯಾರಿಗೇ ಆಗಲಿ ಕೊಲ್ಲುವ ಮನಃಸ್ಥಿತಿ ತಕ್ಷಣಕ್ಕೆ ಉದ್ಭವವಾಗದು. ಒಬ್ಬ ವ್ಯಕ್ತಿ ಬೆಳೆದು ಬಂದಿರುವ ರೀತಿ, ನಂಬಿಕೆಗಳ ಮೇಲೆ ಕೊಲ್ಲುವ ಸ್ಥಿತಿಯು ಅವಲಂಬಿತವಾಗಿರುತ್ತದೆ. ಹೆಣ್ಣನ್ನು ಸ್ವತ್ತು ಎಂಬುದನ್ನು ಪಿತೃಪ್ರಧಾನ ಸಮಾಜ ಭಾವಿಸುತ್ತದೆ. ಗಂಡಸುತನ ಅಥವಾ ಮರ್ಯಾದೆ ಎನ್ನುವುದು ಸ್ವತ್ತಿನ ಸಂರಕ್ಷಣೆಯ ಮೇಲೆಯೇ ಅವಲಂಬಿತವಾಗಿದೆ. ಹೀಗಾಗಿ ಸ್ವತ್ತಿನ ರಕ್ಷಣೆಗೆ ಯಾವ ಮಟ್ಟಕ್ಕಾದರೂ ಇಳಿಯಲು ಮುಂದಾಗುವ ಪಿತೃಪ್ರಧಾನ ಸಮಾಜವು ಮರ್ಯಾದೆಗೇಡು ಹತ್ಯೆ ಮಾಡುವಂಥ ಸ್ಥಿತಿಗೆ ತಲುಪುತ್ತದೆ’ ಎಂದು ವಿಶ್ಲೇಷಿಸುತ್ತಾರೆ ಬೆಂಗಳೂರಿನ ನಿಮ್ಹಾನ್ಸ್‌ನ ಮನೋವೈದ್ಯಕೀಯ ವಿಭಾಗದ ಸಹ ಪ್ರಾಧ್ಯಾಪಕ ಡಾ.ಚೇತನ್ ಬಿ.

ಇಂಥ ಹತ್ಯೆಗಳನ್ನು ತಡೆಯುವಲ್ಲಿ ಕಾನೂನು ಪ್ರಬಲ ಪಾತ್ರ ವಹಿಸಬಲ್ಲದು, ಮನಗಂಡ ಭಾರತದ ಸುಪ್ರೀಂ ಕೋರ್ಟ್, ವಿಕಾಸ್ ಯಾದವ್ ಪ್ರಕರಣದಲ್ಲಿ ಮರ್ಯಾದೆಗೇಡು ಹತ್ಯೆಗಳನ್ನು ಅತ್ಯಂತ ಕಟುವಾದ ಮಾತುಗಳಿಂದ ಖಂಡಿಸಿದೆ. ಈ ಬಗೆಯ ಅಪರಾಧಗಳು ವಿರಳಾತಿವಿರಳ ಪ್ರಕರಣಗಳ ವ್ಯಾಪ್ತಿಗೆ ಬರುತ್ತವೆಂದೂ ಇಂಥ ಕೃತ್ಯಗಳಿಗೆ ಮರಣದಂಡನೆಯೇ ಸೂಕ್ತವಾದ ಶಿಕ್ಷೆಯೆಂದೂ ಅಭಿಪ್ರಾಯಪಟ್ಟಿದೆ. ಅಂತೆಯೇ ಶಕ್ತಿವಾಹಿನಿ ಪ್ರಕರಣದಲ್ಲಿ ಸಂಗಾತಿಯ ಆಯ್ಕೆಯ ಹಕ್ಕನ್ನು’ ಸಂವಿಧಾನದ ವಿಧಿ 21 ಮತ್ತು 19 (1) (ಎ) ಅಡಿಯಲ್ಲಿ ಗುರುತಿಸಿದ್ದು, ವಯಸ್ಕರ ಬಾಳ ಸಂಗಾತಿಯ ಆಯ್ಕೆಯ ವಿಚಾರದಲ್ಲಿ ಹಸ್ತಕ್ಷೇಪ ಮಾಡಲು ಮೂರನೇ ವ್ಯಕ್ತಿಗೆ ಯಾವುದೇ ಅಧಿಕಾರ ಇಲ್ಲ. ವಯಸ್ಕರ ವಿವಾಹದ ಕುರಿತಾದ ಹಕ್ಕುಗಳಿಗೆ ಚ್ಯುತಿಯನ್ನು ಉಂಟು ಮಾಡುವವರ ವಿರುದ್ಧ ಕಾನೂನಿನ ಕ್ರಮ ಜರುಗಿಸಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

ಮತ್ತೊಂದು ಪ್ರಕರಣದಲ್ಲಿ ‘ಜಾತಿ ವ್ಯವಸ್ಥೆ ಈ ದೇಶಕ್ಕೆ ಅಂಟಿದ ಶಾಪ. ಎಷ್ಟು ಬೇಗ ಅದನ್ನು ನಾಶಪಡಿಸಲಾಗುತ್ತದೆಯೋ ಅಷ್ಟು ಒಳ್ಳೆಯದು. ದೇಶವು ಒಗ್ಗಟ್ಟಾಗಿ ತನ್ನ ಮುಂದಿರುವ ಸವಾಲುಗಳನ್ನು ಎದುರಿಸಬೇಕಾದ ಸಂದರ್ಭದಲ್ಲಿ ಜಾತಿ, ದೇಶವನ್ನು ಒಡೆಯುತ್ತಿದೆ. ಹಾಗಾಗಿ, ಅಂತರಜಾತಿ ಮದುವೆಗಳು ‘ಜಾತಿ ವ್ಯವಸ್ಥೆ’ಯನ್ನು ನಾಶಪಡಿಸುವ ಕಾರಣಕ್ಕೆ ಅವು ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿವೆ. ಆದರೆ, ದೇಶದ ಹಲವು ಭಾಗಗಳಲ್ಲಿ ಅಂತರಜಾತಿ ಮದುವೆ ಮಾಡಿಕೊಳ್ಳುತ್ತಿರುವ ಯುವಜೋಡಿಗಳಿಗೆ ಹಿಂಸೆ ಮಾಡುವುದಾಗಿ ಬೆದರಿಸುವುದು ಅಥವಾ ಹಿಂಸೆ ನೀಡುವಂಥ ಸುದ್ದಿಗಳು ವರದಿಯಾಗುತ್ತಿರುವುದು ಆಘಾತಕಾರಿ. ನಮ್ಮ ಅಭಿಪ್ರಾಯದಲ್ಲಿ ಅಂತಹ ಹಿಂಸೆಯ ಘಟನೆಗಳು, ಬೆದರಿಕೆಗಳು, ಕಿರುಕುಳಗಳು ಸಂಪೂರ್ಣ ಕಾನೂನುಬಾಹಿರ ಮತ್ತು ಅವುಗಳನ್ನು ಮಾಡುವವರನ್ನು ಕಠಿಣವಾಗಿ ಶಿಕ್ಷಿಸಬೇಕು. ಇದು ಮುಕ್ತ ಮತ್ತು ಪ್ರಜಾತಂತ್ರ ದೇಶವಾಗಿದೆ. ಮದುವೆಗೆ ಅರ್ಹ ವಯಸ್ಸಾದ ಆತ ಅಥವಾ ಆಕೆ ತಮಗಿಷ್ಟವಾದ ಯಾರನ್ನಾದರೂ ವಿವಾಹವಾಗಬಹುದು’ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಈ ನಿಟ್ಟಿನಲ್ಲಿ ನ್ಯಾಯಾಂಗ ಮಾತ್ರವಲ್ಲ, ಪ್ರಭುತ್ವವೂ ಸಾಮಾಜಿಕ ಬದಲಾವಣೆಯತ್ತ ಗಮನಹರಿಸುವ ತುರ್ತಿದೆ. ಶಿಕ್ಷಣ, ಉದ್ಯೋಗದಲ್ಲಿ ಅಂತರಜಾತಿ ವಿವಾಹಿತರಿಗೆ ಆದ್ಯತೆ ತಂದಿದ್ದೇ ಆದರೆ, ದೀರ್ಘಕಾಲದಲ್ಲಾದರೂ ಇಂಥ ಹತ್ಯೆಗಳನ್ನು ತಡೆಯಬಹುದು. ‘ಶುದ್ಧರಕ್ತ’ ಎಂಬುದು ಎಲ್ಲೂ ಯಾವ ಜನಾಂಗದಲ್ಲೂ ಇಲ್ಲ. ಎಲ್ಲೆಲ್ಲೂ ಸಂಕರಕ್ಕೊಳಗಾದ ಜನಾಂಗವೇ ಜೀವಿಸುತ್ತಿದೆ ಎಂಬುದನ್ನು ವಿಜ್ಞಾನಿಗಳೂ ಕಂಡುಕೊಂಡಿರುವಾಗ ಕುಟುಂಬ, ಜಾತಿ ಪ್ರತಿಷ್ಠೆಯ ಹೆಸರಿನಲ್ಲಿ ಆಗುತ್ತಿರುವ ಮರ್ಯಾದೆಗೇಡು ಹತ್ಯೆಗಳು ನಿರರ್ಥಕ. ಈ ನಿಟ್ಟಿನಲ್ಲಿ ಪ್ರಬಲವಾದ ಕಾನೂನು ಜಾರಿಗೆ ಬಂದಲ್ಲಿ ಮಾತ್ರ ಪ್ರೀತಿಯ ಗಾಳಿ ಹಟ್ಟಿ–ಮೊಹಲ್ಲಾಗಳ ನಡುವೆ ಬೀಸಬಹುದು.

ನಮ್ಮೂರ ಕೊರಗತನಿಯ

8ನೇ ಪುಟದಿಂದ...

ಎಲ್ಲಾ ಕಲ್ಲುಗಳ ಮುಂದೆ ಕೊಡಿ ಬಾಳೆ ಎಲೆಹಾಕಿ ಪನಿಯಾರ (ಅವಲಕ್ಕಿ ಬಾಳೆ ಹಣ್ಣು ಬೆಲ್ಲ) ಇಟ್ಟು, ಅದರ ಮೇಲೆ ಕೋಶ ಬಿಡಿಸಿದ ಎಳೆಯ ಪಿಂಗಾರ, ಹೂ ಇಟ್ಟರು. ಎಲ್ಲಾ ಕಲ್ಲುಗಳಿಗೆ ಕುಂಕುಮ ಅಂಟಿಸಿದರು. ಮಡಲು ಉರಿಸಿ ಕರಿಗಂಧ ಮಾಡಿದರು. ಕೊರಗತನಿಯನಿಗೆ ‘ಬಾಜೆಲ್’ ಇಡುವ ಕ್ರಮ ಇದೆ. ಅಂದಿನ ಕಾಲದಲ್ಲಿ ಬಾಜೆಲ್ ಅಂದರೆ ಕಳ್ಳು. ಈಗ ವೈನ್, ಬ್ರಾಂಡಿ ಬಾಟಲ್‌ಗಳು ಹರಕೆಯ ರೂಪದಲ್ಲಿ ಬಂದಿವೆ.

ಹರೆರಾಮನಿಗೆ ಈ ಕ್ಷೇತ್ರ ಅಭಿವೃದ್ಧಿ ಆಗಬೇಕು ಎಂಬ ಆಶೆ ಇದೆ. ಅಭಿವೃದ್ಧಿ ಎಂದರೆ ಕಾಡು ಕಡಿದು ಭೂತಗಳಿಗೆ ಗುಡಿಕಟ್ಟುವುದೆ ಎಂದೆ. ಕಾಡು ಕಡಿಯಲು ನಾನು ಹೇಳಲಾರೆ. ಆದರೆ ಮುರಿದ ಕಡ್ಸಲೆಯನ್ನು ನಿಮ್ಮಂತಹವರು ಹೊಸದಾಗಿ ಮಾಡಿಕೊಟ್ಟರೂ ಅದನ್ನು ಹಾಗೆ ತಂದು ಇಡಲು ನಮಗೆ ಆತಂಕ ಎಂದರು.

ಕೊನೆಯದಾಗಿ ‘ಕರಿಗಂಧ’ ನೀಡುತ್ತಾ, ‘ನೀವೇನು ಬೇಡಿದಿರೋ ನನಗೆ ತಿಳಿಯದು. ಆದರೆ ನೀವು ಬೇಡಿದ್ದು ಈಡೇರಲಿ’ ಎಂದ. ‘ನಾನು ಬೇಡಿದ್ದು ಹೇಳ್ತೇನೆ. ಏನಾದರಾಗಲಿ ತನಿಯ. ಈ ನಿನ್ನ ಕರುಮಾರು ಕಾಡಿಗೆ ಧಕ್ಕೆ ಆಗದಂತೆ ನೋಡಿಕೋ ಎಂದು ಬೇಡಿದೆ’ ಎಂದೆ. ‘ಕಾಡು ಉಳಿಯಲಿ ಅಮ್ಮಾ. ಈ ಕಾಡಿಗೆ ಮುಂಭಾಗದಲ್ಲಿ ಪಾಗಾರ ಆಗಲಿ’ ಎಂದ. ನಾನು ಮುಂದೆ ಮಾತು ಬೆಳೆಸದೆ ಮರಳಿದೆ. ಅಭಿವೃದ್ಧಿಯ ಹೆಸರಲ್ಲಿ ಏನೇನು ಆಗಲಿದೆಯೋ?

ಪದಬಂಧ 2799



ಮೇಲಿನಿಂದ ಕೆಳಕ್ಕೆ

1. ಅರಸರ ಒಡತಿ ಈ ಸುತ್ತಿ ಬರುವ ಅರಸಿ 5
2. ಚಾಂದ್ರಮಾನದ ಹದಿಮೂರನೇ ತಿಥಿ 4
3. ಎಂದೆಂದಿಗೂ ಇರುವಂತಹದ್ದು ದೀರ್ಘವಾದ ಮಧುರ ಪ್ರೇಮ 3
5. ಏನೂ ತಿಳಿಯದ ಹಳ್ಳಿಯ ಅಮಾಯಕ 3
8. ಆಂತರಂಗದ ಆಹ್ಲಾದ ಉಲ್ಲಾಸ ಲವಲವಿಕೆಯಿಂದ ದೊರೆತ ಸುಖ ಸಂಪತ್ತು 5
10. ಪಂಚವಟಿಯಲ್ಲಿ ನಡೆಸುವ ಪೃಥ್ವೀ ಹೋಮ 5
12. ಇವರೇ ನಮ್ಮ ಮಂದಿ 2
14. ಕೆಲಸದ ನಡುವೆ ಸಿಗುವ ಬಿಡುವು 2
16. ಸ್ನಾತಕ ಶಿಕ್ಷಣ ಪಡೆದು ಹೆಸರಿನ ಪಕ್ಕದಲ್ಲಿ ಡಿಗ್ರಿ ಸೇರಿಸಿಕೊಂಡವ 5
17. ಭಾಗಕ್ಕೆ ಬರುವ ಪಾತ್ರ ಯೋಗ್ಯ 3
18. ಒಂಭತ್ತು ದ್ರವಗಳ ಮಿಶ್ರಣ 4
20. ಧಾನ್ಯವನ್ನು ಸಂಗ್ರಹಿಸುವ ಗೂಡು 3

ಎಡದಿಂದ ಬಲಕ್ಕೆ

1. ಮೂರು ಗಂಟೆಗಳ ಕಾಲ ಪರದೆಯ ಮೇಲೆ ಓಡಾಡುವ ಬಿಂಬ 5
3. ಎಂಟು ರೀತಿಯಲ್ಲಿ ಡೊಂಕಾಗಿದ್ದ ಅಮೃತಿಮತಿಯ ಪ್ರಿಯಕರ 4
4. ಧ್ಯಾನ ತಪಗಳಿಂದ ಬಂದ ಭಾಗ್ಯವೇ ಭಾಗ್ಯ 4
6. ಕಾಡು ಪ್ರದೇಶಕ್ಕಾಗಿ ವಾಗ್ವಾದ ಚರ್ಚೆ 5
7. ದಶರಥಾತ್ಮಜನ ತದ್ರೂಪು ಪ್ರತಿಮೆ 4
9. ನೆತ್ತಿಯ ಮೇಲಿಂದ ಒಂದೇ ಸಮನೆ ಹರಿ ಬಿಟ್ಟ ಹನಿ 4
11. ದೇವರಾಣೆಗೆ ಇದು ಸತ್ಯ 2
13. ನರರು ವಾಸಿಸುವ ಪಟ್ಟಣ 3
15. ತಪದ ಜೊತೆ ಮಂತ್ರ ಪಠನ 2
17. ಹೊಳೆಯುವ ಬೆಳಕು-ಇದರ ಅಳತೆ ಸಾಧ್ಯವೆ? 4
19. ಪಂಚತಂತ್ರ ಕತೆಗಳಲ್ಲಿ ಕರಟಕನ ಜೊತೆಯಿದ್ದ ಹತ್ತಿಕ್ಕುವ ಬುದ್ಧಿಯ ನರಿ 4
21. ಆಡು ನುಡಿಯಲ್ಲಿ ಕಾವ್ಯ ಸೃಷ್ಟಿಸಿದವ 5
22. ಹಾಸಕ್ಕೆ ಮೀಸಲಿಟ್ಟ ಏಳು ದಿನಗಳು 4
23. ನ್ಯಾಯ ನೀತಿಗಳನ್ನು ಎತ್ತಿಹಿಡಿದ ದೊರೆ, ಪಾಂಡವ ಹಿರಿಯ 4
24. ಸಮಾಲೋಚಿಸಿ ಸಂದರ್ಭಕ್ಕೆ ಸೂಕ್ತ ಸೂಚನೆ ಮತ್ತು ಕಿವಿಮಾತು ಹೇಳುವವ 5

ಪದಬಂಧ ಉತ್ತರ -2798

ಮೇಲಿಂದ ಕೆಳಕ್ಕೆ

1.ಸರಸಾ 2.ಚಿಗುರು 3.ಮಣಿಪುರ 4.ತಿಲ್ಲಾನ 7.ಧುಮುಕು 9.ಜಯವಿಜಯ 11.ದುಮ್ಮಾನ 13.ಕನಸು 16.ಮರುಳ 17.ಬಂದಿಖಾನೆ 18.ಜನುಮ 19.ಹೋಳಿಗೆ 20.ಗಡಸು

ಎಡದಿಂದ ಬಲಕ್ಕೆ

1.ಸದಭಿರುಚಿ 3.ಮಧುಮತಿ 5.ಗುರುವಾಣಿ 6. ಸಾಧುಸಂತರು 8.ಪುರಾತನ 9.ಜಠರ 10.ಕುದುರೆಲಾಯ 13.ಕರಾಳ 14.ನವೀನ 15.ಜಪಾಕುಸುಮ 17.ಬಂಡಾಯ 18.ಜನೌಷಧಿ 19.ಹೋರಿಕಾಳಗ 21.ಖಾನಾವಳಿ 22.ಮರಿಯಾನೆ 23.ಗೆಡ್ಡೆಗೆಣಸು

ಪ್ರಜಾವಾಣಿ@75

ದೀಪಾವಳಿ ವಿಶೇಷಾಂಕ 2023

ದೀಪಾವಳಿ ಕಥಾ–ಕವನ ಸ್ಪರ್ಧೆಯ ಪ್ರವೇಶಗಳಿಗೆ
ಇದೋ ಆಹ್ವಾನ
ಕನ್ನಡ ಕಥಾ ಜಗತ್ತಿನ ವಾರ್ಷಿಕ ಸಂಭ್ರಮ

ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ ಆಗಸ್ಟ್ 19, 2023

ಕಥಾ ಸ್ಪರ್ಧೆ
ಮೊದಲ ಬಹುಮಾನ: ₹20,000
ಎರಡನೇ ಬಹುಮಾನ: ₹15,000
ಮೂರನೇ ಬಹುಮಾನ: ₹10,000

ಕವನ ಸ್ಪರ್ಧೆ
ಮೊದಲ ಬಹುಮಾನ: ₹5,000
ಎರಡನೇ ಬಹುಮಾನ: ₹3,000
ಮೂರನೇ ಬಹುಮಾನ: ₹2,500

ಕಥೆ – ಕವನ ಕಳಿಸುವ ಮುನ್ನ
- ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು
- ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು
- ಕಥೆ- ಕವನಗಳು ಯೂನಿಕೋಡ್‌ನಲ್ಲಿ ಇರಬೇಕು
- ಕಥೆ/ ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು
- ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು
- ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ನ ಸಿಬ್ಬಂದಿ ಹಾಗೂ ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ.
- ಸ್ಪರ್ಧೆಗೆ ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ
- ಬಹುಮಾನಿತ ಕಥೆ, ಕವನಗಳನ್ನು ಯಾವುದೇ ಸ್ವರೂಪದಲ್ಲಿ ಯಾವಾಗ ಬೇಕಾದರೂ ಬಳಸುವ ಹಕ್ಕುಗಳನ್ನು ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್’ ಕಾಯ್ದಿರಿಸಿಕೊಂಡಿದೆ
- ಸಂಪಾದಕರ ತೀರ್ಮಾನವೇ ಅಂತಿಮ
- ಇ–ಮೇಲ್: deepavali@prajavani.co.in

ಸಂಪಾದಕರು
ದೀಪಾವಳಿ ವಿಶೇಷಾಂಕ ವಿಭಾಗ,
ಪ್ರಜಾವಾಣಿ,
ನಂ.75,
ಮಹಾತ್ಮಗಾಂಧಿ ರಸ್ತೆ,
ಬೆಂಗಳೂರು–560001

ರವೀಂದ್ರನಾಥ ಟಾಗೋರರ 'ನನ್ನ ಬಾಲ್ಯ' ಮತ್ತು ನಾನು



'ಕಾಗೆ ಕಾರುಣ್ಯದ ಕಣ್ಣು' ಮುಖಪುಟ

ಅನುಭವ

ನಾನೊಬ್ಬ ಸಾಹಿತಿಯಾಗಬೇಕು ಎಂಬ ಆಕಾಂಕ್ಷೆಯನ್ನು ಹುಟ್ಟಿಸಿದ್ದು ರವೀಂದ್ರನಾಥ ಟಾಗೋರರ 'ನನ್ನ ಬಾಲ್ಯ' ಎಂಬ ಪುಟ್ಟ ಪುಸ್ತಕ. ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ 'ನನ್ನ ಬಾಲ್ಯ' ಉಪಪಠ್ಯವಾಗಿತ್ತು. ಪ್ರಧಾನ ಪಠ್ಯ- ಎ.ಆರ್. ಕೃಷ್ಣ ಶಾಸ್ತ್ರಿಯವರ 'ವಚನ ಭಾರತ'. ಈ ಎರಡೂ ಕೃತಿಗಳ ಪ್ರಭಾವ ವಿಭಿನ್ನ ಆಯಾಮಗಳಲ್ಲಿ ನನ್ನ ಮೇಲೆ ಆಗಿದೆ. ಆದರೆ 'ನನ್ನ ಬಾಲ್ಯ' ಕೃತಿಯ ವ್ಯಾಸಂಗದಿಂದಲೇ ನಾನು ಸಾಹಿತಿಯಾಗಬೇಕೆಂಬ ಹಂಬಲಕ್ಕೆ ಬಿದ್ದೆ. ಆ ಕೃತಿಯಲ್ಲಿರುವ ಕೆಲವು ವಿವರಗಳೊಂದಿಗೆ ಹೋಲಿಸಿಕೊಳ್ಳುತ್ತಾ ಎದುರು ಬದರಾಗುತ್ತ ನಾನೇಕೆ ಅವರಂತೆ ಆಗಬಾರದು ಎಂಬ ಪ್ರಶ್ನೆ ಹಾಕಿಕೊಳ್ಳುತ್ತ, ಪ್ರಶ್ನೆಯನ್ನೇ ಸವಾಲಾಗಿಸಿಕೊಳ್ಳುತ್ತ ಪೆನ್ನು ಕೈಗೆತ್ತಿಕೊಂಡೆ.

ನಾನು ಪೆನ್ನನ್ನು ಕೈಗೆತ್ತಿಕೊಂಡದ್ದು ಎರಡು ಬಗೆಯಲ್ಲಿ. ಒಂದು- ಪೆನ್ಸಿಲ್‌ನಿಂದ ಬಡ್ತಿ ಪಡೆದು ಪೆನ್ನಿನಲ್ಲಿ ಬರೆಯತೊಡಗಿದ ಸಹಜ ಸ್ಥಿತ್ಯಂತರ. ಇದೊಂದು ಸಂಭ್ರಮದ ಸ್ಥಿತ್ಯಂತರ. ಯಾಕೆಂದರೆ 'ಪೆನ್ನು' ಎನ್ನುವುದು ನನಗೆ- ನನ್ನಂಥವರಿಗೆ- ಬರವಣಿಗೆಯ ಮತ್ತೊಂದು ಸಾಧನ ಮಾತ್ರವಲ್ಲ. ಪ್ರಾಥಮಿಕ ಶಾಲೆಯಲ್ಲಿ ಸ್ಲೇಟಿನ ಮೇಲೆ ಬಳಪದಿಂದ ಬರೆಯತೊಡಗಿದ್ದೂ ನಮಗೆ ಒಂದು ಸಂಭ್ರಮವೇ. ನನ್ನ ವಾರಿಗೆಯ ಎಷ್ಟೋ ಹುಡುಗರು ನನ್ನಂತೆಯೇ ದನ ಕಾಯಲು ಹೋಗುತ್ತಿದ್ದು ಅವರು ಅಲ್ಲೇ ಉಳಿದರು. ನಾನು ಶಾಲೆಗೆ ಬಂದವನು ಬಳಪ ಹಿಡಿದಿದ್ದೇನೆಂಬ ಸಂತೋಷ. ಎರಡು ವರ್ಷದ ನಂತರ ಬಳಪದ ಜಾಗಕ್ಕೆ 'ಸೀಸದ ಕಡ್ಡಿ' (ಪೆನ್ಸಿಲ್) ಬಂದಾಗ ಅದೆಂಥ ಆನಂದ ಗೊತ್ತ? ಉದ್ಯೋಗಿಯೊಬ್ಬನಿಗೆ ಬಡ್ತಿ ಸಿಕ್ಕಿದ ಅನುಭವ! ಪೆನ್ಸಿಲ್‌ನಿಂದ ಪೆನ್ನಿಗೆ ಬಡ್ತಿ ಸಿಗಬೇಕಾದರೆ ಮಾಧ್ಯಮಿಕ ಶಾಲೆಗೆ ಸೇರಬೇಕು- ಅಂದರೆ- ಐದನೇ ತರಗತಿಗೆ ಸೇರಬೇಕು. ಆಗ ಪೆನ್ಸಿಲ್ ಜಾಗಕ್ಕೆ ಪೆನ್ನು ಬರುತ್ತೆ. ಕನ್ನಡ ಪಠ್ಯಗಳ ಜೊತೆಗೆ ಎ,ಬಿ,ಸಿ,ಡಿ ಆಂಗ್ಲ ಅಕ್ಷರಗಳ ಕಲಿಕೆ ಶುರುವಾಗುತ್ತೆ. ನಿಜ ಹೇಳಬೇಕೆಂದರೆ ಈ ಎರಡೂ ಅಂಶಗಳ ಅನುಭವಕ್ಕಾಗಿ ನಾನು ಕಾದದ್ದುಂಟು. ಕನ್ನಡವನ್ನು ಚೆನ್ನಾಗಿ ಕಲಿತು ಪ್ರಾಥಮಿಕ ಶಾಲೆಯಲ್ಲಿ ಪ್ರಥಮದರ್ಜೆ ಪಡೆಯುತ್ತಿದ್ದ ನಾನು ಇಂಗ್ಲಿಷನ್ನೂ ಹಾಗೆಯೇ ಕಲಿಯಬಲ್ಲೆ ಎಂದು ತೋರಿಸಿಕೊಳ್ಳುವ ಆಸೆ; ಹೌದು 'ತೋರಿಸಿಕೊಳ್ಳುವ' ಆಸೆ. ಹೀಗೆ ತೋರಿಸಿಕೊಳ್ಳುವ ಮೂಲಕ ಊರಲ್ಲಿ ಬೀಗುವ ಆಸೆ; 'ನಮ್ಮ ಚಂದ್ರಣ್ಣ ಏನೇ ಕೊಟ್ರೂ ಚಂದಾಗ್ ಕಲೀತಾನೆ' ಅಂತ ಊರವರು ಮಾತಾಡಬೇಕು, ನಾನು ಕೇಳಿಸಿಕೊಂಡು ಉಬ್ಬಿಹೋಗಬೇಕು ಅನ್ನೊ ಹಂಬಲ. ಈಗ ಅನ್ನಿಸುತ್ತೆ ಇದು ವೈಯಕ್ತಿಕ ನೆಲೆಯ ಹಂಬಲವಲ್ಲ ಅಂತ. ಯಾಕೆಂದರೆ ನನ್ನನ್ನು ಊರವರು ಗುರುತಿಸಿ ಮತ್ತು ಹೆಸರಿಸಿ ಪ್ರೀತಿ ತೋರಿಸಬೇಕೆಂಬ ಸಾಮಾಜಿಕ ಮನ್ನಣೆಯ ಹಂಬಲ. ಇದು ಕೇವಲ ಇಂಗ್ಲಿಷ್ ಅಕ್ಷರ ಕಲಿಕೆಗೆ ಸಂಬಂಧಿಸಿದ್ದಲ್ಲ. ಅದಕ್ಕಿಂತ ಮುಖ್ಯವಾಗಿ ಪೆನ್ನು ಹಿಡಿದ ಸಂಕೇತಕ್ಕೆ ಸಂಬಂಧಿಸಿದ್ದು. ಪೆನ್ಸಿಲ್‌ನಿಂದ ಪೆನ್ನಿಗೆ ಬಡ್ತಿ ಪಡೆಯೋದು ಸಾಮಾನ್ಯವೆ? ಅದೂ ಕನ್ನಡದೊಂದಿಗೆ ಇಂಗ್ಲಿಷ್ ಅಕ್ಷರ ಕಲಿತು 'ವಿಜೃಂಭಿಸುವುದು!' ಈ ಕಾರಣಕ್ಕೆ ನಾನು ಇಂಗ್ಲಿಷ್ ಪರ ಅಂತ ಹೇಳೋವಷ್ಟು ಕನ್ನಡ ಮನಸ್ಸು ಕೆಟ್ಟಿಲ್ಲ ಅಂದುಕೊಳ್ತೀನಿ. ಯಾಕೆಂದರೆ ಇದು ಇಂಗ್ಲಿಷ್ ಪರದ ಪ್ರಶ್ನೆ ಅಲ್ಲವೇ ಅಲ್ಲ. ಆದ್ದರಿಂದ ಈ ವಿಷಯ ಇಲ್ಲಿಗೇ ಬಿಟ್ಟು ಪೆನ್ನಿನ ವಿಷಯಕ್ಕೆ ಬರ್ತೇನೆ. ಪೆನ್ನು ನನಗೆ ಎಂಥ ಸಂಭ್ರಮ ತಂದಿತ್ತು

ಬರಗೂರು ರಾಮಚಂದ್ರಪ್ಪನವರ ಆಯ್ದ ಅನುಭವಗಳ ಕಥನ 'ಕಾಗೆ ಕಾರುಣ್ಯದ ಕಣ್ಣು' ಜುಲೈ 23ಕ್ಕೆ ಬಿಡುಗಡೆಯಾಗುತ್ತಿದೆ. ಬರಗೂರರ ಬಾಲ್ಯದ ಒಂದು ತುಣುಕು ಈ ಸಂದರ್ಭದಲ್ಲಿ ನಿಮ್ಮ ಓದಿಗೆ...

ಎಂದು ಮನವರಿಕೆ ಮಾಡಲು ಒಂದು ಪ್ರಸಂಗ ಹೇಳಲೇಬೇಕು.

ನಾನು ಪೆನ್ನಲ್ಲಿ ಬರೆಯೋಕೆ ಶುರುಮಾಡಿದಾಗ ಈಗಿನ ರೀಫಿಲ್‌ಗಳು ಇರಲಿಲ್ಲ. 'ಮಸಿ ಬುಡ್ಡಿ' (ಇಂಕಿನ ಬಾಟಲ್) ಖರೀದಿಸಬೇಕಿತ್ತು. ಅದರಿಂದ ಪೆನ್ನಿಗೆ ಇಂಕನ್ನು ಹಾಕಿಕೊಳ್ಳಬೇಕಿತ್ತು. ಪೆನ್ನಿನ 'ಮುಳ್ಳು' (ತುದಿಯಲ್ಲಿ ಹಾಕುತ್ತಿದ್ದ ಸಾಮಗ್ರಿ) ಚೆನ್ನಾಗಿಲ್ಲದಿದ್ದರೆ ಗಾರೆ ನೆಲಕ್ಕೆ ಉಜ್ಜಿ ನುಣುಪು ಮಾಡಿಕೊಳ್ಳಬೇಕಿತ್ತು. ಒಟ್ಟಿನಲ್ಲಿ ಒಂದು ಸಾರಿ ನಮ್ಮ ಮನೆ ಹಜಾರದ ಮೇಲೆ ಕುಳಿತುಕೊಂಡು ಮಸಿಬುಡ್ಡಿಯಿಂದ ಪೆನ್ನಿಗೆ ಇಂಕನ್ನು ಹಾಕತೊಡಗಿದೆ. ಸರಿಯಾಗಿ ಹಾಕಲು ಬಾರದೆ ಇಂಕು ನನ್ನ ಬನೀನಿನ ಮೇಲೆ ಬಿದ್ದು ಬಿಟ್ಟಿತು. ಬನೀನು ಬಟ್ಟೆ ಮೇಲೆ ಅಲ್ಲಲ್ಲೇ ಇಂಕಿನ ಅವತಾರ! ಕೊಳಕಾದ ಬನೀನು! ಹಾಗಂತ ನಾನು ಬನೀನನ್ನು ಬಿಚ್ಚಿ ಹಾಕಲಿಲ್ಲ. ಅಪ್ಪ, ಅಮ್ಮ ನೋಡಿದರೆ ಬೈದಾರು ಎಂದು ಭಯಪಡಲಿಲ್ಲ. ಒಂದು ಮಾತು ಇಲ್ಲೇ ಹೇಳಿಬಿಡ್ತೇನೆ. ಬನೀನೆಂದರೆ ನೆಟ್ ಬನೀನ್ ಅಲ್ಲ. ಮೊಣಕೈವರೆಗಿನ ತೋಳು ಇದ್ದ, ಹೊಲೆಸಿಕೊಂಡ ಅಂಗಿ. ಒಳಗೆ ನೆಟ್ ಬನೀನು ನಮಗೆಲ್ಲಿ ಬಂದೀತು? ಇದ್ದ ಈ ಬನೀನೂ ಈಗ ಇಂಕಿನಿಂದ ಕೊಳೆಯಾಗಿದೆ. ಕೊಳೆಯಾಗಿದ್ದರೇನಂತೆ, ನಾನು ತಾಕುಠೀಕಾಗಿ ಅದೇ ಬನೀನಿನಲ್ಲಿ ಊರಿನ ಬೀದಿ ಬೀದಿಯಲ್ಲಿ ಓಡಾಡಿದೆ! ಅಂಗಿ ಮೇಲಿನ ಇಂಕನ್ನು ಗಮನಿಸಿದ ಕೆಲವರು 'ಇದೇನಪ್ಪ ಮೈಮ್ಯಾಲೆಲ್ಲ ಮಸಿ ಸುರ್ಕಂಡಿದ್ದೀಯ?' ಎಂದು ಕೇಳಿದಾಗ ಈ ಮಾತಿಗಾಗಿಯೇ ಕಾಯುತ್ತಿದ್ದಂತೆ 'ನಾನು ಪೆನ್‌ನಲ್ಲಿ ಬರೀತಿನಲ್ಲ, ಇಂಕ್ ಹಾಕ್ಕೊಳ್‌ವಾಗ ಹಿಂಗಾತು. ಅಷ್ಟೆ' ಎಂದು ವಿವರಿಸಿ ಉಬ್ಬಿನಿಂದ ಇನ್ನೊಂದು ಬೀದಿಗೆ ಹೊರಡುತ್ತಿದ್ದೆ. ಒಟ್ಟಿನಲ್ಲಿ ನಾನೀಗ ಪೆನ್ನಿನಲ್ಲಿ ಬರೀತಿದ್ದೀನಿ ಅಂತ ಊರವರಿಗೆ ಗೊತ್ತಾಗಬೇಕು; ಗೊತ್ತಾಯ್ತು ಅಂತ ನನಗೆ ಗೊತ್ತಾಗಿ ಸಂಭ್ರಮಿಸಬೇಕು- ಇದು ನನ್ನ ಆಸೆ; ಹಂಬಲ! ಬನೀನು ಕೊಳೆಯಾಗಿದೆ ಅಂತ ಒಂದು ಕ್ಷಣ ಮಾತ್ರವೂ ಚಿಂತಿಸದ ಈ ಸಂಭ್ರಮಕ್ಕೆ ಏನೆನ್ನಬೇಕು! ಅವತ್ತು ಆದದ್ದು ಕೊಳೆಯಲ್ಲ ಕಳೆ! ಚಂದ್ರಕಳೆ!

ಅವತ್ತು ನಾನು ಯಾಕೆ ಹಾಗೆ ವರ್ತಿಸಿದೆ? ಈಗ ಈ ಪ್ರಶ್ನೆ ಹಾಕಿಕೊಂಡಾಗ ನನಗನ್ನಿಸುತ್ತೆ- ಅದು ನನ್ನ ಐಡೆಂಟಿಟಿಯ ಸಮಸ್ಯೆ; ಐಡೆಂಟಿಟಿ ಅನ್ನೋದು ನನ್ನೊಳಗೆ ಬುಸ್ಸೆಂದು ಹೆಡೆ ಎತ್ತಿದಾಗ ಅದನ್ನು ಸಮಾಧಾನಿಸಲು ಸಹಜವಾಗಿಯೇ ಮೂಡಿದ ಸಾಮಾಜಿಕ ದಾರಿಯೇ ನನ್ನ ಬೀದಿಬೀದಿಯ ಪಯಣ!

ಹೌದು; ಈ ಐಡೆಂಟಿಟಿ ಅನ್ನೋದು ಬುಸ್ಸೆನ್ನುವ ಹೆಡೆ ಇದ್ದಂತೆ. ಅನ್ಯರ ಎದುರು ಹೆಡೆ ಎತ್ತಿ ಸದೆಬಡಿಯುವ ಐಡೆಂಟಿಟಿಗಳೇ ಇದ್ದಾಗ, ನಾವೂ ಬುಸ್ಸೆನ್ನುವಷ್ಟಾದರೂ ಶಕ್ತಿ ಪಡೆಯಲು ಏನಾದರೂ ಬೇಕಲ್ಲ? ಎದುರು ಇರೋರನ್ನ ಕಚ್ಚೋದು ಬೇಡ; ವಿಷ ಉಣಿಸೋದಂತೂ ಬೇಡವೇ ಬೇಡ. ಆದರೆ ಎದುರಿಗೆ ಬುಸ್ಸೆನ್ನುವ ಹೆಡೆಗಳೇ ಇದ್ದಾಗ ನನ್ನೊಳಗೂ ಏನೋ ಇದೆ ಎಂದು ತೋರಿಸಲು ಹೆಡೆಯೊಂದು ಹುಟ್ಟತೊಡಗುತ್ತೆ. ಆದರೆ ಅದು ಹೊರಬರದೆ ಒಳಗೇ ಉಳಿಯುವಂತೆ ಒತ್ತಿಹಿಡಿದು ಸಮಾಧಾನಿಸಿ ಬೇರೊಂದು ರೂಪದ 'ಐಡೆಂಟಿಟಿ'ಗೆ ನನ್ನಂಥವರು ಹಂಬಲಿಸಿದಾಗ ಹೆಡೆಯನ್ನು ಅದುಮಿಟ್ಟು ಹೊರಬಂದ ಅಕ್ಷರವೇ ಐಡೆಂಟಿಟಿಯಾಗುತ್ತದೆ; ಬಳಪದಿಂದ ಪೆನ್ಸಿಲ್ಲಿಗೆ, ಪೆನ್ಸಿಲ್ಲಿನಿಂದ ಪೆನ್ನಿಗೆ ಪಡೆದ 'ಬಡ್ತಿ' ಬಡ ಹುಡುಗನ ಐಡೆಂಟಿಟಿಯ ಸಂಕೇತವಾಗುತ್ತದೆ. ಹೆಡೆಗಳ ಎದುರು ಹೆಡೆಯಾಗದೆ ಗಳಿಸಬೇಕಾದ ಐಡೆಂಟಿಟಿಯ ಸಮಸ್ಯೆ; ಎಂಥ ಸಾಮಾಜಿಕ ವಿಸ್ಮಯ!

ಇಷ್ಟೆಲ್ಲ ಯಾಕೆ ಹೇಳಿದೆ, ಗೊತ್ತಾ? ನಾನು ಸಾಮಾಜಿಕವಾಗಿ ಬಲಾಢ್ಯ ವಲಯದವನಲ್ಲ; ಆರ್ಥಿಕವಾಗಿ ಶ್ರೀಮಂತ ಮನೆತನದವನಲ್ಲ; ಹಾಗಾದರೆ ಹುಟ್ಟಿದ ಊರಲ್ಲಿ ನಾನು ಗಮನಾರ್ಹನಾಗುವುದು ಹೇಗೆ? ನನಗೊಂದು ಐಡೆಂಟಿಟಿ ಬರೋದು ಹೇಗೆ? ಮಾಧ್ಯಮಿಕ ಶಾಲೆಗೆ (ಈಗಿನ ಹಿರಿಯ ಪ್ರಾಥಮಿಕ ಶಾಲೆಗೆ) ಬಂದು ಪ್ಯಾಂಟು ಹಾಕಿಕೊಂಡೆ. ಅದೂ ಅಪರೂಪಕ್ಕೆ ಅಪ್ಪ ಹೊಲೆಸಿಕೊಟ್ಟ ಒಂದೇ ಒಂದು ಪ್ಯಾಂಟು- ನಾಲ್ಕು ವರ್ಷಗಳ ನನ್ನ ವಸ್ತ್ರಸಂಗಾತಿ! ಅದು ಕೊಳೆಯಾದಾಗ ಪಟಾಪಟ್ಟಿ ನಿಕ್ಕರು-ಇದೇ ಶಾಶ್ವತ ಸಂಗಾತಿ! ಸದಾ ಬನೀನಿನ ಜೇಬಿನಲ್ಲಿ ಎದ್ದುಕಾಣುವ ಪೆನ್ನು- ನನ್ನ ನಿಜವಾದ ಆತ್ಮಸಂಗಾತಿ!

ಸಾಹಿತ್ಯದ ಅರಿವು ಮೊನಚುಗೊಳಿಸುವ ಕೃತಿ

ಎಸ್. ದಿವಾಕರ್

ವಿಮರ್ಶೆ



ಸಾಹಿತ್ಯ ಸಂಹಿತೆ
ಲೇ: ಬಿ.ಎನ್. ಶಶಿಕಿರಣ್
ಪ್ರ: ಪ್ರೇಕ್ಷಾ ಪ್ರತಿಷ್ಠಾನ, ಬೆಂಗಳೂರು
ಸಂ: 9739100950
ಪು: 176
₹199

ಒಳ್ಳೆಯ ವಿಮರ್ಶಕ ಸರಿಯಾಗಿಯೋ ಅಥವಾ ತಪ್ಪಾಗಿಯೋ ತನ್ನದೇ ವಿಧಾನವನ್ನು ಸಂಶಯದಿಂದ ನೋಡುತ್ತಾನೆ. ಅವನು ತನ್ನ ಬರವಣಿಗೆಯಲ್ಲಿ ತಲ್ಲೀನನಾಗದೆ, ಮತ್ತಷ್ಟು ಸೂಕ್ಷ್ಮ ಒಳನೋಟಗಳನ್ನು ಗಳಿಸಿಕೊಳ್ಳಬಲ್ಲ ನಿಷ್ಠುರವೂ ಶ್ರಮದಾಯಕವೂ ಆದ ವಿಧಾನವನ್ನು ಅನುಸರಿಸುತ್ತಾನೆ. ಶಶಿಕಿರಣ್ ಅವರ 'ಸಾಹಿತ್ಯ ಸಂಹಿತೆ' ಅಂಥ ವಿಧಾನವನ್ನು ಅನುಸರಿಸಿರುವ, ಸ್ವಲ್ಪಮಟ್ಟಿಗೆ ನಮ್ಮ ನವೋದಯ ಕಾಲದ ಪಾಂಡಿತ್ಯವನ್ನು ನೆನಪಿಸುವ, ನಮ್ಮ ಕಾಲದಲ್ಲಿ ತೀರ ಅಪರೂಪವಾಗಿ ಪ್ರಕಟವಾಗುವ ಕೃತಿ. ಇಲ್ಲಿರುವುದು ನೇರವೂ ಸ್ಪಷ್ಟವೂ ಸಮತೋಲನವೂ ತೀರ ಗಾಢವೂ ಆದ ಬರವಣಿಗೆ. ಇದರಲ್ಲಿ ತಾತ್ತ್ವಿಕ ಮತ್ತು ನೈತಿಕ ಕೇಂದ್ರವಿದ್ದು ಅದು ಓದುಗರಿಗೆ ಭಾಷೆ, ಧ್ವನಿ, ಕಾವ್ಯ, ಕಾದಂಬರಿ, ಅನುವಾದ, ಹೀಗೆ ಸಂಸ್ಕೃತ ಸಾಹಿತ್ಯದ ಒಂದು ಪರಂಪರೆಯನ್ನೇ ತೆರೆದು ತೋರಿಸುತ್ತದೆ.

ಗತಕಾಲದ ಸಾಹಿತ್ಯಾಧ್ಯಯನ ಹೊಸ ಒಳನೋಟಗಳನ್ನು ಗಳಿಸಿಕೊಳ್ಳುವುದಕ್ಕಷ್ಟೇ ಅಲ್ಲ, ಸ್ಥಿತ್ಯಂತರಗೊಳ್ಳುವ ನೈತಿಕ ಆಕೃತಿಗಳಿಗೂ ನೆರವಾಗುತ್ತದೆ ಎಂಬ ನಂಬಿಕೆ ಇಲ್ಲಿದೆ. ಶಶಿಕಿರಣ್ ವಿದ್ವಾಂಸರು, ಸೌಂದರ್ಯಪ್ರಜ್ಞೆಯ ಪ್ರತಿಪಾದಕರು, ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಶೋಧಿಸಬಯಸುವವರಿಗೆ ಆದರ್ಶಪ್ರಾಯ ವಿಮರ್ಶಕರು. ಅವರ ಈ ಕೃತಿ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಕುರಿತ ನಮ್ಮ ಅರಿವನ್ನು ಮೊನಚುಗೊಳಿಸುವಷ್ಟು, ವಿಸ್ತರಿಸುವಷ್ಟು ಶಕ್ತವಾಗಿದೆ.

ಸಾಹಿತ್ಯ ಮತ್ತು ಸಂಸ್ಕೃತಿಗಳ ಇತಿಹಾಸಕಾರ ಗತಕಾಲದ ಪ್ರಯತ್ನಗಳನ್ನು ಸಹಜೀವದ ಭಾವನೆಗಳಿಂದ ಗಮನಿಸಬೇಕು ಮತ್ತು ತನ್ನದೇ ಕಾಲದ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಈ ಸಂಕಲನದಲ್ಲಿರುವ ಹನ್ನೊಂದು ಪ್ರಬಂಧಗಳಲ್ಲಿ ಮೊದಲನೆಯದು ಕಳೆದ ಶತಮಾನದಲ್ಲಿ ಅತ್ಯುತ್ತಮ ಸಂಶೋಧನೆ ಮತ್ತು ಪಾಂಡಿತ್ಯ ಗಳಿಸಿದ ವಿಮರ್ಶೆ/ವ್ಯಾಖ್ಯಾನಗಳನ್ನು ಮಾಡಿದ ಕೆಲವು ಮಹನೀಯರ ಮಹತ್ವವನ್ನು ತಿಳಿಸಿಕೊಡುವ, ಅವರ ಕಾರ್ಯವನ್ನು ಆಳವಾಗಿ ವಿಶ್ಲೇಷಿಸುವ ಅಪರೂಪದ ಪ್ರಬಂಧ. ನವೋದಯ ಕಾಲದ ಗೋವಿಂದ ಪೈ, ಡಿ.ವಿ. ಜಿ., ಎ.ಆರ್.ಕೃಷ್ಣಶಾಸ್ತ್ರಿ, ಸೇಡಿಯಾಪು, ಕುವೆಂಪು, ಪುತಿನ, ತೀ.ನಂ.ಶ್ರೀ ಮೊದಲಾದವರಿಗಿದ್ದ ಸಂಸ್ಕೃತ ಜ್ಞಾನದಿಂದ ಕನ್ನಡಕ್ಕೆ ಅನುವಾದಗೊಂಡ ರಾಮಾಯಣ-ಮಹಾಭಾರತ, ಕಾವ್ಯಮೀಮಾಂಸೆ, ಅಲಂಕಾರಶಾಸ್ತ್ರ, ಸಂಸ್ಕೃತ ನಾಟಕ, ಕಾಳಿದಾಸನ ಕಾವ್ಯ, ಸುಭಾಷಿತ, ಬಾಣಭಟ್ಟನ ಕಾದಂಬರಿ ಹೀಗೆ ಹಲವು ಗ್ರಂಥಗಳನ್ನೂ ಪುತಿನ ಅವರ 'ಭವನಿಮಜ್ಜನ ಚಾತುರ್ಯ', 'ಲಘಿಮಾ ಕೌಶಲ'ಎಂಬ ಪರಿಕಲ್ಪನೆಗಳನ್ನೂ ವಿವರಿಸುವ ಈ ಪ್ರಬಂಧ 'ಕನ್ನಡ ಭಾಷೆಯಲ್ಲಿ ಸಾಹಿತ್ಯ-ಅಲಂಕಾರಶಾಸ್ತ್ರಗಳಿಗೆ ಉಪಾಯನವಾಗಬಲ್ಲ ಅನೇಕ ಅಂಶಗಳಿರುವು'ದನ್ನೂ ಸೂಚಿಸುತ್ತದೆ.

ಹಳೆಯ ಕೃತಿಯೊಂದನ್ನು ಪರಿಶೀಲಿಸುವಾಗ ಅದರ ವೈಶಿಷ್ಟ್ಯವನ್ನು ಗುರುತಿಸುತ್ತಲೇ ಅದರಲ್ಲಿ ಹೊಸ ಧ್ವನಿಯೋ ಒಳನೋಟವೋ ಏನಿದೆಯೆಂದು ಹುಡುಕಿ ತೆಗೆಯುವುದು ಕೂಡ ವಿಮರ್ಶೆಯ ಮುಖ್ಯ ಕೆಲಸಗಳಲ್ಲೊಂದು. ಶಶಿಕಿರಣ್ 'ಧ್ವನ್ಯಾಲೋಕ'ವನ್ನು ಕುರಿತು ಬರೆದಿರುವ ಎರಡನೆಯ ಪ್ರಬಂಧವು ವ್ಯಂಜನ ವ್ಯಾಪಾರ, ಧ್ವನಿ ಪ್ರಭೇದಗಳು, ಅಲಂಕಾರ, ಧ್ವನಿ ಸಿದ್ಧಾಂತ, ರಸ ಸಿದ್ಧಾಂತ ಮುಂತಾದವುಗಳನ್ನು ಸಮೀಕ್ಷಿಸುತ್ತ, ಅವನು ಸಂಸ್ಕೃತ ಕಾವ್ಯಗಳಿಂದ ಉದ್ಧರಿಸಿ ಮಾಡಿದ ಪ್ರಾಯೋಗಿಕ ವಿಮರ್ಶೆಯನ್ನೂ ಗುರುತಿಸುತ್ತದೆ. ಅದೇರೀತಿ ರಾಜಶೇಖರನ 'ಕಾವ್ಯಮೀಮಾಂಸಾ' ಎಂಬ ಅಲಂಕಾರಶಾಸ್ತ್ರವು ಕಾವ್ಯ ಪುರುಷೋತ್ಪತ್ತಿಯ ಕತೆಯ ಮೂಲಕ ಶಾಸ್ತ್ರೀಯ ವಿಚಾರಗಳನ್ನು ರೂಪಕಾತ್ಮಕಕತೆಯ ಮೂಲಕ ಹೇಳಿರುವುದನ್ನು ಪರಿಶೀಲಿಸುತ್ತದೆ. ಇಂಥಲ್ಲಿ ಎದ್ದುಕಾಣುವುದು ಶಶಿಕಿರಣ್ ಅವರಲ್ಲಿರುವ ಆಳವಾದ ಸಾಂಪ್ರದಾಯಿಕ ವಿದ್ವತ್ತು.

'ಅಸಾಧಾರಣ ಸಂಸ್ಕೃತ ಸಾಧಕ ಶ್ರೀ ಮೇಣರಾಮ ಕೃಷ್ಣಭಟ್ಟರು' ಎಂಬುದು ನಮ್ಮವರೇ ಆಗಿ ನಮ್ಮವರಿಗೆ ಗೊತ್ತಿಲ್ಲದ ವಿದ್ವಾಂಸರೊಬ್ಬರನ್ನು ಪರಿಚಯಿಸುವ ಪ್ರಬಂಧ. ರಾಮಕೃಷ್ಣಭಟ್ಟರು ಮದರಾಸಿನ ಸರ್ಕಾರಿ ಗ್ರಂಥಾಲಯದಲ್ಲಿ ಗ್ರಂಥಪಾಲಕರಾಗಿ, ಸಂಸ್ಕೃತ ಪ್ರಾಧ್ಯಾಪಕರಾಗಿ, ಪೂರ್ವ ಆಫ್ರಿಕೆಯ ಸಂಸ್ಕೃತಿಯ ಅಧ್ಯಯನಕಾರರಾಗಿ, 'ಅಮೃತವಾಣೀ' ಸಂಸ್ಕೃತ ಪತ್ರಿಕೆಯ ಸಂಪಾದಕ/ಪ್ರಕಾಶಕರಾಗಿ, ವರಾಹಮಿಹಿರನ 'ಬೃಹತ್ಸಂಹಿತೆ'ಯ ಇಂಗ್ಲಿಷ್ ಭಾಷಾಂತರಕಾರರಾಗಿ ಅಪೂರ್ವವಾದದ್ದನ್ನು ಸಾಧಿಸಿದವರು. ಶ್ರೀಧರ ಭಾಸ್ಕರ ವರ್ಣೇಕರ್ ಅವರ 'ಭಾರತೀವಿವೇಕ', ಕೆ.ಎಸ್. ಅರ್ಜುನವಾಡ್ಕರರ ವಿಡಂಬನಾ ಕೃತಿ 'ಕಟಕಾಂಜಲಿ' ಇವು ಪರಿಚಯಾತ್ಮಕವಾಗಿದ್ದರೆ, 'ಮತ್ತೆ ರಾಮನ ಕಥೆ' ಬನ್ನಂಜೆ ಗೋವಿಂದಾಚಾರ್ಯರ ಅನುವಾದದ ಸ್ವೋಪಜ್ಞತೆಯನ್ನು ಚರ್ಚಿಸುತ್ತದೆ. 'ದಾರ್ಶನಿಕ ದೀಪ್ತಿ' ಎಂಬ ಪ್ರಬಂಧ ಎಸ್.ಆರ್. ರಾಮಸ್ವಾಮಿಯವರು ಅಧ್ಯಾತ್ಮ ಮತ್ತು ಮೌಲ್ಯ ಮೀಮಾಸೆಗಳನ್ನು ಕುರಿತು ಬರೆದಿರುವ ಕೆಲವು ಬರಹಗಳನ್ನು ಸಮೀಕ್ಷಿಸುತ್ತ ಅವರ ಬರಹಗಳ ಸಂರಚನೆಯನ್ನು ವಿಶ್ಲೇಷಿಸುತ್ತದೆ. ಎಸ್. ಎಲ್.ಭೈರಪ್ಪನವರ ಕಾದಂಬರಿಗಳ ಬಗೆಗೆ ಒಂದೇ ರೀತಿಯ–ಬಹುಮಟ್ಟಿಗೆ ನೇತ್ಯಾತ್ಮಕ–ವಿಮರ್ಶೆಗಳನ್ನು ಓದಿದವರಿಗೆ ಇಲ್ಲಿ ಭಿನ್ನ ಬಗೆಯ ಎರಡು ಗಮನಾರ್ಹ ಪ್ರಬಂಧಗಳೂ ಇವೆ.

ಈ ಸಂಕಲನದಲ್ಲಿ ಬಹುಮುಖ್ಯವಾದದ್ದು 'ಡಿ.ವಿ.ಜಿ. ಅವರ ಭಾಷಾಶಿಲ್ಪ' ಎಂಬ ಪ್ರಬಂಧ. ಕವಿ, ದಾರ್ಶನಿಕ, ಪತ್ರಕರ್ತ, ಸಾಮಾಜಿಕ-ರಾಜಕೀಯ ಸಿದ್ಧಾಂತಕಾರ, ಧರ್ಮವನ್ನು ಕುರಿತ ವ್ಯಾಖ್ಯಾನಕಾರ ಡಿ.ವಿ.ಜಿ. ಕನ್ನಡದಲ್ಲಿ ವೈಚಾರಿಕ ಗದ್ಯವನ್ನು ರೂಪಿಸಿದ ಕೆಲವೇ ಕೆಲವರಲ್ಲಿ ಅಗ್ರಗಣ್ಯರು. ಪ್ರಜಾಸತ್ತಾತ್ಮಕ ಸಮಾಜ ಎದುರಿಸಬೇಕಾದ ಸಮಸ್ಯೆಗಳನ್ನು ಅವರ ಹಾಗೆ ಮೊದಲೇ ಗ್ರಹಿಸಿದವರು, ಆ ಬಗ್ಗೆ ಅತೀವ ಸ್ಪಷ್ಟತೆಯಿಂದ ಬರೆದವರು ಇನ್ನೊಬ್ಬರಿಲ್ಲ. ನಮಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಅರಿತುಕೊಳ್ಳುವ ದಿಸೆಯಲ್ಲಿ ಹಿಂದೆಲ್ಲ ನಡೆದಿರುವ ಅತ್ಯುತ್ತಮ ಚಿಂತನೆಗಳ ಆಳವಾದ ಅಧ್ಯಯನ ಎಷ್ಟು ಉಪಯುಕ್ತ ಎಂದು ಪ್ರತಿಪಾದಿಸಿದ ಮ್ಯಾಥ್ಯು ಅರ್ನಾಲ್ಡ್‌ನಂತೆ ಡಿ.ವಿ.ಜಿ.ಯವರೂ ಒಂದು ಯುಗದ ಸಾಹಿತ್ಯದಲ್ಲಿ ಆ ಯುಗದ ಮೌಲ್ಯಗಳು ಸಾರಭೂತವಾಗಿರುತ್ತವೆಯೆಂದು ನಂಬಿದ್ದವರು. ಶಶಿಕಿರಣ್ ಅವರು ಸಾಹಿತ್ಯದ ಮೂಲಕ ಜೀವನ ಸಿದ್ಧಾಂತಕ್ಕೊಂದು ಚೌಕಟ್ಟು ಕೊಟ್ಟ ಡಿ.ವಿ.ಜಿ.ಯವರ ಸಮಗ್ರ ಸಾಹಿತ್ಯವನ್ನು ಅಭ್ಯಸಿಸಿ ಅವರ ಗದ್ಯದ ಶಕ್ತಿ ಸೌಂದರ್ಯಗಳನ್ನು ಹಲವು ಉದಾಹರಣೆಗಳ ಮೂಲಕ ತೋರಿಸಿಕೊಡುತ್ತಾರೆ. ಅವರು ಒಂದೆಡೆ ಬರೆದಿರುವಂತೆ, 'ಡಿ.ವಿ.ಜಿ. ಅವರ ಗದ್ಯ ವಿಶಿಷ್ಟವಾದೊಂದು ಪ್ರವಚನಶೈಲಿಯಲ್ಲಿ ಸಾಗುತ್ತದೆ.... ಅದರಲ್ಲಿ ಸಮನ್ವಯದ ಹದ ಇದೆ, ಆದರೆ ವಾಚಕರನ್ನು ಒಪ್ಪಿಸಲೇಬೇಕೆಂಬ ಹಠವಿಲ್ಲ; ಇನ್ನೆಲ್ಲಿಯೂ ಕಾಣಸಿಗದ ಕಾಂತಿಯಿದೆ, ಆದರೆ ಅದು ಕಣ್ಣು ಕೋರೈಸುವಂಥದ್ದಲ್ಲ; ಅಧಿಕೃತತೆಗೆ ಕೊರತೆಯಿಲ್ಲ, ಆದರೆ ಅಧಿಕಾರದ ಧೋರಣೆಯಿಲ್ಲ; ಪಾಂಡಿತ್ಯದ ಪುಷ್ಟಿಯಿದೆ, ಆದರೆ ಅದನ್ನು ಮೆರೆಸಬೇಕೆಂಬ ಪೈತ್ಯವಿಲ್ಲ; ಭಾವತೀವ್ರತೆಯಿದೆ, ಆದರೆ ಅದೆಂದೂ ಭಾರವೆನಿಸುವುದಿಲ್ಲ. ಒಟ್ಟಿನಲ್ಲಿ ಅದೊಂದು ಪಾಕ'.

ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತ ಸಮೃದ್ಧವೂ ಹೊಸ ಮಾರ್ಗಾನ್ವೇಷಕವೂ ಆದ ಇಲ್ಲಿನ ಪ್ರಬಂಧಗಳು ಶಶಿಕಿರಣ್ ಎಷ್ಟು ದೊಡ್ಡ ವಿದ್ವಾಂಸರೆಂದು, ಎಂಥ ಸೂಕ್ಷ್ಮ ವಿಮರ್ಶಕರೆಂದು ತಿಳಿಸಿಕೊಡುವುದಲ್ಲದೆ ಅವರು ಬೇರೆಯವರ ಕೃತಿಗಳನ್ನು ಕುರಿತು ಹೇಗೆಲ್ಲ ಮನನ ಮಾಡುತ್ತಾರೆಂದೂ ತೋರಿಸಿಕೊಡುತ್ತವೆ. ಇಂಥ ಪರಿಪ್ರೇಕ್ಷ್ಯವಿರುವುದರಿಂದಲೇ ಅವರಿಗೆ ಅಪರೂಪದ ಒಳನೋಟಗಳು ಸಾಧ್ಯವಾಗಿವೆಯೆನ್ನಬೇಕು. ಉನ್ನತ ಸಾಹಿತ್ಯ ಹೇಗೆ ನಮ್ಮ ಸಮಾನ ಮಾನವೀಯ ಹಿತಾಸಕ್ತಿಗಳಿಗೆ ಪೂರಕವಾಗಿರುತ್ತದೆಯೆಂಬುದನ್ನು ಇಲ್ಲಿನ ಪ್ರತಿಯೊಂದು ಲೇಖನದಲ್ಲೂ ಕಾಣಬಹುದು.

ಶತಾವಧಾನಿ ಗಣೇಶ್ ಅವರು ಬರೆದಿರುವ 'ನಲ್ನುಡಿ' ಈ ಪುಸ್ತಕಕ್ಕೊಂದು ಸೊಗಸಾದ ಪ್ರವೇಶಿಕೆಯಾಗಿದೆ.

'ಸುಖವಿಲ್ಲದ ಧಾವತಿಯನ್ನು ತಿರಸ್ಕರಿಸಬೇಕು'

ಸಂದರ್ಶನ: ನಿಂಗಪ್ಪ ಮುದೇನೂರು

ಬಯಲು ನಾಡಿನ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಂಜಗಿಯಲ್ಲಿ ಜನಿಸಿದ ಪ್ರೊ.ಎಚ್.ಟಿ. ಪೋತೆಯವರು ನಾಡಿನ ಸಂವೇದನಾಶೀಲ ಕತೆಗಾರ, ಕಾದಂಬರಿಕಾರ, ಕವಿ, ಪ್ರಬಂಧಕಾರ, ವಿಮರ್ಶಕ, ಅನುವಾದಕ, ಚಿಂತಕ, ಜಾನಪದ ವಿದ್ವಾಂಸ ಹಾಗೂ ಸಂಶೋಧಕ. ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಎಂ.ಎ, ಎಂ.ಫಿಲ್, ಪಿಎಚ್.ಡಿ. ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ಪಡೆದಿದ್ದಾರೆ. ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ, ಪ್ರಸಾರಾಂಗ, ಪಾಲಿ ಮತ್ತು ಬೌದ್ಧ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ, ಕಲಾ ನಿಕಾಯದ ಡೀನರಾಗಿ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

ಜುಲೈ 29, 30ರಂದು ವಿಜಯಪುರದಲ್ಲಿ ನಡೆಯಲಿರುವ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಇವರು ಆಯ್ಕೆಯಾಗಿರುವುದರಿಂದ ನಡೆಸಿದ ಸಂದರ್ಶನವಿದು.

- **ಬರವಣಿಗೆ ನಿಮ್ಮಲ್ಲಿ ಆತ್ಮವಿಶ್ವಾಸ ತುಂಬಿದ್ದು ಹೇಗೆ? ದಲಿತರ ಬದುಕು ಇಂದಿಗೂ ಊರಾಚೆಯಲ್ಲಿಯೇ ಇದೆಯಲ್ಲವೇ?**

ಲೋಕದಲ್ಲಿ ಎರಡು ರೀತಿಯ ಬರಹಗಾರರಿರುತ್ತಾರೆ. ಬರೆಯುವುದಕ್ಕಾಗಿ ಬರೆಯುವವರು, ವಿಷಯ ಪ್ರತಿಪಾದನೆಗಾಗಿ ಬರೆಯುವವರು. ನನ್ನದು ಎರಡನೆಯ ಗುಂಪು. ಮೊದಲನೆಯವರಲ್ಲಿ ಭಾವಗಳು ಹೆಚ್ಚು, ನನ್ನಲ್ಲಿ ಆಲೋಚನೆಗಳು ಅಧಿಕ. ವಾಸ್ತವ ಬದುಕಿನ ಕುರಿತಾದ ಆಲೋಚನೆಗಳೇ ನನಗೆ ನನ್ನ ಬರೆಹಕ್ಕೆ ಆತ್ಮವಿಶ್ವಾಸ ತುಂಬುತ್ತವೆ. ದೇಶ ಸ್ವಾತಂತ್ರ್ಯಗೊಂಡು ಮುಕ್ಕಾಲು ಶತಮಾನ ಕಳೆದರೂ ಈ ನೆಲದ ಸಾಂಪ್ರದಾಯಿಕ ಚಿಂತನೆಗಳಲ್ಲಿ ಬದಲಾವಣೆಯಾಗಿಲ್ಲ. ಈಗಲೂ ಮುಖದ ಮೇಲೆ ಮೂತ್ರ ಮಾಡುವವರಿದ್ದಾರಲ್ಲವೆ?

- **ಈ ಹನುಮಂತ ಯಾರು ಮತ್ತು ರೂಪುಗೊಂಡದ್ದೇಗೆ?**

ನನ್ನೂರು ಭೀಮಾ ತಟದ ಹಂಜಗಿ. ಅಪಮಾನದಲ್ಲಿ ನೊಂದುಬೆಂದಿದ್ದ ಅಪ್ಪ 'ನಾಲ್ಕಕ್ಷರ ಕಲಿತು ಪಟ್ಟಣ ಸೇರಿಬಿಡು, ಅಪಮಾನಿಸುವ ಈ ಊರಲ್ಲಿ ಇರಬೇಡ' ಎಂದು ಹೇಳಿದ್ದೇ ಈ ಹನುಮಂತನನ್ನು ರೂಪಿಸಿತು. ಹಾಗೆಯೇ ಅಪ್ಪ 'ಹೆಸರಿನಿಂದ ಕೆಟ್ಟದ್ದಾಗಿದ್ದರೆ ಹೆಸರು ಬದಲಿಸು, ಊರಿಂದ ಅಪಮಾನವಾದರೆ ಊರು ಬಿಡು, ಧರ್ಮದಿಂದ ಅಪಮಾನವಾಗಿದ್ದರೆ ಧರ್ಮ ಬದಲಿಸು' ಎಂದಿದ್ದರು, ಇದನ್ನೇ ನಾಮಾಂತರ, ಸ್ಥಳಾಂತರ, ಧರ್ಮಾಂತರ ಎಂದು ಅಂಬೇಡ್ಕರ್‌ರೂ ಹೇಳಿದ್ದುಂಟು.

- **ಜಾನಪದ ಮೀಮಾಂಸೆ ಬಲ್ಲ ನೀವು ಅವರ ಅಂಬೇಡ್ಕರ್‌ರ ಅರಿವನ್ನು ನಿಮ್ಮ ಬರಹದ ಕೇಂದ್ರಪ್ರಜ್ಞೆಯಾಗಿಸಿಕೊಂಡದ್ದು ಹೇಗೆ?**

ಜಾನಪದವೆನ್ನುವುದು ಸಮಾಜ ವಿಜ್ಞಾನವೂ ಹೌದು, ಸಾಹಿತ್ಯವೂ ಹೌದು. ನಾನೊಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿ ಜನಪದ ಸಾಹಿತ್ಯವನ್ನು ದಲಿತ ಸಾಹಿತ್ಯವೆಂದೇ ಪರಿಭಾವಿಸುತ್ತೇನೆ. ಅಲ್ಲಿ ಬಡತನವಿದೆ, ಅಸ್ಪೃಶ್ಯತೆಯಿದೆ, ಆಕ್ರಂದನವಿದೆ, ಪ್ರತಿಭಟನೆಯಿದೆ. ಜನಪದವೆನ್ನುವುದು ಈ ಮಣ್ಣಿನ ಬದುಕಿನ ಮೀಮಾಂಸೆ. ಜನಪದದ ಬದುಕಿಗೂ ಅಸ್ಪೃಶ್ಯತೆ ಅಂಟಿಸಿ ಬಿಟ್ಟಿದ್ದಾರಲ್ಲ! ಯಾರೊ ಅಂಟಿಸಿದ್ದನ್ನು ತೊಳೆಯಲು ಅಂಬೇಡ್ಕರ್ ಬರಬೇಕಾಯಿತು. ಅದಕ್ಕಾಗಿಯೇ ಅಂಬೇಡ್ಕರ್ ನನಗೆ ಮುಖ್ಯವಾಗುತ್ತಾರೆ.

- **ನಿಮ್ಮ ಆರಂಭಿಕ ಬರಹಗಳಿಗೂ, ಇಂದಿನವಕ್ಕೂ ವ್ಯತ್ಯಾಸವುಂಟೆ? ನಿಮ್ಮದು ಅವೈದಿಕ ಚಿಂತನೆಯಲ್ಲವೆ?**

ನಿಜ, ಸಮುದಾಯಗಳನ್ನು ವಿರೋಧ ಮಾಡುವ ಗುಣ ಆರಂಭದ ಬರಹಗಳಲ್ಲಿರುವುದು ಸಹಜ. ಪ್ರತಿಯೊಬ್ಬ ಬರಹಗಾರನು ಏಕ ಮಾದರಿಯ ಚಿಂತನಾ ಸ್ಥಿತಿಯಲ್ಲಿ ನಿಲ್ಲುವುದಿಲ್ಲ. ಹಾಗೆ ನಿಲ್ಲುವುದು ಅವನ ಸ್ಥಗಿತತೆಯನ್ನು ಸೂಚಿಸುತ್ತದೆ. ಬದುಕು ಬದಲಾದಂತೆಲ್ಲಾ ನಮ್ಮ ಚಿಂತನಾ ಮಾದರಿಗಳೂ ಬದಲಾಗಬೇಕು. ಅದಕ್ಕನುಗುಣವಾಗಿಯೇ ನನ್ನ ಬರಹಗಳು ಬದಲಾಗುತ್ತಾ ಸಾಗಿವೆ. ಸಮಕಾಲೀನತೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಬರಹಗಾರ ತನ್ನ ಕಾಲಕ್ಕೆ, ಆ ಕಾಲದ ಸ್ಥಿತ್ಯಂತರಗಳಿಗೆ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸಬಲ್ಲ. ಅದರಂತೆ ವೈದಿಕವೆನ್ನುವುದು ಸಮಾನಲ್ಲದ್ದು. ಅವೈದಿಕವೆನ್ನುವುದು ಸಮಾನತೆ ನೆಲೆಗೊಳಿಸುವ ಚಿಂತನೆಯಾಗಿದೆ. ವೈದಿಕವೆನ್ನುವುದು ಯಾರನ್ನೋ ಗುರಿಯಾಗಿಟ್ಟುಕೊಂಡು ಹೇಳುವಂತಹದ್ದಲ್ಲ. ದಲಿತನಾಗಿಯೂ ಬ್ರಾಹ್ಮಣ್ಯ ಪ್ರತಿಪಾದನೆ ಮಾಡಿದರೂ ಅವರ ವಿರುದ್ಧವೂ ಪ್ರತಿಭಟಿಸಲೇಬೇಕು. ಅಂದಾಗ ಮಾತ್ರ ಅದು ಅವೈದಿಕ ಧಾರೆಯಾಗುತ್ತದೆ.

- **ನಿಮ್ಮ ಸೃಜನಶೀಲತೆಯ ಸ್ಥಿತ್ಯಂತರದ ಬಗೆಗೆ ಒಂದೆರಡು ಮಾತು.**

ಆರಂಭದಲ್ಲಿ ಎಲ್ಲರಂತೆ ನಾನೂ ಕವಿತೆಗಳನ್ನು ಬರೆದೆ, ಪ್ರಕಟಿಸುವ ಧೈರ್ಯ ಮಾಡಲಿಲ್ಲ. ದಲಿತ-ಬಂಡಾಯದ ಪ್ರಧಾನ ಅಭಿವ್ಯಕ್ತಿ ಕಾವ್ಯವಾದರೂ ಶೋಷಿತ ಸಮುದಾಯವನ್ನು ಎಚ್ಚರಿಸಿದ್ದು ಆ ಕಾಲದ ಒಟ್ಟು ಬರೆಹ. ಸೃಜನಶೀಲ ಬರೆಹ ಲೇಖಕನನ್ನು ಬಲುಬೇಗ ಜನಪ್ರಿಯಗೊಳಿಸುತ್ತದೆ. ಹಾಗಾಗಿ ಕಥೆ, ಕಾದಂಬರಿಗಳನ್ನು ಬರೆಯಬೇಕಾಯಿತು. ನಾನು ಕೂಡು ಕುಟುಂಬದಿಂದ ಬಂದವನು. ಕೂಡು ಕುಟುಂಬದಲ್ಲಿ ಅಂತಃಕರಣದ ಸಂಸ್ಕಾರ ರಕ್ತಗತವಾಗಿಯೇ ಬಂದಿರುತ್ತದೆ. ಹಸಿವು, ಬಡತನ ಅಂತಃಕರಣಕ್ಕೆ ಹೆಚ್ಚು ಜೀವ ತುಂಬುತ್ತದೆ.

- **ಕಲ್ಯಾಣ ಕರ್ನಾಟಕ ನಿಮ್ಮಲ್ಲಿ ಹೇಗೆ ನಿರೂಪಿತಗೊಂಡಿದೆ?**

ಸಾಹಿತ್ಯಕ, ಸಮಾಜೋ-ಸಾಂಸ್ಕೃತಿಕ ಕಾರ್ಯ ಮಾಡುವವರಿಗೆ ಇದು ಕನ್ನೆನೆಲ. ಕವಿರಾಜಮಾರ್ಗಕಾರನ ಕಾಲದ ಬದುಕು, ವಡ್ಡಾರಾಧನೆಯ ಅಹಿಂಸಾವಾದದ ವಿಚಾರಗಳು, ವಚನಕಾರರ ವೈಚಾರಿಕತೆ ಹಾಸು ಹೊಕ್ಕಾಗಿದ್ದಾಗಲೂ ಅರಿವಿನ ಕೊರತೆಯಿಂದ ಈ ನೆಲ ಬಳಲುತ್ತಿದೆ. ಅದಕ್ಕಾಗಿ ಗತಿಸಿದ ಘಟನಾವಳಿಗಳಿಂದಲೇ ನಮ್ಮಿರುವಿಕೆಯನ್ನು ಪರಿಯನ್ನು ಗ್ರಹಿಸುತ್ತಿದ್ದೇನೆ, ಚಲಿಸುವ ವರ್ತಮಾನವನ್ನು ನಿರ್ವಚಿಸುತ್ತಿದ್ದೇನೆ.

- **ನಿಮ್ಮ ಕಥೆ, ಕಾದಂಬರಿಗಳು ದೇವನೂರ, ಕುಂವೀ, ಶಾಂತರಸ, ಚೆನ್ನಣ್ಣನವರಿಗಿಂತ ಭಿನ್ನವಾದ ಬಯೋಪಿಕ್ ಬರೆಹದ ಮಾದರಿಯನ್ನು ಅನುಸರಿಸಿದ್ದು ಹೇಗೆ?**

ನಾನು ಕಥೆ ಬರೆಯಲು ಪ್ರಾರಂಭ ಮಾಡಿದಾಗ ದಲಿತ ಚಳವಳಿ, ಚಿಂತನೆಗೆ ಕಾರಣರಾದವರು ಕವಲುದಾರಿ ಕಂಡುಕೊಂಡಿದ್ದರು. ಮೇಲಾಗಿ ಓಲೈಕೆ ರಾಜಕಾರಣ ಹೆಚ್ಚಾಗಿದ್ದ ಕಾಲವೂ ಹೌದು. ನೀವು ಹೆಸರಿಸಿದ ಬರಹಗಾರರು ತಮ್ಮ ಕಾಲದ ಅಗತ್ಯವನ್ನು ಪೂರೈಸಿ ಹೊಸ ಬಗೆಯ ಎಚ್ಚರವನ್ನುಂಟುಮಾಡಿದರು. ಆ ಎಚ್ಚರವು ಮತ್ತಷ್ಟು ಜಾಗೃತಿಯನ್ನು ಬಯಸುವ ಕಾಲದಲ್ಲಿ ನಾನು ಬರೆಯಲು ಆರಂಭಿಸಿದೆ. ಅದಕ್ಕಾಗಿ ತುಸು ಭಿನ್ನವಾದ ಅಭಿವ್ಯಕ್ತಿಯ ಕ್ರಮವನ್ನು ಅನುಸರಿಸಿದೆ.

- **ನಿಮ್ಮ ಬರಹಗಳಲ್ಲಿ 1970-80ರ ದಶಕದ ಸಾಹಿತ್ಯ ಚಳವಳಿಯ ವಿಷಾದದ ಛಾಯೆ ಇರುವಂತೆ ಭಾಸವಾಗುತ್ತಿದೆಯಲ್ಲ?**

ವಿಷಾದದ ಛಾಯೆ ಇರುವುದಂತು ನಿಜ. ಗಮ್ಯವನ್ನು ಮುಟ್ಟುವಲ್ಲಿ ವಿಫಲವಾದುದರ ಬಗೆಗಿನ ವಿಷಾದವದು. ಆದರೆ ಚಳವಳಿಯ ಅರಿವು ಪಡೆದ ನನಗೆ ಆ ಚಳವಳಿಯ ಬಗ್ಗೆ ಹೆಮ್ಮೆಯಿದೆ, ಅದರ ಗಾಢಪ್ರಭಾವವೂ ನನ್ನ ಮೇಲಾಗಿದೆ.

- **ಹೊಸ ತಲೆಮಾರಿನ ವಿವೇಕವನ್ನು ಬೆಳೆಸುವ ಸಾಂಸ್ಕೃತಿಕ ಮಾದರಿಗಳಾವುವು?**

ಸಾಂಸ್ಕೃತಿಕ ಚಿಕಿತ್ಸಕ ದೃಷ್ಟಿಕೋನವನ್ನು ವೃದ್ಧಿಸಿಕೊಳ್ಳುವುದು, ಧ್ಯಾನದ ಅಧ್ಯಯನ, ವರ್ತಮಾನವನ್ನು ವಾಸ್ತವ ನೆಲೆಗಟ್ಟಿನಲ್ಲಿ ಅರ್ಥೈಸಿಕೊಳ್ಳುವುದು, ಸುಖವಿಲ್ಲದ ಧಾವತಿಯನ್ನು ತಿರಸ್ಕರಿಸುವುದು.

- **ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನದಲ್ಲಿ ಕೂತ ನಿಮಗೆ ಮುಖ್ಯವೆನಿಸುವುದೇನು?**

ನನಗೀಗ ಮುಖ್ಯವೆನಿಸುವುದು ಬದಲಾದ ಮುಖವಾಡದ ಬಣ್ಣದ ಹಿಂದೆ ಬಳಲುತ್ತಿರುವ ಜೀವಗಳು; ವರ್ತಮಾನದ ರಾಜಕೀಯ ಸೃಷ್ಟಿಸಿರುವ ಸಾಂಸ್ಕೃತಿಕ ಸಂದಿಗ್ಧತೆ; ಅನುಷ್ಠಾಗೊಳ್ಳದ ಅವಶ್ಯಕ ಸಾಮಾಜಿಕ ಅನುಕೂಲತೆಗಳು; ಹಕ್ಕುಗಳಿಗಾಗಿ ಹಂಬಲಿಸುತ್ತಿರುವ ಅಸಹಾಯಕ ಬದುಕುಗಳು.


ಪ್ರೊ.ಎಚ್.ಟಿ. ಪೋತೆ ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಮೊದಲ ಓದು

ಪಾಂಡಿತ್ಯಪೂರ್ಣ ಕೃತಿ

ಯಕ್ಷಗಾನದ ಕುರಿತ ಒಳನೋಟಗಳನ್ನು ನೀಡಬಲ್ಲ, ಚಿಂತನೆಗೆ ಹಚ್ಚಬಲ್ಲ ಲೇಖನಗಳಿರುವ ಮತ್ತು ಯಕ್ಷಗಾನದ ಬಗೆಗೆ ಇದಮಿತ್ಥಂ ಎಂದು ಹೇಳಬಹುದಾದಷ್ಟು ಪಾಂಡಿತ್ಯ, ಅನುಭವ ಇರುವ ಡಾ.ಎಂ.ಪ್ರಭಾಕರ ಜೋಶಿ ಅವರ ಲೇಖನಗಳ ಸಂಗ್ರಹ 'ವೀರಗಸೆ'. ವೀರ + ಕಸೆ ಎಂಬುದು ಯಕ್ಷಗಾನದ ಒಂದು ಸುಂದರವಾದ ಆಭೂಷಣಗಳಲ್ಲೊಂದು. ಯಕ್ಷಗಾನ ಕಲೆಯ ವೀರತ್ವದ ಸಂಕೇತವಿದು. ಈ ಕೃತಿಯಲ್ಲಿ ಯಕ್ಷಗಾನದ ಸಾಂಸ್ಕೃತಿಕ ಶ್ರೀಮಂತಿಕೆಯ ಮೇಲೆ ಬೆಳಕು ಚೆಲ್ಲಲಾಗಿದೆ. ಅಂತೆಯೇ, ಯಕ್ಷಗಾನದಲ್ಲಿ ಮಾತುಗಳನ್ನು ಮಥಿಸುವ ಅಂದರೆ ಅರ್ಥವನ್ನು ವಿಸ್ತರಿಸುವ, ಒಟ್ಟಾರೆಯಾಗಿ ಯಕ್ಷಗಾನದ, ಕಲಾ ಪರಿಸರದ ಮಾಹಿತಿಯಿದೆ. ಆರಾಧನಾ ಕಲೆಯಾಗಿರುವ ಯಕ್ಷಗಾನವೇ ಒಂದು ಭಕ್ತಿಯ ವಿಶ್ವ ಹೇಗೆ ಎಂಬುದರ ಮೇಲೆ ಬೆಳಕು ಚೆಲ್ಲಲಾಗಿದೆ. ಕನ್ನಡ ಸಾಹಿತ್ಯ ಲೋಕಕ್ಕೆ ಯಕ್ಷಗಾನ ಪ್ರಸಂಗ ಸಾಹಿತ್ಯದ ಕೊಡುಗೆ, ಇದರಲ್ಲಿರುವ ಭಾರತೀಯತೆ, ಯಕ್ಷಗಾನದ ಪರಂಪರೆ ಹೇಗಿತ್ತೆಂಬ ಒಳಸುಳಿಗಳಿವೆ. ಕುಮಾರವ್ಯಾಸ ಭಾರತಕ್ಕೂ ಯಕ್ಷಗಾನಕ್ಕೂ ಇರುವ ತಾದಾತ್ಮ್ಯ, ಯಕ್ಷಗಾನದ ಸಂಶೋಧನೆಯ ಮೂಲ ನೆಲೆಗಳು, ತುಳು ಯಕ್ಷಗಾನದ ಬಗೆಗಿನ ಕೆಲವು ನೋಟಗಳು ಮುಂತಾದ ಲೇಖನಗಳಂತೂ ಸರ್ವಕಾಲಕ್ಕೂ ಸಲ್ಲುವಂಥವು.



ವೀರಗಸೆ - ಯಕ್ಷಗಾನ ವಿಮರ್ಶಾ ಲೇಖನಗಳು
ಲೇ: ಡಾ.ಎಂ.ಪ್ರಭಾಕರ ಜೋಶಿ
ಪ್ರ: ಯಕ್ಷಗಾನ ಅಕಾಡೆಮಿ, ಬೆಂಗಳೂರು
ಸಂ: 080-22113146
ಪು: 204
₹250

ಮಕ್ಕಳ ಕಥೆಗಳ ಗುಚ್ಛ

'ರಾಜನ ಕಥೆಗಳು ಮಕ್ಕಳ ಮನಸ್ಸನ್ನು ಅರಳಿಸುತ್ತಿದ್ದವು. ಅಲ್ಲದೆ ಈ ಕಥೆಗಳು ಮಕ್ಕಳಿಗೆ ರುಚಿಸುತ್ತಿದ್ದವು ಮಾತ್ರವಲ್ಲದೆ ಮಕ್ಕಳ ಮನದಲ್ಲಿ ಮೌಲ್ಯವನ್ನು ಬಿತ್ತುತ್ತಿದ್ದವು. ಕಥೆ ಎಂದರೆ ಮಕ್ಕಳಿಗೆ ಇಷ್ಟವಾಗುವ ಕಾರಣ ನಾವು ಕಥೆಯ ಮೂಲಕ ಮಕ್ಕಳಲ್ಲಿ ನಿರೀಕ್ಷಿತ ನೀತಿ, ಮೌಲ್ಯಗಳನ್ನು ಸುಲಭವಾಗಿ ಅಳವಡಿಸಬಹುದು' ಎನ್ನುತ್ತಲೇ ಕೃತಿಯನ್ನು ಆರಂಭಿಸಿದ್ದಾರೆ ಲೇಖಕ ಈರಣ್ಣ ಬೆಂಗಾಲಿ.

15 ಕಥೆಗಳನ್ನು ಹೊಂದಿರುವ ಪುಟ್ಟ ಕೃತಿಯಿದು. ವ್ಯಂಗ್ಯಚಿತ್ರಕಾರರಾಗಿ ಈಗಾಗಲೇ ಗುರುತಿಸಿಕೊಂಡಿರುವ ಈರಣ್ಣ, ಮಕ್ಕಳಿಗೆ ಅರ್ಥವಾಗುವ ಸರಳ ಭಾಷೆಯಲ್ಲಿ ಕಥೆಯನ್ನು ಹೇಳಿಕೊಂಡು ಹೋಗಿದ್ದಾರೆ. ಕಥೆಯ ಕೊನೆಗೊಂದು ಸುಂದರ ನೀತಿಯನ್ನು ಇಟ್ಟಿದ್ದಾರೆ. 'ಪುಟ್ಟಿಯ ಪಕ್ಷಿಪ್ರೇಮ' ಶಾಲೆಗೆ ಹೋಗುವ ಹುಡುಗಿಯ ಪಕ್ಷಿ ಪ್ರೀತಿಯ ಕಥೆ. ದಿನ ನಮ್ಮ ಮನೆಗಳಲ್ಲಿ ನಡೆಯುವ, ನಮಗೆಲ್ಲರಿಗೂ ಗೊತ್ತಿರುವ ಕಥಾವಸ್ತು. ಮಕ್ಕಳಿಗೆ ಅರ್ಥವಾಗುವಂತೆ ಸರಳವಾಗಿದೆ. ಕೊನೆಗೆ ಪಕ್ಷಿಗಳಿಗಾಗಿ ನಾವೆಲ್ಲ ಮರಗಿಡಗಳನ್ನು ಉಳಿಸಿ, ಬೆಳೆಸಬೇಕೆಂಬ ಸಂದೇಶವಿದೆ.



ಮೊಸಳೆ ಮತ್ತು ಮಿಂಚುಳ್ಳಿ
ಲೇ:ಈರಣ್ಣ ಬೆಂಗಾಲಿ
ಪ್ರ: ಕೃಷ್ಣಾರುಣ ಪ್ರಕಾಶನ, ರಾಯಚೂರು
ಸಂ: 9986724198
ಪು: 64
₹99

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಎಫ್.ಎಂ.ನಂದಗಾವ ಅವರ ಆಗಸ್ಟ್ ಪಂದ್ರಾ ಮತ್ತು ಫಾದರ್ ಪೀಟರ್
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ವಿಶಾಲ್ ಮ್ಯಾಸರ್ ಅವರ ಚಂದಿರ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ನದೀಪಾತ್ರದ ಚಾರಣ...

ಈ ಹೃದಯ ಹಾಡಿದೆ...ಹೊಳೆ ರಚಿಸಿದ ಪ್ರೇಮಶಿಲ್ಪ

ಹೊಸ ನೋಟದ ಚರಣ

ಶಿಲಾ ಸೊಬಗಿಗೆ ಹಸಿರಿನ ಮೆರುಗು

ಬೇಸಗೆಯಲ್ಲಿ ಶಿಲ್ಪಕಲಾ ಮ್ಯೂಸಿಯಂ ಆಗಿ ಬದಲಾಗುತ್ತದೆ ತುಂಗಭದ್ರಾ ಪಾತ್ರ. ಅಲ್ಲಿನ ಚಾರಣ ಕಾಣಿಸಿದ ಕಲಾಕೃತಿಗಳನ್ನು ಲೇಖಕರು ಇಲ್ಲಿ ಚಿತ್ರವತ್ತಾಗಿಸಿದ್ದಾರೆ

ರಹಮತ್ ತರೀಕೆರೆ

ಹಂಪಿ ಬಹುರೂಪಿ. ಅದಕ್ಕೆ ಹಲವು ಮುಖಗಳಿವೆ- ಗುಡಿಗಳ ಧಾರ್ಮಿಕತೆ; ಕೋಟೆ ಆನೆಲಾಯ ಕಮಲಮಹಲ್ ಸ್ನಾನಗೃಹಾದಿಗಳ ವಾಸ್ತುಶಿಲ್ಪ; ವಿವಿಧ ವಿಗ್ರಹಗಳ ಶಿಲ್ಪಕಲೆ; ಜಾತ್ರೆ ತೇರು ಮದುವೆ ಶಿವರಾತ್ರಿ ಭಜನೆಗಳ ಆಚರಣೆ; ಸಂತರ ಆಶ್ರಮಗಳ ಆಧ್ಯಾತ್ಮಿಕತೆ; ಸರ್ಕಾರಿ ಕಾರ್ಯಕ್ರಮಗಳ ಉತ್ಸವ- ಇತ್ಯಾದಿ. ಮನುಷ್ಯ ನಿರ್ಮಿತವಾದ ಈ ಎಲ್ಲ ಮುಖಗಳಿಗೂ ಜೀವ ತುಂಬಿರುವುದು ಅಲ್ಲಿನ ನಿಸರ್ಗ. ಅದರಲ್ಲೂ ಹಸಿರುಸೈನ್ಯ ಮುತ್ತಿಗೆ ಹಾಕಿದಂತಿರುವ ಗದ್ದೆ ತೋಟಗಳು; ಕಾವಲಿಗೆ ನಿಂತಿರುವ ಕಲ್ಲುಬೆಟ್ಟಗಳ ಸಾಲು; ಅವುಗಳ ನಡುವೆ ಕಾಲಾತೀತವಾಗಿ ಹರಿವ ತುಂಗಭದ್ರೆ; ಅದರೊಳಗಿನ ಅಗೋಚರ ಜೀವರಾಶಿ.

ಈ ನಿಸರ್ಗದ ಆಯಾಮವನ್ನು ಹೆಚ್ಚಿನ ಪ್ರವಾಸಿಗರು ಗಮನಿಸುವುದಿಲ್ಲ. ಕಾರಣ, ಹಂಪಿಯ ಚಾರಿತ್ರಿಕ ಸ್ಮಾರಕಗಳನ್ನು ನೋಡಲು ರಸ್ತೆಗಳಿವೆ. ತೋರಿಸಲು ಗೈಡುಗಳಿದ್ದಾರೆ. ಆದರೆ ಚರಿತ್ರೆಯ ಭಾರವಿಲ್ಲದ ಬೆಟ್ಟ, ಹೊಳೆ, ಕಾಡುಗಳನ್ನು ನಾವೇ ಹುಡುಕಿ ತಿರುಗಿ ನೋಡಬೇಕು. ಈ ಪ್ರದೇಶಗಳು ಪ್ರವಾಸಿಗರ ಜಾಗಗಳಲ್ಲ. ಚಾರಣಿಗರವು. ಇವನ್ನು ನೋಡಬೇಕಾದರೆ ದಡದಲ್ಲಿ ಬೆಳೆದ ಹಳುವನ್ನು ದಾಟಬೇಕು. ಕೆಸರನ್ನು ಮೆಟ್ಟಬೇಕು. ಬಂಡೆ ಹತ್ತಬೇಕು. ಪೊದೆಗಳಲ್ಲಿ ನುಸುಳಬೇಕು. ಗದ್ದೆತೋಟಗಳನ್ನು ಹಾಯಬೇಕು. ಹಾದಿತಪ್ಪಿದರೆ ತೋಟಗಳಲ್ಲಿರುವ ರೈತರು, ಆಡುಕಾಯುವವರು, ಮೀನುಗಾರರು, ಹರಿಗೋಲಿನವರು ನೆರವಾಗುವರು.

ತಿಂಗಳಿಗೊಮ್ಮೆ ಮತಂಗ ಪರ್ವತ ಹತ್ತಿಳಿವ ನಾನು, ನನ್ನ ಶಿಷ್ಯಮಿತ್ರರಾದ ಗೋಪಾಲಕೃಷ್ಣ-ಗುರುರಾಜ ಅವರ ಜತೆಗೆ, ಈಚೆಗೆ ತುಂಗಭದ್ರೆಯ ಪಾತ್ರದ ಕಿಂಚಿತ್ ಚಾರಣ ಮಾಡಿದೆ-ವಿರೂಪಾಕ್ಷ ಗುಡಿಯ ಹಿಂದೆ, ಒಂದು ಕಿ.ಮೀ. ಮೇಲ್ಭಾಗದಲ್ಲಿ. ನಾವು ನದೀಪಾತ್ರದ ತೋಟದೊಳಗಿಂದ ಹಾಯುವಾಗ, ವಿರೂಪಾಕ್ಷ ಶಿಖರದಂತೆ ನಿಡಿದಾಗಿದ್ದ ಹಳೆಯ ತೆಂಗಿನಮರಗಳಿಂದ ರೈತರು ಎಳನೀರನ್ನು ಇಳಿಸುತ್ತಿದ್ದರು. ಇಲ್ಲಿನ ಜಮೀನು ಹೊಳೆ ಬಂದಾಗ ಮುಳುಗಡೆಯಾಗುವ, ನೆರೆಯಿಳಿದಾಗ ಕಾಣಿಸಿಕೊಳ್ಳುವ ನೀರಾಟವಾಡುತ್ತ ಬಂದಿದೆ.

ಮಳೆಗಾಲದಲ್ಲಿ ದಾಟಲು ಅಸಾಧ್ಯವಾದ ತುಂಗಭದ್ರೆಯ ಕಲ್ಲುಸಾರವು, ಬೇಸಗೆಯಲ್ಲಿ ತಾನೇ ತಾನಾಗಿ ಮೈದೆಗೆಯುತ್ತದೆ. ಇಲ್ಲಿ ನೀರನ್ನು ಕಾಲಿಗೆ ತಾಗಿಸದೆಯೇ ತುಂಗಭದ್ರೆಯ ಆಚೆದಡಕ್ಕೆ ಹೋಗುವ ಮೇಕೆದಾಟುಗಳಿವೆ. ಅವನ್ನು ದಾಟಿದರೆ ಇನ್ನೊಂದು ಗಡ್ಡೆ. ಅದನ್ನು ದಾಟಿದರೆ ಕೊಪ್ಪಳ ಜಿಲ್ಲೆ; ಹಿಂದೊಂದು ಕಾಲಕ್ಕೆ ಹೈದರಾಬಾದ್ ಸಂಸ್ಥಾನ. ರೈತರು, ಬೆಸ್ತರು ಕಲ್ಲುಸಾರದ ಮೇಲೆ ನಡೆದು ಈ ದಾಟುಗಳನ್ನು ನೆಗೆದು ಆಚೆದಡದ ಊರುಗಳಿಗೆ ಹೋಗುತ್ತಾರೆ.

ಅರ್ಧ ಕಿ.ಮೀ. ವಿಸ್ತಾರವಾದ ಹಾಸುಗಲ್ಲಿನ ಈ ಪಾತ್ರದಲ್ಲಿ ಕೊಳಗಳಿವೆ. ಬೃಹದಾಕಾರದ ಬಂಡೆಗಳಿವೆ. ಮರಳ ದಿಬ್ಬಗಳಿವೆ. ಬೆಟ್ಟಗಳಿವೆ. ಪುಟ್ಟ ಗುಹೆಗಳಿವೆ. ಕಿರು ಜಲಪಾತಗಳಿವೆ. ಹೊಳೆಪಾತ್ರಕ್ಕೇ ವಿಶಿಷ್ಟವಾದ ಮರಗಿಡಗಳಿವೆ. ಹೊಳೆ ತುಂಬಿದಾಗ ಹೊರಜಗತ್ತಿನ ಜತೆ ಸಂಪರ್ಕ ಕಡಿದುಕೊಂಡು ಏಕಾಂಗಿಯಾಗುವ ನಡುಗಡ್ಡೆಗಳಿವೆ. ಈ ಗಡ್ಡೆಗಳಲ್ಲಿ ಬಾಳೆಯ-ತೆಂಗಿನ ತೋಟಗಳಿವೆ.

ಸಾಮೂಹಿಕ ಒಳಕಲ್ಲು

ನಾವು ನದೀಪಾತ್ರದ ಚಾರಣದಲ್ಲಿ ಕಲ್ಲುಸಂದಿನಲ್ಲಿ ಮಾತ್ರ ಬೆಳೆವ ವಿಶಿಷ್ಟ ಮರಗಳನ್ನು ಕಂಡೆವು. ಅವುಗಳಲ್ಲಿ ಹಾಲೆ ಮತ್ತು ಹೊಳೆಮತ್ತಿಯೂ ಸೇರಿವೆ. ಹೊಳೆಮತ್ತಿಯನ್ನು ಕಾವೇರಿಯ ಮುತ್ತತ್ತಿಯಲ್ಲಿ ನೋಡಿದ್ದೆ. ಹರಿವ ಹೊಳೆಯಲ್ಲಿ ಬೇರನ್ನು ಬಂಡೆಸಂದುಗಳಲ್ಲಿ ಕಳಿಸಿ, ಬೃಹದಾಕಾರ ಬೆಳೆದು, ನೀರದರ್ಪಣದಲ್ಲಿ ಮೊಗವನ್ನು ನೋಡುತ್ತ ನಿಲ್ಲುವ ವೃಕ್ಷವಿದು. ಅದು ನೀರಹಕ್ಕಿಗಳು ಮನೆಮಾಡುವ ಅಪಾರ್ಟ್‌ಮೆಂಟ್ ಕೂಡ. ಒಂದು ಅನಾಮಿಕ ಗಿಡದಲ್ಲಿ ನೆಕಲೇಸಿನಂತೆ ಹೂಮಾಲೆಗಳಿದ್ದವು. ಒಂದು ಗಿಡದ ಕಾಯಿ ಒಣಗಿ ಬಿರಿತು ತಾನೇ ಹೂವಾಗಿತ್ತು. ಅತ್ತಿಕಾಯಿಯಂತಹ ಕಾಯಿ ಬಿಡುವ ಮರದಲ್ಲಿ, ಗ್ರೀಕ್ ಸೈನಿಕರಂತೆ ವೇಷ ಧರಿಸಿದ್ದ ತ್ರಿಕೋನಾಕಾರ ಕೆಂಬಣ್ಣದ ಕವಚವುಳ್ಳ ಕೀಟಗಳು ಹರಿದಾಡುತಿದ್ದವು. ಹಂಗಾಮಿರಬೇಕು. ರತಿಕ್ರೀಡೆಯಲ್ಲಿದ್ದವು.

ಹೊಳೆ ತನ್ನ ಪಾತ್ರದಲ್ಲಿ ಅಲ್ಲಲ್ಲಿ ಮಡುಗಳನ್ನು ನಿರ್ಮಿಸಿದೆ. ಅವುಗಳ ಸುತ್ತ ಬೇಲಿಕಟ್ಟಿದಂತೆ ಹಾಪು ಸೆತ್ತೆಸದೆ ಬೆಳೆದಿದೆ. ಮೇಲೆ ನೂರಾರು ಬಗೆಯ ಜಲಸಸ್ಯಗಳು; ಮನುಷ್ಯರು ಇಳಿಯಲಾಗದ ಆಳದಲ್ಲಿ ನೈದಿಲೆಗಳು. ಬದಿಯಲ್ಲಿ ಕೇಬಲುಗಳಂತೆ ಹರಿದಿರುವ ಮಾರುದ್ದದ ಹುಲ್ಲು. ಇದೇ ಪಾತ್ರದಲ್ಲೇ ಇನ್ನೊಂದಿಷ್ಟು ಹಿಂದೆ ಹೋದರೆ, ಕಾಳಘಟ್ಟವಿದೆ. ಅಲ್ಲಿ ತುಂಗಭದ್ರೆ ನಿರ್ಮಿಸಿರುವ ಸರೋವರದಂತೆ ವಿಶಾಲವಾಗಿರುವ ಗಂಗಮ್ಮನ ಮಡುವಿದೆ. ಅದರ ತುಂಬ ಮೊಸಳೆಗಳು. ಬಂಡೆಯ ಮೇಲೆ ಕೂತು ತಮ್ಮ ಮೂತಿಯನ್ನಷ್ಟೆ ಮೇಲೆತ್ತಿ ವಿಹರಿಸುವ ಮೊಸಳೆಗಳನ್ನು ನೋಡಬಹುದು. ಕಾಲನ್ನು ನೀರೊಳಗಿಟ್ಟು ಜಲಕೇಳಿ ಆಡುವ ಅಚಾತುರ್ಯ ಮಾಡಲಾಗದು. ಒಮ್ಮೆ ಹೊಳೆತೀರದಲ್ಲಿ ಹುಲ್ಲುಕೊಯ್ಯಲು ಬಂದ ಹುಡುಗನನ್ನು ಮೊಸಳೆ ಎಳೆದುಕೊಂಡು ಹೋಯಿತು. ಈ ಮಡುವಿನಲ್ಲಿ ಮೀನುಗಾರರು ಬಿಡುಬಲೆ ಹಾಕಿ ಮೀನು ಹಿಡಿಯುವರು.

ಬೇಸಗೆಯಲ್ಲಿ ತುಂಗಭದ್ರೆಯ ಪಾತ್ರವು ಶಿಲ್ಪಕಲಾ ಮ್ಯೂಸಿಯಂ ಆಗಿ ರೂಪಾಂತರಗೊಳ್ಳುತ್ತದೆ. ಎಷ್ಟು ಮಿಲಿಯನ್ ವರ್ಷಗಳ ಹಿಂದೆ ಭೂಮಿಯೊಳಗಿನ ಲಾವಾರಸ ಹರಿದು ತಣ್ಣಗಾಗಿದ್ದೊ? ಹೊಳೆ ಮಾತ್ರ ತನಗಡ್ಡಬಂದ ಬೆಟ್ಟಗಳನ್ನು ಬಳಸಿ, ಕೊರಕಲನ್ನು ಇಳಿದು, ಬಯಲನ್ನು ಹುಡುಕಿ ಹಾದಿ ಮಾಡಿಕೊಂಡು ಹರಿದಿದೆ. ಕಲ್ಲರೆಯ ಮೆದುಭಾಗಗಳನ್ನು ಕರಗಿಸಿ ಕಲಾಕೃತಿಗಳನ್ನು ರಚಿಸಿದೆ. ಅವು ಹೃದಯ ಗುರುತನ್ನು ಯಾರೊ ಪ್ರೇಮಿ ಕೆತ್ತಿದಂತಹ ಆಕೃತಿಗಳು; ಶಿಲಾರಸವು ದ್ರವರೂಪದಲ್ಲಿ ಇರುವಾಗಲೆ ಯಾರೊ ಹೆಜ್ಜೆಯಿಟ್ಟುಕೊಂಡು ಹೋದಂತಹ ಗುರುತುಗಳು; ಒರಳುಕಲ್ಲಿನ ಗುಂಡಿಗಳು; ಆಳಬಾವಿಗಳು. ಕೆಲವು ಬಂಡೆಗಳು ಆನೆಗಳು ಮಲಗಿದಂತೆ; ಮತ್ತೆ ಕೆಲವು ಡೈನೊಸರಸಿನ ಅಸ್ಥಿಪಂಜರ. ಇಂತಹ ಚಿತ್ರವಿಚಿತ್ರ ಕಲ್ಲುಗಳು ಹುಲಗಿಯ ತನಕವೂ ಸಿಗುತ್ತವೆ. ಇಲ್ಲಿನ ಮನುಷ್ಯರು ಹತ್ತಲಾರದ ಬಂಡೆಗಳ ತುದಿಯಲ್ಲಿ ನೀರಹಕ್ಕಿ ಮೊಟ್ಟೆ ಇಡುತ್ತವೆ.

ಹೊಳೆಗೆ ನೆರೆ ಬಂದಾಗ, ಈ ಮರ ಗಿಡ ದಿಬ್ಬ ಸುರಂಗ ಪೊಟರೆ ಗುಹೆ ಬಂಡೆಗಳೆಲ್ಲ ಪ್ರವಾಹದಲ್ಲಿ ಕಣ್ಮರೆಯಾಗಿ ನೀರು ಏಕತ್ರವಾಗುತ್ತದೆ. ಅದೊಂದು ಪ್ರವಾಹ ಸೃಷ್ಟಿಸುವ ಜಲಸಮಾನತೆ. ಹೊಳೆಯಿಳಿದ ಬಳಿಕ ನೀರು, ಮತ್ತೆ ಬಂಡೆಗಳ ಸಂದಿಗೊಂದುಗಳಲ್ಲಿ ಹಾದು, ಸುರಂಗ ಪೊಟರೆಗಳನ್ನು ಹೊಕ್ಕು ಜುಳಜುಳಿಸುತ್ತದೆ. ಅಗೋಚರವಾಗಿ ಬಂಡೆಗಳಿಗೆ ಡಿಕ್ಕಿ ಹೊಡೆದು ಆರ್ಭಟಿಸುತ್ತದೆ. ಶಿಲೆಗಳ ಇಕ್ಕಟ್ಟಿನಲ್ಲಿ ಕುಗ್ಗುತ್ತದೆ. ಹೊರಬಂದು ಬಿಡುಗಡೆಯ ಲವಲವಿಕೆಯಲ್ಲಿ ಹರಿಯುತ್ತದೆ. ತುಂಗಭದ್ರೆಯ ಈ ನದೀಪಾತ್ರವು ಖಂಡಿತ ಜಲಕೇಳಿಯ ತಾಣವಲ್ಲ. ಇಲ್ಲಿ ಅಪರಿಚಿತರು ನೀರಿಗಿಳಿದಾಗ ಸಾಯುವುದು ಈಜುಬಾರದೆ ಅಲ್ಲ. ಪಾಚಿಗೆ ಜಾರಿ; ನೀರೊಳಗಿನ ಅಗೋಚರ ಸುರಂಗ ಪೊಟರೆಗಳಲ್ಲಿ ಸಿಕ್ಕಿಕೊಂಡು. ಬಂಡೆಗಳ ನಡುವಿನ ಹೊಳೆಯ ಆಳ ಸೆಳವು ಅಂದಾಜಿಗೆ ಸಿಗದು. ಆದರೂ ಏಕಾಂತದ ನಿರ್ಜನ ಜಾಗ ಹುಡುಕುವಲ್ಲಿ ಪ್ರೇಮಿಗಳಿಗೂ ಪಾನಪ್ರಿಯರಿಗೂ ವಿಶೇಷ ಪ್ರತಿಭೆಯಿದೆ. ಪಾನಿಗರು ಬಂದು ಹೋದ ಕುರುಹುಗಳಾದ ಖಾಲಿಸೀಸೆ ಕಂಡವು.

ಹೊಳೆ ಬೆಟ್ಟ ಕಣಿವೆಗಳು ಯಾವುದೇ ಊರಿಗೆ ವಿಶಿಷ್ಟ ಚೆಲುವನ್ನು ಕೊಡುತ್ತವೆ. ಮಾತ್ರವಲ್ಲ, ತಮ್ಮನ್ನು ದಾಟಲು ಹತ್ತಲು ಇಳಿಯಲು ಪ್ರಚೋದಿಸುವ ಮೂಲಕ, ಊರವರನ್ನು ಜೀವಂತವಾಗಿಡುತ್ತವೆ. ಇಷ್ಟೆ, ಸಂಭಾಳಿಸಿಕೊಂಡು ಅವುಗಳ ಸಂಗ ಮಾಡಬೇಕು. ❖

ಬಂಡೆಯ ಮೇಲೆ ಚನ್ನೆಮಣೆ



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಕೇಶ್ರುಷ್ಣ ಕಥೆಯ — ಗಾಳಿಗೆ ಗಾಳಿ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗಾದೆಗಳಲ್ಲಿ ಬಳ್ಳಿ

- ಕಬ್ಬು ಡೊಂಕಾದರೆ ಸಿಹಿ ಡೊಂಕೆ?
- ಕಾಗೆ ಕೂರುವುದಕ್ಕೂ ಟೊಂಗೆ ಮುರಿಯುವುದಕ್ಕೂ ಸಮ.
- ಕಿವುಡ ಕಿಚಡಿ ಬೇಡಿದರೆ, ಗೌಡ ಹಚಡ ಬೇಡಿದ.
- ಕೀಲು ಇಲ್ಲದ ಚಕ್ಕಡಿ ಹೊಡೆದವರುಂಟೆ?
- ಕುಗ್ರಾಮಕ್ಕೆ ಕೂಲಿಗೆ ಹೋದರೆ ಮೂರುಚೀಲ ಜೋಳ ಕಡ ಆತು.
- ಕೂಳು ಕುತ್ತ, ನೀರು ಪಿತ್ತ, ಎರಡೂ ಬಿಟ್ಟರೆ ಅತ್ತ.
- ಕೆಮ್ಮುವಳೆ ಆದರೂ, ತಮ್ಮವಳೆ ಲೇಸು ದಡ್ಡಿಯಾದರೂ ದೊಡ್ಡವಳೇ ಲೇಸು.
- ಕೇಳಿದವರ ಮುಂದೆ ಹೇಳುವವರು ದಡ್ಡರು.
- ಕೈನಡೆಯುವಾಗ ಎಲ್ಲರೂ ಕಾಲಬಳ್ಳಿ.
- ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ.
- ಕೋಲು ಮುರಿಯಬಾರದು ಹಾವು ಸಾಯಬಾರದು.
- ಕೌದಿ ಲೇಸು ಬಸಿರಿಗೆ, ಕಂಬಳಿ ಲೇಸು ಚಳಿಗೆ.
- ಕಂಗಳು ಅರಿಯದಿದ್ದರೂ ಕರಳು ಅರಿಯಲಾರದೇ?

ಬಿಂಬ ಪ್ರತಿಬಿಂಬ ಪದಗಳು

ಇಲ್ಲಿರುವ ಪದಗಳನ್ನು ಎಡದಿಂದ ಓದಿದರೆ ಒಂದು ಅರ್ಥ ಬಲದಿಂದ ಓದಿದರೆ ಇನ್ನೊಂದು ಅರ್ಥ ಬರುವುದು

DRAW X WARD
TENDER X REDNET
LIVE X EVIL
MAD X DAM
TRAMS X SMART
TOP X POT
TRAP X PART
POTS X STOP
EDIT X TIDE
ROOM X MOOR
TEN X NET

ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರ ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟ ಮೂರಕ್ಷರದ ಪದಕ್ಕೆ ಸೇರಿಸಿ ನಾಲ್ಕಕ್ಷರದ ಪದ ಮಾಡಿ.

ಣಿ	ತಾ	ಧಾ	ನಾ	ನ್ವ
ಸ	ಪ	ಸ್ವ	ಸಾ	ಗೋ

1	ಸರ		ತಿ
2	ಸಮ		ಯ
3	ಹೊರ		ಡು
4	ಕಡ		ಲು
5	ಕರ		ಕ
6	ಗಣ		ತಿ
7	ಅವ		ರ
8	ಸಮಾ		ನ
9	ಅವ		ರ
10	ಅವ		ನ

ಗುಣ ವಿಶೇಷ ಗುಣಕಾರ

ಎರಡು ಗುಣಾಕಾರ, ಉತ್ತರ ಒಂದೇ

651 X 156 = 101556
372 X 273 = 101556

ಅದಲು ಬದಲು ಕಂಚಿ ಕದಲು

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1.ಹತ್ತಿ ಅರಳೆ:________
2.ಮರಿನಾದ:________
3.ಆನೆ ಪಾದ:________
4.ಹಿಟ್ಟುಪಡಿ:________

ಪುಟಾಣಿ ಪದಬಂಧ

ಸುಳಿವು					
1			ಗಿ	ರಿ	ಗಿರಿಯಲ್ಲಿ ಆದ ಬಂಧನ
2			ಬ	ಟ್ಟೆ	ಬಟ್ಟೆಯಿಂದ ಹಾಳಾದದ್ದು
3			ವಾ	ರ	ವಾರಕ್ಕೊಮ್ಮೆ ಬರುವ ಓಲೆಕಾರ
4			ವಾ	ದ	ವಾದ ಮಾಡಿದಾಗ ಬಂದ ಆರೋಪ
5			ತಾ	ಳ	ತಾಳ ಬಾರಿಸುತ್ತ ಮಾಡಿದ ಸಂಪು

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ: 1.ಅನುಗ್ರಹ 2.ಸರೋವರ 3.ಆಡಂಬರ 4.ಚದುರಂಗ 5.ಸರದಾ

ಅದಲು ಬದಲು...: 1.ಅರಳಿದ ಹೂ 2.ನರಕಾಸುರ 3.ಆಪಾದನೆ 4.ಕಾಗೆಬಳಗ

ಪಕ್ಷಿ ನೋಟ: ಡೂ.ಡೂ.ಪಕ್ಷಿ

ಜಾಣಪದ ಆಟ: 1.ಆಗಮನ 2.ರಾಜಗಿರಿ 3.ರಾಜಸ್ಥಾನ 4.ನಾಯಿಕೊಡೆ 5.ಹರಿಹರ 6.ಮೇಕೆದಾಟು 7.ಹರತಾಳ 8.ಕಾರವಾರ 9.ಸರದಾರ 10.ಪಡಿತರ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.inw

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಪರಿಣಿತ ಎನ್.
ತುಮಕೂರು

ಋತ್ವಿಕ್ ಎಸ್.ಎಂ.
ಕೊಪ್ಪಳ

ದೀಪ್ತಿ ಲಕ್ಷ್ಮಣ್ ಗೌಡ
ಅಂಕೋಲ (ಉ.ಕ.)

ಗಣೇಶ. ಜಿ.
ರಾಯಚೂರು

ಆರಾಧ್ಯ. ಎ
ಬೆಂಗಳೂರು

ದ್ಯುತಿ ಕೆ.ಜಿ
ಕಂಟಲಗೆರೆ

ಐಸಿಐಸಿಐ ಬ್ಯಾಂಕ್ ಲಾಭ ಶೇ 40 ಹೆಚ್ಚಳ

ನವದೆಹಲಿ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 40ರಷ್ಟು ಹೆಚ್ಚಾಗಿ ₹9,648 ಕೋಟಿಗೆ ತಲುಪಿದೆ.

ಸುಸ್ತಿ ಸಾಲದಲ್ಲಿ ಇಳಿಕೆ ಹಾಗೂ ಬಡ್ಡಿ ವರಮಾನದಲ್ಲಿ ಸುಧಾರಣೆ ಆಗಿರುವುದೇ ಲಾಭದಲ್ಲಿ ಹೆಚ್ಚಳ ಆಗಲು ಕಾರಣ ಎಂದು ಬ್ಯಾಂಕ್ ತಿಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ₹6,905 ಕೋಟಿ ಇತ್ತು. ಬ್ಯಾಂಕ್‌ನ ಒಟ್ಟು ವರಮಾನ ₹ 28,337 ಕೋಟಿಯಿಂದ ₹38,763 ಕೋಟಿಗೆ ಏರಿಕೆ ಕಂಡಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ನಿವ್ವಳ ಬಡ್ಡಿ ವರಮಾನ (ಎನ್‌ಐಐ) ಶೇ 38ರಷ್ಟು ಹೆಚ್ಚಾಗಿ ₹18,227 ಕೋಟಿಗೆ ತಲುಪಿದೆ. ಬಂಡವಾಳ ಲಭ್ಯತೆ ಪ್ರಮಾಣವು ಶೇ 18.04 ರಿಂದ ಶೇ 16.71ಕ್ಕೆ ಇಳಿಕೆ ಕಂಡಿದೆ.

ಬ್ಯಾಂಕ್‌ನ ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 3.4 ರಿಂದ ಶೇ 2.7ಕ್ಕೆ ಇಳಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 0.7 ರಿಂದ ಶೆ 0.4ಕ್ಕೆ ಇಳಿಕೆ ಕಂಡಿದೆ ಎಂದು ಮಾಹಿತಿ ನೀಡಿದೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,350
ಒಡವೆ ಚಿನ್ನ 1ಗ್ರಾಂ	₹5,675
ಬೆಳ್ಳಿ ಕೆ.ಜಿಗೆ	₹77,000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹465

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹127

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	1840 (1840)
ಸೋಯಾ (ರಿಫೈನ್ಡ್)	₹960 (960)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹880 (880)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹265-470
ದ್ವಿತಳಿ (ಬಿ.ವಿ)	₹311-582

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಥಮ ವರ್ಷದ ಪುಣ್ಯಸ್ಮರಣೆ

ಬಿ.ಎಚ್. ಭಾಗ್ಯಲಕ್ಷ್ಮಮ್ಮ
ಜನನ : 19.9.1946 ಮರಣ : 23.7.2022
ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೆಯಾಗಿ ಉಳಿದಿದೆ.
ದಿವಂಗತ: ಕೆ. ನಾಗರಾಜಯ್ಯ, ಮಕ್ಕಳು ಸಂಜಯ ನಗರ, ಬೆಂಗಳೂರು.

ಶಿವಗಣಾರಾಧನೆ

ದಿ|| ಶ್ರೀ ಸಿದ್ದಪ್ಪ ಚನ್ನಬಸಪ್ಪ ಮರಡಿ
ನಿವೃತ್ತ ಜಿಲ್ಲಾ ನ್ಯಾಯಾಧೀಶರು
ಸಾ|| ಹೆಡಿಗ್ಗೊಂಡ ತಾ|| ಬ್ಯಾಡಗಿ, ಜಿ|| ಹಾವೇರಿ
ಜನನ: 01.08.1954 ಮರಣ: 16.07.2023
ಇವರು ದಿ: 16.07.2023 ರಂದು ತಮ್ಮ 69ನೇ ವಯಸ್ಸಿನಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತನ್ನಿಮಿತ್ತ ಮೃತರ "ಶಿವಗಣಾರಾಧನೆಯನ್ನು" ದಿನಾಂಕ :24-07-2023 ನೇ ಸೋಮವಾರ ಮಧ್ಯಾಹ್ನ 12-00 ಗಂಟೆಗೆ ಹಾವೇರಿಯ ಮಂಜುನಾಥ ನಗರದ ಸ್ವಗೃಹದಲ್ಲಿ ನೆರವೇರಲಿದೆ. ತಾವುಗಳು ಈ ಕಾರ್ಯಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರ-ಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು
ಮೃತರ ಪತ್ನಿ: ಶ್ರೀಮತಿ ಪ್ರೇಮಾ ದಿ|| ಶ್ರೀ ಸಿದ್ದಪ್ಪ ಮರಡಿ.
ಮಗ: ನಾಗರಾಜ, ಸೊಸೆ: ಮೇಘಾ, ಮಗಳು: ರಶ್ಮಿ, ಅಳಿಯ: ಅರುಣಕುಮಾರ, ಮೊಮ್ಮಕ್ಕಳು, ಅಪಾರ ಬಂಧು ಬಳಗ, ಹಾಗೂ ಆಪ್ತಮಿತ್ರರು. ಸಂಪರ್ಕಿಸಿ : 9448541546

ವೈಕುಂಠ ಸಮಾರಾಧನೆ

ಶ್ರೀ ಎನ್. ವಿನೋದ್ ಕುಮಾರ್
[ಶ್ರೀಮತಿ ಪ್ರೇಮ ಮತ್ತು ದಿ. ಎನ್.ನಾರಾಯಣರೆಡ್ಡಿ ರವರ ಪುತ್ರ] ದಿನಾಂಕ 14.07.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತತ್ಸಂಬಂಧವಾಗಿ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ 24.07.2023 ನೇ ಸೋಮವಾರ ಬೆಳಿಗ್ಗೆ 9ಕ್ಕೆ ಮೃತರ ಸ್ವಗೃಹವಾದ ವಿಜಯಾ ಬ್ಯಾಂಕ್ ಲೇಔಟ್, ಬೆಂಗಳೂರು-76 ಇಲ್ಲಿ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ಕೋರುವ
ಇಂತಿ ದುಃಖತಪ್ತರು – ತಾಯಿ, ಪತ್ನಿ ಮತ್ತು ಮಗ ಹಾಗೂ ಕುಟುಂಬವರ್ಗದವರು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಭಾರತಕ್ಕೆ ಮುಂದುವರಿದ ವಿದೇಶಿ ಬಂಡವಾಳ ಒಳಹರಿವು: ವಿಜಯಕುಮಾರ್

‘ಮೌಲ್ಯ ವೃದ್ಧಿ; ಷೇರುಪೇಟೆ ಕುಸಿವ ಆತಂಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರುಪೇಟೆಗಳ ಬಂಡವಾಳ ಮೌಲ್ಯ ಏರಿಕೆ ಕಾಣುತ್ತಿರುವುದು ಆತಂಕ ಮೂಡಿಸುತ್ತಿದೆ. ಬಂಡವಾಳ ಮೌಲ್ಯವು ಗರಿಷ್ಠ ಮಟ್ಟದಲ್ಲಿ ಇದ್ದಾಗ ಕೆಲವು ನಕಾರಾತ್ಮಕ ಅಂಶಗಳು ಭಾರಿ ಕುಸಿತಕ್ಕೆ ಕಾರಣವಾಗಬಹುದು. ಷೇರುಪೇಟೆಗಳಲ್ಲಿ ಶುಕ್ರವಾರ ನಡೆದ ನಕಾರಾತ್ಮಕ ವಹಿವಾಟು ಇದಕ್ಕೆ ಉತ್ತಮ ನಿದರ್ಶನವಾಗಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.

ಇನ್ಫೊಸಿಸ್ ಮತ್ತು ಎಚ್‌ಯುಎಲ್ ಸಂಬಂಧಿಸಿದ ನಕಾರಾತ್ಮಕ ಸುದ್ದಿಗಳಿಂದಾಗಿ ಶುಕ್ರವಾರ ಸೆನ್ಸೆಕ್ಸ್ 887 ಅಂಶ ಕುಸಿತ ಕಾಣುವಂತಾಯಿತು ಎಂದು ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ. ಇನ್ಫೊಸಿಸ್ ಕಂಪನಿಯು ಪ್ರಸಕ್ತ ಹಣಕಾಸು ವರ್ಷಕ್ಕೆ ತನ್ನ ವರಮಾನದ ಮುನ್ನೋಟದಲ್ಲಿ ಭಾರಿ ಕಡಿತ ಮಾಡಿದೆ. ಇನ್ನೊಂದೆಡೆ ಎಚ್‌ಯುಎಲ್‌ನ ನಿವ್ವಳ ಲಾಭವು ಮಾರುಕಟ್ಟೆ ನಿರೀಕ್ಷೆಗಿಂತಲೂ ಕಡಿಮೆ ಆಗಿದೆ.

ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಜುಲೈ ತಿಂಗಳಿನಲ್ಲಿಯೂ ಭಾರತದ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸಿದ್ದಾರೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಜುಲೈ 21ರವರೆಗೆ ನಡೆದಿರುವ ವಹಿವಾಟಿನಲ್ಲಿ ವಿದೇಶಿ ಹೂಡಿಕೆದಾರರು ₹43,804 ಕೋಟಿ ಹೂಡಿಕೆ ಮಾಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಹಣಕಾಸು, ಆಟೊಮೊಬೈಲ್, ಬಂಡವಾಳ ಸರಕುಗಳು, ರಿಯಲ್ ಎಸ್ಟೇಟ್ ಮತ್ತು ಎಫ್‌ಎಂಸಿಜಿ ವಲಯಗಳಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸಿದ್ದಾರೆ. ಇದರಿಂದಾಗಿ ಈ ವಲಯದ ಷೇರುಗಳ ಮೌಲ್ಯದಲ್ಲಿ ಏರಿಕೆ ಕಾರಣವಾಗಿದ್ದು, ಆ ಮೂಲಕ ಸೆನ್ಸೆಕ್ಸ್, ನಿಫ್ಟಿಯು ದಾಖಲೆ ಮಟ್ಟದಲ್ಲಿ ವಹಿವಾಟು ನಡೆಸಲು ನೆರವಾಗಿದೆ ಎಂದು ವಿಜಯಕುಮಾರ್ ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆ (ಎಫ್‌ಐಐ) (ಕೋಟಿಗಳಲ್ಲಿ)



ಕೋಟಕ್ ಬ್ಯಾಂಕ್ ಲಾಭ ಶೇ 67ರಷ್ಟು ಏರಿಕೆ

ಮುಂಬೈ (ರಾಯಿಟರ್ಸ್/ಪಿಟಿಐ): ಕೋಟಕ್ ಮಹೀಂದ್ರ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 67ರಷ್ಟು ಹೆಚ್ಚಾಗಿದ್ದು ₹3,452 ಕೋಟಿಗೆ ತಲುಪಿದೆ.

ರಿಫಿನಿಟಿವ್ ಸಂಸ್ಥೆಯ ಮಾಹಿತಿಯ ಪ್ರಕಾರ, ಬ್ಯಾಂಕ್‌ನ ಲಾಭವು ₹3,240 ಕೋಟಿ ಆಗಲಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಂದಾಜು ಮಾಡಿದ್ದರು. ಅದನ್ನೂ ಮೀರಿ ಬ್ಯಾಂಕ್ ಲಾಭ ಗಳಿಸಿದೆ.

ನಿವ್ವ ಬಡ್ಡಿ ವರಮಾನ ಹೆಚ್ಚಾಗಿರುವುದು ಮತ್ತು ಸಾಲ ನೀಡಿಕೆಯಲ್ಲಿ ಉತ್ತಮ ಪ್ರಗತಿ ಕಂಡಿರುವುದೇ ಲಾಭದಲ್ಲಿ ಈ ಪ್ರಮಾಣದ ಏರಿಕೆಗೆ ಕಾರಣ ಎಂದು ಬ್ಯಾಂಕ್ ಹೇಳಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 2.24 ರಿಂದ ಶೇ 1.77ಕ್ಕೆ ಇಳಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 0.62 ರಿಂದ ಶೇ 0.40ಕ್ಕೆ ಇಳಿಕೆ ಆಗಿದೆ.

68 ಉದ್ಯಮಿಗಳಿಗೆ ‘ಶ್ರೇಷ್ಠ ರಫ್ತುದಾರ’ ಪ್ರಶಸ್ತಿ: ಮುಖ್ಯಮಂತ್ರಿ ಪ್ರದಾನ

‘ರಫ್ತು: ದೇಶದಲ್ಲೇ ಮೊದಲ ಸ್ಥಾನದ ಗುರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉದ್ಯಮಿಗಳ ಜೊತೆ ಚರ್ಚಿಸಿ, ರಫ್ತಿಗೆ ಉತ್ತೇಜನ ನೀಡುವಂಥ ಹೊಸ ಕೈಗಾರಿಕಾ ನೀತಿಯನ್ನು ತ್ವರಿತವಾಗಿ ಜಾರಿಗೆ ತರಲಾಗುವುದು. ರಫ್ತಿನಲ್ಲಿ ದೇಶದಲ್ಲಿ ಮೂರನೇ ಸ್ಥಾನದಲ್ಲಿರುವ ಕರ್ನಾಟಕ ಮೊದಲ ಸ್ಥಾನಕ್ಕೆ ಏರಬೇಕೆಂಬುದು ನಮ್ಮ ಗುರಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ ಶನಿವಾರ ಏರ್ಪಡಿಸಿದ್ದ ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿಗಳ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

12 ವಿಭಾಗಗಳ ಅಡಿಯಲ್ಲಿ 2017-18, 2018-19 ಮತ್ತು 2019-20ನೇ ಸಾಲಿನ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಬಯೋಕಾನ್, ಟೊಯೊಟಾ ಕಿರ್ಲೋಸ್ಕರ್, ಎಚ್‌ಎಎಲ್, ಮೈಸೂರು ಪೇಂಟ್ಸ್ ಆ್ಯಂಡ್ ವಾರ್ನಿಶ್, ಜಿ.ಇ. ಇಂಡಿಯಾ ಪ್ರೈವೇಟ್ ಲಿಮಿಟೆಡ್, ಗೋಕುಲ್‌ದಾಸ್ ಎಕ್ಸ್‌ಪೋರ್ಟ್ಸ್ ಸೇರಿ ಒಟ್ಟು 68 ಉದ್ಯಮಿಗಳು ಪ್ರಶಸ್ತಿ ಸ್ವೀಕರಿಸಿದರು.

‘ರಾಜ್ಯದಲ್ಲಿ ಕೌಶಲಾಭಿವೃದ್ಧಿ ಇಲಾಖೆಗೆ ಬಲ ತುಂಬಲು ನಿರ್ಧರಿಸಲಾಗಿದೆ. ಇದರ ಮೂಲಕ ಯುವಜನರಿಗೆ ಸಮರ್ಪಕ ತರಬೇತಿ ನೀಡಿ, ಉದ್ಯಮಗಳಿಗೆ ಅಗತ್ಯವಾದ ಮಾನವ ಸಂಪನ್ಮೂಲ ಸಜ್ಜುಗೊಳಿಸಲಾಗುವುದು. ರಾಜ್ಯದಲ್ಲಿ ಉದ್ಯಮಗಳಿಗೆ ಉತ್ತೇಜನಕಾರಿ ವಾತಾವರಣವಿದ್ದು, ಅದಕ್ಕೆ ತಕ್ಕಂತೆ ಕಾನೂನು ಸುವ್ಯವಸ್ಥೆಯನ್ನೂ ನಿರ್ವಹಿಸಲಾಗುವುದು’ ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘2 ಮತ್ತು ಮೂರನೇ ಹಂತದ ನಗರಗಳತ್ತ ಉದ್ಯಮಿಗಳು ಗಮನ ಹರಿಸಬೇಕು. ಇಂಥವರಿಗೆ ಸರ್ಕಾರ ವಿಶೇಷ ಪ್ರೋತ್ಸಾಹ, ಸವಲತ್ತುಗಳನ್ನು ನೀಡಲಿದೆ. ಈ ಮೂಲಕ ಗ್ರಾಮೀಣ ಪ್ರದೇಶದ ಯುವಜನರ ಪ್ರತಿಭೆಗೂ ಮನ್ನಣೆ ನೀಡಬೇಕು’ ಎಂದು ಸಲಹೆ ನೀಡಿದರು.

‘ಮಧ್ಯಮ, ಸಣ್ಣ ಕೈಗಾರಿಕೆಗೆ ಬಲ’

‘ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಬಲ ತುಂಬಬೇಕಿದೆ. ಈ ನಿಟ್ಟಿನಲ್ಲಿ ‘ಕಾಮನ್ ಫೆಸಿಲಿಟೀಸ್ ಸೆಂಟರ್’ಗಳನ್ನು ಸ್ಥಾಪಿಸಿ, ಒದಗಿಸಲು ಈಗಾಗಲೇ ಟಾಟಾ ಕನ್ಸಲ್ಟೆನ್ಸಿ ಜತೆ ವಿಚಾರ ವಿನಿಮಯ ನಡೆಸಲಾಗಿದೆ. ಇದರಲ್ಲಿ ಸಂಸ್ಥೆ ಶೇ 70 ಮತ್ತು ಸರ್ಕಾರ ಶೇ 30 ಬಂಡವಾಳ ಹೂಡಲಿವೆ’ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

‘ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಕಾರ್ಯವಿಧಾನವನ್ನು ಪಾರದರ್ಶಕವನ್ನಾಗಿ ಮಾಡಿ, ಉದ್ಯಮಿಗಳು ಸುಗಮವಾಗಿ ಚಟುವಟಿಕೆ ನಡೆಸುವಂತೆ ಕ್ರಮ ಕೈಗೊಳ್ಳಲಾಗುವುದು. ಅದಕ್ಕೆ ಪೂರಕವಾಗಿ ಕೈಗಾರಿಕಾ ವಲಯದಲ್ಲಿ ಏಳು ಆದ್ಯತಾ ವಲಯಗಳನ್ನು ಗುರುತಿಸಿ, ವಿಷನ್ ಗ್ರೂಪ್ ರಚಿಸಲಾಗುವುದು’ ಎಂದೂ ಅವರು ತಿಳಿಸಿದರು.

ಪೇಟಿಎಂ ನಷ್ಟ ₹358 ಕೋಟಿಗೆ ಇಳಿಕೆ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ಸ್‌ನ ನಷ್ಟವು ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹358 ಕೋಟಿಗೆ ಇಳಿಕೆ ಕಂಡಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಷ್ಟದ ಮೊತ್ತ ₹645 ಕೋಟಿ ಇತ್ತು.

ಕಂಪನಿಯ ಕಾರ್ಯಾಚರಣಾ ವರಮಾನವು ಶೇ 39.4ರಷ್ಟು ಏರಿಕೆ ಕಂಡಿದ್ದು, ₹2,341 ಕೋಟಿಗೆ ತಲುಪಿದೆ. 2022-23ರ ಜೂನ್ ತ್ರೈಮಾಸಿಕದಲ್ಲಿ ₹1,679 ಕೋಟಿ ಇತ್ತು. ಸರಾಸರಿ ವಾಣಿಜ್ಯ ಮೌಲ್ಯವು (ಜಿಎಂವಿ) ಶೇ 37ರಷ್ಟು ಹೆಚ್ಚಾಗಿ ₹40.5 ಲಕ್ಷ ಕೋಟಿಗೆ ತಲುಪಿದೆ ಎಂದು ಕಂಪನಿಯು ತಿಳಿಸಿದೆ.

‘ಗೋ ಫಸ್ಟ್ ಖರೀದಿ ಆಸಕ್ತಿ: ಒಂದೂ ಅರ್ಜಿ ಸಲ್ಲಿಕೆ ಆಗಿಲ್ಲ’

ಮುಂಬೈ (ರಾಯಿಟರ್ಸ್): ಗೋ ಫಸ್ಟ್ ಕಂಪನಿಯನ್ನು ಖರೀದಿಸುವ ಸಂಬಂಧ ಅರ್ಹ 40 ಹೂಡಿಕೆದಾರರು ವಿವರಗಳನ್ನು ಪಡೆದುಕೊಂಡಿದ್ದಾರೆ. ಆದರೆ ಯಾವುದೇ ಅರ್ಜಿ ಸಲ್ಲಿಕೆ ಆಗಿಲ್ಲ ಎಂದು ಬ್ಯಾಂಕಿಂಗ್ ಮೂಲಗಳು ಹೇಳಿವೆ. ಅರ್ಜಿ ಸಲ್ಲಿಸಲು ಆಗಸ್ಟ್ 9 ಕೊನೆಯ ದಿನವಾಗಿದೆ.

ಕಂಪನಿಯಿಂದ ₹23,780 ಕೋಟಿ ಪಾವತಿ ಆಗಬೇಕಿದೆ ಎಂದು ಹಣಕಾಸು ಸಂಸ್ಥೆಗಳು ಗೋ ಫಸ್ಟ್‌ಗೆ ತಿಳಿಸಿವೆ ಎಂದು ಬ್ಯಾಂಕಿಂಗ್ ಮೂಲಗಳು ಹೇಳಿವೆ. ದಿವಾಳಿ ಪ್ರಕ್ರಿಯೆ ನಿರ್ವಹಿಸಲು ನೇಮಕ ಆಗಿರುವ ವೃತ್ತಿಪರ ಅಧಿಕಾರಿಯು ಅದನ್ನು ದೃಢೀಕರಿಸಬೇಕಿದೆ ಎಂದೂ ತಿಳಿಸಿವೆ.

ಯೆಸ್ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಯೆಸ್ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 343 ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಇದ್ದ ಲಾಭಕ್ಕೆ ಹೋಲಿಸಿದರೆ (₹311) ಶೇ 10ರಷ್ಟು ಏರಿಕೆ ಕಂಡುಬಂದಿದೆ.

ಸುಸ್ತಿ ಸಾಲದ ಪ್ರಮಾಣ ಇಳಿಕೆ ಆಗಿರುವುದರಿಂದ ಲಾಭ ಗಳಿಕೆ ಸಾಧ್ಯವಾಗಿದೆ. ಒಟ್ಟು ವರಮಾನವು ₹ 5,876 ಕೋಟಿಯಿಂದ ₹7,584 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಬ್ಯಾಂಕ್ ಮಾಹಿತಿ ನೀಡಿದೆ.

ಮುಂಬೈ ಧಾರಣೆ

ಶೇಂಗಾ

22-7-2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	12100-12200
ದಪ್ಪ ಗುಜರಾತ್(ಹೊಸ)	12900-13000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850 (1850)
ಒಂದು ವಾರದ ಡೆಲಿವರಿ	1845 (1845)
ಸೋಯಾ ಕಚ್ಚಾ	920 (920)
ಪಾಮ್ ವಾರದ ಡೆಲಿವರಿ	878 (878)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,150 (59,100)
ಬೆಳ್ಳಿ ಕೆ.ಜಿ 74,150 (74,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೊಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1300-1400
ಹಸಿರು ಸಾಧಾರಣ	1000-1100
ಹಸಿರು ಉತ್ತಮ	1250-1350
ಹಸಿರು ಅತಿ ಉತ್ತಮ	1600-1800

ಕಾಳುಮೆಣಸು - 570

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13900	14100	14000	161.85ಸೆಂಟ್ಸ್
ಎಸಿ	7140	7100	7000	
ಆರ್‌ಪಿ	10100	10200	10200	ಲಂಡನ್
ಆರ್‌ಸಿ	6090	238	5900	2602 ಡಾಲರ್ಸ್

ಢಾಕಾದಲ್ಲಿ ರಸ್ತೆ ಅಪಘಾತ: 17 ಜನರ ಸಾವು

ಢಾಕಾ (ಪಿಟಿಐ): ನೈರುತ್ಯ ಬಾಂಗ್ಲಾದೇಶದ ಝಳಕತಿ ಜಿಲ್ಲೆಯಲ್ಲಿ ಶನಿವಾರ ಬಸ್ಸೊಂದು ರಸ್ತೆ ಬದಿಯ ದೊಡ್ಡ ಹೊಂಡಕ್ಕೆ ಉರುಳಿದ್ದರಿಂದ ಕನಿಷ್ಠ 17 ಜನರು ಮೃತಪಟ್ಟಿದ್ದು, 20ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಬಸ್‌ನಲ್ಲಿ 60ಕ್ಕೂ ಹೆಚ್ಚು ಜನರು ಪ್ರಯಾಣಿಸುತ್ತಿದ್ದರು. ಭಂಡಾರಿಯಾ ಪ್ರದೇಶದಿಂದ ಬಾರಿಶಾಲ್ ಕಡೆಗೆ ಬಸ್ ತೆರಳುತ್ತಿದ್ದಾಗ ಈ ದುರಂತ ಸಂಭವಿಸಿದೆ ಎಂದು ಪೊಲೀಸರು ಹೇಳಿದ್ದಾರೆ. ಚಾಲಕನ ನಿಯಂತ್ರಣ ತಪ್ಪಿದ ಬಸ್ ರಸ್ತೆ ಪಕ್ಕದ ಹೊಂಡಕ್ಕೆ ಬಿದ್ದಿದೆ ಎಂದು ಅವರು ತಿಳಿಸಿದ್ದಾರೆ.

ಮೃತರಲ್ಲಿ 8 ಮಹಿಳೆಯರು ಮತ್ತು 3 ಮಕ್ಕಳೂ ಸೇರಿದ್ದಾರೆ ಎಂದು ಪಿಎಸ್‌ಐ ಗೌತಮ್ ಕುಮಾರ್ ಘೋಷ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಉಕ್ರೇನ್‌ನ 11 ಸ್ಥಳಗಳ ಮೇಲೆ ರಷ್ಯಾ ದಾಳಿ: 8 ಮಂದಿ ಸಾವು

ಕೀವ್ (ಎಪಿ): ಉಕ್ರೇನ್‌ನ 11 ಪ್ರದೇಶಗಳ ಮೇಲೆ ರಷ್ಯಾ ಪಡೆಗಳು ಶುಕ್ರವಾರ ರಾತ್ರಿಯಿಡೀ ನಡೆಸಿದ ಕ್ರೂಸ್ ಕ್ಷಿಪಣಿ, ಡ್ರೋನ್ ದಾಳಿಯಲ್ಲಿ ಎಂಟು ನಾಗರಿಕರು ಹತರಾಗಿದ್ದು, ಹಲವು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಆಕ್ರಮಿತ ಪ್ರದೇಶದಿಂದ ರಷ್ಯಾ ಪಡೆಗಳನ್ನು ಹೊರದಬ್ಬಲು ಉಕ್ರೇನ್ ಸೇನೆ ತೀವ್ರ ಪ್ರಯತ್ನ ಮುಂದುವರಿದೆ.

ಬಾಖ್ಮುಟ್ ನಗರದ ನ್ಯೂ-ಯಾರ್ಕ್ ಜನವಸತಿ ಪ್ರದೇಶದಲ್ಲಿ ನಾಲ್ವರು, ಡೊನೆಟ್‌ಸ್ಕ್ ಪ್ರದೇಶದ ಕೊಸ್ತಿಯಾಂಟಿನಿವ್ಕಾ ನಗರದಲ್ಲಿ ಇಬ್ಬರು ಹಾಗೂ ಚೆರ್ನಿವ್ ನಗರದಲ್ಲಿ ಇಬ್ಬರು ನಾಗರಿಕರು ಹತರಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕದನ ತೀವ್ರಗೊಂಡಿರುವ ಆಗ್ನೇಯ ಭಾಗದಲ್ಲಿ 5 ಇರಾನಿ ಡ್ರೋನ್ ಸೇರಿ 14 ರಷ್ಯಾ ಡ್ರೋನ್‌ಗಳನ್ನು ರಾತ್ರಿ ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ವಾಯುಪಡೆ ಶನಿವಾರ ಹೇಳಿದೆ.

ಝಪೊರಿಝಿಯಾ ಅಣು ವಿದ್ಯುತ್ ಸ್ಥಾವರದ ನೆರೆಹೊರೆಯ ಪಟ್ಟಣಗಳ ಮೇಲೆ ರಷ್ಯಾ ಪಡೆಗಳು ಶುಕ್ರವಾರ ರಾತ್ರಿಯಿಡೀ ಶೆಲ್ ದಾಳಿ ನಡೆಸಿವೆ. ಇದರಲ್ಲಿ ಮೂವರು ನಾಗರಿಕರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಗವರ್ನರ್ ಸೆರ್ಹಿ ಲೈಸಾಕ್ ಹೇಳಿದ್ದಾರೆ.

ಯುದ್ಧದ ಆರಂಭದಲ್ಲಿ ವಶಪಡಿಸಿಕೊಂಡ ಝಪೊರಿಝಿಯಾ ಸ್ಥಾವರವನ್ನು ರಷ್ಯಾ ಪಡೆಗಳು, ಉಕ್ರೇನ್ ಹಿಡಿತದ ಪ್ರದೇಶದ ಮೇಲೆ ಗುಂಡಿನ ದಾಳಿ ನಡೆಸಲು ರಕ್ಷಾ ಕವಚದಂತೆ ಬಳಸುತ್ತಿದೆ ಎಂದು ಉಕ್ರೇನ್ ಅಧಿಕಾರಿಗಳು ಮತ್ತೊಮ್ಮೆ ಆರೋಪಿಸಿದ್ದಾರೆ.

ಧಾನ್ಯ ಗೋದಾಮುಗಳ ಮೇಲೂ ದಾಳಿ: ಯುದ್ಧಕಾಲದ ಧಾನ್ಯ ರಫ್ತು ಒಪ್ಪಂದದಿಂದ ಹಿಂದೆ ಸರಿದ ರಷ್ಯಾ, ಉಕ್ರೇನ್‌ನ ಒಡೆಸಾ ಬಂದರಿನ ಮೂಲಸೌಕರ್ಯ ಗುರಿಯಾಗಿಸಿಕೊಂಡು ಶುಕ್ರವಾರ ದಾಳಿ ನಡೆಸಿತ್ತು. ಈಗ ಕೃಷಿ ಉತ್ಪನ್ನಗಳ ಗೋದಾಮುಗಳಿಗೂ ಕ್ಷಿಪಣಿ ದಾಳಿ ವಿಸ್ತರಿಸುವ ಮೂಲಕ ಕಪ್ಪು ಸಮುದ್ರದಲ್ಲಿ ಉಕ್ರೇನ್ ದಿಗ್ಬಂಧಿಸಲು ಆರಂಭಿಸಿದೆ ಎಂದು ಅಧಿಕಾರಿಗಳು ಶನಿವಾರ ಆರೋಪಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಎಐ ಗತಿ: ಸಮಾನ ಮನಸ್ಕ ದೇಶಗಳು ಒಟ್ಟಾಗಬೇಕು’

ವಾಷಿಂಗ್ಟನ್ (ಪಿಟಿಐ): ಕೃತಕ ಬುದ್ಧಿಮತ್ತೆಯ (ಎಐ) ಗತಿ ನಿರ್ಧರಿಸುವ ನಿಟ್ಟಿನಲ್ಲಿ ಭಾರತವೂ ಸೇರಿ ಎಲ್ಲಾ ಸಮಾನ ಮನಸ್ಕ ರಾಷ್ಟ್ರಗಳು ಮತ್ತು ಅಮೆರಿಕ ಒಟ್ಟಾಗಿ ಕೆಲಸ ಮಾಡಬೇಕು ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ವೈಜ್ಞಾನಿಕ ಸಲಹೆಗಾರ್ತಿ ಆರತಿ ಪ್ರಭಾಕರ್ ಅವರು ಶುಕ್ರವಾರ ಹೇಳಿದ್ದಾರೆ.

ಎಐ ತಂತ್ರಜ್ಞಾನ ದುರ್ಬಳಕೆ ಆಗುವುದಿಲ್ಲ ಮತ್ತು ಸಾರ್ವಜನಿಕ ಹಿತಕ್ಕಾಗಿ ಮಾತ್ರ ಬಳಕೆಯಾಗುತ್ತದೆ ಎಂದು ಖಾತ್ರಿಪಡಿಸುವುದಾಗಿ ಎಐ ತಂತ್ರಜ್ಞಾನ ಸೇವೆ ಒದಗಿಸುವ ಪ್ರಮುಖ ಸಂಸ್ಥೆಗಳು ಅಮೆರಿಕ ಆಡಳಿತಕ್ಕೆ ಒಪ್ಪಿಗೆ ನೀಡಿದ ಬೆನ್ನಲ್ಲೇ ಅವರು ಹೀಗೆ ಹೇಳಿದ್ದಾರೆ.

‘ಸುರಕ್ಷತೆ, ಭದ್ರತೆ ಮತ್ತು ವಿಶ್ವಾಸಾರ್ಹತೆ ಕುರಿತು ಬದ್ಧತೆ ಹೊಂದಿರುವುದಾಗಿ ಸಂಸ್ಥೆಗಳು ಅಮೆರಿಕ ಆಡಳಿತಕ್ಕೆ ತಿಳಿಸಿವೆ. ಈಗಿರುವ ಕಾನೂನಿನಡಿಯೇ ಎಐ ಸುರಕ್ಷತೆ ಕುರಿತು ಕ್ರಮ ಕೈಗೊಳ್ಳಲು ಚಿಂತನೆ ನಡೆಸಲಾಗಿದೆ. ‘ಎಐ’ನಿಂದ ಎದುರಾಗಬಹುದಾದ ಅಪಾಯಗಳನ್ನು ತಡೆಯುವ ದಿಸೆಯಲ್ಲಿ ಕಾರ್ಯಕಾರಿ ಆದೇಶಗಳನ್ನೂ ಹೊರಡಿಸಲು ಬೈಡನ್ ಅವರು ಚಿಂತನೆ ನಡೆಸಿದ್ದಾರೆ’ ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಆರತಿ ಹೇಳಿದ್ದಾರೆ.

ಹಲವು ಕ್ರೂಸ್ ಕ್ಷಿಪಣಿ ಹಾರಿಸಿದ ಉತ್ತರ ಕೊರಿಯಾ

ಸೋಲ್ (ಎಪಿ): ಉತ್ತರ ಕೊರಿಯಾ ಹಲವು ಕ್ರೂಸ್ ಕ್ಷಿಪಣಿಗಳನ್ನು ಶನಿವಾರ ತನ್ನ ಪಶ್ಚಿಮ ಸಮುದ್ರದ ಕಡೆಗೆ ಉಡಾಯಿಸಿದೆ ಎಂದು ದಕ್ಷಿಣ ಕೊರಿಯಾ ಹೇಳಿದೆ.

ದಕ್ಷಿಣ ಕೊರಿಯಾದ ಸಮುದ್ರದಲ್ಲಿ ಅಮೆರಿಕದ ಜಲಾಂತರ್ಗಾಮಿ ನೌಕೆ ಯುಎಸ್‌ಎಸ್ ಕೆಂಟುಕಿ ಲಂಗರು ಹಾಕಿರುವುದನ್ನು ವಿರೋಧಿಸಿ, ಈ ವಾರದಲ್ಲಿ ಎರಡನೇ ಬಾರಿಗೆ ಈ ರೀತಿ ಕ್ರೂಸ್ ಕ್ಷಿಪಣಿಗಳನ್ನು ಉತ್ತರ ಕೊರಿಯಾ ಉಡಾಯಿಸಿದೆ. ‘ಬೆಳಗಿನ ಜಾವ 4 ಗಂಟೆ ಸುಮಾರಿಗೆ ಕ್ಷಿಪಣಿಗಳನ್ನು ಉಡಾಯಿಸಿರುವುದು ಪತ್ತೆಯಾಗಿದೆ. ಆದರೆ, ಎಷ್ಟು ಕ್ಷಿಪಣಿಗಳನ್ನು ಹಾರಿಸಲಾಯಿತು, ಅವು ಎಷ್ಟು ದೂರ ಹಾರಿವೆ ಎಂಬುದು ತಕ್ಷಣಕ್ಕೆ ವರದಿಯಾಗಿಲ್ಲ’ ಎಂದು ದಕ್ಷಿಣ ಕೊರಿಯಾ ಸೇನೆಯ ಜಂಟಿ ಮುಖ್ಯಸ್ಥರು ಹೇಳಿದ್ದಾರೆ.

ಬಾಗ್ದಾದ್: ಭದ್ರತಾ ವಲಯ ಪ್ರವೇಶಿಸಲು ಯತ್ನಿಸಿದ ಪ್ರತಿಭಟನಕಾರರು

ಬಾಗ್ದಾದ್ (ಎಪಿ): ಕೋಪನ್‌ಹೇಗನ್‌ನಲ್ಲಿರುವ ಇರಾಕ್ ರಾಯಭಾರ ಕಚೇರಿ ಮುಂದೆ ಕುರಾನ್ ಗ್ರಂಥ ಮತ್ತು ಇರಾಕ್‌ನ ರಾಷ್ಟ್ರಧ್ವಜವನ್ನು ಸುಟ್ಟುಹಾಕಿದ ಬೆನ್ನಲ್ಲೇ, ಬಾಗ್ದಾದ್‌ನಲ್ಲಿರುವ ಭಾರಿ ಭದ್ರತಾ ವಲಯಕ್ಕೆ ಶನಿವಾರ ನೂರಾರು ಪ್ರತಿಭಟನಕಾರರು ಮುತ್ತಿಗೆ ಹಾಕಲು ಯತ್ನಿಸಿದ ಪ್ರತಿಭಟನಕಾರರನ್ನು ಭದ್ರತಾ ಪಡೆಗಳು ತಡೆದಿವೆ. ಈ ವಲಯದಲ್ಲಿ ರಾಯಭಾರ ಕಚೇರಿಗಳು ಮತ್ತು ಇರಾಕ್ ಸರ್ಕಾರದ ಕಚೇರಿಗಳಿವೆ.

ಇರಾಕ್ ಮೂಲದ ಕ್ರಿಶ್ಚಿಯನ್ ಸಲ್ವಾನ್ ಮೊಮಿಕ ಎಂಬಾತ ಸ್ವೀಡನ್‌ನ ಸ್ಟಾಕ್‌ಹೋಂನಲ್ಲಿರುವ ಇರಾಕ್ ರಾಯಭಾರ ಕಚೇರಿ ಎದುರು ಕುರಾನ್ ಗ್ರಂಥಕ್ಕೆ ಬೆಂಕಿ ಹಚ್ಚಿ ಪ್ರತಿಭಟನೆ ನಡೆಸಿದ್ದ. ವಿಷಯ ತಿಳಿದ ಇರಾನ್, ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳು ಶುಕ್ರವಾರ ಪ್ರತಿಭಟನೆ ನಡೆಸಿದ್ದವು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

WANTED ENGINEERING TRAINEES ELECTRIC VEHICLES TRAINING & PLACEMENTS
HASWINI ELECTRIC VEHICLES
BATTERY CAR & SCOOTERS CAN RUN 500+km-ONE CHARGE
STARTUP COMPANY MANUFACTURING, ASSEMBLING REPAIRING, SERVICING & SALES
NEXT BATCH STARTS FROM AUGUST
HULIMAVU-BENGULUR-76 CALL: 8790471108

Wanted

ಆಸ್ಪತ್ರೆ, ಕ್ಲಿನಿಕ್, ಔಷಧಿ ಅಂಗಡಿಗಳಿಗೆ ಔಷಧಿಯನ್ನು ಸರಬರಾಜು ಮಾಡಲು 18 - 23 ವರ್ಷದ (SSLC/PUC) ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಕಡ್ಡಾಯ. ವಾಟ್ಸಪ್: 9345768606

Marketing & Sales

ಮಹಿಳೆಯರಿಗೆ ರೇಷ್ಮೆ ಸೀರೆಗಳು, ಬನಾರಸ್ ಸೀರೆಗಳು ಕಾಟನ್ ಸೀರೆಗಳು ಎಲ್ಲಾ ತರಹದ ಸೀರೆಗಳು, ಚೂಡಿದಾರಗಳು ಕಂತಿನ ಮೇಲೆ ಮಾರಾಟ ಮಾಡಲು ಮಹಿಳೆಯರಿಗೆ ಸಿಗುತ್ತದೆ: 8892501007/ 9606701007

Cook

ಪಾರ್ಟ್ ಟೈಮ್ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ (ದಕ್ಷಿಣ ಭಾರತೀಯ ಸಸ್ಯಾಹಾರಿ, ಮಾಂಸಹಾರಿ) ಕನಕಪುರ ರಸ್ತೆ, ಬೆಂಗಳೂರು. ಸಂಪರ್ಕಿಸಿ: 9880839279.

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Book Your Classifieds Ads
Online Log in to dhclassifieds.com
Contact : 9845114560 : 9731810277
9901641752 : 9886213331
080 - 45557163 / 164

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

General

FOR RENT Mulki Karnad industrial area 1 acre land , Premium RCC built up Contact for Godown/ warehouse/ Factory 8779224183

House

Sadashiva Nagar

PROPERTY SALE. 2 'Hari Krupa' 3rd Cross Lower Palace Orchards. 1550 Sq ft. 9591932764

Sites

Mysore

PERIYAPATNA KHB (RAJAPURA) 2 Sites for Sale 30X40 North & 30X50 East Facing. Kumar 9945112279

ಭವಿಷ್ಯ

Astrology

100% ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ ಹೋದವರಿಗೆ ಕಲ್ಕತ್ತಾ ಕೊಳ್ಳೇಗಾಲದ ಪೂಜೆಯಿಂದ, ಗಂಡಹೆಂಡತಿ ಸಮಸ್ಯೆಗಳಿಗೆ 3ಗಂಟೆಗಳಲ್ಲಿ ಶೀಘ್ರ ಪರಿಹಾರ. 9448687421

ಪ್ರವಾಸ

Travel

20.09.2023 12 ದಿನಗಳು ಚಾರ್ ಧಾಮ್. 05.12.2023 9 ದಿನಗಳು ಕಾಶಿ,ಅಯೋಧ್ಯಾ, ಗಯಾ,ಕೋಲ್ಕತಾ ಪುರಿಜಗನ್ನಾಥ್ ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಬೆಂಗಳೂರು. 9448294477

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

★1.9.2023 13/8ದಿನಗಳು★ ದೆಹಲಿ, ಆಗ್ರಾ,ಕಾಶಿ,ಗಯಾ, ಹರಿದ್ವಾರ ಪ್ರವಾಸ. 21.09.2023 16ದಿನಗಳು ಕಾಶಿ,ನೇಪಾಳ ಮುಕ್ತಿನಾಥ ಪ್ರವಾಸ. ಆರ್.ಗಾಂಧಿ ಟೂರ್ಸ್. 9902433500/ 9945445809

ಶ್ರಾವಣಮಾಸಕ್ಕೆ 29-7-2023, 3 ಆಂಜನೇಯಸ್ವಾಮಿ ಪ್ರವಾಸ. 21-8-2023,ವಿಮಾನದಲ್ಲಿ 3 ಜ್ಯೋತಿರ್ಲಿಂಗ ದರ್ಶನದೊಂದಿಗೆ ಶಿರಡಿ,ಎಲ್ಲೋರ 12,800/-. ಅನುಗ್ರಹಯಾತ್ರ. 9880079351

20.09.2023 ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್ ಬದರಿನಾಥ್,ಹರಿದ್ವಾರ್ 22.11.2023 ವಿಜಯವಾಡ ಭದ್ರಾಚಲಂ,ವಾಸವಿಪೆನುಗೊಂಡ ಕಲ್ಕತ್ತ,ಗಂಗಾಸಾಗರ್ ಪೂರಿಜಗನ್ನಾಥ್ ಕೋನಾರ್ಕ್,ಭುವನೇಶ್ವರ್ ಸಂಪರ್ಕಿಸಿ: ವಿಷ್ಣನ್ ಟೂರ್ಸ್ ಅಂಡ್ ಟ್ರಾವಲ್ಸ್ 9342287551 8050629305

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೆಸ್ಟ್ ಇಂಡೀಸ್‌ಗೆ ಬ್ರಾತ್‌ವೇಟ್ ಆಸರೆ

ಟೆಸ್ಟ್: ಅರ್ಧಶತಕ ಗಳಿಸಿದ ಆರಂಭಿಕ ಬ್ಯಾಟರ್; ಚೊಚ್ಚಲ ವಿಕೆಟ್ ಪಡೆದ ಮುಕೇಶ್ ಕುಮಾರ್

ಕ್ರೇಗ್ ಬ್ರಾತ್‌ವೇಟ್ ಮತ್ತು ತೇಜನಾರಾಯಣ ಚಂದ್ರಪಾಲ್ –ಎಎಫ್‌ಪಿ ಚಿತ್ರ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ನಾಯಕ ಕ್ರೇಗ್ ಬ್ರಾತ್‌ವೇಟ್ (75) ಅವರ ಅರ್ಧಶತಕದ ನೆರವಿನಿಂದ ವೆಸ್ಟ್ ಇಂಡೀಸ್ ತಂಡ, ಭಾರತದ ಎದುರು ನಡೆಯುತ್ತಿರುವ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಮರುಹೋರಾಟ ನಡೆಸಿದೆ.

ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿರುವ 438 ರನ್‌ಗಳಿಗೆ ಉತ್ತರವಾಗಿ ಆಡುತ್ತಿರುವ ಆತಿಥೇಯ ತಂಡವು ಮೂರನೇ ದಿನವಾದ ಶನಿವಾರ ಚಹಾ ವಿರಾಮದ ವೇಳೆಗೆ 86 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 174 ರನ್ ಗಳಿಸಿದೆ. ಆತಿಥೇಯ ತಂಡ ಇನ್ನೂ 264 ರನ್‌ಗಳ ಹಿನ್ನಡೆಯಲ್ಲಿದೆ.

ಪದಾರ್ಪಣೆ ಪಂದ್ಯ ಆಡುತ್ತಿರುವ ಮುಕೇಶ್ ಕುಮಾರ್ ಮತ್ತು ಸ್ಪಿನ್ನರ್‌ಗಳಾದ ಆರ್.ಅಶ್ವಿನ್ ಹಾಗೂ ಸ್ಪಿನ್ನರ್ ರವೀಂದ್ರ ಜಡೇಜ ತಲಾ ಒಂದು ವಿಕೆಟ್ ಗಳಿಸಿದರು.

ಆರಂಭಿಕ ಜೋಡಿ ಬ್ರಾತ್‌ವೇಟ್ ಮತ್ತು ತೇಜನಾರಾಯಣ ಚಂದ್ರಪಾಲ್ (33 ರನ್; 95ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿದರು. ಬೃಹತ್ ಮೊತ್ತವನ್ನು ಚುಕ್ತಾ ಮಾಡುವ ನಿಟ್ಟಿನಲ್ಲಿ ಉತ್ತಮ ಆರಂಭ ನೀಡಿ ಭರವಸೆ ಮೂಡಿಸಿದರು.

ಆದರೆ, ರವೀಂದ್ರ ಜಡೇಜ 35ನೇ ಓವರ್‌ನಲ್ಲಿ ಹಾಕಿದ ಎಸೆತದ ಗತಿಯನ್ನು ಗುರುತಿಸುವಲ್ಲಿ ಚಂದ್ರಪಾಲ್ ಲೋಪವೆಸಗಿದರು. ಫೀಲ್ಡರ್ ಅಶ್ವಿನ್ ಅಮೋಘ ಕ್ಯಾಚ್ ಪಡೆದು ಸಂಭ್ರಮಿಸಿದರು. ಜೊತೆಯಾಟ ಮುರಿಯಿತು.

ಈ ಹಂತದಲ್ಲಿ ಕ್ರೇಗ್ ಜೊತೆಗೂಡಿದ ಯುವ ಆಟಗಾರ ಕಿರ್ಕ್ ಮೆಕೆಂಜಿ ಎರಡನೇ ವಿಕೆಟ್ ಪಾಲುದಾರಿಕೆಯಲ್ಲಿ 46 ರನ್ ಸೇರಿಸಿದರು. ಇದರಿಂದಾಗಿ ತಂಡವು ನೂರರ ಗಡಿ ದಾಟಿತು.

ಟೆಸ್ಟ್ ಕ್ರಿಕೆಟ್‌ಗೆ ಈ ಪಂದ್ಯದ ಮೂಲಕ ಪದಾರ್ಪಣೆ ಮಾಡಿರುವ ಮಧ್ಯಮವೇಗಿ ಮುಕೇಶ್ ಕುಮಾರ್ ಈ ಜೊತೆಯಟ ಮುರಿದರು. ಅವರ ಎಸೆತ ಕಟ್ ಮಾಡಲು ಪ್ರಯತ್ನಿಸಿದ ಮೆಕೆಂಜಿ (32; 57ಎ, 4X4, 6X1) ವಿಕೆಟ್‌ಕೀಪರ್ ಇಶಾನ್ ಕಿಶನ್‌ಗೆ ಕ್ಯಾಚ್ ಆದರು.

ಬ್ರಾತ್‌ವೇಟ್ ಅವರು ತಾಳ್ಮೆಯ ಆಟವಾಡಿ ಭಾರತದ ಬೌಲರ್‌ಗಳನ್ನು ಕಾಡಿದರು. 235 ಎಸೆತಗಳನ್ನು ಎದುರಿಸಿದ ಅವರು ಐದು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಅಶ್ವಿನ್ ಎಸೆತದಲ್ಲಿ ಅವರು ಬೌಲ್ಡ್ ಆದರು.

ಆ ಬಳಿಕ ಜರ್ಮೈನ್ ಬ್ಲಾಕ್‌ವುಡ್ ಮತ್ತು ಅಲಿಕ್ ಅಥನೇಜ್ ಅವರು ಹೆಚ್ಚಿನ ವಿಕೆಟ್ ಬೀಳದಂತೆ ನೋಡಿಕೊಂಡರು.

ಅಶ್ವಿನ್ ಎಸೆತಗಳನ್ನು ವಿಂಡೀಸ್ ಬ್ಯಾಟರ್‌ಗಳು ಎಚ್ಚರಿಕೆಯಿಂದ ಎದುರಿಸಿರು. 30 ಓವರ್‌ಗಳನ್ನು ಬೌಲ್ ಮಾಡಿದ ಅವರು 57 ರನ್‌ಗಳನ್ನು ಬಿಟ್ಟುಕೊಟ್ಟರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 128 ಓವರ್‌ಗಳಲ್ಲಿ 438. ವೆಸ್ಟ್ ಇಂಡೀಸ್: 86 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 174 (ಕ್ರೇಗ್ ಬ್ರಾತ್‌ವೇಟ್ 75, ತೇಜನಾರಾಯಣ ಚಂದ್ರಪಾಲ್ 33, ಕಿರ್ಕ್ ಮೆಕೆಂಜಿ 32, ಜರ್ಮೈನ್ ಬ್ಲಾಕ್‌ವುಡ್ ಬ್ಯಾಟಿಂಗ್ 16, ಅಲಿಕ್ ಅಥನೇಜ್ ಬ್ಯಾಟಿಂಗ್ 13, ಮುಕೇಶ್ ಕುಮಾರ್ 29ಕ್ಕೆ1, ರವೀಂದ್ರ ಜಡೇಜ 15ಕ್ಕೆ1, ಆರ್.ಅಶ್ವಿನ್ 57ಕ್ಕೆ 1)

ಕೊಹ್ಲಿ ಭೇಟಿಯಾಗಿ ಭಾವುಕರಾದ ವಿಂಡೀಸ್ ಆಟಗಾರನ ಅಮ್ಮ

ಪೋರ್ಟ್ ಆಫ್ ಸ್ಪೇನ್: ವೆಸ್ಟ್‌ಇಂಡೀಸ್ ತಂಡದ ವಿಕೆಟ್‌ಕೀಪರ್ ಜೋಶುವಾ ಡ ಸಿಲ್ವಾ ಅವರ ಅಮ್ಮ, ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅವರ ಬಲುದೊಡ್ಡ ಅಭಿಮಾನಿ. ಪೋರ್ಟ್ ಆಫ್ ಸ್ಪೇನ್‌ನಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದ ಎರಡನೇ ದಿನದಾಟವು ಇವರಿಬ್ಬರ ಭೇಟಿಯ ಭಾವುಕ ಕ್ಷಣಕ್ಕೆ ಸಾಕ್ಷಿಯಾಯಿತು.

ಜೋಶುವಾ ಅವರ ಅಮ್ಮ, ಕೊಹ್ಲಿ ಬ್ಯಾಟಿಂಗ್‌ಅನ್ನು ನೋಡಲು ಶುಕ್ರವಾರ ಕ್ರೀಡಾಂಗಣಕ್ಕೆ ಬಂದಿದ್ದರಲ್ಲದೆ, ಅವರ ಶತಕದಾಟವನ್ನು ಕಣ್ತುಂಬಿಕೊಂಡರು. ದಿನದಾಟದ ಬಳಿಕ ಕೊಹ್ಲಿ ಅವರನ್ನು ಭೇಟಿಯಾಗಿ, ಅಪ್ಪಿಕೊಂಡು ಭಾವುಕರಾದರು. ಅವರಿಬ್ಬರ ಭೇಟಿಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಕೊಹ್ಲಿ, ಶ್ರೇಷ್ಠ ಬ್ಯಾಟರ್‌ಗಳಲ್ಲಿ ಒಬ್ಬರು. ಹಾಗಾಗಿ ಅವರನ್ನು ಭೇಟಿಯಾದೆ. ನನ್ನ ಮಗನೂ ಅವರಂತೆಯೇ ಅದೇ ಕ್ಷೇತ್ರದಲ್ಲಿರುವುದು ನನ್ನ ಪಾಲಿಗೆ ಗೌರರವೇ ಸರಿ' ಎಂದಿದ್ದಾರೆ.

ಕೊಹ್ಲಿಯ ಆಟ ನೋಡಲು ತಮ್ಮ ತಾಯಿ ಕ್ರೀಡಾಂಗಣಕ್ಕೆ ಬರುವ ವಿಷಯವನ್ನು ಜೋಶುವಾ, ಮೊದಲ ದಿನದಾಟದ ವೇಳೆಯೇ ಬಹಿರಂಗಪಡಿಸಿದ್ದರು. 'ಅಮ್ಮ ಬೆಳಿಗ್ಗೆ ಕರೆ ಮಾಡಿದ್ದರು. ಕೊಹ್ಲಿಯನ್ನು ನೋಡಲು ಬರುತ್ತಿದ್ದೇನೆ ಎಂದು ಹೇಳಿದ್ದಾರೆ. ಅದನ್ನು ನನಗೆ ನಂಬಲು ಆಗಲಿಲ್ಲ' ಎಂದು ಜೋಶುವಾ ಅವರು ಹೇಳಿರುವುದು ಸ್ಟಂಪ್‌ಮೈಕ್‌ನಲ್ಲಿ ರೆಕಾರ್ಡ್ ಆಗಿದೆ.

ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ

ಜಪಾನ್ ತಂಡಕ್ಕೆ ಸುಲಭ ಗೆಲುವು

ಗೋಲು ಗಳಿಸಿದ ಸಂಭ್ರಮದಲ್ಲಿ ಜಪಾನ್ ತಂಡದ ಹಿನಾಟಾ ಮಿಯಾರ್‌ಝಾವಾ –ಎಎಫ್‌ಪಿ ಚಿತ್ರ

ಹ್ಯಾಮಿಲ್ಟನ್, (ನ್ಯೂಜಿಲೆಂಡ್), (ಎಪಿ): ಹಿನಾಟಾ ಮಿಯಾರ್‌ಝಾವಾ ಗಳಿಸಿದ ಅವಳಿ ಗೋಲುಗಳ ನೆರವಿನಿಂದ ಜಪಾನ್ ವನಿತೆಯರು ಶನಿವಾರ ನಡೆದ ವಿಶ್ವಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಜಾಂಬಿಯಾ ತಂಡದ ಮೇಲೆ 5–0 ಗೋಲುಗಳ ಸುಲಭ ಗೆಲುವು ಪಡೆದರು. ಇದು ಎರಡೂ ತಂಡಗಳಿಗೆ ಮೊದಲ ಪಂದ್ಯವಾಗಿತ್ತು.

'ಸಿ' ಗುಂಪಿನ ಈ ಪಂದ್ಯದಲ್ಲಿ ಹಿನಾಟಾ ಅವರ ಎರಡು ಗೋಲುಗಳ ಜೊತೆ ತನಾಕಾ (55ನೇ ನಿಮಿಷ), ಜುನ್ ಎಂಡೊ (71ನೇ ನಿಮಿಷ) ಮತ್ತು ರಿಕೊ ಯುಕಿ (ಇಂಜುರಿ ಅವಧಿ) ಜಪಾನ್ ಪರ ಗೋಲು ಗಳಿಸಿದರು.

ಮಹಿಳಾ ವಿಶ್ವಕಪ್‌ನಲ್ಲಿ ಮೊದಲ ಬಾರಿ ಆಡುತ್ತಿರುವ 'ಕಾಪರ್ ಕ್ವೀನ್ಸ್' (ಜಾಂಬಿಯಾ) ತಂಡದ ಸ್ಟಾರ್ ಆಟಗಾರ್ತಿ ಬಾರ್ಬರಾ ಬಂದಾ ಅವರು ಬಹುತೇಕ ಏಕಾಂಗಿಯಾದರು. ಜಪಾನ್‌ನ ಮೂವರು ಆಟಗಾರ್ತಿಯರು ಅವರಿಗೆ 'ಸರ್ಪಗಾವಲು' ಹಾಕಿದ್ದರಿಂದ ಗೋಲಿನತ್ತ ಮುನ್ನುಗ್ಗಲು ಸ್ವಾತಂತ್ರ್ಯ ಸಿಗಲಿಲ್ಲ.

ಅಮೆರಿಕ ಶುಭಾರಂಭ (ಆಕ್ಲೆಂಡ್): ಸತತ ಮೂರನೇ ಬಾರಿ ಚಾಂಪಿಯನ್ ಆಗುವ ಯತ್ನದಲ್ಲಿರುವ ಅಮೆರಿಕ ತಂಡ, ಮಹಿಳಾ ವಿಶ್ವಕಪ್ 'ಇ' ಗುಂಪಿನ ಪಂದ್ಯದಲ್ಲಿ ಶನಿವಾರ 3–0 ಗೋಲುಗಳಿಂದ ವಿಯೆಟ್ನಾಂ ತಂಡದ ಮೇಲೆ ಜಯಗಳಿಸಿತು.

41,000 ಪ್ರೇಕ್ಷಕರೆದುರು ಈಡನ್ ಪಾರ್ಕ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಗಮನ ಸೆಳೆದಿದ್ದು ಅಮೆರಿಕದ ಸೋಫಿಯಾ ಸ್ಮಿತ್ ಅವರ ಸೊಗಸಾದ ಆಟ. ಎರಡು ಬಾರಿ ಗೋಲು ಗಳಿಸಿದ ಸೋಫಿಯಾ, ನಾಯಕಿ ಲಿಂಡ್ಸೆ ಹೊರನ್ ಅವರಿಗೆ ಗೋಲು ಗಳಿಸಲು ನೆರವಾದರು.

ಇಂಗ್ಲೆಂಡ್‌ಗೆ ಜಯ: ಯುರೋಪಿಯನ್ ಚಾಂಪಿಯನ್ ಇಂಗ್ಲೆಂಡ್ ತಂಡ ಗೆಲುವಿನೊಡನೆ ಅಭಿಯಾನ ಆರಂಭಿಸಿತು. 'ಡಿ' ಗುಂಪಿನ ಪಂದ್ಯದಲ್ಲಿ ಹೈಟಿ ಮೇಲೆ 1–0 ಗೋಲಿನ ಪ್ರಯಾಸದ ಜಯ ಪಡೆಯಿತು. ನಿರ್ಣಾಯಕ ಗೋಲನ್ನು ಪಂದ್ಯದ 29ನೇ ನಿಮಿಷ ಜಾರ್ಜಿಯಾ ಸ್ಟಾನ್‌ವೆ ಗಳಿಸಿದರು.

ಚೀನಾಕ್ಕೆ ಡೆನ್ಮಾರ್ಕ್ ಆಘಾತ: ಅಮೇಲಿ ವೆಂಗ್ಸ್‌ಗಾರ್ಡ್ 90ನೇ ನಿಮಿಷ ಹೆಡ್ ಮಾಡಿ ಗಳಿಸಿದ ಗೋಲಿನಿಂದ ಡೆನ್ಮಾರ್ಕ್ ತಂಡ, ಪರ್ತ್‌ನಲ್ಲಿ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಏಷ್ಯದ ಚಾಂಪಿಯನ್, ಪ್ರಬಲ ಚೀನಾಕ್ಕೆ 1–0 ಗೋಲಿನಿಂದ ಆಘಾತ ನೀಡಿತು. 16 ವರ್ಷಗಳ ನಂತರ ಡೆನ್ಮಾರ್ಕ್ ವಿಶ್ವಕಪ್‌ನಲ್ಲಿ ಆಡುತ್ತಿದೆ.

ಬೆಂಕಿ- ಹೋಟೆಲ್‌ನಿಂದ ನ್ಯೂಜಿಲೆಂಡ್ ತಂಡ ತೆರವು: ಆಕ್ಲೆಂಡ್ (ಎಎಫ್‌ಪಿ): ನ್ಯೂಜಿಲೆಂಡ್ ತಂಡ ಉಳಿದುಕೊಂಡಿದ್ದ ಹೋಟೆಲ್‌ನಲ್ಲಿ ಅಗ್ನಿ ಅವಘಡ ಸಂಭವಿಸಿದ್ದರಿಂದ ಆಟಗಾರ್ತಿಯರು ಮತ್ತು ನೆರವು ಸಿಬ್ಬಂದಿಯನ್ನು ಅಲ್ಲಿಂದ ತಾತ್ಕಾಲಿಕವಾಗಿ ತೆರವುಗೊಳಿಸಲಾಯಿತು. ಎಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ತಂಡ ತಿಳಿಸಿದೆ.

ಆ್ಯಷಸ್: ಲಾಬುಷೇನ್ ಶತಕ

ಮಾರ್ನಸ್ ಲಾಬುಷೇನ್ –ಎಪಿ ಚಿತ್ರ

ಮ್ಯಾಂಚೆಸ್ಟರ್: ಇಂಗ್ಲೆಂಡ್ ವಿರುದ್ಧ ಸೋಲಿನ ಭೀತಿಯಲ್ಲಿರುವ ಆಸ್ಟ್ರೇಲಿಯಾ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆಯುತ್ತಿರುವ ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯವನ್ನು ಉಳಿಸಲು ಹೋರಾಟ ನಡೆಸುತ್ತಿದೆ. ನಾಲ್ಕನೇ ದಿನವಾದ ಶನಿವಾರ ಲಂಚ್ ಮೊದಲಿನ ಸಂಪೂರ್ಣ ಅವಧಿ ಮಳೆಗೆ ಕೊಚ್ಚಿಹೋಯಿತು. ಆಟ ಮುಂದುವರಿದ ನಂತರ ಮಾರ್ನಸ್ ಲಾಬುಷೇನ್ (111) ಶತಕ ಪೂರೈಸಿದರಲ್ಲದೇ, ಮಿಚೆಲ್ ಮಾರ್ಷ್ ಪ್ರತಿರೋಧ ಪ್ರದರ್ಶಿಸಿದರು.

ಮಳೆಯಿಂದಾಗಿ ದಿನದಾಟ ಬೇಗನೇ ಕೊನೆಗೊಂಡಾಗ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್‌ಲ್ಲಿ 71ಓವರುಗಳಲ್ಲಿ 5 ವಿಕೆಟ್‌ಗೆ 214 ರನ್ ಗಳಿಸಿದೆ. ಇನಿಂಗ್ಸ್ ಸೋಲು ತಪ್ಪಿಸಿಕೊಳ್ಳಲು ಇನ್ನೂ 61 ರನ್ ಗಳಿಸಬೇಕಾಗಿದೆ. ಶನಿವಾರ ನಡೆದದ್ದು 30 ಓವರುಗಳ ಆಟವಷ್ಟೇ. ಈ ಅವಧಿಯಲ್ಲಿ ಆಸ್ಟ್ರೇಲಿಯಾ ಲಾಬುಷೇನ್ ಅವರನ್ನು ಕಳೆದುಕೊಂಡಿತು. ಮಾರ್ಷ್ 31 ಮತ್ತು ಗ್ರೀನ್ 3 ರನ್ ಗಳಿಸಿ ಆಡುತ್ತಿದ್ದರು. ಚಹಾ ವಿರಾಮದ ನಂತರ ಎರಡು ಓವರುಗಳ ಆಟ ಮಾತ್ರ ನಡೆಯಿತು.

ಉತ್ತಮ ಲಯದಲ್ಲಿರುವ ಲಾಬುಷೇನ್ (ಶುಕ್ರವಾರ: ಔಟಾಗದೇ 44) ಐದನೇ ವಿಕೆಟ್‌ಗೆ ಮಾರ್ಷ್ ಜೊತೆ 103 ರನ್ ಸೇರಿಸಿದರು. 270 ನಿಮಿಷ ಕ್ರೀಸ್‌ನಲ್ಲಿ ಕಳೆದ ಅವರು 173 ಎಸೆತಗಳನ್ನು ಎದುರಿಸಿದ್ದು, ಎರಡು ಸಿಕ್ಸರ್, 10 ಬೌಂಡರಿಗಳನ್ನು ಬಾರಿಸಿ ಇಂಗ್ಲೆಂಡ್ ಸುಲಭ ವಿಜಯಕ್ಕೆ ಅಡ್ಡಬಂದರು. ಆದರೆ 'ಚಹ ಕುಡಿಯಲು ಹೋಗುವ' ಸ್ವಲ್ಪ ಮೊದಲು ಜೋ ರೂಟ್ ಅವರಿಗೆ ವಿಕೆಟ್ ಕೀಪರ್‌ಗೆ ಕ್ಯಾಚಿತ್ತರು. ಆದರೆ ಇಂಗ್ಲೆಂಡ್ ಮನವಿಯನ್ನು ಅಂಪೈರ್ ನಿತಿನ್ ಮೆನನ್ ಪುರಸ್ಕರಿಸಲಿಲ್ಲ. ರಿವೀವ್‌ನಲ್ಲಿ ಚೆಂಡು ಬ್ಯಾಟಿನಂಚಿಗೆ ತಗುಲಿದ್ದು ಸ್ಪಷ್ಟವಾಗಿತ್ತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 317. ಇಂಗ್ಲೆಂಡ್ 592. ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ 71 ಓವರುಗಳಲ್ಲಿ 5 ವಿಕೆಟ್‌ಗೆ 214 (ಮಾರ್ನಸ್ ಲಾಬುಷೇನ್ 111, ಮಿಚೆಲ್ ಮಾರ್ಷ್ ಬ್ಯಾಟಿಂಗ್ 31, ಮಾರ್ಕ್ ವುಡ್ 27ಕ್ಕೆ 3)

ಭಾರತ ತಂಡದ ನಾಯಕ ಯಶ್

ಎಮರ್ಜಿಂಗ್ ಕಪ್: ಪ್ರಶಸ್ತಿಗೆ ಭಾರತ–ಪಾಕ್ ಪೈಪೋಟಿ

ಕೊಲಂಬೊ (ಪಿಟಿಐ): ಎಮರ್ಜಿಂಗ್ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಭಾರತ 'ಎ' ತಂಡ, ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಪಾಕಿಸ್ತಾನ 'ಎ' ವಿರುದ್ಧ ಹಣಾಹಣಿ ನಡೆಸಲಿದೆ.

ಲೀಗ್ ಹಂತದಲ್ಲಿ ಪಾಕಿಸ್ತಾನ ತಂಡವನ್ನು ಮಣಿಸಿದ್ದ ಯಶ್ ಧುಲ್ ಬಳಗ, ಫೈನಲ್‌ನಲ್ಲಿ ಗೆಲ್ಲುವ ನೆಚ್ಚಿನ ತಂಡ ಎನಿಸಿಕೊಂಡಿದೆ. ಭಾರತ ತಂಡ ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶ 'ಎ' ತಂಡವನ್ನು ಮಣಿಸಿತ್ತು. ಯಶ್ ಅವರು 66 ರನ್ ಗಳಿಸಿ ಗೆಲುವಿಗೆ ಕಾರಣರಾಗಿದ್ದರು. ಸ್ಪಿನ್ನರ್‌ಗಳಾದ ನಿಶಾಂತ್ ಸಿಂಧು ಮತ್ತು ಮಾನವ್ ಸುಥಾರ್ ಅವರೂ ಮಿಂಚಿದ್ದರು.

ಸೆಮಿಯಲ್ಲಿ ಬ್ಯಾಟಿಂಗ್‌ನಲ್ಲಿ ಎಡವಿದ್ದ ಭಾರತ, 211 ರನ್‌ಗಳಿಗೆ ಆಲೌಟಾಯಿತ್ತು. ಆದರೆ ಬೌಲರ್‌ಗಳು ಶಿಸ್ತಿನ ದಾಳಿ ನಡೆಸಿ ಗೆಲುವಿಗೆ ಕಾರಣರಾಗಿದ್ದರು. ಫೈನಲ್‌ನಲ್ಲಿ ಬ್ಯಾಟರ್‌ಗಳಿಂದ ಜವಾಬ್ದಾರಿಯುತ ಆಟ ಮೂಡಿಬರಬೇಕಿದೆ.

ಭಾರತ ತಂಡವು ಎದುರಾಳಿಗಳನ್ನು ಹಗುರವಾಗಿ ಕಾಣಲು ಸಿದ್ಧವಿಲ್ಲ. ಏಕೆಂದರೆ ಅಂತರರಾಷ್ಟ್ರೀಯ ಪಂದ್ಯ ಮತ್ತು ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ (ಪಿಎಸ್‌ಎಲ್) ಆಡಿದ ಅನುಭವಿಗಳು ಪಾಕಿಸ್ತಾನ 'ಎ' ತಂಡದಲ್ಲಿ ಇದ್ದಾರೆ.

ಆಲ್‌ರೌಂಡರ್ ಮೊಹಮ್ಮದ್ ವಸೀಂ, ನಾಯಕ ಮೊಹಮ್ಮದ್ ಹ್ಯಾರಿಸ್, ಆರಂಭಿಕ ಬ್ಯಾಟರ್ ಸಾಹಿಬ್‌ಝಾದಾ ಫರ್ಹಾನ್ ಮತ್ತು ವೇಗಿ ಅರ್ಷದ್ ಇಕ್ಬಾಲ್ ಅವರು ಅಂತರರಾಷ್ಟ್ರೀಯ ಪಂದ್ಯದಲ್ಲಿ ಆಡಿದವರು. ಅಮದ್ ಬಟ್ ಮತ್ತು ಒಮರ್ ಯೂಸುಫ್ ಅವರು ಪಿಎಸ್‌ಎಲ್‌ನಲ್ಲಿ ತಮ್ಮ ಸಾಮರ್ಥ್ಯ ತೋರಿಸಿ ಗಮನ ಸೆಳೆದಿದ್ದಾರೆ.

ವಿದ್ಯಾರ್ಥಿಗಳ ದೂರುಗಳಿಗೆ ಪರಿಹಾರ ಕಲ್ಪಿಸುವ ಉದ್ದೇಶ; ದೂರಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೆಜ್ಜೆ

ಮುಕ್ತ ವಿವಿಯಲ್ಲಿ 'ಕಲಿಕಾರ್ಥಿ ಕಲ್ಯಾಣ ಕೇಂದ್ರ'

• ಎಂ.ಮಹೇಶ

ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ನೋಟ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು (ಕೆಎಸ್‌ಒಯು) ರಾಜ್ಯದ ವಿವಿಧೆಡೆಯ ವಿದ್ಯಾರ್ಥಿಗಳ ದೂರುಗಳಿಗೆ ಪರಿಹಾರ ಕಲ್ಪಿಸಲು ಮತ್ತು ಮಾಹಿತಿ ಒದಗಿಸಲು 'ಕಲಿಕಾರ್ಥಿ ಕಲ್ಯಾಣ ಕೇಂದ್ರ'ವನ್ನು (ಎಲ್‌ಡಬ್ಲ್ಯುಸಿ) ಆರಂಭಿಸಿದೆ.

ಪರೀಕ್ಷಾಂಗ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರವು ದೂರುಗಳನ್ನು ಕನಿಷ್ಠ 3–4 ದಿನ, ಗರಿಷ್ಠ ಒಂದು ವಾರದ ಕಾಲಮಿತಿಯಲ್ಲಿ ಬಗೆಹರಿಸುತ್ತಿದ್ದು, ಶೈಕ್ಷಣಿಕ ಕೆಲಸಗಳಿಗಾಗಿ ವಿದ್ಯಾರ್ಥಿಗಳು ತಮ್ಮ ಊರುಗಳಿಂದ ಮೈಸೂರಿಗೆ ಬರಲೇಬೇಕಾದ ಅನಿವಾರ್ಯತೆ ತಪ್ಪಿದೆ.

ವಿದ್ಯಾರ್ಥಿಗಳಿಗಾಗಿಯೇ ಪ್ರತ್ಯೇಕ ನಿರ್ದೇಶನಾಲಯವನ್ನು ಪ್ರಾರಂಭಿಸಿ, ಅಲ್ಲಿ ಕೇಂದ್ರವನ್ನು ಸ್ಥಾಪಿಸುವ ಮೂಲಕ ವಿಶ್ವವಿದ್ಯಾಲಯವು ದೂರಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೆಜ್ಜೆಯನ್ನಿಟ್ಟಿದೆ. ವರ್ಷವಿಡೀ ವಿದ್ಯಾರ್ಥಿಗಳ ಜೊತೆ ನಿರಂತರ ಸಂಪರ್ಕ ಸಾಧಿಸುವ ಜೊತೆಗೆ ಮಾರ್ಗದರ್ಶನವನ್ನೂ ನೀಡುತ್ತಿದೆ.

ಎರಡು ತಿಂಗಳಿಂದ: 'ಕೇಂದ್ರವು ಎರಡು ತಿಂಗಳಿಂದ ಕಾರ್ಯನಿರ್ವಹಿಸುತ್ತಿದೆ. ಸಹಾಯವಾಣಿಗೆ ಬರುವ ಪ್ರತಿ ಕರೆಯನ್ನೂ ರೆಕಾರ್ಡ್ ಮಾಡಲಾಗುತ್ತದೆ. ಅನುಪಾಲನಾ ವರದಿಯನ್ನು ಅಂಕಿಅಂಶ ಸಮೇತ ಸಿದ್ಧಪಡಿಸಲಾಗುತ್ತದೆ. ಅದರ ಮೇಲ್ವಿಚಾರಣೆಗೆಂದೇ ಎರಡು ಸಮಿತಿಗಳನ್ನೂ ರಚಿಸಲಾಗಿದೆ. ಸಮಾಧಾನವಾಗದಿದ್ದರೆ ವಿದ್ಯಾರ್ಥಿಗಳು 'ಒಂಬುಡ್ಸ್‌ಮನ್'ಗೆ ದೂರು ಸಲ್ಲಿಸಲೂ ಅವಕಾಶವಿದೆ' ಎಂದು ಕೇಂದ್ರದ ಸಂಯೋಜನಾಧಿಕಾರಿ ಡಾ.ಸುಧಾಕರ್ ಹೊಸಳ್ಳಿ 'ಪ್ರಜಾವಾಣಿ'ಗೆ ತಿಳಿಸಿದರು.

'ನಿತ್ಯ ದೂರು, ವಿಚಾರಣೆ ಹಾಗೂ ಸಲಹೆಗಳು ಸೇರಿದಂತೆ ಸರಾಸರಿ 100 ಕರೆಗಳು ಬರುತ್ತಿವೆ. ಬಡ ವಿದ್ಯಾರ್ಥಿಗಳಿಗೆ ಅನಗತ್ಯ ಖರ್ಚಿನ ಭಾರವನ್ನು ಸಂಪೂರ್ಣವಾಗಿ ತಪ್ಪಿಸುವಲ್ಲಿ ಕೇಂದ್ರ ಸಫಲವಾಗುತ್ತಿದೆ. ಅವರ ಕುಂದು-ಕೊರತೆಗಳನ್ನು ನಿವಾರಿಸುವ ಜೊತೆಗೆ ಮುಂದಿನ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶ ಬಯಸಿ ಮಾಹಿತಿ ಕೋರುವವರಿಗೂ ನೆರವು ಒದಗಿಸಲಾಗುತ್ತಿದೆ. ನ್ಯಾಕ್ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

ಅಧಿಕಾರಿಗಳೊಂದಿಗೆ ಸಂವಾದಕ್ಕೆ 'ಮಾರ್ಗದರ್ಶಿ'

'ಕಲಿಕಾರ್ಥಿ ಕೇಂದ್ರದ ಕಾರ್ಯಕ್ಷಮತೆ ಹೆಚ್ಚಿಸಲು 'ಮಾರ್ಗದರ್ಶಿ' ಎಂಬ ಯೋಜನೆ ಹಮ್ಮಿಕೊಳ್ಳಲಾಗಿದೆ. ಪ್ರತಿ ಸೋಮವಾರ ವಿದ್ಯಾರ್ಥಿಗಳು ನೇರವಾಗಿ ಅಧಿಕಾರಿಗಳೊಂದಿಗೆ ಸಂವಾದ ನಡೆಸಲು ಅವಕಾಶವಿದೆ. ಮೊದಲ ಸಂವಾದವು ಜುಲೈ 28ರಂದು ಬೆಳಿಗ್ಗೆ 10ಕ್ಕೆ ನಡೆಯಲಿದ್ದು, ಕುಲಪತಿ ಪ್ರೊ. ಶರಣಪ್ಪ ಹಲಸೆ, ಪರೀಕ್ಷಾಂಗ ಹಾಗೂ ಮೌಲ್ಯಪಾಪನ ಕುಲಸಚಿವರು ಭಾಗವಹಿಸಲಿದ್ದಾರೆ.

ಕೇಂದ್ರದ ಮುಖ್ಯಸ್ಥರಾಗಿ ಸಂಯೋಜನಾಧಿಕಾರಿ, ಸಹಾಯಕ ಕುಲಸಚಿವರು, ಸೂಪರಿಂಟೆಂಡೆಂಟ್ ಮತ್ತು ಇತರರ ನೆರವಿನಲ್ಲಿ ಕಾರ್ಯನಿರ್ವಹಿಸುತ್ತಾರೆ. ಕೇಂದ್ರವು ಯುಜಿಸಿ, ವಿಶ್ವವಿದ್ಯಾಲಯ ಮತ್ತು ಭಾಗಿದಾರರ ನಡುವೆ ಸಮನ್ವಯಕ್ಕೆ ಕಾರ್ಯನಿರ್ವಹಿಸುತ್ತದೆ.

ಶೈಕ್ಷಣಿಕ ಕಾರ್ಯಕ್ರಮಗಳ ಮಾಹಿತಿ ಹಾಗೂ ಕುಂದುಕೊರತೆಗಳನ್ನು ಕೇಂದ್ರದ ದೂ.ಸಂಖ್ಯೆ:8690544544, 9141181237, 9141181238, 9141181242, 91411181245 ಅಥವಾ ksoulwc@gmail.com ಮೂಲಕ ಸಲ್ಲಿಸಬಹುದು.

ಉದ್ದೇಶಗಳೇನು?

- ಶೈಕ್ಷಣಿಕ ಆಪ್ತಸಮಾಲೋಚನೆ
- ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಮಾಹಿತಿ
- ಕುಂದುಕೊರತೆಗಳ ನಿವಾರಣೆ
- ಪ್ರತಿಭಾವಂತರಿಗೆ ಪುರಸ್ಕಾರ
- ಹಳೆಯ ವಿದ್ಯಾರ್ಥಿಗಳಿಗೆ ಸಹಾಯ ಮತ್ತು ಬೆಂಬಲ

ಎರಡು ಟನ್ ಟೊಮೆಟೊ ಕದ್ದ ದಂಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತದ ಸೋಗಿನಲ್ಲಿ ರೈತರ ವಾಹನ ಅಡ್ಡಗಟ್ಟಿ ಸುಮಾರು ₹ 1.5 ಲಕ್ಷ ಮೌಲ್ಯದ 2 ಟನ್ ಟೊಮೆಟೊ ಕದ್ದೊಯ್ದಿದ್ದ ಪ್ರಕರಣದಲ್ಲಿ ತಮಿಳುನಾಡಿನ ದಂಪತಿಯನ್ನು ಆರ್.ಎಂ.ಸಿ ಯಾರ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಭಾಸ್ಕರ್ ಹಾಗೂ ಎರಡನೇ ಪತ್ನಿ ಸಿಂಧುಜಾ ಬಂಧಿತರು. ಕೃತ್ಯದಲ್ಲಿ ಭಾಗಿಯಾಗಿದ್ದ ಸ್ಥಳೀಯ ನಿವಾಸಿಗಳಾದ ರಾಕೇಶ್, ಮಹೇಶ್ ಹಾಗೂ ತಮಿಳುನಾಡಿನ ಕುಮಾರ್ ತಲೆಮರೆಸಿಕೊಂಡಿದ್ದಾರೆ. ಬಂಧಿತರಿಂದ ಎರಡು ಕಾರು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಭಾಸ್ಕರ್, ಅಪರಾಧ ಹಿನ್ನೆಲೆಯುಳ್ಳವ. ಈತನ ವಿರುದ್ಧ ತಮಿಳುನಾಡಿನ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿರುವ ಮಾಹಿತಿ ಇದೆ. ತಲೆಮರೆಸಿಕೊಂಡಿರುವ ಆರೋಪಿ ರಾಕೇಶ್‌ನ ಪತ್ನಿ ಹಾಗೂ ಸಿಂಧುಜಾ ಸ್ನೇಹಿತೆಯರು. ಆಗಾಗ ಎಲ್ಲರೂ ಕುಟುಂಬ ಸಮೇತ ಒಂದೆಡೆ ಭೇಟಿಯಾಗುತ್ತಿದ್ದರು' ಎಂದು ತಿಳಿಸಿದರು.

10 ದಿನ ಕಾದು ಬಂಧನ

'ಟೊಮೆಟೊ ವಾಹನ ಕದ್ದೊಯ್ದಿದ್ದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಅದನ್ನು ಆಧರಿಸಿ ತಮಿಳುನಾಡಿಗೆ ಹೋಗಿದ್ದ ವಿಶೇಷ ತಂಡ, 10 ದಿನ ಕಾದು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ' ಎಂದು ಪೊಲೀಸರು ಹೇಳಿದರು.

'ವಾಹನವನ್ನು ತಮಿಳುನಾಡಿಗೆ ಕೊಂಡೊಯ್ದಿದ್ದ ಆರೋಪಿಗಳು, ವಾಣಿಯಂಬಾಡಿ ನಗರದಲ್ಲಿ ಮಾರಿದ್ದರು. ಅದರಿಂದ ಬಂದ ಹಣವನ್ನು ಎಲ್ಲ ಆರೋಪಿಗಳು ಹಂಚಿಕೊಂಡಿದ್ದರು. ಬಳಿಕ, ವಾಹನವನ್ನು ಬೆಂಗಳೂರಿಗೆ ತಂದು ತುಮಕೂರು ರಸ್ತೆ ಪಕ್ಕದಲ್ಲಿ ನಿಲ್ಲಿಸಿ ಹೋಗಿದ್ದರು. ಕೃತ್ಯದ ಸಂದರ್ಭದಲ್ಲಿ ಆರೋಪಿಗಳು, ನೋಂದಣಿ ಸಂಖ್ಯೆ ಫಲಕವಿಲ್ಲದ ವಾಹನ ಬಳಸಿದ್ದರು' ಎಂದು ತಿಳಿಸಿದರು.

ಸಿಂಧುಜಾ

ಭಾಸ್ಕರ್

ವಾಹನ ಕಂಡು ಸಂಚು: 'ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ರೇಣುಕಾಪುರದ ರೈತರಾದ ಶಿವಣ್ಣ ಹಾಗೂ ಮಲ್ಲೇಶ್, ತಮ್ಮೂರಿನಿಂದ ಬೆಂಗಳೂರು ಮಾರ್ಗವಾಗಿ ಕೋಲಾರ ಮಾರುಕಟ್ಟೆಗೆ ವಾಹನದಲ್ಲಿ ಟೊಮೆಟೊ ಕೊಂಡೊಯ್ಯುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ನಗರದಲ್ಲಿರುವ ಸ್ನೇಹಿತರನ್ನು ಭೇಟಿಯಾಗಲು ಬಂದಿದ್ದ ಭಾಸ್ಕರ್ ಹಾಗೂ ಸಿಂಧುಜಾ, ತುಮಕೂರು ರಸ್ತೆಯಲ್ಲಿ ಕಾರಿನಲ್ಲಿ ಹೊರಟಿದ್ದರು. ರಸ್ತೆಯಲ್ಲಿ ಟೊಮೆಟೊ ವಾಹನ ನೋಡಿದ್ದ ಸಿಂಧುಜಾ, ಕಳ್ಳತನ ಮಾಡಿ ತಮ್ಮೂರಿಗೆ ಕೊಂಡೊಯ್ದು ಮಾರಲು ಸಂಚು ರೂಪಿಸಿದ್ದರು. ವಾಹನವನ್ನು ಅಡ್ಡಗಟ್ಟಿದ್ದ ಆರೋಪಿಗಳು, 'ನಮ್ಮ ವಾಹನಕ್ಕೆ ಡಿಕ್ಕಿ ಹೊಡೆದು ಅಪಘಾತವನ್ನುಂಟು ಮಾಡಿದ್ದಿರಾ' ಎಂದು ರೈತರನ್ನು ಥಳಿಸಿದ್ದರು. ನಂತರ, ಟೊಮೆಟೊ ವಾಹನ ಸಮೇತ ಪರಾರಿಯಾಗಿದ್ದರು' ಎಂದು ತಿಳಿಸಿದರು.

ಆನ್‌ಲೈನ್ ಸುದ್ದಿಸಂಸ್ಥೆ 'ತೆಹೆಲ್ಕಾ ಡಾಟ್ ಕಾಂ'ಗೆ ದೆಹಲಿ ಹೈಕೋರ್ಟ್ ಸೂಚನೆ

ಮಾನನಷ್ಟ: ₹ 2 ಕೋಟಿ ಪರಿಹಾರಕ್ಕೆ ಆದೇಶ

ನವದೆಹಲಿ (ಪಿಟಿಐ): ಆನ್‌ಲೈನ್ ಸುದ್ದಿಸಂಸ್ಥೆ 'ತೆಹೆಲ್ಕಾ ಡಾಟ್ ಕಾಂ' ವಿರುದ್ಧ ಸಲ್ಲಿಸಲಾಗಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ, ಸೇನೆ ಅಧಿಕಾರಿಯೊಬ್ಬರಿಗೆ ₹ 2 ಕೋಟಿ ನಷ್ಟ ಪರಿಹಾರ ಒದಗಿಸುವಂತೆ ದೆಹಲಿ ಹೈಕೋರ್ಟ್ ಸುದ್ದಿಸಂಸ್ಥೆಗೆ ಆದೇಶಿಸಿದೆ.

ರಕ್ಷಣಾ ಪರಿಕರಗಳ ಖರೀದಿ ಪ್ರಕ್ರಿಯೆಯಲ್ಲಿನ ಭ್ರಷ್ಟಾಚಾರ ಕುರಿತು ಸುದ್ದಿಸಂಸ್ಥೆಯು ವರದಿ ಪ್ರಕಟಿಸಿತ್ತು. ಈ ವರದಿಯಿಂದಾಗಿ ತಮ್ಮ ವರ್ಚಸ್ಸಿಗೆ ಧಕ್ಕೆಯಾಗಿದೆ ಎಂದು ಭಾರತೀಯ ಸೇನೆ ಅಧಿಕಾರಿಯೊಬ್ಬರು ಮಾನನಷ್ಟ ಮೊಕದ್ದಮೆಯನ್ನು ದಾಖಲಿಸಿದ್ದರು.

ಮೇಜರ್ ಜನರಲ್ ಎಂ.ಎಸ್. ಅಹ್ಲುವಾಲಿಯಾ ಅವರ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ನೀನಾ ಬನ್ಸಲ್ ಕೃಷ್ಣ ತೀರ್ಪು ನೀಡಿದರು. ತೆಹೆಲ್ಕಾ ಡಾಟ್ ಕಾಂ, ಅದರ ಮಾಲೀಕ ಸಂಸ್ಥೆ ಮೆಸರ್ಸ್ ಬಫುಲೊ ಕಮ್ಯುನಿಕೇಷನ್ಸ್, ಅದರ ಮಾಲೀಕ ತರುಣ್ ತೇಜ್‌ಪಾಲ್ ಮತ್ತು ವರದಿಗಾರರಾದ ಅನಿರುದ್ಧ ಬಹಲ್, ಮ್ಯಾಥ್ಯೂ ಸಾಮ್ಯುಯೆಲ್ ಈ ಮೊತ್ತ ಭರಿಸಬೇಕು ಎಂದು ಆದೇಶಿಸಿದರು.

'ಪ್ರಾಮಾಣಿಕ ಅಧಿಕಾರಿ ವರ್ಚಸ್ಸಿಗೆ ತೀವ್ರ ಧಕ್ಕೆ ತರುವುದಕ್ಕೆ ಇದಕ್ಕಿಂತಲೂ ದೊಡ್ಡ ನಿದರ್ಶನವಿಲ್ಲ. ವರದಿ ಪ್ರಕಟವಾದ 23 ವರ್ಷಗಳ ನಂತರ 'ಕ್ಷಮಾಪಣೆ' ಪ್ರಕಟಿಸುವುದು ಅಸಮರ್ಪಕವಷ್ಟೇ ಅಲ್ಲ, ಅರ್ಥಹೀನ ಕೂಡಾ' ಎಂದು ಕೋರ್ಟ್ ಹೇಳಿತು.

ಆದರೆ, ಸುದ್ದಿಸಂಸ್ಥೆ ಜೊತೆಗೆ ಒಪ್ಪಂದದ ಭಾಗವಾಗಿ ಈ ಸಂಬಂಧ ವರದಿ ಪ್ರಸಾರ ಮಾಡಿದ್ದ ಝೀ ಟೆಲಿಫಿಲ್ಮ್ ಲಿಮಿಟೆಡ್ ಮತ್ತು ಅದರ ಸಿಬ್ಬಂದಿಯಿಂದ ಮಾನಹಾನಿಯಾಗಿದೆ ಎಂದು ನಿರೂಪಿಸುವಲ್ಲಿ ಅರ್ಜಿದಾರರು ವಿಫಲರಾಗಿದ್ದಾರೆ ಎಂದು ಕೋರ್ಟ್ ಹೇಳಿತು.

'ತೆಹೆಲ್ಕಾ ಡಾಟ್ ಕಾಂ' ಆನ್‌ಲೈನ್ ಸುದ್ದಿ ಸಂಸ್ಥೆಯು ಮಾರ್ಚ್ 13, 2001ರಲ್ಲಿ ಈ ಸುದ್ದಿ ಪ್ರಕಟಿಸಿತ್ತು.

ಸುಪ್ರೀಂ ಕೋರ್ಟ್‌ನಲ್ಲಿ ಮಲಿಕ್ ಹಾಜರು; ನಾಲ್ವರು ಅಧಿಕಾರಿಗಳ ಅಮಾನತು

ನವದೆಹಲಿ (ಪಿಟಿಐ): ಜೀವಾವಧಿ ಶಿಕ್ಷೆಗೆ ಗುರಿಯಾಗಿ ತಿಹಾರ್ ಜೈಲಿನಲ್ಲಿ ಬಂಧನದಲ್ಲಿ ಇರುವ ಜಮ್ಮು ಮತ್ತು ಕಾಶ್ಮೀರ ಲಿಬರೇಶನ್ ಫ್ರಂಟ್ (ಜೆಕೆಎಲ್‌ಎಫ್) ಮುಖ್ಯಸ್ಥ ಯಾಸಿನ್ ಮಲಿಕ್ ಸುಪ್ರೀಂ ಕೋರ್ಟ್‌ನಲ್ಲಿ ಕಾಣಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿ ನಾಲ್ವರು ಅಧಿಕಾರಿಗಳನ್ನು ದೆಹಲಿ ಬಂದೀಖಾನೆ ಇಲಾಖೆಯು ಶನಿವಾರ ಅಮಾನತುಗೊಳಿಸಿದೆ.

'ಆದೇಶ ಇಲ್ಲದಿದ್ದರೂ ಯಾಸಿನ್ ಮಲಿಕ್‌ನನ್ನು ಕೋರ್ಟ್‌ಗೆ ಹಾಜರುಪಡಿಸಿದ ಪ್ರಕರಣದ ಪ್ರಾಥಮಿಕ ತನಿಖೆ ನಡೆಸಿದ ವೇಳೆ, ಈ ಅಚಾತುರ್ಯಕ್ಕೆ ಸಿಬ್ಬಂದಿಯೇ ಜವಾಬ್ದಾರರು ಎಂದು ಮೇಲ್ನೋಟಕ್ಕೆ ಸಾಬೀತಾಗಿದೆ. ಹೀಗಾಗಿ ಒಬ್ಬರು ಡಿವೈಎಸ್‌ಪಿ, ಇಬ್ಬರು ಎಎಸ್‌ಪಿ, ಒಬ್ಬ ಕಾರಾಗೃಹ ಪಾಲಕರನ್ನು ಶುಕ್ರವಾರ ರಾತ್ರಿ ಅಮಾನತುಗೊಳಿಸಲಾಗಿದೆ' ಎಂದು ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಗಂಭೀರ ಲೋಪದಲ್ಲಿ ಇನ್ನಷ್ಟು ಅಧಿಕಾರಿಗಳು ಭಾಗಿಯಾಗಿರುವ ಕುರಿತು ಪತ್ತೆ ಮಾಡಲು ತಿಹಾರದ ಡಿಐಜಿ ಅವರು ಕೂಲಂಕುಷ ತನಿಖೆ ನಡೆಸುತ್ತಿದ್ದಾರೆ ಎಂದೂ ತಿಳಿಸಲಾಗಿದೆ. ಕಿಕ್ಕಿರಿದು ತುಂಬಿದ್ದ ಸುಪ್ರೀಂ ಕೋರ್ಟ್ ಸಭಾಂಗಣವೊಂದಕ್ಕೆ ಯಾಸಿನ್ ಮಲಿಕ್‌ನನ್ನು ಪೊಲೀಸ್ ಸಿಬ್ಬಂದಿ ಶುಕ್ರವಾರ ಕರೆತಂದಿದ್ದರು.

'ಅತ್ಯಾಚಾರ ವಿರೋಧಿ ಕಾನೂನಿನ ದುರ್ಬಳಕೆ'

ನೈನಿತಾಲ್ (ಪಿಟಿಐ): ತಮ್ಮ ಸಂಗಾತಿ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಲು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 376ಅನ್ನು (ಅತ್ಯಾಚಾರ ಪ್ರಕರಣದ ದೋಷಿಗಳನ್ನು ಶಿಕ್ಷಿಸಲು ಇರುವ ಕಾನೂನು) ಮಹಿಳೆಯರು ಆಯುಧವನ್ನಾಗಿ ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಈಚೆಗೆ ಹೆಚ್ಚಾಗಿದೆ ಎಂದು ಉತ್ತರಾಖಂಡ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ತನ್ನನ್ನು ಮದುವೆಯಾಗಲು ನಿರಾಕರಿಸಿದ ಪುರುಷನ ವಿರುದ್ಧ ಮಹಿಳೆಯೊಬ್ಬರು ಅತ್ಯಾಚಾರ ಮೊಕದ್ದಮೆ ಆರೋಪ ಮಾಡಿದ್ದರು. ಈ ಮೊಕದ್ದಮೆಯ ಕ್ರಿಮಿನಲ್ ಪ್ರಕ್ರಿಯೆಯನ್ನು ರದ್ದುಗೊಳಿಸಿ ಜೂನ್ 5ರಂದು ಆದೇಶ ಹೊರಡಿಸಿದ ನ್ಯಾಯಮೂರ್ತಿ ಶರದ್ ಕುಮಾರ್ ಶರ್ಮ ಅವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ.

ವಯಸ್ಕ ಜೋಡಿ ನಡುವಿನ ಸಮ್ಮತದ ಲೈಂಗಿಕ ಸಂಬಂಧವನ್ನು ಮದುವೆ ನಿರಾಕರಣೆಯ ಕಾರಣಕ್ಕಾಗಿ ಅತ್ಯಾಚಾರ ಎಂದು ಪರಿಗಣಿಸಲಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಹೇಳಿದೆ ಎಂದರು.

ಟೈಟ್ಲರ್ ಧ್ವನಿ ಪರೀಕ್ಷೆ ವರದಿ ಸಲ್ಲಿಸಲು ಸಿಬಿಐಗೆ ಕೋರ್ಟ್ 5 ದಿನ ಅವಕಾಶ

ನವದೆಹಲಿ(ಪಿಟಿಐ): 1984ರ ಸಿಖ್ ವಿರೋಧಿ ಗಲಭೆಯ ಸಂದರ್ಭ ಪುಲ್ ಭಂಗಶ್‌ನಲ್ಲಿ ನಡೆದ ಹತ್ಯೆ ಪ್ರಕರಣದ ಆರೋಪಿ, ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ಅವರ ಧ್ವನಿ ಮಾದರಿ ಪರೀಕ್ಷೆಯ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಸಲ್ಲಿಸಲು ದೆಹಲಿ ಕೋರ್ಟ್, ಸಿಬಿಐಗೆ ಐದು ದಿನ ಅವಕಾಶ ಕಲ್ಪಿಸಿದೆ. ಎಫ್‌ಎಸ್‌ಎಲ್ ಫಲಿತಾಂಶಕ್ಕೆ ಇನ್ನೂ ಕಾಯಲಾಗುತ್ತಿದೆ ಎಂದು ಸಿಬಿಐ ವರದಿ ಸಲ್ಲಿಸಿತು. ಆ ಬಳಿಕ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ವಿಧಿ ಗುಪ್ತಾ ಆನಂದ್ ಅವರು ಟೈಟ್ಲರ್ ವಿರುದ್ಧದ ದೋಷಾರೋಪ ಪಟ್ಟಿ ಕುರಿತ ವಿಚಾರಣೆಯನ್ನು ಜುಲೈ 26ಕ್ಕೆ ನಿಗದಿಪಡಿಸಿ ಆದೇಶ ಹೊರಡಿಸಿದರು.

'ಸಜೆ ವಿಧಿಸಲು ಕೃತ್ಯದ ಉದ್ದೇಶ ಸಾಬೀತು ಅಗತ್ಯ'

ನವದೆಹಲಿ (ಪಿಟಿಐ): 'ಘಟನೆಗೆ ಪ್ರತ್ಯಕ್ಷದರ್ಶಿಗಳು ಇಲ್ಲದಿದ್ದಾಗ ಕೃತ್ಯ ಎಸಗಲು ಇದ್ದ ಉದ್ದೇಶ ಏನೆಂಬುದನ್ನು ಅನುಮಾನಕ್ಕೆ ಎಡೆ ಇಲ್ಲದಂತೆ ಸಾಬೀತುಪಡಿಸಿದರಷ್ಟೇ ಶಿಕ್ಷೆ ವಿಧಿಸಲು ಸಾಧ್ಯ' ಎಂದು ಸುಪ್ರೀಂ ಕೋರ್ಟ್ ಶನಿವಾರ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಹ್ಸಾನುದ್ದೀನ್ ಅಮಾನ್ ಉಲ್ಲಾ ಅವರಿದ್ದ ವಿಭಾಗೀಯ ನ್ಯಾಯಪೀಠವು, 'ಯಾವುದೇ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಗಳಿದ್ದಾಗ ಕೃತ್ಯಕ್ಕೆ 'ಪ್ರೇರಣೆ' ನೀಡಿದ್ದಾರೆ ಎಂಬ ಅಂಶಗಳು ಮಹತ್ವ ಕಳೆದುಕೊಳ್ಳುತ್ತವೆ' ಎಂದು ಹೇಳಿತು. 2008ರಲ್ಲಿ ಕೊಲೆ ಆರೋಪದ ಮೇಲೆ ಛತ್ತೀಸ್‌ಗಢ ಹೈಕೋರ್ಟ್, ವ್ಯಕ್ತಿಯೊಬ್ಬರಿಗೆ ಜೀವಾವಧಿ ಸಜೆ ಮತ್ತು ದಂಡ ವಿಧಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಪ್ರಕರಣ ವಿಚಾರಣೆ ಸಂದರ್ಭದಲ್ಲಿ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿ ಆರೋಪಿಯನ್ನು ಖುಲಾಸೆಗೊಳಿಸಿದೆ.

ಮಯೂರ
ಸಹೃದಯರ ಒಡನಾಡಿ
ಆಗಸ್ಟ್ 2023
ಪ್ರಾಣಿಗಳ ಕಣ್ಣು ಸುಳ್ಳು ಹೇಳುವುದಿಲ್ಲ
ಕರ್ಕಿ ಕೃಷ್ಣಮೂರ್ತಿ ಬರಹ
ಲಲಿತ ಮಂಟಪ
ಹೊಸ ಮಾಲಿಕೆಯಲ್ಲಿ ಒಡಿಸ್ಸಿ ನೃತ್ಯ ಕಲಾವಿದ ರಾಮ್ಲಿ ಇಬ್ರಾಹಿಂ
ಕಥೆಗಳು
• ಡಾ. ನಾಗರಾಜು ಜಿ.ಬಿ.
• ಅಬ್ದುಲ್ ರೆಹಮಾನ್ ಪಾಷ
• ಎನ್‌.ಸಿ. ಮಹೇಶ್
• ಡಾ. ಲಕ್ಷ್ಮಣ ವಿ.ಎ
• ಟಿ.ಆರ್. ಉಷಾರಾಣಿ
• ಚಿತ್ರಾ ಲಹರಿ
• ಸಂತೋಷ ಗುಡ್ಡಿಯಂಗಡಿ
• ಮಧುರಾ ಕರ್ಣಮ್
ಸ್ತ್ರೀ ಸಂಕಥನದ ಹೆಣಿಗೆಗೊಂದು ಹೊಸ ಎಳೆ
ಎಂ.ಎಸ್. ಆಶಾದೇವಿ
ಪ್ರೀತಿಯ ಕೊಳಲು ಮತ್ತು ಎಚ್ಚರಿಕೆಯ ಘಂಟೆ
ಎಚ್.ಎಸ್. ರಾಘವೇಂದ್ರ ರಾವ್
ಕವಿತೆಗಳು
• ರವಿ ಪಾಟೀಲ್
• ತೇರ್ ಳಿ ಎನ್. ಶೇಖರ್
• ಸುಬ್ರಾಯ ಚೊಕ್ಕಾಡಿ
• ಶೂದ್ರ ಶ್ರೀನಿವಾಸ್
• ಭವ್ಯ ಎಚ್.ಸಿ. ನವೀನ್
• ಧನಂಜಯ ಕುಂಬ್ಳೆ
• ಮೂಡ್ನಾಕೂಡು ಚಿನ್ನಸ್ವಾಮಿ
• ಎಂ.ಎಸ್. ಮೂರ್ತಿ
• ಪಟ್ಟಾಭಿರಾಮ ಸೋಮಯಾಜಿ
• ಟಿ.ಎಸ್. ನಾಗರಾಜ ಶೆಟ್ಟಿ
• ಅಜಯ್ ವರ್ಮಾ ಅಲ್ಲೂರಿ
• ಕೆ.ಪಿ. ಮೃತ್ಯುಂಜಯ
ಪ್ರಬಂಧ
ಎನ್ನ ಕಾಯವ ದಂಡಿಸಿ ನಿನ್ನ ಕಾಡುವೆನಯ್ಯಾ
ವಸುಧೇಂದ್ರ
₹15 editormy@mayura.co.in mayuraezine.com /mayuramonthly 080-45557333/264

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ಮಯಂಕ್, ಮನೋಜ್ ಬಾಂಢಗೆಗೆ ಉತ್ತಮ ಮೌಲ್ಯ

ಅಭಿನವ್ ಮನೋಹರ್‌ಗೆ ಬಂಪರ್

ಪ್ರಜಾವಾಣಿ ವಾರ್ತೆ

ಅಭಿನವ್ ಮನೋಹರ್

ಮಯಂಕ್ ಅಗರವಾಲ್

ಬೆಂಗಳೂರು: ಬೀಸು ಹೊಡೆತಗಳ ಆಟಗಾರ ಅಭಿನವ್ ಮನೋಹರ್ ಶನಿವಾರ ನಡೆದ ಕೆಎಸ್‌ಸಿಎ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಆಟಗಾರರ ಹರಾಜಿನಲ್ಲಿ ಖ್ಯಾತನಾಮರನ್ನು ಹಿಂದಿಕ್ಕಿ ಅತ್ಯಧಿಕ ಮೌಲ್ಯ ಗಳಿಸಿದರು.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡಿರುವ ಬೆಂಗಳೂರಿನ ಅಭಿನವ್ ಅವರನ್ನು ಶಿವಮೊಗ್ಗ ಲಯನ್ಸ್ ತಂಡವು ₹ 15 ಲಕ್ಷ ಮೌಲ್ಯ ನೀಡಿ ಖರೀದಿಸಿತು. ಕಳೆದ ಐಪಿಎಲ್‌ನಲ್ಲಿ ಅವರು ಗುಜರಾತ್ ಟೈಟನ್ಸ್ ತಂಡದಲ್ಲಿ ಆಡಿದ್ದರು. 28 ವರ್ಷದ ಬಲಗೈ ಬ್ಯಾಟರ್ ಅಭಿನವ್ ಮೂರು ಲಿಸ್ಟ್ ಎ ಮತ್ತು 29 ಟಿ20 ಪಂದ್ಯಗಳನ್ನು ಆಡಿದ್ದಾರೆ.

ಹರಾಜು ಪ್ರಕ್ರಿಯೆಯಲ್ಲಿ ಅಭಿನವ್ ಮನೋಹರ್ ಅವರನ್ನು ಖರೀದಿಸಲು ಶಿವಮೊಗ್ಗ ಮತ್ತು ಹುಬ್ಬಳ್ಳಿ ಟೈಗರ್ಸ್ ತಂಡಗಳ ನಡುವೆ ತುರುಸಿನ ಪೈಪೋಟಿ ನಡೆಯಿತು. ಶಿವಮೊಗ್ಗ ಮೇಲುಗೈ ಸಾಧಿಸಿತು.

ಈ ಹಾದಿಯಲ್ಲಿ ಅಭಿನವ್ ಅವರು ಭಾರತ ತಂಡದ ಆರಂಭಿಕ ಬ್ಯಾಟರ್ ಆಗಿ ಆಡಿರುವ ಮಯಂಕ್ ಅಗರವಾಲ್ ಅವರನ್ನೂ ಹಿಂದಿಕ್ಕಿದರು. ಕರ್ನಾಟಕ ತಂಡದ ನಾಯಕರೂ ಆಗಿರುವ ಮಯಂಕ್ ₹ 14 ಲಕ್ಷ ಮೌಲ್ಯಕ್ಕೆ ಬೆಂಗಳೂರು ಬ್ಲಾಸ್ಟರ್ಸ್ ತಂಡಕ್ಕೆ ಸೇರ್ಪಡೆಯಾದರು. ಐಪಿಎಲ್‌ನಲ್ಲಿ ಮಿಂಚಿರುವ ದೇವದತ್ತ ಪಡಿಕ್ಕಲ್ ಅವರನ್ನು ಗುಲ್ಬರ್ಗ ಮಿಸ್ಟಿಕ್ಸ್ ತಂಡವು ₹ 13 ಲಕ್ಷಕ್ಕೆ ತನ್ನದಾಗಿಸಿಕೊಂಡಿತು. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಿರುವ ಮಧ್ಯಮವೇಗಿ ವೈಶಾಖ ವಿಜಯಕುಮಾರ್ (₹ 8.80ಲಕ್ಷ) ಕೂಡ ಗುಲ್ಬರ್ಗ ಸೇರಿದರು.

ಮೈಸೂರು ವಾರಿಯರ್ಸ್ ತಂಡವು ಗಾಯದಿಂದ ಚೇತರಿಸಿಕೊಂಡಿರುವ ವೇಗಿ ಪ್ರಸಿದ್ಧ ಕೃಷ್ಣ (₹ 7.40 ಲಕ್ಷ), ಮೈಸೂರಿನ ಜಗದೀಶ್ ಸುಚಿತ್ (₹ 8.4 ಲಕ್ಷ) ಹಾಗೂ ಅನುಭವಿ ಬ್ಯಾಟರ್ ಕರುಣ್ ನಾಯರ್ (6.8 ಲಕ್ಷ) ಅವರನ್ನು ಖರೀದಿಸಿತು.

ಮನೀಷ್ ಪಾಂಡೆ ಅವರನ್ನು ಹುಬ್ಬಳ್ಳಿ ಟೈಗರ್ಸ್ ತಂಡವು ₹ 10.6 ಲಕ್ಷ ಮೌಲ್ಯ ನೀಡಿ ತನ್ನದಾಗಿಸಿಕೊಂಡಿತು. ಆಲ್‌ರೌಂಡರ್ ಮನೋಜ್ ಬಾಂಢಗೆ ಅವರನ್ನು ಸೆಳೆದುಕೊಳ್ಳಲು ಮೈಸೂರು ಮತ್ತು ಗುಲ್ಬರ್ಗ ತಂಡಗಳ ನಡುವೆ ಅಪಾರ ಪೈಪೋಟಿ ಏರ್ಪಟ್ಟಿತ್ತು. ಕಡೆಗೂ ಮೈಸೂರು ತಂಡವು ₹ 9 ಲಕ್ಷ ಮೌಲ್ಯಕ್ಕೆ ಮನೋಜ್ ಅವರನ್ನು ತನ್ನದಾಗಿಸಿಕೊಂಡಿತು. ಕಳೆದ ಐಪಿಎಲ್‌ನಲ್ಲಿ ಮನೋಜ್ ಆರ್‌ಸಿಬಿ ತಂಡದಲ್ಲಿದ್ದರು.

ಚಿನ್ನಸ್ವಾಮಿ ಕ್ರೀಡಾಂಗಣದ ಸಭಾಭವನದಲ್ಲಿ ನಡೆದ ಹರಾಜು ಪ್ರಕ್ರಿಯೆಯನ್ನು 700 ಆಟಗಾರರು ಸ್ಪರ್ಧೆಯಲ್ಲಿದ್ದರು. ಒಟ್ಟು ಆರು ಫ್ರ್ಯಾಂಚೈಸಿಗಳು ಭಾಗವಹಿಸಿದ್ದವು. ಪ್ರತಿ ತಂಡವೂ 18 ಆಟಗಾರರನ್ನು ಖರೀದಿಸಿತು.

ಒಟ್ಟು ನಾಲ್ಕು ಗುಂಪುಗಳಲ್ಲಿ ಆಟಗಾರರನ್ನು ವಿಂಗಡಿಸಲಾಗಿದೆ. ಎ ಗುಂಪಿನಲ್ಲಿ ಭಾರತ ಮತ್ತು ಐಪಿಎಲ್‌ನಲ್ಲಿ ಆಡಿರುವ ಆಟಗಾರರು ಇದ್ದರು. ಬಿ ಗುಂಪಿನಲ್ಲಿ ಬಿಸಿಸಿಐ ಆಯೋಜಿತ ರಾಜ್ಯ ಟೂರ್ನಿಗಳಾದ ರಣಜಿ ಟ್ರೋಫಿ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿ ಮತ್ತು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಗಳಲ್ಲಿ ಆಡಿದವರು ಇದ್ದರು. ಸಿ ಗುಂಪಿನಲ್ಲಿ ಬಿಸಿಸಿಐನ ಇನ್ನಿತರ ಟೂರ್ನಿಗಳಲ್ಲಿ ಆಡಿದ ಆಟಗಾರರು ಹಾಗೂ ಡಿ ಗುಂಪಿನಲ್ಲಿ ಕೆಎಸ್‌ಸಿಎನಲ್ಲಿ ನೋಂದಾಯಿತ ಆಟಗಾರರು ಸ್ಥಾನ ಪಡೆದಿದ್ದರು.

ಆಗಸ್ಟ್ 13 ರಿಂದ ಟೂರ್ನಿ ಆರಂಭವಾಗಲಿದೆ. ಬೆಂಗಳೂರಿನಲ್ಲಿ ಪಂದ್ಯಗಳು ನಡೆಯಲಿವೆ.

ಮಹಾರಾಜ ಟ್ರೋಫಿ ತಂಡಗಳು

ಶಿವಮೊಗ್ಗ ಲಯನ್ಸ್	(₹ಲಕ್ಷ)
ಅಭಿನವ್ ಮನೋಹರ್	15.00
ಶ್ರೇಯಸ್ ಗೋಪಾಲ್	7.80
ನಿಹಾಲ್ ಉಳ್ಳಾಲ	2.10
ವಿ.ಕೌಶಿಕ್	5.90
ಕ್ರಾಂತಿಕುಮಾರ್	3.60
ಎಚ್.ಎಸ್. ಶರತ್	2.60
ರೋಹನ್ ಕದಂ	4.70
ಶ್ರೇಯಸ್ ಪುರಾಣಿಕ್	0.50
ಪ್ರಣವ್ ಭಾಟಿಯಾ	2.20
ವಿನಯ್ ಸಾಗರ್	0.50
ಆದಿತ್ಯ ಸೋಮಣ್ಣ	0.50
ಅದೋಕ್ಷ ಹೆಗಡೆ	0.50
ಪವನ್ ಶಿರಡಿ	0.25
ರೋಹನ್ ನವೀನ್	0.25
ಶಿವರಾಜ್	1.10
ಕೆ. ರೋಹಿತ್ ಕುಮಾರ್	0.25
ನಿಶ್ಚಿತ್ ರಾವ್	0.50
ದೀಪಕ್ ದೇವಾಡಿಗ	0.25

ಗುಲ್ಬರ್ಗ ಮಿಸ್ಟಿಕ್ಸ್	(₹ಲಕ್ಷ)
ದೇವದತ್ತ ಪಡಿಕ್ಕಲ್	13.00
ವೈಶಾಖ ವಿಜಯಕುಮಾರ್	8.80
ಕೆ.ಪಿ. ಅಪ್ಪಣ್ಣ	4.00
ಶರತ್ ಶ್ರೀನಿವಾಸ್	1.00
ಚೇತನ್ ಎಲ್.ಆರ್.	6.20
ಮೊಹಮ್ಮದ್ ಅಕೀಬ್ ಜಾವೇದ್	0.50
ಆರ್. ಸ್ಮರಣ್	3.15
ಕೆ.ವಿ. ಅನೀಷ್	1.10
ಮೆಕ್‌ನಿಲ್ ನರೋನಾ	1.40
ಶರಣ್ ಗೌಡ	0.50
ಅಭಿಲಾಷ್ ಶೆಟ್ಟಿ	1.00
ಹಾರ್ದಿಕ್ ರಾಜ್	1.10
ಶಿಮೊನ್ ಲೂಯಿಜ್	0.50
ಡಿ. ಅವಿನಾಶ್	5.30
ಯಶೋವರ್ಧನ್ ಪರಂತಾಪ್	0.50
ಆದರ್ಶ ಪ್ರಜ್ವಲ್	0.50
ಅಬ್ದುಲ್ ಹಸನ್ ಖಾಲಿದ್	0.50
ಶಾನ್ ಟ್ರಸ್ಟನ್ ಜೋಸೆಫ್	0.50

ಬೆಂಗಳೂರು ಬ್ಲಾಸ್ಟರ್ಸ್	(₹ಲಕ್ಷ)
ಮಯಂಕ್ ಅಗರವಾಲ್	14.00
ವಿದ್ಯಾಧರ್ ಪಾಟೀಲ	7.00
ಅಭಿಮನ್ಯು ಮಿಥುನ್	5.20
ಪವನ್ ದೇಶಪಾಂಡೆ	4.00
ಟಿ.ಪ್ರದೀಪ್	3.50
ಮೊಹಮ್ಮದ್ ಸರ್ಫರಾಜ್ ಅಶ್ರಫ್	1.60
ಶುಭಾಂಗ್ ಹೆಗಡೆ	4.30
ಡಿ.ನಿಶ್ಚಲ್	1.30
ಜೆಸ್ವಂತ್ ಆಚಾರ್ಯ	2.10
ಇಜಿ ಜಾಸ್ಪರ್	0.50
ಎಲ್.ಆರ್. ಕುಮಾರ್	1.10
ಮೊಹಸೀನ್ ಖಾನ್	0.50
ಆಶಿಶ್ ಮಹೇಶ್	0.50
ರಿಶಿ ಬೋಪಣ್ಣ	0.70
ಸೂರಜ್ ಅಹುಜಾ	0.25
ಆ್ಯರನ್ ಕ್ರಿಸ್ಟಿ	0.25
ಅಭಿಷೇಕ್ ಅಹ್ಲಾವತ್	0.50
ಅಮನ್ ಖಾನ್	0.50

ಮಂಗಳೂರು ಡ್ರ್ಯಾಗನ್ಸ್	(₹ಲಕ್ಷ)
ಅನಿರುದ್ಧ ಜೋಶಿ	3.00
ರೋಹನ್ ಪಾಟೀಲ	3.70
ಗೌರವ್ ಧಿಮಾನ್	1.00
ಶಿವಕುಮಾರ್ ಬಿ.ಯು	1.00
ಕೆ. ಗೌತಮ್	6.60
ರೋನಿತ್ ಮೋರೆ	4.60
ಕೆ.ವಿ. ಸಿದ್ಧಾರ್ಥ್	4.40
ನಿಕಿನ್ ಜೋಸ್	7.00
ಬಿ.ಆರ್. ಶರತ್	3.20
ಪ್ರತೀಕ್ ಜೈನ್	3.00
ನವೀನ್ ಎಂ.ಜಿ	1.00
ತಿಪ್ಪಾರೆಡ್ಡಿ	0.50
ಆದಿತ್ಯ ನಾಯರ್	1.10
ಆದಿತ್ಯ ಗೋಯಲ್	2.00
ಆನಂದ್ ದೊಡ್ಡಮನಿ	0.95
ಕೃತಿಕ್ ಕೃಷ್ಣ	1.20
ಧೀರಜ್ ಜೆ ಗೌಡ	0.80
ಅನೀಶ್ವರ್ ಗೌತಮ್	2.00

ಮೈಸೂರು ವಾರಿಯರ್ಸ್	(₹ಲಕ್ಷ)
ಮನೋಜ್ ಬಾಂಢಗೆ	9.00
ಜೆ.ಸುಚಿತ್	8.40
ಪ್ರಸಿದ್ಧ ಕೃಷ್ಣ	7.40
ಕರುಣ್ ನಾಯರ್	6.80
ಸಿ.ಎ.ಕಾರ್ತಿಕ್	4.20
ಎಂ. ವೆಂಕಟೇಶ್	4.10
ಆರ್. ಸಮರ್ಥ್	2.90
ತುಷಾರ್ ಸಿಂಗ್	0.50
ಕುಶಾಲ್ ವಾಧ್ವಾನಿ	0.50
ಕೆ. ಶಶಿಕುಮಾರ್	0.50
ಶೋಯಬ್ ಮ್ಯಾನೇಜರ್	1.00
ಎಸ್. ರಕ್ಷಿತ್	2.10
ಶ್ರೀಶ ಎಸ್ ಆಚಾರ್	0.25
ಮೋನಿಷ್ ರೆಡ್ಡಿ	0.55
ಆದಿತ್ಯ ಮಣಿ	0.25
ಗೌತಮ್ ಮಿಶ್ರಾ	0.25
ರಾಹುಲ್ ಸಿಂಗ್ ರಾವತ್	0.25
ಭರತ್ ಧೂರಿ	0.25

ಹುಬ್ಬಳ್ಳಿ ಟೈಗರ್ಸ್	(₹ಲಕ್ಷ)
ಮನೀಷ್ ಪಾಂಡೆ	10.6
ಪ್ರವೀಣ ದುಬೆ	5.80
ಲವನೀತ್ ಸಿಸೊಡಿಯಾ	7.10
ಕೆ.ಎಲ್. ಶ್ರೀಜಿತ್	2.10
ಮೊಹಮ್ಮದ್ ತಹಾ	2.50
ವಿದ್ವತ್ ಕಾವೇರಪ್ಪ	6.70
ಎಂ.ಬಿ. ದರ್ಶನ್	2.00
ಶಿವಂ ಎಂ.ಬಿ	0.50
ನಾಗ ಭರತ್	1.30
ಸಂತೋಕ್ ಸಿಂಗ್	0.50
ಕೆಸಿ ಕಾರ್ಯಪ್ಪ	7.20
ಬಿ.ಎ. ಮೋಹಿತ್	0.55
ಎಲ್. ಮನ್ವಂತ್ ಕುಮಾರ್	0.60
ಮಿತ್ರಕಾಂತ್ ಸಿಂಗ್ ಯಾದವ್	0.25
ಜಿ.ಮಲಿಕ್‌ಸಾಬ್	0.25
ನೇಥನ್ ಡಿಮೆಲ್ಲೊ	0.25
ರಾಜಶೇಖರ್ ಹರಿಕಾಂತ್	0.25
ಕ್ಲೆಮೆಂಟ್ ರಾಜು	0.25

ಮಹಿಳಾ ಕ್ರಿಕೆಟ್: ಏಕದಿನ ಸರಣಿ 1–1 ಸಮಬಲ

ಭಾರತ–ಬಾಂಗ್ಲಾ ಅಂತಿಮ ಪಂದ್ಯ 'ಟೈ'

ಮೀರ್‌ಪುರ (ಪಿಟಿಐ): ಕೊನೆಯಲ್ಲಿ ಬೆನ್ನುಬೆನ್ನಿಗೆ ವಿಕೆಟ್‌ಗಳನ್ನು ಕಳೆದುಕೊಂಡ ಭಾರತ ಮಹಿಳಾ ತಂಡದವರು ಬಾಂಗ್ಲಾದೇಶ ವಿರುದ್ಧದ ಮೂರನೇ ಹಾಗೂ ಅಂತಿಮ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಗೆಲುವಿನ ಅವಕಾಶ ಕಳೆದುಕೊಂಡು, 'ಟೈ'ಗೆ ತೃಪ್ತಿಪಟ್ಟುಕೊಂಡರು.

ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 225 ರನ್ ಗಳಿಸಿತು. ಹರ್ಮನ್‌ಪ್ರೀತ್ ಕೌರ್ ಬಳಗ 49.3 ಓವರ್‌ಗಳಲ್ಲಿ 225 ರನ್‌ಗಳಿಗೆ ಆಲೌಟಾಯಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿ 1-1 ರಿಂದ ಸಮಬಲದಲ್ಲಿ ಕೊನೆಗೊಂಡಿತು.

ಸ್ಮೃತಿ ಮಂದಾನ (59 ರನ್, 85 ಎ.) ಮತ್ತು ಹರ್ಲೀನ್ ಡಿಯೊಲ್ (77 ರನ್, 108 ಎ.) ಅವರ ಅರ್ಧಶತಕಗಳ ನೆರವಿನಿಂದ ಭಾರತ ತಂಡ ಸುಲಭ ಗೆಲುವಿನತ್ತ ಮುನ್ನಡೆದಿತ್ತು. ಆದರೆ ಕೊನೆಯಲ್ಲಿ ಒತ್ತಡಕ್ಕೆ ಒಳಗಾಗಿ ಗೆಲುವಿನ ಅವಕಾಶ ಕೈಚೆಲ್ಲಿತು.

ಭಾರತದ ಗೆಲುವಿಗೆ ಅಂತಿಮ 19 ಎಸೆತಗಳಲ್ಲಿ 10 ರನ್‌ಗಳು ಬೇಕಿದ್ದವು. ಕೈಯಲ್ಲಿ ನಾಲ್ಕು ವಿಕೆಟ್‌ಗಳು ಇದ್ದವು. ಆದರೆ 16 ಎಸೆತಗಳ ಅಂತರದಲ್ಲಿ ನಾಲ್ಕೂ ವಿಕೆಟ್‌ಗಳನ್ನು ಕಳೆದುಕೊಂಡಿತು. ಜೆಮಿಮಾ ರಾಡ್ರಿಗಸ್ (ಅಜೇಯ 33) ನಡೆಸಿದ ಹೋರಾಟಕ್ಕೆ ಫಲ ದೊರೆಯಲಿಲ್ಲ.

ಸ್ಮೃತಿ ಮಂದಾನ (ಎಡ) ಮತ್ತು ಹರ್ಲೀನ್ ಡಿಯೊಲ್ –ಬಿಸಿಸಿಐ ಟ್ವಿಟರ್ ಚಿತ್ರ

ಫರ್ಜಾನಾ ಹಕ್ ಶತಕ: ಮೊದಲು ಬ್ಯಾಟ್ ಮಾಡಿದ ಬಾಂಗ್ಲಾ ತಂಡದ ಪರ ಆರಂಭಿಕ ಬ್ಯಾಟರ್ ಫರ್ಜಾನಾ ಹಕ್ (107 ರನ್, 160 ಎ.) ಅವರು ಶತಕದ ಮೂಲಕ ಮಿಂಚಿದರು. ಏಕದಿನ ಕ್ರಿಕೆಟ್‌ನಲ್ಲಿ ಶತಕ ಗಳಿಸಿದ ಬಾಂಗ್ಲಾದ ಮೊದಲ ಆಟಗಾರ್ತಿ ಎಂಬ ಗೌರವ ಅವರಿಗೆ ಒಲಿಯಿತು. .

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 225 (ಶಮೀಮಾ ಸುಲ್ತಾನಾ 52, ಫರ್ಜಾನಾ ಹಕ್ 107, ನಿಗಾರ್ ಸುಲ್ತಾನಾ 24, ಸ್ನೇಹ ರಾಣಾ 45ಕ್ಕೆ 2)

ಭಾರತ 49.3 ಓವರ್‌ಗಳಲ್ಲಿ 225 (ಸ್ಮೃತಿ ಮಂದಾನ 59, ಹರ್ಲೀನ್ ಡಿಯೊಲ್ 77, ಜೆಮಿಮಾ ರಾಡ್ರಿಗಸ್ ಔಟಾಗದೆ 33, ನಹಿದಾ ಅಖ್ತರ್ 37ಕ್ಕೆ 3, ಮರೂಫಾ ಅಖ್ತರ್ 55ಕ್ಕೆ 2) ಫಲಿತಾಂಶ: ಪಂದ್ಯ 'ಟೈ'

ಕೆಟ್ಟ ಅಂಪೈರಿಂಗ್: ಹರ್ಮನ್ ಟೀಕೆ

ಅಂತಿಮ ಏಕದಿನ ಪಂದ್ಯದಲ್ಲಿ ಅಂಪೈರಿಂಗ್ ತೀರಾ ಕೆಟ್ಟದಾಗಿತ್ತು ಎಂದು ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಅಸಮಾಧಾನ ಹೊರಹಾಕಿದ್ದಾರೆ.

'ಈ ಪಂದ್ಯದಲ್ಲಿ ಅಂಪೈರಿಂಗ್ ನಮಗೆ ತುಂಬಾ ಅಚ್ಚರಿ ಉಂಟುಮಾಡಿತು. ಮುಂದಿನ ಬಾರಿ ಬಾಂಗ್ಲಾ ಪ್ರವಾಸಕ್ಕೆ ಬರುವಾಗ ಈ ರೀತಿಯ ಅಂಪೈರಿಂಗ್‌ಅನ್ನು ಎದುರಿಸಬೇಕು ಎಂಬ ಅರಿವು ಇರಬೇಕು. ಮಾತ್ರವಲ್ಲ, ಅದಕ್ಕೆ ತಕ್ಕ ಸಿದ್ಧತೆಯೊಂದಿಗೆ ಬರಬೇಕು' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳೀಯರಾದ ಮುಹಮ್ಮದ್ ಕಮರುಝಮಾನ್ ಮತ್ತು ತನ್ವೀರ್ ಅಹ್ಮದ್ ಅವರು ಈ ಪಂದ್ಯದಲ್ಲಿ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸಿದ್ದರು.

ಕುಸ್ತಿ ಟ್ರಯಲ್ಸ್‌ನಲ್ಲಿ ಅಂತಿಮ್ ಪಂಘಲ್‌ಗೆ ಗೆಲುವು, ಗಮನ ಸೆಳೆದ ಮಾನಸಿ

'ಸುಪ್ರೀಂ' ಮೊರೆಹೋಗುವೆ: ಅಂತಿಮ್

ನವದೆಹಲಿ (ಪಿಟಿಐ): ಹೈಕೋರ್ಟ್ ಶನಿವಾರ ತಮ್ಮ ಅರ್ಜಿಯನ್ನು ವಜಾಗೊಳಿಸಿದ ಆದೇಶ ಬರುವ ಸ್ವಲ್ಪ ಮೊದಲು, ಪ್ರತಿಭಾನ್ವಿತೆ ಅಂತಿಮ್ ಪಂಘಲ್ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನ ಮಹಿಳೆಯರ 53 ಕೆ.ಜಿ. ವಿಭಾಗದಲ್ಲಿ ಜಯಗಳಿಸಿದರು. ಇನ್ನೊಂದೆಡೆ, ಇಬ್ಬರು ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತರಿದ್ದ 57 ಕೆ.ಜಿ. ವಿಭಾಗದಲ್ಲಿ ಮಾನಸಿ ಅಹ್ಲಾವತ್ ಎಲ್ಲರ ನಿರೀಕ್ಷೆ ಮೀರಿ ಏಷ್ಯನ್ ಗೇಮ್ಸ್ ತಂಡಕ್ಕೆ ಆಯ್ಕೆಯದರು.

53 ಕೆ.ಜಿ. ವಿಭಾಗದಲ್ಲಿ 19 ವರ್ಷದ ಪಂಘಲ್, ಟ್ರಯಲ್ಸ್‌ನ ತಮ್ಮ ಎಲ್ಲ ಸ್ಪರ್ಧೆಗಳನ್ನು ಕಷ್ಟವಿಲ್ಲದೇ ಜಯಿಸಿದರು. ಫೈನಲ್‌ನಲ್ಲಿ ಮಂಜು ವಿರುದ್ಧ ಕೇವಲ ಎರಡು ನಿಮಿಷಗಳಲ್ಲಿ ಜಯಗಳಿಸಿದರು.

ಆದರೆ ಈ ವಿಭಾಗದಲ್ಲಿ ವಿನೇಶಾ ಫೋಗಟ್ ಈಗಾಗಲೇ ಭಾರತ ತಂಡಕ್ಕೆ ಆಯ್ಕೆ ಆಗಿದ್ದಾರೆ.

ಅಂತಿಮ್

'ಸುಪ್ರೀಂ'ಗೆ ಮೊರೆ: 'ನಾನು ಟ್ರಯಲ್ಸ್‌ನಲ್ಲಿ ನ್ಯಾಯೋಚಿತವಾಗಿ ಜಯಗಳಿಸಿದ್ದೇನೆ. ಗೆದ್ದರೂ ನಾನ್ಯಾಕೆ ಸ್ಟ್ಯಾಂಡ್ ಬೈ ಆಗಿರಬೇಕು. 53 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸದವರು ಸ್ಟ್ಯಾಂಡ್ ಬೈ ಆಗಬೇಕು. ನನ್ನ ಅರ್ಜಿ ವಜಾ ಆಗಿದೆ. ಆದರೆ ಹೋರಾಟ ಇಲ್ಲಿಗೇ ಕೈಬಿಡುವುದಿಲ್ಲ. ಸುಪ್ರೀಂ ಕೋರ್ಟ್ ಮೆಟ್ಟಿಲೇರುವೆ' ಎಂದು ಅಂತಿಮ್ ಸುದ್ದಿಗಾರರಿಗೆ ತಿಳಿಸಿದರು.

'ಹೀಗೆಯೇ ಅಕೆ (ವಿನೇಶಾ) ನೇರ ಪ್ರವೇಶ ತೆಗೆದುಕೊಂಡರೆ, ನಾವು ಎಷ್ಟು ಸಮರ್ಥರಿದ್ದೇವೆ ಎಂದು ತಿಳಿದುಕೊಳ್ಳುವುದಾದರೂ ಹೇಗೆ? ನಾವು ಪ್ರಯತ್ನ ಬಿಡುವುದಿಲ್ಲ. ಮುಂದೇನು ಮಾಡಬೇಕೆಂದು ನನ್ನ ಕೋಚ್ ನಿರ್ಧರಿಸುತ್ತಾರೆ' ಎಂದರು.

ಮಧ್ಯಪ್ರವೇಶಕ್ಕೆ ಹೈಕೋರ್ಟ್ ನಕಾರ

ನವದೆಹಲಿ (ಪಿಟಿಐ): ಪ್ರಮುಖ ಕುಸ್ತಿಪಟುಗಳಾದ ವಿನೇಶಾ ಫೋಗಟ್ ಮತ್ತು ಬಜರಂಗ್ ಪೂನಿಯಾ ಅವರಿಗೆ ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ನಿಂದ ವಿನಾಯಿತಿ ನೀಡಿ, ನೇರವಾಗಿ ತಂಡಕ್ಕೆ ಆಯ್ಕೆ ಮಾಡಿದ ವಿಷಯದಲ್ಲಿ ಮಧ್ಯಪ್ರವೇಶಿಸಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ಈ ವಿನಾಯಿತಿಯನ್ನು ಪ್ರಶ್ನಿಸಿ, ಅಂತಿಮ್ ಪಂಘಲ್ ಮತ್ತು ಸುಜೀತ್ ಕಲ್ಕಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸುಬ್ರಮಣಿಯಮ್ ಪ್ರಸಾದ್ ಅವರು ವಜಾಗೊಳಿಸಿ ಶನಿವಾರ ಆದೇಶಿಸಿದರು.

ವಿನೇಶಾ ಮತ್ತು ಬಜರಂಗ್ ಅವರಿಗೆ ಟ್ರಯಲ್ಸ್ ಇಲ್ಲದೇ ಏಷ್ಯನ್ ಗೇಮ್ಸ್ ಕುಸ್ತಿ ತಂಡಕ್ಕೆ ನೇರಪ್ರವೇಶ ನೀಡಿರುವುದಾಗಿ ಭಾರತ ಒಲಿಂಪಿಕ್ ಸಮಿತಿಯ ಅಡ್‌ಹಾಕ್ ಸಮಿತಿ ಜುಲೈ 18ರಂದು ತಿಳಿಸಿದ್ದು, ಇದರ ವಿರುದ್ಧ ಜೂನಿಯರ್ ಕುಸ್ತಿಪಟುಗಳು, ತರಬೇತುದಾರರ ವಲಯದಿಂದ ಅಸಮಾಧಾನಗಳು ಕೇಳಿಬಂದಿದ್ದವು.

57 ಕೆ.ಜಿ ವಿಭಾಗದಲ್ಲಿ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತೆ ಅನ್ಶು ಮಲಿಕ್ ಮತ್ತು ಕಂಚಿನ ಪದಕ ವಿಜೇತೆ ಸರಿತಾ ಮೊರ್ ಮೊದಲ ಸುತ್ತಿನಲ್ಲೇ ಎದುರಾಗಿದ್ದರು. ಫೈನಲ್‌ಗೆ ಮೊದಲೇ ಫೈನಲ್‌ನಂತಿದ್ದ ಈ ಪಂದ್ಯ ತೀವ್ರ ಹೋರಾಟ ಕಂಡು ಸರಿತಾ ಮೋರ್ 5-4ರಲ್ಲಿ ಪ್ರಯಾಸದ ಜಯಗಳಿಸಿದರು. ಆದರೆ ಸರಿತಾ ಮುಂದಿನ ಸುತ್ತಿನಲ್ಲಿ ಮಾನಸಿ ಎದುರು 6-9ರಲ್ಲಿ ಸೋತರು. ಮಾನಸಿ ಫೈನಲ್‌ನಲ್ಲೂ ಜಯಶಾಲಿಯಾದರು.

62 ಕೆ.ಜಿ ವಿಭಾಗದಲ್ಲಿ ಸೋನಮ್ ಮಲಿಕ್, 50 ಕೆ.ಜಿ ವಿಭಾಗದಲ್ಲಿ ಪೂಜಾ ಗೆಹಲೋತ್ ಅರ್ಹತೆ ಪಡೆದರು. 68 ಕೆ.ಜಿ. ವಿಭಾಗದಲ್ಲಿ ರಾಧಿಕಾ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದರು. 68 ಕೆ.ಜಿ.ಬದಲು 76 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ದಿವ್ಯಾ ಕಕ್ರಾನ್ ಸೋಲನುಭವಿಸಿದರು. ಈ ವಿಭಾಗದಲ್ಲಿ ಅನುಭವಿ ಕಿರಣ್ ಜಯಗಳಿಸಿದರು.

ಗ್ರೀಕೊ ರೋಮನ್ ವಿಭಾಗದಲ್ಲಿ ಗ್ಯಾನೆಂದರ್ (60 ಕೆ.ಜಿ), ನೀರಜ್ (67 ಕೆ.ಜಿ), ವಿಕಾಶ್ (77 ಕೆ.ಜಿ), ಸುನೀಲ್ ಕುಮಾರ್ (87 ಕೆ.ಜಿ), ನರಿಂದರ್ ಚೀಮಾ (97 ಕೆ.ಜಿ) ಮತ್ತು ನವೀನ್ (130 ಕೆ.ಜಿ) ಅವರು ತಮ್ಮ ತೂಕ ವಿಭಾಗದಲ್ಲಿ ಮೇಲುಗೈ ಸಾಧಿಸಿ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದರು.

ನವದೆಹಲಿಯಲ್ಲಿ ಶನಿವಾರ ನಡೆದ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನ ಮಹಿಳೆಯರ 57 ಕೆ.ಜಿ ವಿಭಾಗದಲ್ಲಿ ಅನ್ಶು ಮಲಿಕ್ (ಕೇಸರಿ ಪೋಷಾಕು) ಅವರು ರೈಲ್ವೇಸ್‌ನ ಸರಿತಾ ಮೊರ್ ವಿರುದ್ಧ ಸೆಣಸಾಡಿದರು. ಈ ಸೆಣಸಾಟದಲ್ಲಿ ಸರಿತಾ ಜಯಗಳಿಸಿದರು. (ಅಂತಿಮವಾಗಿ ಈ ವಿಭಾಗದಲ್ಲಿ ಮಾನಸಿ ಅಹ್ಲಾವತ್ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದರು) –ಪಿಟಿಐ ಚಿತ್ರ

ವಾಟರ್‌ಪೋಲೊ: ಕರ್ನಾಟಕ ಬಾಲಕಿಯರು 'ರನ್ನರ್ ಅಪ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡದವರು ಚೆನ್ನೈನಲ್ಲಿ ನಡೆದ 49ನೇ ಜೂನಿಯರ್ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಷಿಪ್‌ನ ವಾಟರ್‌ಪೋಲೊ ಸ್ಪರ್ಧೆಯಲ್ಲಿ 'ರನ್ನರ್ ಅಪ್' ಆದರು.

ಶನಿವಾರ ನಡೆದ ಫೈನಲ್‌ನಲ್ಲಿ ಕೇರಳ ತಂಡ, 16-7 ರಿಂದ ಕರ್ನಾಟಕ ತಂಡವನ್ನು ಮಣಿಸಿ ಚಾಂಪಿಯನ್ ಆಯಿತು. ಸಫ್ವಾ ಸಕೀರ್ (6) ಅವರು ಕೇರಳ ಗೆಲುವಿನಲ್ಲಿ ಮಿಂಚಿದರು.

ಬಾಲಕರ ತಂಡದವರು ನಾಲ್ಕನೇ ಸ್ಥಾನ ಪಡೆದರು. 3 ಮತ್ತು 4ನೇ ಸ್ಥಾನ ನಿರ್ಣಯಿಸಲು ನಡೆದ ಪಂದ್ಯದಲ್ಲಿ ರಾಜ್ಯದ ಬಾಲಕರು 2-42 ರಿಂದ ಬಂಗಾಳ ಎದುರು ಪರಾಭವಗೊಂಡಿತು.

ಬಾಲಕರ ವಿಭಾಗದ ಪ್ರಶಸ್ತಿಯನ್ನೂ ಕೇರಳ ಜಯಿಸಿತು. ಫೈನಲ್‌ನಲ್ಲಿ 17-15 ರಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿತು.

ಬಾಲಕಿಯರ ವಿಭಾಗದಲ್ಲಿ ಮೂರು ಮತ್ತು ನಾಲ್ಕನೇ ಸ್ಥಾನಗಳನ್ನು ನಿರ್ಣಯಿಸಲು ನಡೆದ ಪಂದ್ಯದಲ್ಲಿ ಮಹಾರಾಷ್ಟ್ರ 12-6 ರಿಂದ ಬಂಗಾಳ ತಂಡವನ್ನು ಸೋಲಿಸಿತು.

ಬ್ಯಾಡ್ಮಿಂಟನ್: ಫೈನಲ್‌ಗೆ ಸಾತ್ವಿಕ್– ಚಿರಾಗ್ ಜೋಡಿ

ಯೋಸು (ಕೊರಿಯಾ), (ಪಿಟಿಐ): ವಿಶ್ವದ ಮೂರನೇ ಕ್ರಮಾಂಕದ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ, ಕೊರಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ತಲುಪಿದರು.

ಭಾರತೀಯ ಆಟಗಾರರು ಶನಿವಾರ ನಡೆದ ಪುರುಷರ ಡಬಲ್ಸ್ ಸೆಮಿಫೈನಲ್ ನಲ್ಲಿ ವಿಶ್ವದ ಎರಡನೇ ಕ್ರಮಾಂಕದ ಚೀನಾ ಜೋಡಿಯನ್ನು ನೇರ ಸೆಟ್‌ಗಳಿಂದ ಸೋಲಿಸಿದರು.

ಸಾತ್ವಿಕ್– ಚಿರಾಗ್ ಜೋಡಿ 21-15, 24-22 ರಿಂದ ಎರಡನೇ ಶ್ರೇಯಾಂಕದ ಲಿಯಾಂಗ್ ವಿ ಕೆಂಗ್–ವಾಂಗ್ ಚಾಂಗ್ ಅವರನ್ನು ಸೋಲಿಸಿತು. ಇದು ಭಾರತೀಯ ಆಟಗಾರರಿಗೆ ಚೀನಾದ ಈ ಜೋಡಿಯ ವಿರುದ್ಧ ಲಭಿಸಿದ ಮೊದಲ ಜಯ. ಈ ಹಿಂದೆ ಎರಡು ಬಾರಿ ಸೋತಿದ್ದರು.

ಮೊದಲ ಗೇಮ್ ಸುಲಭವಾಗಿ ಗೆದ್ದ ಭಾರತದ ಜೋಡಿಗೆ ಎರಡನೇ ಗೇಮ್‌ನಲ್ಲಿ ಪ್ರಬಲ ಪೈಪೋಟಿ ಎದುರಾಯಿತು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತದ ಆಟಗಾರರು, ಅಗ್ರ ಶ್ರೇಯಾಂಕದ ಫಜರ್ ಅಲ್ಫಿಯಾನ್– ಮುಹಮ್ಮದ್ ರಿಯಾಣ್ ಅರ್ಡಿಯಾಂಟೊ ಅವರನ್ನು ಎದುರಿಸಲಿದ್ದಾರೆ. ಇಂಡೊನೇಷ್ಯಾದ ಈ ಜೋಡಿ ಇನ್ನೊಂದು ಸೆಮಿಫೈನಲ್‌ನಲ್ಲಿ 17-21, 21-16, 21-18 ರಿಂದ ಕೊರಿಯಾದ ಕಾಂಗ್ ಮಿನ್ ಹ್ಯುಕ್– ಸಿಯೊ ಸಿಯುಂಗ್ ಜೋಡಿಯನ್ನು ಸೋಲಿಸಿತು.

ಚಿರಾಗ್– ಸಾತ್ವಿಕ್ ಜೋಡಿ ಇದಕ್ಕೆ ಮೊದಲು ಇಂಡೊನೇಷ್ಯಾ ಸೂಪರ್ 1000 ಮತ್ತು ಸ್ವಿಸ್ ಓಪನ್ ಸೂಪರ್ 500 ಸಿರೀಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತ್ತು.

ಬೆಂಗಳೂರು ರೇಸ್

ಸಕ್ಸಸ್ ಗೆಲ್ಲುವ ನಿರೀಕ್ಷೆ

ಉಷಾ ಸ್ಟಡ್ ಗೋಲ್ಡನ್ ಜುಬಿಲಿ ಬೆಂಗಳೂರು ಸೆಂಟ್ ಲೆಗರ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಕ್ಸಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಸಿಂಕೊ ಡೆ ಮಾಯೊ 3, ಆಲ್‌ಟೈರ್ 2, ರೊರಿಟೊ 1
2ನೇ ರೇಸ್: ಸೀ ಈಗಲ್ 1, ಎಲಿಜಬತ್ ರೆಜಿನ 7, ವಿಶ್ ಎಗೈನ್ 4
3ನೇ ರೇಸ್: ಕ್ವೀನ್ ಆಫ್ ಕಿವ್ 12, ಮಾರ್ಗೊವಲ್ 4, ಕ್ರಾಸ್ ವಾಟರ್ 9
4ನೇ ರೇಸ್: ವಿನ್ ಮೈ ಲುವ್ 2, ಕ್ಲೆವರ್ ಹ್ಯಾನ್ಸ್ 6, ಮೆಷರ್ ಆಫ್ ಟೈಮ್ 8
5ನೇ ರೇಸ್: ಸಕ್ಸಸ್ 5, ಲಾ ರೀನ 4, ಪಿಸ್ಸಾರೊ 1
6ನೇ ರೇಸ್: ದಿ ಪರ್ಫೆಕ್ಟ್ ಚಾಯ್ಸ್ 4, ಸಿಯೋಲ್ 3, ಕಾಂಟಡೋರ್ 8
7ನೇ ರೇಸ್: ರೆಕಾರ್ಡೊ 1, ಕ್ಲಿಫೋರ್ಡ್ 3, ಸ್ಪಿರಿಟ್ ಆಫ್ ದಿ ರೋಸ್ 2

ಉತ್ತಮ ಬೆಟ್: ಸಿಂಕೊ ಡೆ ಮಾಯೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	3,4,5	5,6,7

ಫೈನಲ್‌ಗೆ ನಗಾಲ್

ಟಂಪೆರೆ (ಫಿನ್ಲೆಂಡ್), (ಪಿಟಿಐ): ಭಾರತದ ಸುಮಿತ್ ನಗಾಲ್, ಟಂಪೆರೆ ಓಪನ್ ಟೆನಿಸ್ ಟೂರ್ನಿಯಲ್ಲಿ ಡೇನಿಯಲ್ ರಿನ್‌ಕಾನ್ ಅವರ ಸ್ಫೂರ್ತಿಯುತ ಸವಾಲನ್ನು ಬದಿಗೊತ್ತಿ ಫೈನಲ್ ತಲುಪಿದರು. ಏಳನೇ ಶ್ರೇಯಾಂಕದ ಸುಮಿತ್ ಶನಿವಾರ ನಡೆದ ಸೆಮಿಫೈನಲ್‌ನಲ್ಲಿ 4-6, 6-3, 6-2 ರಿಂದ ಗೆಲುವು ಪಡೆದರು.

ಈ ಗೆಲುವಿನ ಮೂಲಕ, 25 ವರ್ಷದ ಸುಮಿತ್ ಐದನೇ ಬಾರಿ ಚಾಲೆಂಜರ್ ಮಟ್ಟದ ಟೂರ್ನಿಯ ಫೈನಲ್ ತಲುಪಿದಂತಾಗಿದೆ. ಅವರು ಫೈನಲ್‌ನಲ್ಲಿ ಜೆಕ್ ರಿಪಬ್ಲಿಕ್‌ನ ದಲಿಬೋರ್ ಸ್ವಿರ್ಸಿನ ಅವರನ್ನು ಎದುರಿಸಲಿದ್ದಾರೆ. ದಲಿಬೋರ್ ಇನ್ನೊಂದು ಸೆಮಿಫೈನಲ್‌ನಲ್ಲಿ ಜರ್ಮನಿಯ ಹೆನ್ರಿ ಸ್ಕ್ವಿರ್ ಅವರನ್ನು ಸೋಲಿಸಿದರು.